ಶ್ರೀ ವಚನ ಭೂಷಣಂ

ಲೋಕಾಚಾರ್ಯಮುಪಾಸ್ಮಹೇ ಯತಿಪತೇಃ ಪಾದಾಬ್ಜಭೃತ್ಂ ಗುರುಂ
ಶ್ರೀಮನ್ಮಾರುತಿಕಲ್ಪಮಿಂದ್ರಿಯಜಯೇ ಕಾರುಣ್ಯರತ್ನಾಕರಂ ।
ಮೋಹಧ್ವಾಂತವಿವೇಕಶೂನ್ಯಜನತಾ ಸಂಸೃತ್ಯರಣ್ಯಾಶ್ರಯಾ
ಯಚ್ಛ್ರೀಸೂಕ್ತಿಮಣಿತ್ವಿಷೈವ ಸುಸುಖಿಂ ಸನ್ಮಾರ್ಗಮಾಲೋಕತೇ ॥

ಸಂಪಾದಕರು

ವಿದ್ಯಾವಿಶಾರದ ಸಂಸ್ಕೃತಸೇವಾಸಕ್ತ ಕವಿಕುಲತಿಲಕ

ರಾಜ್ಯಪ್ರಶಸ್ತಿ ರಾಷ್ಟ್ರಪ್ರಶಸ್ತಿ ಸಮಲಂಕೃತ ಬಾಲಧನ್ವಿ

ಜಗ್ಗೂ ವಕುಳಭೂಷಣ ಮಹಾಕವಿ

Prasad.

ಶ್ರೀ ಪಿಳ್ಳೈ ಲೋಕಾಚಾರ್ ಗ್ರಂಥಮಾಲಾ ಕುಸುಮ – ೧

ಶ್ರೀ ವಚನಭೂಷಣಂ

ಸಂಪಾದಕರು

ವಿದ್ಯಾವಿಶಾರದ ಸಂಸ್ಕೃತಸೇವಾಸಕ್ತ, ಕವಿಕುಲತಿಲಕ

ರಾಜ್ಯಪ್ರಶಸ್ತಿ, ರಾಷ್ಟ್ರಪ್ರಶಸ್ತಿ ಸಮಲಂಕೃತ ಬಾಲಧನ್ವಿ

ಜಗ್ಗೂ ವಕುಳಭೂಷಣ ಮಹಾಕವಿ

ಪ್ರಕಾಶಕರು

ಉಭಯ ವೇದಾಂತ ಪ್ರವರ್ತನ ಸಭಾ

ಮಲ್ಲೇಶ್ವರಂ ಬೆಂಗಳೂರು – ೫೬೦ ೦೦೩

ಮುದ್ರಣ :
ರಾಷ್ಟ್ರೋತ್ಥಾನ ಮುದ್ರಣಾಲಯ
ಕೆಂಪೇಗೌಡನಗರ, ಬೆಂಗಳೂರು – ೫೬೦ ೦೧೯

– ಶ್ರೀಃ –

ಶುಭಮಸ್ತು

ಶ್ರೀಮತೇ ರಾಮಾನುಜಾಯ ನಮಃ

ಪ್ರಸ್ತಾವನೆ

ನಚೇದ್ರಾಮಾನುಜೇತ್ಯೇಷಾ ಚತುರಾ ಚತುರಕ್ಷರೀ ।
ಕಾಮವಸ್ಥಾಂ ಪ್ರಪದ್ಯಂತೇ ಜಂತವೋ ಹಂತ ಮಾದೃಶಃ ॥

ಜ್ಞಾನ ಸ್ವರೂಪರಾದ ಜೀವಾತ್ಮರು ತಮ್ಮ ತಮ್ಮ ಕರ್ಮಾನುಗುಣವಾಗಿ ಈ ಸಂಸಾರಚಕ್ರದಲ್ಲಿ ನಾನಾ ಯೋನಿಗಳಲ್ಲಿ ಜನಿಸಿ, ಸಂಕೃತ ವಿಶೇಷದಿಂದಲೂ ಭಗವತ್ಕೃಪಾಕಟಾಕ್ಷದಿಂದಲೂ, ದುರ್ಲಭವಾದ ಮನುಷ್ಯ ಜನ್ಮವನ್ನು ಪಡೆದೂ ಈ ಪ್ರಕೃತಿಮಂಡಲದಲ್ಲಿ ಕ್ಲೇಶಪಡುತ್ತಾ "ವೃತ್ಯಾ ಪಶುರ್ನರವಪುಃ" ಎಂಬಂತೆ ಪಶುಪ್ರಾಯರಾಗಿ ಅಲೆದಾಡುತ್ತಿರುವುದನ್ನು ಕಂಡು ಈ ಚೇತನರು ಜ್ಞಾನವನ್ನು ಸಂಪಾದಿಸಿ ಉಜ್ಜೀವಿಸಲೆಂದು ಪರಮ ಕೃಪೆಯಿಂದ ಶ್ರೀ ಪಿಳ್ಳೈ ಲೋಕಾಚಾರ್ಯರು, ಸರ್ವೋಪಜೀವ್ಯವಾದ ತಣ್ಣೀರಿನಂತೆ ಬಹು ಜನ ಅಧಿಕಾರಿಗಳಿಗೆ ಉಪಯೋಗ ವಾಗುವಂತಹ ತಮಿಳು ಭಾಷೆ ಪ್ರಧಾನವಾಗಿ ಉಳ್ಳ "ಶ್ರೀ ವಚನಭೂಷಣ" ಎಂಬ ಗ್ರಂಥವನ್ನು ಅನುಗ್ರಹಿಸಿದರು.

ಶ್ರೀ ವಚನಭೂಷಣದಲ್ಲಿ ಸೂತ್ರರೂಪದಲ್ಲಿ ಅಡಗಿರುವ ರಹಸ್ಯಾರ್ಥಗಳು ತಮಿಳಿನಲ್ಲಿ ಹೆಚ್ಚು ಪರಿಚಯ ಇಲ್ಲದಿರುವ ಸಂಸ್ಕೃತ ವಿದ್ವಾಂಸರುಗಳಿಗೂ ತಮಿಳು ಮತ್ತು ಸಂಸ್ಕೃತ ಎರಡರಲ್ಲೂ ಹೆಚ್ಚು ಪರಿಚಯವಿಲ್ಲದಿರುವ ಕನ್ನಡ ಅಭಿಮಾನಿಗಳಿಗೂ ಉಪಯೋಗವಾಗಬೇಕೆಂಬ ಉದ್ದೇಶದಿಂದ ತಮಿಳು ಸೂತ್ರಗಳಿಗೆ ತಕ್ಕ ಸಂಸ್ಕೃತ ಶ್ಲೋಕಗಳನ್ನೂ ಕನ್ನಡದಲ್ಲಿ ತಾತ್ಪರ್ಯವನ್ನೂ ಈ ಗ್ರಂಥದಲ್ಲಿ ಅಳವಡಿಸಿದ್ದೇನೆ.

ನನಗೆ ಪಿತೃವ್ಯಪಾದರಾಗಿ ಚತುಶ್ಯಾಸ್ತ್ರ ನಿಷ್ಣಾತರಾಗಿ ಅನೇಕ ಬಿರುದಾಂಕಿತರಾಗಿದ್ದ ಶ್ರೀ ಉ.ವೇ. ಜಗ್ಗು ವೆಂಕಟಾಚಾರ್ಯರ ಸನ್ನಿಧಾನದಲ್ಲಿ ನಾನು ಕಾಲಕ್ಷೇಪ ಮಾಡಿದ್ದುದರ ಫಲವಿದು.

ಹಸ್ತಲಿಪಿಯಲ್ಲೇ ಬಹು ಕಾಲದವರೆಗೆ ನನ್ನಲ್ಲಿದ್ದ ಈ ಗ್ರಂಥವನ್ನು ಉಭಯ ವೇದಾಂತ ಪ್ರವರ್ತನ ಸಭೆಯು ಮುದ್ರಿಸಿ ಪ್ರಕಾಶಪಡಿಸುವ ತೀರ್ಮಾನವನ್ನು ಸಭೆಯ ಕಾರ್ಯಕಾರಿ ಸಮಿತಿಯು ಕೈಗೊಂಡಿತು. ಈ ತೀರ್ಮಾನವನ್ನು ಅನುಸರಿಸಿ ಸಭೆಯ ಅಧ್ಯಕ್ಷರು ಶ್ರದ್ಧವಹಿಸಿ ಮುದ್ರಣವು ಕಾರ್ಯಗತವಾಗುವುದಕ್ಕೆ ತಕ್ಕ ಏರ್ಪಾಡು ಮಾಡಿದ್ದಾರೆ. ಸಭೆಯ ಕಾರ್ಯದರ್ಶಿಯವರು ಇದರ ವ್ಯವಸ್ಥಾ ಕ್ರಮವನ್ನು ನೋಡಿಕೊಳ್ಳುವುದಲ್ಲದೆ ಪ್ರಥಮತಃ ನಿರೀಕ್ಷಿಸ ಬಹುದಾದುದಕ್ಕಿಂತಲೂ ಅಧಿಕವಾಗಿ ಅವಶ್ಯವೆಂದು ಕಂಡುಬಂದ ದೇಹ ಶ್ರಮವನ್ನೂ ವಹಿಸಿ ಪ್ರೂಫ್ ಕರೆಕ್ಷನ್ ಇತ್ಯಾದಿಗಳಲ್ಲಿಯೂ ಸಹಕರಿಸಿ ಮುದ್ರಣ ಕಾರ್ಯವು ಸೂಕ್ತವಾಗಿ ಪೂರ್ತಿಯಾಗುವಂತೆ ಮಾಡಿದ್ದಾರೆ.

ಜನಗಳು ಇದನ್ನು ಓದಿ ಅನುಷ್ಠಾನಕ್ಕೆ ತಂದುಕೊಂಡು ಪೂರ್ಣ ಪ್ರಯೋಜನ ಪಡೆದರೆ ನಾನು ಕೃತಾರ್ಥ.

ಸಪ್ತಾಶೀತಿ ವಯೋವೃದ್ಧೋ ಜಗ್ಗೂ ವಕುಳಭೂಷಣಃ ।
ಏವಂ ವಿಶದಯಾಮಾಸ ಶ್ರೀಮದ್ವಚನಭೂಷಣಂ ॥

ಇತಿ ಭಗವದ್ರಾಮಾನುಜದಾಸ ದಾಸಃ
ಜಗ್ಗು ಆಳ್ವಾರಯ್ಯಂಗಾರ್

ನಿವೇದನೆ

ಶ್ರೀಮತೇ ರಾಮಾನುಜಾಯ ನಮಃ

ಲೋಕಾಚಾರ್ಯಾಯ ಗುರವೇ ಕೃಷ್ಣಪಾದಸ್ಯ ಸೂನವೇ ।
ಸಂಸಾರ ಭೋಗಿಸಂದಷ್ಟ ಜೀವಜೀವಾತವೇ ನಮಃ ॥

ಪೂಜ್ಯರಾದ ಲೋಕಾಚಾರ್ಯರು ಪಿಳ್ಳೈ ಲೋಕಾಚಾರ್ಯರೆಂದೂ, ಉಲಹಾಶರಿಯನ್ ಎಂದೂ ಪ್ರಸಿದ್ಧವಾಗಿರುತ್ತಾರೆ. ಶ್ರೀ ಕೃಷ್ಣಪಾದರೆಂದು ಪ್ರಸಿದ್ಧರಾದ ವಡಕ್ಕುತ್ತಿರು ವೀದಿ ಪಿಳ್ಳೈ ಎಂಬವರ ಸತ್ಪುತ್ರರು ಶ್ರೀ ಪಿಳ್ಳೈ ಲೋಕಾಚಾರ್ಯರು. ಶ್ರೀ ಭಗವದ್ರಾಮಾನುಜರ ಶಿಷ್ಯರಲ್ಲಿ ಪ್ರಸಿದ್ಧರು. ಇವರು ತಮ್ಮ ತಂದೆಯವರಲ್ಲಿಯೂ, ಸುವಿಖ್ಯಾತರಾದ ಪೆರಿಯವಾಚ್ಚಾನ್ ಪಿಳ್ಳೈ ನಂಬಿಳ್ಳೈ ಮೊದಲಾದ ಉದ್ದಾಮ ಪಂಡಿತರಲ್ಲಿಯೂ ಕಾಲಕ್ಷೇಪ ಮಾಡಿದರು.

ಮಹಾವೇಧಾವಿಗಳಾದ ಶ್ರೀ ಪಿಳ್ಳೈ ಲೋಕಾಚಾರ್ಯರು, ಬಾಲ್ಯದಲ್ಲೇ ಸಕಲ ಶಾಸ್ತ್ರಾರ್ಥಗಳನ್ನೂ ಗ್ರಹಿಸಿ, ಪ್ರಸಿದ್ಧಿ ಪಡೆದರು. ತಮಿಳು ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಪ್ರತಿಮ ಜ್ಞಾನವನ್ನೂ ಪಾಂಡಿತ್ಯವನ್ನೂ ಸಂಪಾದಿಸಿದ ಇವರು ಬ್ರಹ್ಮಸೂತ್ರಭಾಷ್ಯ, ಗೀತಾಭಾಷ್ಯ, ಸ್ತೋತ್ರರತ್ನ ಮೊದಲಾದ ಅನೇಕ ಗ್ರಂಥಗಳನ್ನು ಅಮೂಲಾಗ್ರವಾಗಿ ಅನುಭವಿಸಿ, ವಿಶಿಷ್ಟಾದ್ವೈತ ಸಿದ್ಧಾಂತಸಾರಸರ್ವಸ್ವವನ್ನೂ "ಶ್ರೀ ವಚನಭೂಷಣ"ವೆಂಬ ತಮ್ಮ ಗ್ರಂಥದಲ್ಲಿ ಮಣಿಪ್ರವಾಳ ರೂಪದಲ್ಲಿ ಪ್ರಕಾಶಪಡಿಸಿದ್ದಾರೆ.

ವಿಶದವಾಕ್ ಶಿಖಾಮಣಿ ಎಂದು ಪ್ರಸಿದ್ಧರಾದ ಶ್ರೀ ಮಣವಾಳ ಮಹಾಮುನಿಗಳ ಪ್ರಸಿದ್ಧವಾದ ವ್ಯಾಖ್ಯಾನವೇ ಮೊದಲಾಗಿ ಅನೇಕ ವ್ಯಾಖ್ಯಾನಗಳಿವೆ ಶ್ರೀ ವಚನಭೂಷಣ ಗ್ರಂಥಕ್ಕೆ.

ಅರ್ಚಿರಾದಿ, ಮುಮುಕ್ಷುಪ್ಪಡಿ, ಪ್ರಪನ್ನ ಪರಿತ್ರಾಣ, ತತ್ತ್ವತ್ರಯ, ತತ್ತ್ವಶೇಖರ ಇತ್ಯಾದಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ ಶ್ರೀ ಪಿಳ್ಳೈ ಲೋಕಾಚಾರ್ಯರು.

ಶ್ರೀರಂಗ ಕ್ಷೇತ್ರದಲ್ಲಿ ಜನ್ಮತಾಳಿ, ಆಜನ್ಮ ನೈಷ್ಠಿಕ ಬ್ರಹ್ಮಚರ್ಯದಲ್ಲಿದ್ದುಕೊಂಡು ತಮ್ಮ ಜೀವಿತವೆಲ್ಲವನ್ನೂ ವಿಶಿಷ್ಟಾದ್ವೈತ ಸಿದ್ಧಾಂತ ಪ್ರವರ್ತನೆಗೆ ಜನರನ್ನು ಆಕರ್ಷಿಸಿದ ಶ್ರೀ ಪಿಳ್ಳೈ ಲೋಕಾಚಾರ್ಯರು ಶ್ರೀ ವೇದಾಂತ ದೇಶಿಕರ ಸಮಕಾಲೀನರು. ಶ್ರೀ ವೇದಾಂತದೇಶಿಕರ "ಸರ್ವಜ್ಞತ್ವಂತತ್ತ್ವಮುಕ್ತಾಕಲಾಪೇ" ಎಂಬಂತೆ ಶ್ರೀ ಪಿಳ್ಳೈ ಲೋಕಾಚಾರ್ಯರ ಅಸಾಧಾರಣ ವೈದುಷ್ಯವು ಶ್ರೀ ವಚನಭೂಷಣದಲ್ಲಿ ಪ್ರಕಾಶಿತವಾಗಿದೆ.

ಪ್ರಾತಃಸ್ಮರಣೀಯರಾದ ಇಂತಹ ಆಚಾರ್ಯರುಗಳನ್ನು ಸ್ಮರಿಸಿ, ಅವರ ಸದ್ಗ್ರಂಥಗಳ ಕಾಲಕ್ಷೇಪ ಮತ್ತು ಅದರಂತೆ ಅನುಷ್ಠಾನದ ಮೂಲಕ ಜನರು ಉದ್ಧಾರವಾಗುವುದರಲ್ಲಿ ಸಂದೇಹ ಲೇಶವೂ ಇರುವುದಿಲ್ಲ.

ಪ್ರಣತಾರ್ತಿಹರಾಂಶಾಯ ಪ್ರಕೃಷ್ಟ ಗುಣಶಾಲಿನೇ ।
ಲೀಲಯೋದ್ಧೃತ ಲೋಕಾಯ ಲೋಕಾರ್ಯ ಗುರವೇ ನಮಃ ॥

ಶ್ರೀ ವಚನಭೂಷಣದ ಮೂಲ ತಮಿಳು ಸೂತ್ರಗಳಿಗೆ ಸಂಸ್ಕೃತ ಭಾಷೆಯಲ್ಲಿ ಶ್ಲೋಕ ರೂಪದಲ್ಲಿ ವ್ಯಾಖ್ಯಾನವನ್ನೂ ಕನ್ನಡ ಭಾಷೆಯಲ್ಲಿ ತಾತ್ಪರ್ಯವನ್ನೂ ವಿರಚಿಸಿ ಪ್ರಕೃತಗ್ರಂಥದ ಸಂಪಾದಕತ್ವವನ್ನು ವಹಿಸಿ ಉಪಕಾರಮಾಡಿಕೊಟ್ಟಿರುವವರು ೮೭ ವರ್ಷ ವಯಸ್ಸಿನವರಾದ ವಕುಳಭೂಷಣಂ ಜಗ್ಗು ಆಳ್ವಾರಯ್ಯಂಗಾರ್ಯರವರು. ಇವರು ಯಾದವಗಿರಿ ಕ್ಷೇತ್ರದ ಸಂಸ್ಕೃತ ಮಹಾಪಾಠಶಾಲೆಯಲ್ಲಿ ತಮ್ಮ ಚಿಕ್ಕಪ್ಪನವರಾದ ಪಂಡಿತವರೇಣ್ಯ ಜಗ್ಗು ವೆಂಕಟಾಚಾರ್ಯರಲ್ಲಿಯೂ ಇತರ ಉತ್ತಮ ಪಂಡಿತರಲ್ಲಿಯೂ ವಿದ್ಯಾಭ್ಯಾಸ ಮಾಡಿ ನಂತರ ಅದೇ ಪಾಠಶಾಲೆಯಲ್ಲೇ ಅಧ್ಯಾಪಕರಾಗಿ ಅನೇಕ ವಿದ್ಯಾರ್ಥಿಗಳನ್ನು ಸಾಹಿತ್ಯ ವಿದ್ವಾಂಸರನ್ನಾಗಿ ಮಾಡಿ ನಿವೃತ್ತರಾಗಿದ್ದಾರೆ.

ಅನೇಕ ಸಂಘ ಸಂಸ್ಥೆಗಳಿಂದಲೂ ಸರ್ಕಾರಗಳಿಂದಲೂ ಪ್ರಶಸ್ತಿಪಡೆದಿದ್ದಾರೆ.

ಜ್ಞಾನವಯೋವೃದ್ಧರಾದ ಇವರಿಗೆ ಕವಿತಾ ಸರಸ್ವತಿಯು ಸಂಪೂರ್ಣವಾದ ಆರೋಗ್ಯವನೂ ಧೀಶಕ್ತಿಯನ್ನೂ ಅನುಗ್ರಹಿಸಲಿ.

ಎಂ. ವಿ. ಸಂಪತ್ಕುಮಾರಾಚಾರ್ಯ
ಉಭಯ ವೇದಾಂತ ಪ್ರವರ್ತನ ಸಭೆಯ ಸಾಂಸ್ಕೃತಿಕ ಸಮಿತಿ

ಪ್ರಕಾಶಕರ ನುಡಿ

ಶ್ರೀ ವೇದಾಂತ ದೇಶಿಕರ ಗ್ರಂಥಮಾಲಾ ಕುಸುಮ – ೧ (ಸ್ತೋತ್ರಮಾಲಾ) ಗ್ರಂಥದ ಪ್ರಕಾಶನ ಸಂದರ್ಭದಲ್ಲಿ ಸಭೆಯು ವಾಚಕವರ್ಗಕ್ಕೆ ನಿವೇದಿಸಿಕೊಂಡ ವಿಜ್ಞಾಪನೆಗೆ ಅನುಗುಣವಾಗಿ ಶ್ರೀ ಪಿಳ್ಳೈ ಲೋಕಾಚಾರ್ಯ ಗ್ರಂಥಮಾಲಾ ಕುಸುಮ – ೧ ಶ್ರೀ **ವಚನಭೂಷಣವನ್ನು** ಪ್ರಕಾಶಪಡಿಸುತ್ತಿದ್ದೇವೆ.

ಜ್ಞಾನಿಗಳಾದವರಿಗೂ ಮುಖ್ಯ ಕರ್ತವ್ಯವಾದ ಲೋಕಸಂಗ್ರಹ ಕಾರ್ಯದಲ್ಲೇ ತಮ್ಮ ಕಾಲವೆಲ್ಲವನ್ನೂ ವಿನಿಯೋಗಿಸಿಕೊಂಡ ಆಚಾರ್ಯ ಮಹಾನುಭಾವರಾದ ಶ್ರೀ ಪಿಳ್ಳೈ ಲೋಕಾಚಾರ್ಯರ ಕೃತಿಗಳಲ್ಲಿ ಮುಖ್ಯವಾದ ಗ್ರಂಥ "ಶ್ರೀ ವಚನಭೂಷಣ".

ಶ್ರೀ ಪಿಳ್ಳೈ ಲೋಕಾಚಾರ್ಯರೂ ಶ್ರೀ ವೇದಾಂತ ದೇಶಿಕರೂ ಸಮಕಾಲೀನರು.

ಯವನರಿಂದ ಉಂಟಾದ ಮಹತ್ಕಷ್ಟಗಳಿಂದ ಶ್ರೀ ರಂಗನಾಥ ವಿಗ್ರಹವನ್ನೂ ಶ್ರೀಭಾಷ್ಯದ ಮುಖ್ಯ ವ್ಯಾಖ್ಯಾನವಾದ ಶ್ರುತಪ್ರಕಾಶಿಕಾ ಗ್ರಂಥವನ್ನೂ ಸಂರಕ್ಷಿಸಿದವರು ಇವರೀರ್ವರೇ.

ವಿಶಿಷ್ಟಾದ್ವೈತಸಿದ್ಧಾಂತದ ಪ್ರವರ್ತಕರು ಉಭಯವೇದಾಂತಿಗಳೇ ಆದರೂ, ಇವರು ಬೋಧಿಸಿರುವ ತತ್ತ್ವ, ನೀಡಿರುವ ಭವ್ಯ ಸಂದೇಶಗಳು ಪ್ರಪಂಚದ ಎಲ್ಲ ಜನರ ಉಜ್ಜೀವನಕಾರಿಯಾಗಿವೆ. ಇವರ ಸದ್ಗ್ರಂಥಗಳ ಪ್ರಕಾಶನದಿಂದ ಆಗುವ ಪ್ರಯೋಜನವೂ ಸಹ ಎಲ್ಲರಿಗೂ ಉಂಟು. ಆದ್ದರಿಂದ ಆಚಾರ್ಯರ ಕೃತಿಗಳನ್ನು ಸಭೆಯಿಂದ ಪ್ರಕಟಿಸಲಾಗುತ್ತಿದೆ.

ತಮಿಳು ಭಾಷೆಯಲ್ಲಿ ಅಥವಾ ಸಂಸ್ಕೃತ ಭಾಷೆಯಲ್ಲಿ ಅಥವಾ ಕನ್ನಡ ಭಾಷೆಯಲ್ಲಿ ಪರಿಚಯವಿರುವ ವಾಚಕರುಗಳಿಗೆ ಅನುಕೂಲವಾಗುವಂತೆ ಶ್ರೀ ವಚನಭೂಷಣವನ್ನು ತಮ್ಮ ೮೭ನೇ ವಯಸ್ಸಿನಲ್ಲಿ ಶ್ರೀ ಜಗ್ಗು ಆಳ್ವಾರಯ್ಯಂಗಾರ್ಯರು ಸಂಪಾದಕರಾಗಿ ನಮಗೆ ಒದಗಿಸಿ ಕೊಟ್ಟಿದ್ದಾರೆ.

ಈ ಗ್ರಂಥದ ಅಂದವಾದ ಮುದ್ರಣ ಕಾರ್ಯಕ್ಕೆ ನೆರವಾದ ರಾಷ್ಟ್ರೋತ್ಥಾನ ಮುದ್ರಣಾಲಯದ ಕಾರ್ಯದರ್ಶಿಗಳಾದ ಶ್ರೀ ರಾಘವೇಂದ್ರ ಅವರಿಗೆ ಸಭೆಯು ಧನ್ಯವಾದಗಳನ್ನು ಅರ್ಪಿಸುತ್ತದೆ.

ಉಭಯ ವೇದಾಂತ ಪ್ರವರ್ತನ ಸಭಾ
ಮಲ್ಲೇಶ್ವರಂ ಬೆಂಗಳೂರು–೫೬೦ ೦೦೩.
೨೮–೨–೧೯೮೯

ಹೆಚ್. ಎಸ್. ನರಸಿಂಹಮೂರ್ತಿ
ಉಭಯ ವೇದಾಂತ ಪ್ರವರ್ತನ ಸಭಾ ಕಾರ್ಯದರ್ಶಿ

ಶುದ್ಧಾಶುದ್ಧ ಪತ್ರಿಕೆ

ಪುಟ	ಪಂಕ್ತಿ	ಶುದ್ಧ	ಅಶುದ್ಧ
೪	೪	ಮಾಹಾತ್ಮ್ಯ	ಮಹಾಹಾತ್ಮ್ಯ
೬	೨೩	ವಿವರ	ಭೂದೇವಿವರ
೮	೧೭	ಚೇತನ	ಚೇತರ
೧೧	೩	ಯತ್	ಯಂ
೧೧	೧೭	ವಿರಂಡು	ವಿರಡು
೧೩	೩೩	ಧರ್ಮ	ಅಧರ್ಮ
೨೪	೨೪	ತೀಹಯೆಲ್	ತೀಹಕ್ಕಯೆಲ್
೨೫	೨೫	ಸ್ಸಾ೯ತ್	ಸ್ಸಾತ್
೨೯	೨೦	ಸರ್ವದಾ	ಸರ್ವದಾಥಾ
೩೭	೨೮	ಪ್ರವೃತ್ತಿ	ಪ್ರವೃತಿ
೩೭	೩೨	ಪ್ರಾಪ್ತಿ	ಪಾಪ್ತಿ
೩೮	೨೪	ಪ್ರವೃತ್ತಿ	ಪ್ರವೃತಿ
೪೨	೨೬	ತ್ರಿಶ್ಯತ	ತ್ರಿಶಶಿತ
೪೭	೫	ಯತಾ	ಯತಾಂ
೪೫	೨೬	ಹರೌ	ಹತಾ
೪೭	೬	ದ್ಯುಮಣಿ	ದ್ಯುಮಣಿ
೪೭	೨೨	ತರ್ಗಮನಂ	ತರ್ಗತಮನಂ
೭೬	೧೩	ಗಿರೌ	ಗಿರಾ
೭೮	೧೩	ತದ್ಭಕ್ತೇಷು	ತದ್ಭಕೇಷು
೭೯	೨೩	ಗವತನು	ಗತವರು
೭೯	೧೪	ಭಗವದ್ಭ	ಭವವದ್ಭ
೮೬	೮	ಅವಜಾನಂತಿ	ಅವಮನ್ಯಂತಿ
೯೪	೧೪	ವಿಷಯ	ವಿಡಯಂ
೯೫	೨೧	ನಿಷ್ಕತಾಂ	ನಿಷ್ಕತಾ
೯೮	೧೩	ಮಂತನ	ಮಂತನು
೧೦೦	೯	ಅವದತ್ಸೌ	ಅವದತ್ರಸಾ
೧೦೩	೯	ಎಲ್ಲಿ	ಎಲ್ಲ
೧೦೪	೭	ಹರೌ	ಹತಾ
೧೦೪	೧೫	ಭಯೇನ	ಭಯೋನ
೧೧೪	೫	ಪರಂಪರಾ	ಪರಂಪರಾಂ
೧೧೬	೪	ಅವಲಂಬ್ಯ	ಅಲಂಬ್ಯ
೧೧೬	೪	ಸ್ವರೂಪಮಪ್ಯೆ	ಸ್ವರೂಪವಪ್ಯೆ
೧೧೮	೨	ಸ್ಯಾದ್ಯಥೊ	ಸಾದ್ಯಥೋ
೧೨೦	೨೭	ಹರೌ	ಹತಾ
೧೨೦	೨೭	ಪೂರ್ಣೇಪಿ	ಪೂಣೋ೯ಪಿ
೧೨೨	೨	ಗುಣಾನಾಂತು	ಗುಣಾಂತು
೧೨೫	೮	ತಾನ್	ತ್ಯಾನ್
೧೨೫	೨	ಭಾಗವತ	ಭಗವತ

ಪುಟ	ಪಂಕ್ತಿ	ಶುದ್ಧ	ಅಶುದ್ಧ
೧೨೬	೧೮	ಸ್ಮೃತ್ಯಾ	ಸ್ಮೃತ್ಯಾ
೧೨೭	೨೭	ಆಚಾರ್ಯಸ್ಯ	ಆಚಾರ್ಯಸ್ಯ
೧೨೮	೨೩	ಸ್ಥಿತಿಃ	ಸ್ಥಿತಿ
೧೩೧	೨	ಕೃತಜ್ಞತಾಂ	ಕೃತಜ್ಞತಾ
೧೩೨	೬	ಶಿಷ್ಯಾಚಾರ್ಯೌ	ಶಿಷ್ಯಾಚಾತ್ಮೌ
೧೩೨	೭	ಕುರ್ಯಾತಾಂ	ಕುರ್ಯಾಸ್ತಾಂ
೧೩೨	೧೨	ಇತಿಸ್ಮರನ್	ಇತಿಸ್ವಯಂ ಸ್ಮರನ್
೧೩೩	೪	ಮೇವಹಿ	ಮೆವೇಹಿ
೧೪೦	೧೭	ಆತ್ಮಾಪಿಸ್ಯಾತ್	ಆತ್ಮಾಪಿ
೧೪೧	೪	ನಡಂದ	ನಂಡದ
೧೪೨	೨	ಇತ್ಯುಕ್ತಾ	ಇತ್ಯುಕ್ತಾ
೧೫೪	೫	ಯದತ್ರಾ	ಯತ್ವಭಿ
೧೫೫	೬	ಶಕ್ತಿಸ್ಸಾ	ಶಕ್ತಿ
೧೫೭	೭	ಪದ್ಮಗಂಧಿಗದ್ಮ	
೧೫೭	೨೦	ನಿರ್ಹೇತು	ನಿರ್ಹೇತುಕ
೧೫೯	೧೪	ಪತೇಶ್ಚ	ಪತೇಃ
೧೫೯	೨೧	ಚಾಪೀಹ	ಚಾಪಿ
೧೬೦	೧೩	ಉಣ್ಣಂ	ಉಣ್ಣ
೧೬೭	೧೭	ಹರೇಸ್ತೋಪಿ	ಹರೇನೋಪಿ
೧೬೯	೩	ಮಂಗಲಾ	ವಂಗಲಾ
೧೬೯	೯	ವಿಲ್ಲದವನಿಗೆ	ವಿಲ್ಲದನಿಗೆ
೧೬೯	೧೫	ಪ್ಯೇವಮಾಚಾರ್ಯ	ಪ್ಯವಮಾಚಾರ್ಯ
೧೭೦	೩	ಕೊಂಬಿಲೇ	ಕೊಂಬಲೇ
೧೭೦	೭	ನಿವಾರಣಾಯ	ನಿವಾರಿಣಾ ಯ
೧೭೦	೧೬	ಕೇಟ್ಟಿರುಕ್ಕೆ	ಕೇಟ್ಟಿರುಕ್ಕೆ
೧೭೧	೧	ಚ್ಛಿತ್ರೇಪತೇಃ	ಚ್ಛಿಪತೇಃ
೧೭೨	೧	ಪೋದು	ಪೊದು
೧೭೨	೫	ಳಳ್ಳ	೧೪೯
೧೭೩	೧೫	ಯಿಕ್ಕೆಯಶಾಲೇ	ಯಿಕ್ಕೆಯಶಾಲೇ
೧೭೩	೨೭	ಗರ್ಹಿತ	ಗರ್ಹತ
೧೭೪	೨೨	ಮಿತ್ರಾಣಿ	ಮಿತಾಣಿ
೧೭೫	೪	ಚಾಪಿ	ಚಾಪಿ
೧೭೫	೧೩	ಗುರುಂ ವಾ ಯೋ	ಗುರುಂ ವಾಯೋ
೧೭೫	೧೭	ಸ್ತೋತ್ರತ್ತಿಲ್	ಸ್ತೋತತ್ತಿಲ್
೧೭೫	೨೮	ಮುಮಹಾಯಿರು	ಮುಂಯಿರು
೧೭೬	೧	ಭಕ್ತಿಯಿಲ	ಭಕ್ತಿಯಲ
೧೭೬	೨೩	ಸಂಸ್ಕೃತ	ಸಂಕೃತ
೧೭೬	೩೧	ತರಾಲ	ತರುಂ

– ಶ್ರೀಃ –

ಶುಭಮಸ್ತು

ಶ್ರೀ ವಚನಭೂಷಣಂ

ಪ್ರಥಮ ಪ್ರಕರಣಂ

ಶ್ಲೋಕಃ – ✱ ರಮ್ಯಜಾಮಾತೃಯೋಗೀಂದ್ರಂ ಶಮಾದಿಗುಣಸಾಗರಂ ।
ರಾಮಾನುಜಪದಾಂಭೋಜಚಂಚರೀಕಮಹಂ ಭಜೇ ॥ ೧ ॥

ಶ್ಲೋಕಃ – ✱ ಲೋಕಾಚಾರ್ಯಮುಪಾಸ್ಮಹೇ ಯತಿಪತೇಃ ಪಾದಾಬ್ಜಭಕ್ತಂ ಗುರುಂ
ಶ್ರೀಮನ್ಮಾರುತಿಕಲ್ಪಮಿಂದ್ರಿಯಜಯೇ ಕಾರುಣ್ಯರತ್ನಾಕರಂ ।
ಮೋಹಧ್ವಾಂತವಿವೇಕಶೂನ್ಯಜನತಾ ಸಂಸೃತ್ಕರಣ್ಯಾಶ್ರಯಾ
ಯಚ್ಛ್ರೀಸೂಕ್ತಮಣಿತ್ವಿಷೈವ ಸುಸುಖಂ ಸನ್ಮಾರ್ಗಮಾಲೋಕತೇ ॥ ೨ ॥

ತಾತ್ಪರ್ಯ – (೧) ಶಮದಮಾದಿ ಸದ್ಗುಣಗಳಿಗೆ ಸಮುದ್ರದಂತಿರುವ ಮತ್ತು ಯತಿರಾಜ ಸಾರ್ವಭೌಮರಾದ ರಾಮಾನುಜರ ಅಡಿದಾವರೆಗಳಲ್ಲಿ ಭ್ರಮರದಂತಿರುವ ವರವರಮುನಿಗಳನ್ನು ನಾನು ಸೇವಿಸುತ್ತೇನೆ.

(೨) ಈ ಸಂಸಾರವೆಂಬ ಗೊಂಡಾರಣ್ಯವನ್ನು ಆಶ್ರಯಿಸಿ ಅಜ್ಞಾನವೆಂಬ ಕತ್ತಲೆಯಿಂದ ಕೃತ್ಯಾಕೃತ್ಯ ವಿವೇಕಶೂನ್ಯರಾಗಿರುವ ಜನಗಳ ಸಮೂಹವು ಯಾವ ಲೋಕಾಚಾರ್ಯರ ಶ್ರೀ ವಚನಭೂಷಣವೆಂಬ ರತ್ನಗಳ ಕಾಂತಿಯಿಂದಲೇ ಸನ್ಮಾರ್ಗವನ್ನು ಕಾಣುವುದೋ ಅಂಥ ಲೋಕಾಚಾರ್ಯರನ್ನು ನಾನು ಸೇವಿಸುತ್ತೇನೆ. ಅವರು ಬ್ರಹ್ಮಚಾರಿಯಾಗಿಯೇ ಆಂಜನೇಯನಂತೆ ಇಂದ್ರಿಯ ಜಯವುಳ್ಳವರು ಮತ್ತು ಯತಿರಾಜ ಸಾರ್ವಭೌಮರಾದ ರಾಮಾನುಜಾಚಾರ್ಯರಿಗೆ ಶಿಷ್ಯರಾದ್ದರಿಂದ ಅವರ ಪಾದಕಮಲಗಳಲ್ಲಿ ದೃಢಭಕ್ತಿಯುಳ್ಳವರಾಗಿಯೂ ಪ್ರಕಾಶಿಸುತ್ತಿದ್ದರು.

(ಕವಿಯು ಪ್ರತಿಜ್ಞೆ ಮಾಡುತ್ತಾನೆ)

ಶ್ಲೋಕಃ – ✱ ವಕುಳಭೂಷಣ ಏಷ ಮಹಾಕವಿಃ
ವಚನಭೂಷಣಮದ್ಯ ಸುಸಂಸ್ಕೃತಂ ।
ರಚಯಿತುಂ ಮೃದುಪದ್ಯಮನೋಹರಂ
ಪ್ರಯತತೇ ಯತಿರಾಜಕೃಪಾಸ್ಪದಂ ॥ ೩ ॥

ತಾತ್ಪರ್ಯ – ಜಗ್ಗುವಕುಳಭೂಷಣನೆಂಬ ಮಹಾಕವಿಯು ಲೋಕಾಚಾರ್ಯರ ವಚನಭೂಷಣವೆಂಬ ತಮಿಳು ಭಾಷೆಯ ಶ್ರೀಸೂಕ್ತಿಯನ್ನು ಸಂಸ್ಕೃತಪದ್ಯರೂಪದಲ್ಲಿ ಮಾಡಲು ಪ್ರಯತ್ನಿಸುತ್ತಾನೆ. ಇದಕ್ಕೆ ಭಗವದ್ರಾಮಾನುಜಾಚಾರ್ಯರ ಕೃಪೆಗೆ ಪಾತ್ರನಾಗಿರುವುದೇ ಕಾರಣ.

ಸೂತ್ರಂ - ವೇದಾರ್ಥಮರುದಿಯಿಡುವದು ಸ್ಮೃತೀತಿಹಾಸಪುರಾಣಂಗಳಾಲೇ ॥ ೧ ॥

ಶ್ಲೋಕಃ – ✱ ಸ್ಮೃತೀತಿಹಾಸಾಚ್ಚ ಪುರಾಣವಾಕ್ಯೈ
ರಾಮ್ನಾಯ ಸಾರಾರ್ಥವಿನಿರ್ಣಯೋ ಹಿ ।
ಕಾರ್ಯಸ್ಸುಧೀಭಿರ್ನಿಗಮೋಯತೋಽಲ್ಪ-
ಶ್ರುತಾದ್ಬಿಭೇತಿ ಪ್ರತರಿಷ್ಯತೀತಿ ॥ ೪ ॥

ತಾತ್ಪರ್ಯ – ಪರಮ ಆಸ್ತಿಕರೂ ವೈದಿಕರೂ ವೇದವನ್ನೇ ಪ್ರಮಾಣವನ್ನಾಗಿ ಅಂಗೀಕರಿಸಿರುವುದರಿಂದ ಆ ವೇದದ ಅರ್ಥನಿರ್ಣಯವನ್ನು ಮಾಡುವ ಕ್ರಮವನ್ನು ಈ ಸೂತ್ರದಲ್ಲಿ ಹೇಳುತ್ತಾರೆ. ಯಾವ ಪುರುಷನಿಂದಲೂ ಹೇಳಲ್ಪಡದೇ ಇರುವುದರಿಂದಲೂ ನಿತ್ಯವಾಗಿರುವುದರಿಂದಲೂ ವೇದವು ಸಮಸ್ತ ಪ್ರಮಾಣ ವಿಲಕ್ಷಣವಾಗಿರುವುದು. ವೇದದ ಅಪೌರುಷೇಯತ್ವವನ್ನೂ ನಿತ್ಯತ್ವವನ್ನೂ ಹೇಳುವ ಶ್ರುತಿಸ್ಮೃತಿಗಳು ಹಲವಾರಿವೆ. ಅವೆಲ್ಲವೂ ಎಲ್ಲರಿಗೂ ಅರ್ಥವಾಗುವುದಿಲ್ಲವಾದ್ದರಿಂದ ಅವುಗಳನ್ನು ಇಲ್ಲಿ ನಿರ್ದೇಶಿಸಿ ಹೇಳುವುದಿಲ್ಲ. ಈ ವೇದವು ಎರಡು ಭಾಗವಾಗಿರುವುದು. ಪೂರ್ವಭಾಗ ಮತ್ತು ಉತ್ತರಭಾಗವೆಂದು. ಪೂರ್ವಭಾಗವು ಕರ್ಮವನ್ನೂ, ಉತ್ತರಭಾಗವು ಬ್ರಹ್ಮವನ್ನೂ ಪ್ರತಿಪಾದಿಸುವುವು. "ಅಥಾತೋ ಧರ್ಮ ಜಿಜ್ಞಾಸಾ", "ಅಥಾತೋ ಬ್ರಹ್ಮ ಜಿಜ್ಞಾಸಾ" ಎಂದಲ್ಲವೇ ಉಪಕ್ರಮವು. ಆದ್ದರಿಂದ ಪೂರ್ವಭಾಗದಲ್ಲಿ ಭಗವಂತನ ಆರಾಧನಾರೂಪವಾದ ಕರ್ಮವೂ ಉತ್ತರಭಾಗದಲ್ಲಿ ಆರಾಧ್ಯವಸ್ತುವಾದ ಬ್ರಹ್ಮವೂ ಹೇಳಲ್ಪಡುತ್ತವೆ. ಆ ಕರ್ಮವು ಬುಭುಕ್ಷುಗಳಿಗೆ ಐಶ್ವರ್ಯಸಾಧನವಾಗಿಯೂ ಮುಮುಕ್ಷುಗಳಲ್ಲಿ ಭಕ್ತಿನಿಷ್ಠರಿಗೆ ಉಪಾಸನಾಂಗವಾಗಿಯೂ ಪ್ರಪನ್ನರಿಗೆ ಕೈಂಕರ್ಯರೂಪವಾಗಿಯೂ ಇರುವುದು. ಅನಂತವಾದ ವೇದಗಳಿಗೆ ಅರ್ಥಮಾಡುವಾಗ ಪರಸ್ಪರ ವಿರೋಧವು ಕಂಡುಬರುತ್ತದೆ. ಸರ್ವಶಾಖಾ ಪ್ರತ್ಯಯ ನ್ಯಾಯದಿಂದಲೂ ಸಕಲ ವೇದಾಂತ ಪ್ರತ್ಯಯ ನ್ಯಾಯದಿಂದಲೂ ಪರಸ್ಪರ ವಿರೋಧವಿಲ್ಲದಂತೆ ಅರ್ಥ ಹೇಳಬೇಕು. ಈ ರೀತಿ ಅರ್ಥ ಹೇಳಬೇಕಾದರೆ ಮಹಾಬುದ್ಧಿಯುಳ್ಳ ಜ್ಞಾನಿಗಳಾದ ಮಹರ್ಷಿಗಳಿಗೆ ಸಾಧ್ಯವೇ ಹೊರತು ಸಾಮಾನ್ಯ ಮನುಷ್ಯರಿಗೆ ಸಾಧ್ಯವಾಗಲಾರದು. ಆದ್ದರಿಂದಲೇ ಸ್ಮೃತೀತಿಹಾಸಪುರಾಣಗಳಿಂದ ವೇದದ ಅರ್ಥವನ್ನು ತಿಳಿಯಬೇಕೆಂದು ಹೇಳಿರುವುದು. ಅವುಗಳಲ್ಲಿ ಸ್ಮೃತಿಗಳು ಯಾವುವೆಂದರೆ ಮನು, ಅತ್ರಿ, ವಿಷ್ಣು, ಹಾರೀತ, ಯಾಜ್ಞವಲ್ಕ್ಯ ಇವೇ ಮೊದಲಾದ ಧರ್ಮಶಾಸ್ತ್ರಗಳು. ಇತಿಹಾಸಗಳು ಯಾವುವೆಂದರೆ ಶ್ರೀ ರಾಮಾಯಣ, ಮಹಾಭಾರತ. ಪುರಾಣಗಳು ಯಾವುವೆಂದರೆ ಬ್ರಾಹ್ಮ, ಪಾದ್ಮ, ವೈಷ್ಣವ ಇವೇ ಮೊದಲಾದವು. ಇವುಗಳಿಲ್ಲದೆ ಸಾಮಾನ್ಯ ಮನುಷ್ಯನು ವೇದಕ್ಕೆ ಅರ್ಥಮಾಡಿದ್ದೇ ಆದರೆ ಆ ವೇದಪುರುಷನು ನನಗೆ ಅರ್ಥ ಹೇಳಿ ನನ್ನನ್ನು ವಂಚಿಸುತ್ತಾನೆಂದು ಹೆದರುವನು ಎಂದು ಬಾರ್ಹಸ್ಪತ್ಯ ಸ್ಮೃತಿಯಲ್ಲೂ, ಮಹಾಭಾರತದಲ್ಲೂ ಹೇಳಿದೆ.

ಸೂತ್ರಂ - ಸ್ಮೃತಿಯಾಲೇ ಪೂರ್ವಭಾಗತ್ತಿಲರ್ಥಮರುದಿಯಿಡಕ್ಕಡವದು
ಮತ್ತೈಯಿರಂಡಾಲುಂ ಉತ್ತರಭಾಗತ್ತಿಲರ್ಥಮರುದಿಯಿಡಕ್ಕಡವದು ॥ ೫ ॥

ಶ್ಲೋಕಃ – ✱ ಸ್ಮೃತಯಃ ಪೂರ್ವಭಾಗಾರ್ಥಾನ್ಸಮ್ಯಗ್ವಿಶದಯಂತಿ ಹಿ ।
ಇತಿಹಾಸಪುರಾಣಾಭ್ಯಾಂ ವೇದಾಂತಾರ್ಥಪ್ರಕಾಶನಂ ॥ ೫ ॥

ತಾತ್ಪರ್ಯ – ಆಚಾರವ್ಯವಹಾರ ಪ್ರಾಯಶ್ಚಿತ್ತಾದಿಗಳಿಗೆ ಪ್ರತಿಪಾದಕಗಳಾದ ಧರ್ಮಶಾಸ್ತ್ರಗಳಿಂದ ಕರ್ಮ ಪ್ರತಿಪಾದಕವಾದ ಪೂರ್ವಭಾಗದಲ್ಲಿ ಅರ್ಥನಿಶ್ಚಯವು ಸ್ಮೃತಿಗಳಿಂದ ಮಾಡಲ್ಪಡುತ್ತೆ. ಇತಿಹಾಸ ಪುರಾಣಗಳಿಂದ ಭಗವತ್ಸ್ವರೂಪರೂಪಗುಣವಿಭೂತಿಚೇಷ್ಟಿತ ಪ್ರತಿಪಾದಕವಾದ ಉತ್ತರಭಾಗದ ಅರ್ಥವು ಹೇಳಲ್ಪಡುತ್ತದೆ.

ಸೂತ್ರಂ - ಇವೈಯಿರಂಡಿಲುಂ ವೈತ್ತುಕ್ಕೊಂಡು ಇತಿಹಾಸಂ ಪ್ರಬಲಂ ॥ ೩ ॥

ಶ್ಲೋಕಃ – ❋ ತತ್ರಾಪ್ಯತ್ರೇತಿಹಾಸಸ್ಯ ಪ್ರಾಬಲ್ಯಂ ಪ್ರೋಚ್ಯತೇ ಬುಧೈಃ ।
ಕರ್ತುರಾಪ್ತತಮತ್ವಾಚ್ಚ ಪರಿಗ್ರಹವಿಶೇಷತಃ ॥ ೭ ॥

ಸೂತ್ರಂ - ಅತ್ತಾಲೆ ಅದು ಮುರ್ಪಟ್ಟದು ॥ ೪ ॥

ಶ್ಲೋಕಃ – ❋ ಅಲ್ಪಾಚ್ತರಪುರಾಣಾತ್ಯಾಗಿತಿಹಾಸಪರಿಗ್ರಹಾತ್ ।
ಅಭ್ಯರ್ಹಿತಪ್ರಧಾನತ್ವಾದಿತಿಹಾಸ ಉದಾಹೃತಃ ॥ ೭॥

ತಾತ್ಪರ್ಯ – ಇತಿಹಾಸ ಪುರಾಣ ಇವೆರಡರಲ್ಲಿ ಇತಿಹಾಸಕ್ಕೆ ಪ್ರಾಬಲ್ಯ ಹೇಳಲ್ಪಡುತ್ತದೆ. ಕಾರಣವೇನೆಂದರೆ ಇತಿಹಾಸವನ್ನು ಬರೆದವರು ಆಪ್ತರು. ಅದಕ್ಕೆ ಶಾಸ್ತ್ರಪರಿಗ್ರಹವೂ ಉಂಟು. ಅದೂ ಅಲ್ಲದೆ ಸ್ವರಾಕ್ಷರಗಳಿಗೆ ಅಚ್ ಎಂಬ ಸಂಜ್ಞೆ ಇದೆ. ಯಾವ ಪದದಲ್ಲಿ ಅಚ್ ಕಡಮೆಯಾಗಿದೆಯೋ ಆ ಪದವನ್ನು ಮೊದಲು ಹೇಳಬೇಕು ಎಂದು ಶಾಸ್ತ್ರವಿದೆ. ಇಲ್ಲಿ ಸ್ವಲ್ಪವೇ ಅಚ್ಚುಳ್ಳ ಪುರಾಣವೆಂಬ ಪದಕ್ಕೆ ಮೊದಲು ಇತಿಹಾಸವೆಂಬ ಅಧಿಕ ಅಚ್ಚುಳ್ಳ ಪದವನ್ನು ಹೇಳಿದೆ. ಇದಕ್ಕೆ ಕಾರಣವೇನೆಂದರೆ ಯಾವುದನ್ನು ಮುಖ್ಯವಾಗಿ ಹೇಳಬೇಕೋ ಅದನ್ನು ಹೆಚ್ಚಾದ ಅಚ್ಚುಳ್ಳದ್ದಾಗ್ಲೂ ಮೊದಲು ಹೇಳಬೇಕೆಂಬ ಇನ್ನೊಂದು ಶಾಸ್ತ್ರವಿರುವುದರಿಂದ ಮುಖ್ಯವಾದ ಇತಿಹಾಸವು ಪುರಾಣಕ್ಕಿಂತಲೂ ಮೊದಲು ಹೇಳಲ್ಪಟ್ಟಿತು. ಆದ್ದರಿಂದ ಇತಿಹಾಸಕ್ಕೆ ಪ್ರಾಬಲ್ಯ.

ಸೂತ್ರಂ - ಇತಿಹಾಸಶ್ರೇಷ್ಠಮಾನ ಶ್ರೀರಾಮಾಯಣತ್ತಾಲ್ ಶಿರೈಯಿರುಂದವಳೀತ್ತಂ ಶೊಲ್ಲುಹಿರದು. ಮಹಾಭಾರತತ್ತಾಲ್ ತೂದುಪೋನವನೀತ್ತಂ ಶೊಲ್ಲುಹಿರದು. ॥ ೫ ॥

ಶ್ಲೋಕಃ – ❋ ಶ್ರೇಷ್ಠೇ ರಾಮಾಯಣೇ ತಾವದ್ದೇವಸ್ತ್ರೀರಕ್ಷಣೇಚ್ಛಯಾ ।
ಕಾರಾಗಾರಗತಾಂ ಸೀತಾಂ ಶ್ಲಾಘತೇ ಮುನಿಪುಂಗವಃ ॥ ೮ ॥

ಭಾರತೇ ಪಂಚಮೇ ವೇದೇ ಪಾಂಡವತ್ರಾಣಕಾರಣಾತ್ ।
ದೂತಭಾವಂ ಸಮಾಶ್ರಿತ್ಯ ಗತಂ ಸ್ತೌತಿ ಹರಿಂ ಮುನಿಃ ॥ ೯ ॥

ತಾತ್ಪರ್ಯ – ಇತಿಹಾಸ ಶ್ರೇಷ್ಠವಾದ ಶ್ರೀ ರಾಮಾಯಣದಲ್ಲಿ ಸೀತೆಯು ಲೋಕಕ್ಕೆಲ್ಲಾ ತಾಯಿಯಾಗಿದ್ದರೂ ಸಾಕ್ಷಾನ್ನಾರಾಯಣನಿಗೆ ಪಟ್ಟಮಹಿಷಿಯಾಗಿದ್ದರೂ ಈ ಭೂಲೋಕದಲ್ಲಿ ಮನುಷ್ಯರಂತೆಯೇ ಅವತರಿಸಿ ತನ್ನನ್ನು ಆಶ್ರಯಿಸಿದ ದೇವಸ್ತ್ರೀಯರುಗಳ ಬಂಧನವನ್ನು ಬಿಡಿಸುವುದಕ್ಕಾಗಿ ತಾನು ರಾವಣನಿಂದ ಒಯ್ಯಲ್ಪಟ್ಟು ಅಶೋಕವನದಲ್ಲಿ ಕಾರಾಗೃಹದಲ್ಲಿರುವಂತೆ ಬಂಧನದಲ್ಲಿದ್ದಳಷ್ಟೆ. ಇದು ದಯೆಯ ಕೆಲಸವಲ್ಲವೇ. ಆದ್ದರಿಂದಲೇ ಸೀತೆಯನ್ನು ಬಹಳವಾಗಿ ಶ್ಲಾಘಿಸುತ್ತಾರೆ ವಾಲ್ಮೀಕಿ ಮುನಿಗಳು.

ಐದನೆಯ ವೇದವಾದ ಮಹಾಭಾರತದಲ್ಲಿ ಸಾಕ್ಷಾತ್ಪರಾತ್ಪರನಾದ ಶ್ರೀಕೃಷ್ಣನು ತನ್ನನ್ನು ಆಶ್ರಯಿಸಿದ ಪಂಚಪಾಂಡವರನ್ನು ರಕ್ಷಿಸಬೇಕೆಂಬ ಇಚ್ಛೆಯಿಂದ ಬಹಳ ನೀಚವಾದ ದೌತ್ಯವನ್ನು ಮಾಡಿದನಲ್ಲವೇ. ಇದು ಆಶ್ರಿತರಲ್ಲಿ ಉಂಟಾದ ದಯೆಯ ಕೆಲಸ. ಆದ್ದರಿಂದ ದೂತಕೃತ್ಯವನ್ನು ಮಾಡಿದ ಶ್ರೀಕೃಷ್ಣನನ್ನು ಬಹಳವಾಗಿ ಶ್ಲಾಘಿಸುತ್ತಾರೆ. ವ್ಯಾಸಮುನಿಗಳು ಇತಿಹಾಸಶ್ರೇಷ್ಠಗಳಾದ ಶ್ರೀ ರಾಮಾಯಣ

ಮಹಾಭಾರತ ಇವೆರಡರಲ್ಲಿಯೂ ಸೀತೆ ಮತ್ತು ಶ್ರೀಕೃಷ್ಣ ಇವರುಗಳ ಹಿರಿಮೆಯನ್ನು ಹೇಳಿದಂತಾಯಿತು.

ಸೂತ್ರಂ - ಇವ್ವೈಯಿರಂಡಾಲುಂ ಪುರುಷಕಾರವೈಭವಮುಂ, ಉಪಾಯ ವೈಭವಮುಂ ಶೊಲ್ಲಿತ್ತಾಯಿತ್ತು ॥ ೬ ॥

ಶ್ಲೋಕಃ - ✱ ರುಚಿರಪುರುಷಕಾರೋಪಾಯಮಾಹಾತ್ಮ್ಯಭಾಗ್ಯಾಂ
ಪ್ರಕಟಿತಮಭಪದ್ದಿಪ್ರಾಯಂಶಶ್ಚೇತನಾನಾಂ ।
ಅಗಣಿತದುರಿತೌಘಾ ಜಾನಕೀ ಲೋಕಮಾತಾ
ಸಮನಯದಮಲಾಂಸ್ತಾನ್ಕೃಷ್ಣಮಾದಿಂ ಚ ಧರ್ಮಂ ॥ ೧೦ ॥

ತಾತ್ಪರ್ಯಂ - ಇತಿಹಾಸ ಶ್ರೇಷ್ಠಗಳಾದ ಶ್ರೀ ರಾಮಾಯಣ ಮತ್ತು ಮಹಾಭಾರತ ಇವೆರಡರಿಂದಲೂ ಪುರುಷಕಾರ ವೈಭವವೂ, ಉಪಾಯ ವೈಭವವೂ ಹೇಳಲ್ಪಟ್ಟವು. ಅದು ಹೇಗೆಂದರೆ, ಅಪರಾಧಗಳನ್ನೇ ಎಸಗುತ್ತಲಿರುವ ಈ ಚೇತನರುಗಳಿಗೆ ಆಶ್ರಯಣೀಯಳಾದ ಈ ಸೀತೆಯು ಸಕಲ ಲೋಕಕ್ಕೂ ತಾಯಿಯಾಗಿದ್ದರಿಂದ, ಆ ಸಂಬಂಧದಿಂದಲೂ, ದಯೆಯೇ ಮೊದಲಾದ ಗುಣಗಳಿಂದಲೂ ಬಂದು ಆಶ್ರಯಿಸುವುದಕ್ಕೆ ಅನುಕೂಲಳಾಗಿರುವುದರಿಂದ, ಈ ಚೇತನರ ಅಪರಾಧಗಳನ್ನು ನೋಡಿ ಕೋಪಗೊಂಡವನಾಗಿ, ಇವರನ್ನು ನರಕಕ್ಕೆ ತಳ್ಳುವೆನು, ಕ್ಷಮಿಸಲಾರೆನು ಎಂದು ಹೇಳುವ ಸರ್ವೇಶ್ವರನ ಹೃದಯವನ್ನು ಸಾಮೋಕ್ತಿಗಳಿಂದ ಸರಿಪಡಿಸಿ ಆ ಚೇತನರನ್ನು ಅಂಗೀಕರಿಸುವಂತೆ ಮಾಡುತ್ತಾಳಾದ್ದರಿಂದ ಪುರುಷಕಾರ ವೈಭವವನ್ನು ಹೇಳಿದಂತಾಯಿತು. ಸರ್ವೇಶ್ವರನು ಈ ಚೇತನರನ್ನು ಅಂಗೀಕರಿಸಿದ ಮೇಲೆ, ನನ್ನನ್ನು ಆಶ್ರಯಿಸಿ ಭಕ್ತರಾದ ಮೇಲೆ ಅಪರಾಧ ಎಸಗುವುದಿಲ್ಲ ಎಂದು ದೃಢಚಿತ್ತನಾಗಿ ಅವರನ್ನು ರಕ್ಷಿಸುವುದಕ್ಕೆ ಉಪಾಯಭೂತನಾದವನ ವೈಭವವನ್ನೂ ಹೇಳಿದಂತಾಯಿತು.

ಸೂತ್ರಂ - ಪುರುಷಕಾರವುಂಪೋದು ಕೃಪೈಯುಂ, ಪಾರತಂತ್ರ್ಯಮುಂ, ಅನನ್ಯಾರ್ಹತ್ವಮುಂ ವೇಣುಂ ॥ ೭ ॥

ಶ್ಲೋಕಃ - ✱ ಅನನ್ಯಾರ್ಹತ್ವಕಾರುಣ್ಯಪಾರತಂತ್ರ್ಯತ್ರಯಂ ದೃಢಂ ।
ಅವಶ್ಯಂ ಪುರುಷಕಾರಸ್ಥಲೇ ನಿತ್ಯಮಪೇಕ್ಷಿತಂ ॥ ೧೧ ॥

ತಾತ್ಪರ್ಯಂ - ಪುರುಷಕಾರವಾಗುವ ಸ್ಥಲದಲ್ಲಿ ದಯೆಯೂ, ಪಾರತಂತ್ರ್ಯವೂ, ಅನನ್ಯಾರ್ಹತೆಯೂ ಅತ್ಯವಶ್ಯಕವಾಗಿರಬೇಕು. ದಯೆ ಎಂದರೇ, ಇನ್ನೊಬ್ಬರ ದುಃಖವನ್ನು ನೋಡಿ ಸಹಿಸದೇ ಇರೋಣವು: ಪಾರತಂತ್ರ್ಯವೆಂದರೆ, ಭಗವಂತನಿಗೆ ಅಧೀನನಾಗಿರುವಿಕೆ; ಅನನ್ಯಾರ್ಹತ್ವವೆಂದರೆ, ತದ್ವ್ಯತಿರಿಕ್ತವಾದ ವಿಷಯಕ್ಕೆ ಅರ್ಹತೆ ಇಲ್ಲದೇ ಇರುವಿಕೆ. ಈ ಸಂಸಾರಚಕ್ರದಲ್ಲಿ ದುಃಖಪಡುತ್ತಿರುವ ಚೇತನರನ್ನು ಸರ್ವೇಶ್ವರನೊಡನೆ ಸೇರಿಸುವ ಪ್ರಯತ್ನಪಡಬೇಕಾದರೆ ದಯೆಯು ಬೇಕು. ಸ್ವತಂತ್ರನಾದ ಸರ್ವೇಶ್ವರನನ್ನು ವಶೀಕರಿಸುವುದಕ್ಕಾಗಿ ಅವನನ್ನು ಅನುವರ್ತಿಸಲು ಪಾರತಂತ್ರ್ಯ ಬೇಕು. ನಮ್ಮನ್ನು ಬಿಟ್ಟು ಬೇರೆ ವಿಷಯಕ್ಕೆ ಅರ್ಹನಾಗದೆ ನಮಗೇ ಅತಿಶಯವನ್ನು ಕೋರುತ್ತಲಿರುವವನಾದ್ದರಿಂದ ಅವನನ್ನು ಅಂಗೀಕರಿಸುವುದು ನಮ್ಮ ಕೆಲಸವಲ್ಲವೇ? ಎಂದು ಹೇಳಿ, ಅವನಿಂದ ಕೆಲಸಮಾಡಿಸಿಕೊಳ್ಳುವುದಕ್ಕೆ ಅನನ್ಯಾರ್ಹತ್ವ ಬೇಕು. ಆದ್ದರಿಂದ ಪುರುಷಕಾರವಾಗುವಾಗ ಈ ಮೂರೂ ಅವಶ್ಯಕವಾಗಿರಬೇಕು.

ಸೂತ್ರಂ - ಕಿರಾಟ್ಟಮುರ್ವಡ ಕಿರಿಂದದು. ತನ್ನುಡ್ಯೆಯು ಕೃಪ್ಟೆಯ್ಯೆ ವೆಳಿಯಿಡುಹ್ಯೆಕ್ಕಾಹ
ನಡುವಿಲ್ ಕಿರಿಂದದು ಪಾರತಂತ್ರ್ಯತ್ತೈ ವೆಳಿಯಿಡಃಹ್ಯೆಕ್ಕಾಹ,
ಅನಂತರಂ ಕಿರಿಂದದು ಅನನ್ಯಾರ್ಹತ್ವತ್ತೈ ವೆಳಿಯಿಡುಹ್ಯೆಕ್ಕಾಹ ॥ ೮ ॥

ಶ್ಲೋಕಃ - ✱ ಸೀತಾಯಾಃ ಪ್ರಥಮಂ ಬಭೂವ ವಿರಹೋ ಯಶ್ಚೀರಘೂತ್ತಂಸತಃ
ಸೋಯಂ ದರ್ಶಯಿತುಂ ಸ್ವಕೀಯಕರುಣಾಂ ಸಂದರ್ಶಯಾಮ್ಯತ್ರ ತತ್ ।
ಪೌಲಸ್ತ್ಯೇನ ಬಲಾದಿಯಂ ತ್ವಪಹೃತಾ ಯದ್ರಾಕ್ಷಸೀಭಿರ್ವೃತಾ
ತಾಭಿರ್ಭರ್ತ್ಸಿತವತ್ಯಪಿ ಸ್ವಕರುಣಾಂ ಪ್ರಾದರ್ಶಯತ್ತಾಸ್ವಪಿ ॥ ೧೨ ॥

ಶ್ಲೋಕಃ - ✱ ಮಧ್ಯೇ ವಿಯೋಗೋ ಜನಕಾತ್ಮಜಾಯಾಃ
ರಾಮಾದಭೂದ್ಯಸ್ಯ ತು ಪಾರತಂತ್ರ್ಯಂ ।
ಸ್ವಕೀಯಮಾದರ್ಶಯಿತುಂ ತದತ್ರ
ಸಂದರ್ಶಯಾಮ್ಯದ್ಯ ಕಥಾಮುಖೇನ ॥ ೧೩ ॥

ಶ್ಲೋಕಃ - ✱ ಅಪವಾದಾಪನೋದಾಯ ತ್ಯಕ್ತಾ ರಾಮಾದ್ವನೇಽನಘಾ ।
ಸೀತಾ ತದೀಯಬುದ್ಧ್ಯಾ ಸ್ವಪ್ರಾಣಾನ್ನೈವ ಜಹೌ ತದಾ ॥ ೧೪ ॥

ತಾತ್ಪರ್ಯ - ಜಗನ್ಮಾತೆಯಾದ ಸೀತಾದೇವಿಯು ಮೂರಾವರ್ತಿ ರಾಮನನ್ನು ಬಿಟ್ಟು ವಿಯೋಗವನ್ನನುಭವಿಸಿದಳಷ್ಟೆ, ಆ ಮೂರು ವಿರಹಗಳಲ್ಲೂ ಹಿಂದೆ ಹೇಳಿದ ಕೃಪೆ, ಪಾರತಂತ್ರ್ಯ, ಅನನ್ಯಾರ್ಹತ್ವ, ಈ ಮೂರನ್ನೂ ಪ್ರಕಾಶಪಡಿಸಿರುವಳು. ಅದು ಹೇಗೆಂದರೆ, ರಾವಣನಿಂದ ಅಪಹರಿಸಲ್ಪಟ್ಟ ಸೀತೆಯು, ರಾಮನ ಶುಭಸೂಚಕವಾದ ಸ್ವಪ್ನವೃತ್ತಾಂತವನ್ನು ತ್ರಿಜಟೆಯ ಬಾಯಿಂದ ಕೇಳಿ ಭಯಪಟ್ಟ ರಾಕ್ಷಸಿಯರನ್ನು ಕುರಿತು ದಯೆಯಿಂದ 'ನೀವು ಹೆದರಬೇಡಿ, ನಾನು ರಕ್ಷಿಸುವೆನು' ಎಂದು ಅಭಯಪ್ರದಾನ ಮಾಡಿದಳು. ರಾವಣವಧೆಯಾದ ಮೇಲೆ ಅಂಜನೇಯನು ಅಶೋಕವನಕ್ಕೆ ಬಂದು ವಿನಯದಿಂದ, 'ದೇವಿ, ನಿನ್ನನ್ನು ತರ್ಜನಭರ್ತ್ಸನಾದಿಗಳಿಂದ ರಾತ್ರೀಹಗಲೂ, ಭಯಪಡಿಸಿ ಕ್ಲೇಶವನ್ನುಂಟುಮಾಡಿದ ಈ ರಾಕ್ಷಸಿಯರನ್ನು ಚಿತ್ರವಧೆಮಾಡಿ ಕೊಲ್ಲಬೇಕೆಂದು ಅಪೇಕ್ಷಿಸುತ್ತೇನೆ. ಅದಕ್ಕೆ ನೀನು ಅನುಮತಿ ಕೊಡಬೇಕು' ಎಂದು ಕೇಳಲು ಹಿಂದೆ ಅಭಯಪ್ರದಾನ ಮಾಡಿದಂತೆಯೇ ಸೀತಾದೇವಿಯು, 'ಎಲೈ ವಾನರಶ್ರೇಷ್ಠನೇ, ಅವರು ರಾಜಾಧೀನರಾಗಿರುವಾಗ ನನ್ನನ್ನು ಆ ರೀತಿ ಕ್ಲೇಶಪಡಿಸಿದರು. ರಾಜನಾದ ರಾವಣನು ಸತ್ತಮೇಲೆ ಈಗ ಆ ರೀತಿ ಮಾಡುವರೇ ಅಥವಾ ಪಾಪಿಷ್ಠರೇ ಆಗಲಿ, ನಾವು ಅವರಲ್ಲಿ ದಯೆಯನ್ನು ತೋರಿಸಬೇಕು' ಎಂದು ಹೇಳಿ ಆಂಜನೇಯನನ್ನು ಸಮಾಧಾನಗೊಳಿಸಿ ಆ ರಾಕ್ಷಸಿಯರಲ್ಲಿ ದಯೆಯನ್ನು ಪ್ರಕಾಶಪಡಿಸಿದಳು.

ಎರಡನೇ ವಿಯೋಗದಲ್ಲಿ ಪಾರತಂತ್ರ್ಯವನ್ನು ಪ್ರಕಾಶಪಡಿಸಿದಳು. ಅದು ಹೇಗೆಂದರೆ, ಸೀತೆಯು ಗರ್ಭಿಣಿಯಾಗಿರುವಾಗ, ಪುನಃ ಮುನಿಗಳು ವಾಸಮಾಡುವ ಪವಿತ್ರವಾದ ಕಾಡಿನಲ್ಲಿ ಒಂದು ದಿನವಾದರೂ ವಾಸಮಾಡಲು ಅಪೇಕ್ಷಿಸುವೆನೆಂದು ರಾಮನಿಗೆ ತಿಳಿಸಿದ್ದಳು. ಅದನ್ನೇ ಮನಸ್ಸಿನಲ್ಲಿಟ್ಟು ಕೊಂಡಿದ್ದ ಶ್ರೀರಾಮಚಂದ್ರನು, ಅಗಸನ ಅಪವಾದೋಕ್ತಿಗಳನ್ನು ಗೂಢಚಾರರಿಂದ ತಿಳಿದು ಒಡನೇ 'ನೀನು ಕಾಡಿಗೆ ಹೋಗಬೇಕೆಂದು ಅಪೇಕ್ಷಿಸಿದೆಯಲ್ಲವೆ, ನಿನ್ನ ಅಪೇಕ್ಷೆಯಂತೆಯೇ ಕಳುಹಿಸಿ ಕೊಡುವೆ'ನೆಂದು ಹೇಳಿ ಲಕ್ಷ್ಮಣನೊಡನೆ ಕಾಡಿಗೆ ಕಳುಹಿಸಿದನು. ಲಕ್ಷ್ಮಣನು ಸೀತೆಯನ್ನು ಅರಣ್ಯದಲ್ಲಿ ಬಿಟ್ಟು ಹಿಂತಿರುಗುವಾಗ, ಸೀತೆಯನ್ನು ಕುರಿತು, 'ನಿನ್ನ ಮೇಲೆ ಉಂಟಾದ ಅಪವಾದವನ್ನು ಹೋಗಲಾಡಿಸಿಕೊಳ್ಳಲು ಅಣ್ಣನಾದ ರಾಮಚಂದ್ರನು ನಿನ್ನನ್ನು ತ್ಯಜಿಸಿರುವ'ನೆಂದು ಹೇಳಿದನು. ಆಗ ಸೀತೆಯು ಗಂಗೆಯಲ್ಲಿ ಬಿದ್ದು ಪ್ರಾಣಬಿಡಲೇ ಎಂದು ಯೋಚಿಸಿ, ಕೊನೆಗೆ ಪತಿಯಾದ

ರಾಮಚಂದ್ರನಿಗೆ ಆಧೀನವಾದ ವಸ್ತುವಿದು. ನನಗೆ ಪ್ರಾಣಬಿಡಲು ಸ್ವಾತಂತ್ರ್ಯವೆಲ್ಲಿಯದು ಎಂದು ಹೇಳಿ ವಾಲ್ಮೀಕಿಯ ಆಶ್ರಮದಲ್ಲೇ ವಾಸಿಸುತ್ತಿದ್ದಳು. ಆದ್ದರಿಂದ ಎರಡನೇ ವಿಯೋಗದಲ್ಲಿ ಪಾರತಂತ್ರ್ಯವನ್ನು ಪ್ರಕಾಶಪಡಿಸಿದಳು.

ಶ್ಲೋಕಃ – ❋ ವಾಲ್ಮೀಕಿನಾ ಸಹ ಸಮೇತ್ಯ ವಿದೇಹಪುತ್ರೀ
ರಾಮಾಂತಿಕಂ ಪ್ರಯತಗೀರ್ನಿಜಚಿತ್ತಶುದ್ಧ್ಯೈ ।
ಅನ್ಯಾರ್ಹತಾವಿರಹಮುಚ್ಚತರಂ ನಿವೇದ್ಯ
ಸಿಂಹಾಸನೇನ ಧರಣೀವಿವರಂ ಜಗಾಹೇ ॥ ೧೫ ॥

ಮೂರನೆಯ ವಿಯೋಗದಲ್ಲಿ ಅನನ್ಯಾರ್ಹತ್ವವನ್ನು ಪ್ರಕಾಶಪಡಿಸಿದಳು. ಅದು ಹೇಗೆಂದರೆ, ಶ್ರೀರಾಮಚಂದ್ರನು ಅಶ್ವಮೇಧಯಾಗವನ್ನು ಮಾಡುವ ಸಂದರ್ಭದಲ್ಲಿ. ವಾಲ್ಮೀಕಿಯ ಆಪ್ಪಣೆಯಂತೆ ಅಯೋಧ್ಯಾನಗರದ ಬೀದಿಯಲ್ಲಿ ವಾಲ್ಮೀಕಿಯಿಂದ ರಚಿಸಲ್ಪಟ್ಟ ಶ್ರೀರಾಮಾಯಣವನ್ನು ಹಾಡುತ್ತಾ ಹೋಗುತ್ತಿರುವ ಲವಕುಶರನ್ನು ಶ್ರೀರಾಮನು ತನ್ನ ಸಮೀಪಕ್ಕೆ ಕರೆಯಿಸಿಕೊಂಡು ಆ ದೊಡ್ಡ ಸಭೆಯಲ್ಲಿಹಾಡುವಂತೆ ಹೇಳಿದನು. ಆ ಸಮಯದಲ್ಲಿ ಈ ಲವಕುಶರು ಸೀತೆಯ ಮಕ್ಕಳೆಂದು ತಿಳಿಯಿತು. ಒಡನೇ ಭಟರ ಮೂಲಕ ವಾಲ್ಮೀಕಿ ಮಹರ್ಷಿಯನ್ನೂ, ಸೀತೆಯನ್ನೂ ಬರಮಾಡಿಕೊಂಡು ಸೀತೆಯ ಪಾರಿಶುದ್ಧ್ಯವನ್ನು ತಿಳಿಸುವಂತೆ ಹೇಳಿದನು. ವಾಲ್ಮೀಕಿ ಮಹರ್ಷಿಯು ಸೀತೆಯ ಪರಿಶುದ್ಧತೆಯನ್ನು ಆ ಸಭೆಯಲ್ಲಿ ತಿಳಿಸುತ್ತಲು, ಶ್ರೀರಾಮಚಂದ್ರನು 'ಸೀತೆಯು ಪರಿಶುದ್ಧಳೆಂದು ನಾನೂ ಅರಿತಿರುವೆನು, ನೀವೂ ಅರಿತಿರುವಿರಿ. ಆದರೆ ಲೋಕಕ್ಕೆ ತಿಳಿಸುವುದಕ್ಕಾಗಿ ಸೀತೆಯೇ ಪ್ರತಿಜ್ಞೆ ಮಾಡಿ ಹೇಳಲಿ' ಎಂದನು. ಆಗ ಸೀತೆಯು ತಲೆ ಬಗ್ಗಿಸಿ ಭೂಮಿಯನ್ನು ನೋಡುತ್ತಾ ಕೈಮುಗಿದು, 'ನಾನು ಶ್ರೀರಾಮನನ್ನು ಬಿಟ್ಟು ಮತ್ತೊಬ್ಬ ಪುರುಷನನ್ನು ಮನಸ್ಸಿನಿಂದಲೂ ಯೋಚಿಸದೇ ಇದ್ದ ಪಕ್ಷದಲ್ಲಿ ಎಲೈ ಭೂದೇವಿಯೇ ನೀನು ಬಿರುಕು ಬಿಟ್ಟು ನಿನ್ನೊಳಗೆ ನನ್ನನ್ನೂ ಕರೆದುಕೋ. ನಾನು ತ್ರಿಕರಣಗಳಿಂದಲೂ ರಾಮನನ್ನೇ ನಂಬಿದ್ದ ಪಕ್ಷದಲ್ಲಿ ಎಲೈಭೂದೇವಿಯೇ, ನೀನು ಬಿರುಕುಬಿಟ್ಟು ನಿನ್ನೊಳಗೇ ನನ್ನನ್ನು ಕರೆದುಕೋ. ನಾನು ಹೇಳಿದ ಮಾತು ಸತ್ಯವಾದ ಪಕ್ಷದಲ್ಲಿ, ಎಲೈ ಭೂದೇವಿಯೇ, ನೀನು ಬಿರುಕು ಬಿಟ್ಟು ನಿನ್ನೊಳಗೆ ನನ್ನನ್ನು ಕರೆದುಕೋ.' ಎಂದು ಶಪಥ ಮಾಡುತ್ತಲೂ, ಭೂದೇವಿವರದಿಂದ ದಿವ್ಯ ರತ್ನಮಯಸಿಂಹಾಸನವೂ ಮೇಲಕ್ಕೆ ಎದ್ದು ಬಂದು ಆ ಸೀತೆಯನ್ನು ಆ ಸಿಂಹಾಸನದಲ್ಲಿ ಕೂರಿಸಿಕೊಂಡ್ಡು ಭೂದೇವಿಯು ರಸಾತಲಕ್ಕೆ ಕರೆದುಕೊಂಡು ಹೋದಳು. ಈ ರೀತಿ ಮೂರನೆಯ ವಿಯೋಗದಲ್ಲಿ ರಾಮನನ್ನು ಬಿಟ್ಟು ಮತ್ತೊಬ್ಬ ಪುರುಷನನ್ನು ತ್ರಿಕರಣದಿಂದಲೂ ಯೋಚಿಸಿಲ್ಲವೆಂದು ಶಪಥಮಾಡಿ ಅನನ್ಯಾರ್ಹತ್ವವನ್ನು ಪ್ರಕಾಶಪಡಿಸಿದಳು.

ಸೂತ್ರಂ - ಸಂಶ್ಲೇಷವಿಶ್ಲೇಷಂಗಳಿರಂಡಿಲುಂ ಪುರುಷಕಾರತ್ವಂ ತೋತ್ತುಂ ॥ ೯ ॥

ಶ್ಲೋಕಃ – ❋ ಸಂಶ್ಲೇಷೇ ವಿರಹೇಪಿ ಸಾಧು ವಿಧಿಲಾರಾಜಾತ್ಮಜಾಯಾಃ ಸ್ವತ
ಸ್ಸಿದ್ಧಂ ತದ್ಘಟಕತ್ವಮದ್ಯ ವಿಶದೀಕರ್ತುಂ ಯತೇ ಮೇಲನೇ ।
ಕಾಂತಾರಂ ಪ್ರತಿ ರಾಘವಂ ಜಿಗಮಿಷುಂ ಸಂಪ್ರಾರ್ಥಯನ್ಲಕ್ಷ್ಮಣಃ
ರುದ್ಧಶ್ಚಾ ಜನಕಾತ್ಮಜಾನುಮತಿತೋ ರಾಮಾನುವರ್ತೀ ಬಭೌ ॥ ೧೭ ॥

ಶ್ಲೋಕಃ – ❋ ವಿಶ್ಲೇಷೇ ಜನಕಾತ್ಮಜಾ ದಶಮುಖಂ ಸನ್ಮಾರ್ಗಗಂ ಕರ್ತುಮ-
ಪ್ಯುದ್ಯುಕ್ತಾ ನಹಿ ಸಂತಿ ಕಿಂ ತವ ಪುರೇ ಸಂತೋ ನ ತಾನ್ಸೇವಸೇ ।
ಕಿಂವೇತಿ ಪ್ರತಿಬೋಧನೈಕನಿರತಾ ತತ್ರಾಪ್ಯಭೂತ್ತತ್ಪರಾ
ತಸ್ಮಾತ್ತದ್ಘಟಕತ್ವಮಸ್ತಿ ಸತತಂ ತಸ್ಯಾಂದಶಾಭೇದತಃ ॥ ೧೮ ॥

ತಾತ್ಪರ್ಯ – ಸಂಶ್ಲೇಷ, ವಿಶ್ಲೇಷ ಇವೆರಡರಲ್ಲಿಯೂ ಲಕ್ಷ್ಮಿಯಲ್ಲಿ ಪುರುಷಕಾರತ್ವವು ತೋರುವುದು. ಸಂಶ್ಲೇಷ ಎಂದರೆ ಪತಿ ಪತ್ನಿಯರು ಜೊತೆಯಲ್ಲಿರುವಿಕೆ, ವಿಶ್ಲೇಷ ಎಂದರೆ ಅಗಲಿರುವಿಕೆ. ಸಂಶ್ಲೇಷದಲ್ಲಿ ಯಾವ ರೀತಿ ಪುರುಷಾಕಾರವನ್ನೆಸಗಿದಳೆಂದರೆ, ಕೈಕೇಯಿಯ ಮಾತಿನಂತೆ ಶ್ರೀರಾಮನು ಕಾಡಿಗೆ ಹೊರಡುವಾಗ ಸೀತೆಯು 'ನಾನೂ ನಿನ್ನೊಡನೆ ಬರುತ್ತೇನೆ, ನಿನ್ನನ್ನು ನಾನು ಬಿಟ್ಟು ಒಂದು ಕ್ಷಣವೂ ಈ ಅಯೋಧ್ಯೆಯಲ್ಲಿರಲಾರೆ' ಎಂದು ಹೇಳಲು, ರಾಮನು ಹಾಗೆಯೇ ಆಗಲೆಂದು ಒಪ್ಪಿದನು. ಅನಂತರ ಲಕ್ಷ್ಮಣನೂ, 'ನಾನೂ ನಿನ್ನೊಡನೆ ಬರುತ್ತೇನೆ. ನಿನ್ನ ಸರ್ವವಿಧ ಕೈಂಕರ್ಯವನ್ನೂ ಅಲ್ಲಿ ನಾನೇ ಮಾಡಬೇಕು' ಎಂದು ಪ್ರಾರ್ಥಿಸಿದನು. ಆಗ ರಾಮನು, 'ನೀನು ಇಲ್ಲೇ ಇದ್ದು ತಂದೆಯಾದ ದಶರಥನನ್ನು ನೋಡಿಕೋ' ಎಂದು ತಡೆಯಲು, ಸೀತೆಯು, 'ಅವನೂ ನಮ್ಮೊಡನೆ ಬರಲಿ' ಎಂದು ಹೇಳಲು ರಾಮನು ಜೊತೆಯಲ್ಲಿ ಲಕ್ಷ್ಮಣನನ್ನೂ ಕರೆದೊಯ್ದನು. ಆದ್ದರಿಂದ ಸಂಶ್ಲೇಷದಲ್ಲಿ ಪುರುಷಕಾರವನ್ನು ಮಾಡಿದಂತಾಯಿತು.

ವಿಶ್ಲೇಷದಲ್ಲಿ ಸೀತೆಯು ರಾವಣನನ್ನು ಒಳ್ಳೇ ಮಾರ್ಗಕ್ಕೆ ತರಬೇಕೆಂದು ಇಚ್ಛಿಸಿ ಎಲೈ 'ರಾವಣನೆ, ನಿನ್ನ ಪಟ್ಟಣದಲ್ಲಿ ಸತ್ಪುರುಷರುಗಳು ಇಲ್ಲವೇ ? ಇದ್ದರೂ ಅವರುಗಳನ್ನು ನೀನು ಸೇವಿಸುವುದಿಲ್ಲವೇ' ಎಂದು ಹೇಳಿ ವಿಯೋಗದಲ್ಲಿಯೂ ಪುರುಷಕಾರ ಮಾಡಿದಳು.

ಸೂತ್ರಂ - ಸಂಶ್ಲೇಷದಶೈಯಿಲ್ ಈಶ್ವರನೈ ತಿರುತ್ತುಂ,
ವಿಶ್ಲೇಷದಶೈಯಿಲ್ ಚೇತನನೈ ತಿರುತ್ತುಂ ॥ ೧೦ ॥

ಶ್ಲೋಕಃ – ❋ ಸರ್ವೇಶ್ವರಂ ತು ಸಂಶ್ಲೇಷೇ ವಿಶ್ಲೇಷೇ ವಿಮುಖಾನ್ಜನಾನ್ ।
ಸಾಂತ್ವೋಕ್ತ್ಯಾ ಕ್ಷಮಯಾ ಚ ಶ್ರೀಸ್ಸ್ವವರ್ತ್ಮಾನಯತಿ ಧ್ರುವಂ ॥ ೧೯ ॥

ತಾತ್ಪರ್ಯ – ಈ ಸೂತ್ರದಲ್ಲಿ ಸಂಶ್ಲೇಷ ವಿಶ್ಲೇಷದಶೆಗಳಲ್ಲಿ ಪುರುಷಕಾರ ಮಾಡುವ ರೀತಿಯನ್ನು ಹೇಳುತ್ತಾರೆ. ಲಕ್ಷ್ಮಿಯು ಸಂಶ್ಲೇಷದಶೆಯಲ್ಲಿ ಸರ್ವೇಶ್ವರನು, ಅಜ್ಞಾಚ್ಛೇದೀ, ಮಮದ್ರೋಹೀ, ಕ್ಷಿಪಾಮಿ ಎಂದು ಹೇಳಲು, ಲೋಕದಲ್ಲಿ ಯಾರುತಾನೇ ತಪ್ಪು ಮಾಡುವುದಿಲ್ಲ ? ಅವರೆಲ್ಲರೂ ನಮ್ಮ ಮಕ್ಕಳಲ್ಲವೇ, ಆದ್ದರಿಂದ ಅವರ ಅಪರಾಧವನ್ನು ಕ್ಷಮಿಸಿ ನೀವು ಅವರುಗಳನ್ನು ಅಂಗೀಕರಿಸಬೇಕೆಂದು ಸ್ವತಂತ್ರನಾದ ಸರ್ವೇಶ್ವರನನ್ನು ಸಮಾಧಾನೋಕ್ತಿಗಳಿಂದ ವಶೀಕರಿಸಿ ಚೇತನರನ್ನು ಸ್ವೀಕರಿಸುವಂತೆ ಮಾಡುವಳು. ವಿಶ್ಲೇಷದಶೆಯಲ್ಲಿ, ಭಗವಂತನಲ್ಲಿ ಅಭಿಮುಖ್ಯವನ್ನು ತೋರಿಸದೆ ಪರಾಙ್ಮುಖರಾದ ಚೇತನರ ವಿಷಯದಲ್ಲಿ ಕ್ಷಮೆಯನ್ನು ತೋರಿಸಿ ಸರ್ವೇಶ್ವರನನ್ನು ಆಶ್ರಯಿಸುವಂತೆ ಮಾಡುವಳು. ಇವೆರಡನ್ನೂ ಹಿಂದೆಯೇ ರಾಮಾಯಣದಲ್ಲಿ ತಿಳಿಸಿದ್ದಾಯಿತು.

ಶ್ಲೋಕಃ – ❋ ಶೃಣಾತಿ ನೃಣಾಂ ನಿಖಿಲಾಂಶ್ಚ ದೋಷಾ
ನ್ಕೃಣಾತಿ ಲೋಕಂ ಗುಣತೋ ಯತಶ್ಚ್ರೀಃ ।
ಏತಾದೃಶೋಕ್ತ್ಯಾ ನನು ಸಿದ್ಧತೀಹ
ಪೂರ್ವೋಕ್ತವೃತ್ತಂ ಹ್ಯುಭಯಂ ಶ್ರಿಯಸ್ತು ॥ ೨೦ ॥

ತಾತ್ಪರ್ಯ – ಶೃ-ಹಿಂಸಾಯಾಂ ಎಂಬ ಧಾತುವಿನಿಂದಲೂ, ಶ್ರೀಞ್ ಪಾಕೇ ಎಂಬ ಧಾತುವಿನಿಂದಲೂ ನಿಷ್ಪನ್ನವಾದ ಶ್ರೀಶಬ್ದದಿಂದ ಚೇತನರುಗಳ ದೋಷಗಳೆಲ್ಲವನ್ನೂ ನಾಶಪಡಿಸಿ ಸದ್ಗುಣಗಳಿಂದ ಚೇತನರನ್ನು ಪಕ್ವಗೊಳಿಸುತ್ತಾಳೆ ಎಂಬ ಅರ್ಥವು ತೋರುವುದಾದ್ದರಿಂದಲೂ, ಇದು ಸರ್ವೇಶ್ವರನಿಗೂ ಅನ್ವಯಿಸುವುದಾದ್ದರಿಂದಲೂ ಎರಡು ದಶೆಯಲ್ಲೂ ಇವಳಿಗೆ ಪುರುಷಕಾರತ್ವವುಂಟು.

ಸೂತ್ರಂ - ಇರುವರೈಯುಂ ತಿರುತ್ತುವದುಮುಂಪದೇಶತ್ತಾಲೇ ॥ ೧೧ ॥

ಶ್ಲೋಕಃ – ❋ ಉಪದೇಶೇನ ಸಾ ಲಕ್ಷ್ಮೀಸ್ಸ್ವತಂತ್ರಂ ಕಮಲಾಪತಿಂ ।
ಚೇತನಾನ್ವಿಮುಖಾಂಶ್ಚಾಪಿ ಸ್ವಾಯತ್ತೀಕುರುತೇ ಧ್ರುವಂ ॥ ೨೧ ॥

ತಾತ್ಪರ್ಯ – ಜಗನ್ಮಾತೆಯಾದ ಲಕ್ಷ್ಮಿಯು ಸ್ವತಂತ್ರನಾದ ತನ್ನ ಪತಿಯನ್ನೂ, ವಿಮುಖರಾಗಿರುವ ಚೇತನರನ್ನೂ ಉಪದೇಶದಿಂದ ಸ್ವಾಧೀನಪಡಿಸಿಕೊಳ್ಳುವಳು. ಯಾವ ರೀತಿ ಉಪದೇಶಮಾಡಿ ಸ್ವತಂತ್ರನಾದ ಪತಿಯನ್ನೂ, ತನ್ನ ಕಡೆ ತಿರುಗದೇ ವಿಮುಖರಾದ ಚೇತರನ್ನೂ ಸ್ವಾಧೀನಪಡಿಸಿಕೊಳ್ಳುವಳೆಂದರೆ, ಆ ಉಪದೇಶಕ್ರಮವನ್ನು ಮುಂದಿನ ಎರಡು ಶ್ಲೋಕಗಳಲ್ಲಿ ವಿವರಿಸುತ್ತಾರೆ.

ಶ್ಲೋಕಃ – ❋ ಸಿಕತಾನ್ನರಾಶಿಷು ಶಿಲಾಕಣೋದ್ಧೃತಿಂ
ಕಥಮಾತನೋತಿ ಮನುಜಸ್ತಥೈವ ಹಿ ।
ಅಪರಾಧವತ್ಸು ನೃಷು ಮಾ ಗುಣಾನ್ಹರೇ
ಮೃಗಯೇತಿ ಬೋಧಯತಿ ಸಾ ಪತಿಂ ರಮಾ ॥ ೨೨ ॥

ತಾತ್ಪರ್ಯ – ಈ ಶ್ಲೋಕದಲ್ಲಿ ಸರ್ವೇಶ್ವರನನ್ನು ವಶಗೊಳಿಸುವ ಉಪದೇಶಕ್ರಮವನ್ನು ಹೇಳುತ್ತಾರೆ. 'ಎಲೈ ಭಗವಂತನೇ, ಮರಳಿನಿಂದಲೇ ಮಾಡಿರುವ ಅನ್ನದ ರಾಶಿಯಲ್ಲಿ ಕಲ್ಲುಚೂರುಗಳನ್ನು ಆಯುವುದು ಮನುಷ್ಯನಿಗೆ ಹೇಗೆ ತಾನೇ ಸಾಧ್ಯವಾದೀತು ? ಅದರಂತೆಯೇ ಅಪರಾಧವನ್ನೆಸಗುವುದೇ ಸ್ವಭಾವವಾಗಿರುವ ಈ ಚೇತನರಲ್ಲಿ ನೀನು ಗುಣಗಳನ್ನು ಹುಡುಕಲು ಸಾಧ್ಯವೇ, ಅದು ಎಂದಿಗೂ ಆಗದ ಕೆಲಸ. ಆದ್ದರಿಂದ ಅವರಲ್ಲಿ ಗುಣಗಳನ್ನು ಹುಡುಕದೇ ನಿನ್ನ ಮಕ್ಕಳೆಂದು ಅಂಗೀಕರಿಸು' ಎಂದು ಉಪದೇಶಮಾಡಿ ಚೇತರನ್ನು ಅಂಗೀಕರಿಸುವಂತೆ ಮಾಡುವಳು.

ಶ್ಲೋಕಃ – ❋ ಜೀವಿತುಂ ಭುವಿ ಭವಾನ್ಯದೀಚ್ಛತಿ
ಶ್ರೇಯ ಏತದಹಮಾದಿಶಾಮಿ ತೇ ।
ರಾಘವಂ ಶರಣಮೇಹಿ ರಕ್ಷತಿ
ತ್ವಾಂ ಕೃಪಾಳುರಿತಿ ರಾವಣಂ ಜಗೌ ॥ ೨೩ ॥

ತಾತ್ಪರ್ಯ – ಈ ಶ್ಲೋಕದಲ್ಲಿ ಚೇತನರನ್ನು ಉಪದೇಶದಿಂದ ವಶಪಡಿಸಿಕೊಳ್ಳುವ ರೀತಿಯನ್ನು ಹೇಳುತ್ತಾರೆ. ಸೀತೆಯು ಅಶೋಕವನದಲ್ಲಿ, ರಾವಣನನ್ನು ಕುರಿತು ಈ ರೀತಿ ಉಪದೇಶಮಾಡುವಳು. 'ಎಲೈ ರಾವಣನೇ, ನೀನು ಇನ್ನೂ ಕೆಲವು ಕಾಲ ಈ ಭೂಮಿಯಲ್ಲಿ ಜೀವಿಸಿರಬೇಕೆಂಬ ಇಚ್ಛೆ ಇದ್ದ ಪಕ್ಷದಲ್ಲಿ ನಿನಗೆ ಶ್ರೇಯಸ್ಕರವಾದ ಒಂದು ಮಾತನ್ನು ಹೇಳುವೆನು ಕೇಳು. ಈಗಲೂ ಆ ಶ್ರೀರಾಮಚಂದ್ರನನ್ನು ಶರಣುಹೋಗು, ಅವನು ನಿನ್ನನ್ನು ಕೈಬಿಡದೇ ರಕ್ಷಿಸುವನು, ಅವನು ಬಹಳ ದಯಾಳು' ಎಂದು ರಾವಣನನ್ನು ಕುರಿತು ಉಪದೇಶ ಮಾಡಿದಳು. ಆದ್ದರಿಂದ ಉಪದೇಶದಿಂದಲೇ ಇಬ್ಬರನ್ನೂ ವಶಪಡಿಸಿಕೊಳ್ಳುವಳು.

ಸೂತ್ರಂ - ಉಪದೇಶತ್ತಾಲೇ ಇರುವರುಡೈಯವುಂ ಕರ್ಮಪಾರತಂತ್ರ್ಯಂ ಕುಲೈಯುಂ ॥ ೧೨ ॥

ಶ್ಲೋಕಃ – ❋ ಉಭಯೋಃ ಕರ್ಮನಿಷ್ಠತ್ವಮುಪದೇಶಾದ್ವಿನಶ್ಯತಿ ।
ಸ್ವಾತಂತ್ರ್ಯಾದ್ಧಿ ಸ್ವಸಂಕಲ್ಪಪ್ರಾಪ್ತಂ ತತ್ಕಮಲಾಪತೇಃ ॥ ೨೪ ॥

ಶ್ಲೋಕಃ – ✱ ಚೇತನಾನಾಮವಿದ್ಯಾತಃ ಕರ್ಮನಿಘ್ನತ್ವಮಾಗತಂ ।
ರಮಾಯಾ ಉಪದೇಶೇನ ತದ್ದ್ವಯಂ ಕ್ಷಾಳಿತಂ ಭವೇತ್ ॥ ೨೫ ॥

ತಾತ್ಪರ್ಯ – ಈ ಲಕ್ಷ್ಮಿಯ ಉಪದೇಶದಿಂದ ಉಂಟಾಗುವ ಫಲಿತಾಂಶವನ್ನು ಈ ಸೂತ್ರದಲ್ಲಿ ಹೇಳುತ್ತಾರೆ. ಚೇತನರಿಗೂ, ಸರ್ವೇಶ್ವರನಿಗೂ ಅನಾದಿಸಿದ್ಧವಾದದ್ದು, ಕರ್ಮಪಾರತಂತ್ರ್ಯ. ಚೇತನರ ಕರ್ಮ ಪಾರತಂತ್ರ್ಯವು ಪ್ರಕೃತಿ ಸಂಬಂಧದಿಂದ ಉಂಟಾದ್ದು, ಸರ್ವೇಶ್ವರನ ಕರ್ಮಪಾರತಂತ್ರ್ಯವು ನಿರಂಕುಶ ಸ್ವಾತಂತ್ರ್ಯದಿಂದ ಉಂಟಾದ್ದು, ಈ ರೀತಿ, ಈರ್ವರ ಕರ್ಮಪಾರತಂತ್ರ್ಯವನ್ನು ಆಯಾಯಾ ಕಾಲಕ್ಕೆ ಅನುಗುಣವಾದ ಉಪದೇಶದಿಂದ ಹೋಗಲಾಡಿಸುವಳು.

ಸೂತ್ರಂ - **ಉಪದೇಶತ್ತಾಲೇ ಮೀಳಾದಪ್ಪೋದು, ಚೇತನನ್ಮೈ ಅರುಳಾಲೇ ತಿರುತ್ತುಂ, ಈಶ್ವರನ್ಮೈ ಅಳಹಾಲೇ ತಿರುತ್ತುಂ** ॥ ೧೩ ॥

ಶ್ಲೋಕಃ – ✱ ಚೇತನಾನ್ಕೃಪಯಾ ಮಾತಾ ಕರೋತ್ಯಾತ್ಮಗುಣಾನ್ವಿತಾನ್ ।
ಸೌಂದರ್ಯಾದ್ವಶಯತ್ಯೇಷಾ ಭಗವಂತಂ ಕೃಪಾನಿಧಿಂ ॥ ೨೬ ॥

ತಾತ್ಪರ್ಯ – ಜಗನ್ಮಾತೆಯಾದ ಲಕ್ಷ್ಮಿಯು, ಅನಾದಿಸಂಸ್ಕಾರದಿಂದ ಪಾಪಕೆಲಸದಲ್ಲೇ ಆಸಕ್ತರಾಗಿ ಭಗವದ್ವಿಮುಖರಾಗಿರುವ ಈ ಚೇತನರನ್ನು ದಯೆಯಿಂದ ಸದುಪದೇಶಮಾಡಿ ಭಗವದಭಿಮುಖರಾಗುವಂತೆ ಮಾಡುವಳು. ನನ್ನ ಆಜ್ಞೆಯನ್ನು ಉಲ್ಲಂಘಿಸಿ ತಮ್ಮ ಇಷ್ಟದಂತೆ ನಡೆಯುತ್ತಿರುವ ಚೇತನರನ್ನು ನಾನು ರಕ್ಷಿಸುವುದಿಲ್ಲವೆಂದು ತಿರಸ್ಕರಿಸುವ ಸ್ವತಂತ್ರನಾದ ಸರ್ವೇಶ್ವರನನ್ನು, ಯಾರುತಾನೇ ತಪ್ಪು ಮಾಡುವುದಿಲ್ಲ. ಇವರೆಲ್ಲರೂ ನಮ್ಮ ಮಕ್ಕಳಲ್ಲವೇ ಆದ್ದರಿಂದ ಇವರೆಲ್ಲರನ್ನೂ ಕೈ ಬಿಡದೇ ಕಾಪಾಡೆಂದು ಹೇಳಿದರೂ ಕೇಳದಿರಲು ತನ್ನ ಹಾವಭಾವಾದಿಗಳಿಂದಲೂ, ಸೌಂದರ್ಯದಿಂದಲೂ ವಶಗೊಳಿಸಿ ತಾನು ಹೇಳಿದ ಹಾಗೆ ಕೇಳುವಂತೆ ಮಾಡುವಳು.

ಉಪಾಯ ವೈಭವಂ

ಸೂತ್ರಂ - **ಅರಿಯಾದವರ್ಥಂಗಳ್ಕೆಯಡ್ಕೆಯ ಅರಿವಿತ್ತು ಆಚಾರ್ಯಕೃತ್ಯತ್ತೈಯುಂ, ಪುರುಷಕಾರಕೃತ್ಯತ್ತೈಯುಂ, ಉಪಾಯಕೃತ್ಯತ್ತೈಯುಂ, ತಾನೇ ಎರಿಟ್ಟುಕ್ಕೊಳ್ಳುಹ್ಕೆಯಾಲೇ, ಮಹಾಭಾರತತ್ತಿಲುಪಾಯವೈಭವವುಂ ಶೊಲ್ಲಿತ್ತಾಯಿತ್ತು** ॥ ೧೪ ॥

ಶ್ಲೋಕಃ – ✱ ಅಜ್ಞಾತಾರ್ಥನಿವೇದನಾಯ ಭಗವಾನಾಚಾರ್ಯಕೃತ್ಯಂ ತಥಾ
ಕಾರುಣ್ಯಾದ್ಘಟಕತ್ವಮಪ್ಯಥ ತಥೋಪಾಯಸ್ಯ ಕೃತ್ಯಂ ಸ್ವಯಂ ।
ಆರೋಪ್ಯಾತ್ಮನಿ ಯದ್ವ್ಯರಾಜತ ತತಸ್ತತ್ಪ್ರೋಚ್ಯತೇ ಭಾರತೇ
ಶ್ರೀಮಾನ್ಪ್ರೋಯಮುಪಾಯ ಇತ್ಯಭಿದಧಾಮ್ಯದ್ಯೈವ ತದ್ವೈಭವಂ ॥ ೨೭ ॥

ಗೀತಾಂ ದಯಾವಿಶ್ಲಥಚೇತಸೇ ಸ್ವಯಂ ಪಾರ್ಥಾಯ ಕೃಷ್ಣೋಹ್ಯುಪದಿಶ್ಯ ತತ್ವತಃ ।
ಯಸ್ಮಾತ್ಪ್ರಬುದ್ಧಂ ವಿತತಾನ ಫಲ್ಗುನಂ ಕೃತ್ಯತ್ರಯಂ ಚಕ್ರಿಣಿ ತತ್ಸಮಾಸ್ಥಿತಂ ॥ ೨೮ ॥

ತಾತ್ಪರ್ಯ – ಸೀತೆಯ ದಯಾದಿ ಗುಣಗಳನ್ನು ಹೇಳಿದಾಗಲೇ ಶ್ರೀ ರಾಮಾಯಣದಲ್ಲಿ ಪುರುಷಕಾರ ವೈಭವವನ್ನು ಹೇಳಿಯಾಯಿತು. ಈಗ ಮಹಾಭಾರತದಲ್ಲಿನ ಉಪಾಯ ವೈಭವವನ್ನು ಹೇಳುತ್ತಾರೆ. ಅರ್ಜುನನು ಯುದ್ಧಭೂಮಿಯಲ್ಲಿ ಎರಡು ಸೈನ್ಯಗಳ ನಡುವೆ ರಥವನ್ನು ನಿಲ್ಲಿಸುವಂತೆ ಕೃಷ್ಣನಿಗೆ ಹೇಳಲು, ಶ್ರೀಕೃಷ್ಣನು ಅದೇ ರೀತಿ ರಥವನ್ನು ನಿಲ್ಲಿಸಿದನು. ಆಗ ಶತ್ರುಪಕ್ಷದಲ್ಲಿರುವ ಆಚಾರ್ಯರನ್ನೂ ಬಂಧುಗಳನ್ನೂ ನೋಡಿ ದಯೆಯಿಂದ ನಾನು ಯುದ್ಧ ಮಾಡುವುದಿಲ್ಲವೆಂದು ಹೇಳಲು ಶ್ರೀಕೃಷ್ಣನು ತಾನೇ ಆಚಾರ್ಯನಾಗಿ ನಿಂತು ಅರ್ಜುನನ ಅಜ್ಞಾನವನ್ನು ಹೋಗಲಾಡಿಸುವುದಕ್ಕಾಗಿ ಗೀತೆಯ ಮೂಲಕ ದೇಹಾತ್ಮಗಳ ವಿವೇಕವನ್ನು ಬೋಧಿಸಿದನು. 'ಎಲೈ ಅರ್ಜುನನೇ, ಇದೇನಿದು, ಕ್ಷತ್ರಿಯಕುಲದಲ್ಲಿ ಹುಟ್ಟಿದವನಿಗೆ ಯುದ್ಧ ಮಾಡುವುದು ಧರ್ಮವಲ್ಲವೇ ? ನೀನು, ಈ ರೀತಿ ಅಸ್ಥಾನದಲ್ಲಿ ಸ್ನೇಹವನ್ನು ತೋರಿಸುವುದು ಉಚಿತವಲ್ಲ. ಈ ದೇಹವೇ ಬೇರೆ, ಇದರೊಳಗಿರುವ ಆತ್ಮವೇ ಬೇರೆ. ಆತ್ಮವನ್ನು ಕೊಲ್ಲುವುದಕ್ಕೆ ಯಾರಿಂದಲೂ ಸಾಧ್ಯವಾಗಲಾರದು. ಮನುಷ್ಯನ ದೇಹಕ್ಕೆ ಯಾವ ರೀತಿ ಕೌಮಾರ, ಯೌವನ, ಮುಪ್ಪು ಇವುಗಳುಂಟಾಗುವುವೋ ಅದೇ ರೀತಿ ಈ ಜೀವಾತ್ಮಕ್ಕೆ ಬೇರೆ ಶರೀರಪ್ರಾಪ್ತಿಯು. ಜೀವಾತ್ಮನು ನಿತ್ಯನು, ಶಾಶ್ವತನು, ಅನಾದಿಸಿದ್ಧನು. ನೀನು ದೇಹವನ್ನು ಕೊಲ್ಲುತ್ತೀಯೇ ಹೊರತು, ಜೀವಾತ್ಮನನ್ನು ಕೊಲ್ಲಲಾರೆ. ಮನುಷ್ಯನು ಜೀರ್ಣವಾದ ಹಳೇ ಬಟ್ಟೆಯನ್ನು ಬಿಸುಟು ಹೊಸ ಬಟ್ಟೆಯನ್ನು ಯಾವ ರೀತಿ ಧರಿಸುವನೋ, ಅದೇ ರೀತಿ ಜೀವಾತ್ಮನು ಹಳೇ ದೇಹವನ್ನು ಬಿಟ್ಟು ಹೊಸ ದೇಹವನ್ನು ಹೊಂದುವನು' ಎಂದು ಹೇಳಿ, ಅರ್ಜುನನ 'ಸ್ವಾತಂತ್ರ್ಯ ಜ್ಞಾನವನ್ನು ಹೋಗಲಾಡಿಸುವುದಕ್ಕಾಗಿ, ನಾನೇ ಸರ್ವಾಂತರ್ಯಾಮಿಯಾಗಿದ್ದು ಈ ಪ್ರಪಂಚವನ್ನು ನಡೆಸುತ್ತೇನೆ. ಅಹಂಕಾರದಿಂದ ಮೂಢನಾಗಿರುವನು, ನಾನೇ ಎಲ್ಲವನ್ನೂ ಮಾಡುವೆನು ಎಂದರಿತಿರುವನು, ಸಾಧುಗಳನ್ನು ರಕ್ಷಿಸುವುದಕ್ಕೂ, ದುಷ್ಟರನ್ನು ಶಿಕ್ಷಿಸುವುದಕ್ಕೂ, ನಶಿಸಿ ಹೋಗಿರುವ ಧರ್ಮವನ್ನು ಸ್ಥಾಪಿಸುವುದಕ್ಕೂ, ನಾನು ಪ್ರತಿಯೊಂದು ಯುಗದಲ್ಲೂ ಅವತರಿಸುವೆನು. ನಾನು ನಿನಗೆ ದಿವ್ಯ ಚಕ್ಷುಸ್ಸನ್ನು ಅನುಗ್ರಹಿಸುವೆನು, ನನ್ನ ವಿಶ್ವರೂಪವನ್ನು ದರ್ಶನ ಮಾಡು, ಎಂದು ಹೇಳಿ ವಿಶ್ವರೂಪವನ್ನೂ ತೋರಿಸಿ, ಕೊನೆಗೆ, 'ಎಲೈ ಕೃಷ್ಣನೇ, ನೀನು ಹೇಳಿದಂತೆ ಕೇಳುವೆನು, ನನ್ನ ಅಜ್ಞಾನವೆಲ್ಲವೂ ತೊಲಗಿತು' ಎಂದು ಅರ್ಜುನನು ಹೇಳುವಂತೆ ಆಚಾರ್ಯ ಕೃತ್ಯವನ್ನು ಎಸಗಿದನು ಮತ್ತು ಈ ಚೇತನನ ಅಪರಾಧಗಳಿಂದ ಉಂಟಾದ ಕಾಲುಷ್ಯವನ್ನು ತಾನೇ ಸಹಿಸಿಕೊಂಡು, ಚೇತನನ ಪ್ರಾರ್ಥನೆಯಿಲ್ಲದೆಯೇ ಇವನನ್ನು ಸೇರಿಸಿಕೊಂಡದ್ದರಿಂದ ಪುರುಷಕಾರಕೃತ್ಯವನ್ನೂ ತಾನೇ ಮಾಡಿದಂತಾಯಿತು, ಮತ್ತು ನನ್ನನ್ನೇ ಶರಣು ಹೊಂದು, ಸರ್ವವಿಧವಾದ ಪಾಪಗಳಿಂದಲೂ ನಿನ್ನನ್ನು ಬಿಡಿಸುವೆನೆಂದು, ತಾನೇ ಉಪಾಯವಾಗಿ ನಿಂತು ಹೇಳಿದ್ದರಿಂದ, ಉಪಾಯ ಕೃತ್ಯವನ್ನೂ ತಾನೇ ಮಾಡಿದಂತಾಯಿತು.

ಇತಿ ಉಪಾಯ ವೈಭವಂ

ಅಥ ಉಭಯ ಸಾಧಾರಣ ವೈಭವಂ

ಸೂತ್ರಂ - ಪುರುಷಕಾರತ್ತುಕ್ಕುಂ, ಉಪಾಯತ್ತುಕ್ಕುಂ, ವೈಭವಮಾವದುಂ,
ದೋಷತ್ತೈಯುಂ, ಗುಣಹಾನಿಯೈಯುಂ ಪಾರ್ತ್ತು,
ಉಪೇಕ್ಷಿಯಾದವಳವನ್ರಿಕ್ಕೇ ಅಂಗೀಕಾರತ್ತುಕ್ಕು
ಅವೈತನ್ನೈಯೇ ಪಚ್ಚೈಯಾಕ್ಕುಹೈ ॥ ೧೫ ॥

ಶ್ಲೋಕಃ – ✱ ಪುರುಷಕಾರಸುಸಾಧನವೈಭವಂ
ವಿಶದಯಾಮ್ಯಹಮದ್ಭುತವಾದರಾತ್ ।
ಅಗುಣದೋಷಯುಗಂ ಸವಮೀಕ್ಷ್ಯ ಯ
ಪ್ರಿಯತಯಾ ಗ್ರಪಣಂ ಹ್ಯಭಯಸ್ಯ ಚ ॥ ೨೯ ॥

ತಾತ್ಪರ್ಯ – ಪುರುಷಕಾರ, ಉಪಾಯ, ಇವೆರಡರ ಅಸಾಧಾರಣ ವೈಭವವನ್ನು ಹಿಂದೆ ಹೇಳಿದರು. ಈಗ ಆವೆರಡರ ಸಾಧಾರಣ ವೈಭವವನ್ನು ಹೇಳುತ್ತಾರೆ. ದೋಷವೆಂದರೆ, ಶಾಸ್ತ್ರನಿಷಿದ್ಧವಾದ ಮಾಡಬಾರದ ಕೆಲಸವನ್ನು ಮಾಡುವುದು, ಗುಣಹಾನಿಯೆಂದರೆ, ಶಾಸ್ತ್ರದಲ್ಲಿ ಹೇಳಲ್ಪಟ್ಟ ವಿಹಿತಕರ್ಮವನ್ನು ಮಾಡದೇ ಇರುವುದು. ತನಗೆ ಅಭಿಮುಖನಾಗಿ ಬಂದ ಚೇತನನಲ್ಲಿ ಈ ದೋಷ, ಗುಣಹಾನಿ ಇವೆರಡನ್ನೂ ತಾನು ನೋಡಿದಾಗ್ಯೂ, ಆ ಚೇತನನನ್ನು ಉಪೇಕ್ಷೆ ಮಾಡದೇ ಅಂಗೀಕರಿಸುವುದಕ್ಕೆ ಅವೆರಡನ್ನೂ ಕೈಕಾಣಿಕೆಯಂತೆ ಭಾವಿಸುವುದು. ಭಗವಂತನು ಅಭಿಮುಖನಾದ ಚೇತನನನ್ನು ಉಪೇಕ್ಷೆಮಾಡದೇ ಇರುವುದಕ್ಕೆ ಕಾರಣ. ದಯೆ, ಕ್ಷಮೆ. ಆ ದೋಷವನ್ನೂ, ಗುಣಹಾನಿಯನ್ನೂ ಕೈಕಾಣಿಕೆಯಂತೆ ಅಂಗೀಕರಿಸುವುದಕ್ಕೆ ಕಾರಣ ವಾತ್ಸಲ್ಯ. ವಾತ್ಸಲ್ಯವೆಂದರೆ ದೋಷವನ್ನು ಭೋಗ್ಯವಾಗಿ ಅಂಗೀಕರಿಸುವಿಕೆ. ಇದಕ್ಕೆ ದೃಷ್ಟಾಂತ, ಹಸುವು. ಆಗತಾನೇ ಹಾಕಿದ ತನ್ನ ಕರುವಿನ ಮೈಮೇಲಿರುವ ಅಸಹ್ಯವಾದ ರಕ್ತಮಾಂಸಗಳನ್ನು ನಾಲಿಗೆಯಿಂದ ಯಾವ ರೀತಿ ನೆಕ್ಕಿ ತೆಗೆದುಕೊಳ್ಳುವುದೋ ಅದೇ ರೀತಿ ಚೇತನರ ದೋಷವನ್ನು ಭಗವಂತನು ಭೋಗ್ಯವಾಗಿ ಅಂಗೀಕರಿಸುವನು.

ಸೂತ್ರಂ - ಇರಂಡುಮಿರಂಡುಂ ಕುಲಯುವೇಣುಮೆನ್ರಿರುಕ್ಕಿಲ್
ಇರಂಡುಕ್ಕುಮಿರಡುಮುಂಡಾಯಿತ್ತದಾಂ ॥ ೧೬ ॥

ಶ್ಲೋಕಃ – ✱ ಗುಣಹಾನಿದೋಷವಿರಹಾದನಂತರಂ
ವಶಯೇಯಮೇನಮಿತಿ ಚೇತ್ತದಾ ಸ್ವಯಂ ।
ಪ್ರಥಮೋಕ್ತಮೇತದುಭಯಂ ಗುಣಾತ್ಯಯಂ
ಭಜತೀಹ ದೋಷಮಪಿ ಚಕ್ರಿಣೋ ಧ್ರುವಂ ॥ ೩೦ ॥

ತಾತ್ಪರ್ಯ – 'ಅಭಿಮುಖನಾದ ಚೇತನನು, ಈ ಗುಣಹಾನಿ ಮತ್ತು ದೋಷ ಇವೆರಡನ್ನೂ ಬಿಟ್ಟುಬರಲಿ, ಆಮೇಲೆ ನಾನು ಅವನನ್ನು ಅಂಗೀಕರಿಸುವೆನು' ಎಂದು ಭಗವಂತನು ಹೇಳಿದ ಪಕ್ಷದಲ್ಲಿ ಪುರುಷಕಾರಕ್ಕೆ ದೋಷವೂ, ಉಪಾಯಕ್ಕೆ ಗುಣಹಾನಿಯೂ ಬಂದಂತಾಗುವುದು. ಅದು ಹೇಗೆಂದರೆ ನಿರುಪಾಧಿಕ ತಂದೆಯಾದ್ದರಿಂದ ಭಗವಂತನು ತನ್ನ ಮಕ್ಕಳಾದ ಚೇತನರ ದೋಷವನ್ನು ಕಂಡು ನಾನು ಅಂಗೀಕರಿಸುವುದಿಲ್ಲವೆಂದರೆ ತಂದೆ ಮಕ್ಕಳಿಗುಂಟಾದ ಸಂಬಂಧವು ಹೋದಂತಾಗುವುದು. ಗುಣಹಾನಿ ಹೇಗೆಂದರೆ ಈ ಚೇತನರ ದುಃಖವನ್ನು ಕಂಡೂ ದಯೆ ತೋರಿಸದೇ ಇರುವುದು. ಇವೆರಡೂ ಉಂಟಾದಂತಾಗುವುದು.

ಸೂತ್ರಂ - ಇರಂಡುಂ ಕುಲ್ಯೆಂದದೆನ್ರಿರುಕ್ಕಿಲ್ ಇತ್ತಲ್ಯೆಕ್ಕಿರಂಡುಮುಂಡಾಯಿತ್ತದಾವಮ್ ॥ ೧೭ ॥

ಶ್ಲೋಕಃ – ✱ ಗುಣಹಾನಿದೋಷವಿರಹಾದನಂತರಂ
ಹ್ಯರಿರೀಚಕಾರ ಭಗವಾನಿತಿ ಸ್ಮರೇತ್ ।
ಯದಿ ಚೇತನೋಽಯಮುಭಯಂ ಕೃತಂ ಭವೇ
ತ್ಯತಿಷಿದ್ಧಕೃತ್ಯಕರಣಂ ಚ ಕೃತ್ಯಕೃತ್ ॥ ೩೧ ॥

ತಾತ್ಪರ್ಯ – ಈ ಜೀವನು, ನಾನು ದೋಷವನ್ನೂ, ಗುಣಹಾನಿಯನ್ನೂ ಬಿಟ್ಟಿದ್ದರಿಂದಲೇ ಭಗವಂತನು ನನ್ನನ್ನು ಅಂಗೀಕರಿಸಿದನು ಎಂಬುದಾಗಿ ಯೋಚಿಸಿದ್ದೇ ಆದರೆ ಶಾಸ್ತ್ರನಿಷಿದ್ಧವಾದ ಅಕೃತ್ಯವನ್ನೂ ಶಾಸ್ತ್ರ ವಿಹಿತವಾದ ಕೃತ್ಯಾಕರಣವನ್ನೂ ಮಾಡಿದಂತಾಗುವುದು. ಆದ್ದರಿಂದ ಗುಣಹಾನಿಯನ್ನೂ ದೋಷವನ್ನೂ ನಮ್ಮಿಂದ ಬಿಡಲಾಗುವುದಿಲ್ಲ. ಭಗವಂತನೇ ಪಾತ್ಸಲ್ಯಾದಿ ಗುಣಗಳಿಂದ ನಮ್ಮನ್ನು ಅಂಗೀಕರಿಸ ಬೇಕೆಂದು ಸ್ಮರಿಸುತ್ತಿರಬೇಕು.

ಸೂತ್ರಂ - ರಾಕ್ಷಸಿಹಳ್ ದೋಷಂ ಪ್ರಸಿದ್ಧಂ ॥ ೧೪ ॥

ಶ್ಲೋಕಃ – ❋ ಶ್ರೀಮನ್ಮಾರುತಿನಾದಿರಾದ್ಯ ಹನನಾಯಾಸಾಮಿತಿ ಪ್ರಾರ್ಥಿತಾ
ಸೀತಾ ವಾನರಪುಂಗವಾಯಮುಚಿತಃ ಕಿಂ ರಾಕ್ಷಸೀನಾಂ ವಧಃ ।
ರಾಜಾಧೀನತಯಾ ತದಾ ಮಯಿ ತಥಾಽವರ್ತಂತ ತೀಕ್ಷ್ಣೋದ್ಯಮಾಃ
ತತ್ಕಾರ್ಯಾಕರುಣಾಽದ್ಯ ತಾಸು ಭವತೇತ್ಯಾಹಾತಿಕಾರುಣ್ಯತಃ ॥ ೩೨ ॥

ತಾತ್ಪರ್ಯ – ಹಿಂದೆ ಹೇಳಿದ ರೀತಿ ಪುರುಷಕಾರವೂ, ಉಪಾಯವೂ ದೋಷಾದಿಗಳನ್ನು ಕೈಕಾಣಿಕೆಯಂತೆ ಭೋಗ್ಯವಾಗಿ ಅಂಗೀಕರಿಸಿದ ಸ್ಥಳವುಂಟೋ, ಅಂದರೆ ಸೀತೆಯು ವೃತ್ತಾಂತವನ್ನು ಹೇಳಿ ತೋರಿಸುವರು. ಸೀತೆಯು ಅಶೋಕವನದಲ್ಲಿರುವಾಗ ವಿಕಾಕ್ಷೀ, ವಿಕಕರ್ಣೀ ಮೊದಲಾದ ಏಳುನೂರು ರಾಕ್ಷಸಿಯರು ಸೀತೆಯನ್ನು ತರ್ಜನ ಭರ್ತ್ಸನಾದಿಗಳಿಂದ ಹಿಂಸಿಸಿದ್ದನ್ನು ಆಂಜನೇಯನು ನೋಡಿದ್ದನು. ರಾವಣ ವಧವಾದ ಮೇಲೆ ಆಂಜನೇಯನು ಸೀತೆಯ ಸಮೀಪದಲ್ಲಿ ನಿಂತು ಕೈಮುಗಿದು, 'ತಾಯೇ ನನಗೊಂದು ವರವನ್ನು ಕರುಣಿಸಬೇಕು. ಅದೇನೆಂದರೆ ನಿನ್ನನ್ನು ಹಿಂಸಿಸಿದ ಈ ರಾಕ್ಷಸಿಯರನ್ನು ಚಿತ್ರವಧೆ ಮಾಡ ಬೇಕು. ಅದಕ್ಕೆ ಅನುಮತಿಯನ್ನು ಕೊಡು' ಎಂದನು. ಅದಕ್ಕೆ ಸೀತೆಯು 'ಎಲೈ ವಾನರಶ್ರೇಷ್ಠನೆ, ನೀನು ಹೀಗೆ ಕೇಳಬಹುದೇ. ಇವರು ರಾಜಾಧೀನದಲ್ಲಿರುವಾಗ, ಅವನ ಆಜ್ಞೆಯಂತೆ ಆ ರೀತಿ ಮಾಡಿದರು. ರಾವಣವಧೆಯಾದ ಮೇಲೆ ಆ ರೀತಿ ಮಾಡುವರೇನು ? ಆದ್ದರಿಂದ ಇವರುಗಳ ಮೇಲೆ ದಯೆಯನ್ನು ತೋರಿಸಬೇಕೇ ಹೊರತು ಕ್ರೌರ್ಯವನ್ನು ತೋರಿಸಬಾರದು' ಎಂದು ಹೇಳಿ ಆ ರಾಕ್ಷಸಿಯರ ದೋಷವನ್ನೇ ಭೋಗ್ಯವನ್ನಾಗಿ ಅಂಗೀಕರಿಸಿದಳು.

ಸೂತ್ರಂ - ಜಿತೇಂದ್ರಿಯರಿಲ್ ತಲೈವನಾಯಕ್, ಆಸ್ತಿಕಾಗ್ರೇಸರನಾಯಕ್, ಕೇಶವಸ್ವಾತ್ಮಾ, ಎನ್ರ ಕೃಷ್ಣನುಕ್ಕು ಧಾರಕನಾಯಿರುಕ್ಕಿರ ಅರ್ಜುನನುಕ್ಕು ದೋಷಮೇದೆನ್ನಿಲ್, ಬಂಧುಕ್ಕಳ್ಪಕ್ಕಲ್ ಸ್ನೇಹಮುಂ, ಕಾರುಣ್ಯಮುಂ, ವಧಭೀತಿಯುಂ ॥ ೧೫ ॥

ಶ್ಲೋಕಃ – ❋ ಊರ್ವಶೀಂ ರೂಪಸಂಪನ್ನಾಮಭಿಕಾಂ ಸ್ವಯಮಾಗತಾಂ ।
ಜಿತೇಂದ್ರಿಯತಯಾ ನತ್ವಾ ಬದ್ಧಾಂಜಲಿರಭೂದ್ಯತಃ ॥ ೩೩ ॥

ತಸ್ಮಾಜ್ಜಿತೇಂದ್ರಿಯಾಣಾಂ ತು ಪಾರ್ಥಸ್ಯಾದಗ್ರಣೀರ್ಭುವಿ ।
ಶಾಸ್ತ್ರೇಷ್ವಾಸಕ್ತಬುದ್ಧಿತ್ವಾದಾಸ್ತಿಕಾಗ್ರೇಸರೋ ಮಹಾನ್ ॥ ೩೪ ॥

ಕೇಶವಾತ್ಮತಯಾ ಸೋಽಯಂ ಧಾರಕೋ ಮಾಧವಸ್ಯ ಚ ।
ಪಿತಾದೃಶಸ್ಯ ದೋಷೋಽಯಂ ಬಂಧುಸ್ನೇಹಸ್ತಥಾ ದಯಾ ॥ ೩೫ ॥

ತೇಷಾಂ ವಧಾದ್ಭೀತಿರಪಿ ತದೇತೇ ದುಷ್ಟತಾಂ ಗತಾಃ ।
ತದ್ದ್ವಯಂ ಪೂರ್ವಗದಿತಂ ದೋಷಾದಿ ಗ್ರಹಣೋನ್ಮುಖಂ ॥ ೩೬ ॥

ತಾತ್ಪರ್ಯ – ರಾಕ್ಷಸಿಯರ ದೋಷವನ್ನು ಹೇಳಿದ ಮೇಲೆ ಅರ್ಜುನನ ದೋಷವನ್ನು ಈ ಸೂತ್ರದಲ್ಲಿ ಹೇಳುತ್ತಾರೆ. ಸೌಂದರ್ಯಲಾವಣ್ಯಗಳಲ್ಲಿ ಅಗ್ರೇಸರಳಾದ, ಇಂದ್ರನಿಗೆ ಅಸಾಧಾರಣಳಾದ ಊರ್ವಶಿಯು ಸ್ವರ್ಗಲೋಕದಲ್ಲಿ ಶಸ್ತ್ರಾಭ್ಯಾಸಕ್ಕಾಗಿ ವಾಸಮಾಡುತ್ತಲಿರುವ ಅರ್ಜುನನ ಸೌಂದರ್ಯಕ್ಕೆ ಮನಸೋತು ತಾನಾಗಿಯೇ ಬಂದು ನನ್ನನ್ನು ಅಂಗೀಕರಿಸಬೇಕೆಂದು ಪ್ರಾರ್ಥಿಸಲು, ಅರ್ಜುನನು ದೀರ್ಘದಂಡ ಪ್ರಣಾಮವೆಸಗಿ, 'ತಾಯೇ, ನೀನು ನನಗೆ ಪೂಜ್ಯಳು, ನನ್ನ ತಂದೆಯಾದ ಇಂದ್ರನಿಗೆ ಅಸಾಧಾರಣಳಾದವಳು. ಅದ್ದರಿಂದ ನನ್ನನ್ನು ಮನ್ನಿಸಿ ಕಾಪಾಡು' ಎಂದು ಹೇಳಿಕಳುಹಿಸಿದನು. ಆದಕಾರಣ ಅರ್ಜುನನಿಗೆ ಸಮಾನ ಜಿತೇಂದ್ರಿಯರಿಲ್ಲ. ಕೃತ್ಯಾಕೃತ್ಯವಿವೇಕವನ್ನು ಬೋಧಿಸುವ ಶಾಸ್ತ್ರಗಳಲ್ಲಿ ವಿಶ್ವಾಸವುಳ್ಳವನಾದ್ದರಿಂದ, ಆಸ್ತಿಕಾಗ್ರೇಸರನು, ಶ್ರೀಕೃಷ್ಣನು ಅರ್ಜುನನನ್ನು ಬಿಟ್ಟು ಒಂದು ಕ್ಷಣವೂ ಬದುಕಿರಲಾರ. ಆದ್ದರಿಂದ ಕೃಷ್ಣನಿಗೆ ಧಾರಕನಾಗಿರುವನು. ಹೀಗಿರುವ ಅರ್ಜುನನಿಗೆ ದೋಷವೇನೆಂದರೆ, ಯುದ್ಧರಂಗದಲ್ಲಿ ನಿಂತು ಶತ್ರುಗಳ ಪಕ್ಷದಲ್ಲಿರುವ ಬಂಧುಗಳನ್ನು ನೋಡಿ ದಯೆಯಿಂದ ಕ್ಷತ್ರಿಯ ಧರ್ಮವಾದ ಯುದ್ಧವನ್ನು ನಾನು ಮಾಡುವುದಿಲ್ಲವೆಂದು ಹೇಳಿದ್ದು ಒಂದು ದೋಷ, ಅಸ್ಥಾನದಲ್ಲಿ ಬಂಧುಗಳಲ್ಲಿ ಸ್ನೇಹವನ್ನು ತೋರಿಸಿದ್ದು ಎರಡನೇ ದೋಷ. ರಾಜ್ಯಸುಖಕ್ಕಾಗಿ ಇವರುಗಳನ್ನು ಕೊಂದದ್ದೇ ಆದರೆ ನಾನು ಯಾವ ನರಕಕ್ಕೆ ಹೋಗುವೆನೋ ಎಂಬ ಭಯ ಮೂರನೇ ದೋಷ.

ಸೂತ್ರಂ - ದ್ರೌಪದೀಪರಿಭವಂ ಕಂಡಿರುಂದದು ಕೃಷ್ಣಾಭಿಪ್ರಾಯತ್ತಾಲೇ
ಪ್ರಧಾನದೋಷಂ ॥ ೨೦ ॥

ಶ್ಲೋಕಃ – ✱ ಸಭಾಯಾಂ ಪಾಂಚಾಲೀಂ ಸಕಟು ಪತಯಃ ಕೇಶನಿಕರೇ
ಸಮಾಕೃಷ್ಟಾಂ ದೌಷ್ಟ್ಯಾತ್ಕುರುಕುಲಭುವಾ ದೇವನಜಿತಾಃ ।
ತದಾನೀಂ ಶಕ್ತಾ ಅಪ್ಯವನಮಿತವಕ್ತ್ರಾ ಯದಭವನ್
ಪ್ರಪಶ್ಯಂತೋ ಭಕ್ತಾಂ ತದಭವದಹೋ ಮುಂತುರಧಿಕಃ ॥ ೩೭ ॥

ತಾತ್ಪರ್ಯ – ಧರ್ಮರಾಜನು ಜೂಜಾಟದಲ್ಲಿ ಸೋತದ್ದರಿಂದ ದುರ್ಯೋಧನನ ಅಪ್ಪಣೆಯಂತೆ ದುಶ್ಶಾಸನನು ದ್ರೌಪದಿಯ ತಲೆಗೂದಲನ್ನು ಹಿಡಿದೆಳೆದು ಸಭೆಯಲ್ಲಿ ಅವಳ ಸೀರೆಯನ್ನು ಸೆಳೆಯಲು ಅಬಲೆಯಾದ ದ್ರೌಪದಿಯು, ಪತಿಗಳನ್ನು ಕುರಿತು ನನ್ನನ್ನು ಕಾಪಾಡಿ ಎಂದು ಕೂಗಿದರೂ ನೋಡುತ್ತಾ ತಲೆಬಾಗಿ ಕುಳಿತ್ತಿದ್ದರೇ ಹೊರತು ಅವಳನ್ನು ರಕ್ಷಿಸಲಿಲ್ಲ. ಪತಿಗಳು ಕೈಬಿಟ್ಟ ಮೇಲೆ ಭಗವಂತನನ್ನು ಬೊರೆಯಿಟ್ಟಳು. ಆ ಸಮಯದಲ್ಲಿ ಶಕ್ತನಾದ ಅರ್ಜುನನು ಆ ದುಷ್ಟರನ್ನು ಶಿಕ್ಷಿಸಬಹುದಾಗಿತ್ತು. ಆ ರೀತಿ ಶಿಕ್ಷಿಸದೇ ನೋಡುತ್ತಾ ಸುಮ್ಮನೇ ಕುಳಿತದ್ದು ಪ್ರಧಾನ ದೋಷ.

ಸೂತ್ರಂ - ಪಾಂಡವರ್ತಳ್ಳಿಯುಂ ನಿರಸಿಕ್ಕ ಪ್ರಾಪ್ತಮಾಯಿರುಕ್ಕ,
ವೈತ್ರದು ದ್ರೌಪದಿಯುಡೈಯ ಮಂಗಳಸೂತ್ರತ್ತುಕ್ಕಾಹ ॥ ೨೧ ॥

ಶ್ಲೋಕಃ – ✱ ಕುಂತೀಸುತಾಸ್ತತ್ಸಮಯಸ್ತದಾನೀಂ
ಕೃತಾಪರಾಧಾ ನಿಜಧರ್ಮಬುದ್ಧ್ಯಾ ।
ವಧ್ಯಾ ಅಪಿ ಶ್ರೀಹರಿಣಾ ವಿಸೃಷ್ಟಾಃ
ಪಾಂಚಾಲಿಕಾ ಮಂಗಳಸೂತ್ರದೃಷ್ಟ್ಯಾ ॥ ೩೮ ॥

ತಾತ್ಪರ್ಯ – ಪಾಂಡವರು ನಾವು ಜೂಜಾಟದಲ್ಲಿ ಸೋತು ದಾಸರಾಗಿದ್ದ ಸಮಯದಲ್ಲಿ ದ್ರೌಪದಿಯನ್ನು ರಕ್ಷಿಸದೇ ಇರುವುದು ಅಧರ್ಮವೆಂದು ಭಾವಿಸಿ ಸುಮ್ಮನೇ ಇದ್ದ ಕಾರಣ ಅವರನ್ನೂ ಕೊಲ್ಲಬೇಕಾಗಿತ್ತು. ಆದರೆ ಶ್ರೀಕೃಷ್ಣನು ಅವರನ್ನು ಕೊಲ್ಲದೇ ಬಿಟ್ಟಿದ್ದಕ್ಕೆ ಕಾರಣವೇನೆಂದರೆ ದ್ರೌಪದಿಯ ಮಾಂಗಲ್ಯಸೂತ್ರವನ್ನು

ಸ್ಥಿರವಾಗಿರಬೇಕೆಂಬ ದೃಷ್ಟಿಯಿಂದ ಅವರನ್ನು ಹಾಗೆಯೇ ಉಳಿಸಿದನು. ದ್ರೌಪದಿಯ ಬಿಚ್ಚಿದ ತಲೆಯನ್ನೇ ನೋಡಿ ಸಹಿಸದೇ ಇರುವವನು ಮಾಂಗಲ್ಯಸೂತ್ರವಿಲ್ಲದ ಕತ್ತನ್ನು ನೋಡಿ ಸಹಿಸುವನೇ ?

ಸೂತ್ರಂ - **ಅರ್ಜುನನುಕ್ಕು ದೂತ್ಯಸಾರಥ್ಯಂಗಳ್ ಪಣ್ಣಿತ್ತುಂ ಪ್ರಪತ್ಯುಪದೇಶಂ ಪಣ್ಣಿತ್ತುಂ, ಇವಳುಕ್ಕಾಹ** ॥ ೨೨ ॥

ಶ್ಲೋಕಃ - ❋ ದ್ರೌಪದ್ಯರ್ಥಂ ಸ್ವಯಂ ಕೃಷ್ಣೋ ದೌತ್ಯಂ ಸಾರಥ್ಯಮೇವ ಚ ।
ಪ್ರಪತ್ತೇರುಪದೇಶಂ ಚ ಪಲ್ಗುನಸ್ಯ ಚಕಾರ ಸಃ ॥ ೩೯ ॥

ತಾತ್ಪರ್ಯ - ಶ್ರೀಕೃಷ್ಣನು ಹಿಂದೆ ದೋಷಪೂರಿತನಾದ ಅರ್ಜುನನಿಗೆ ದೌತ್ಯವನ್ನೂ, ಸಾರಥ್ಯವನ್ನೂ ಅತ್ಯಂತ ರಹಸ್ಯವಾದ ಪ್ರಪತ್ತಿಯ ಉಪದೇಶವನ್ನೂ ಮಾಡಿದ್ದು ತನ್ನ ಭಕ್ತೆಯಾದ ದ್ರೌಪದಿಗೋಸ್ಕರ. ಇದರಿಂದ ಅರ್ಜುನನ ದೋಷಗಳನ್ನು ಕೈಕಾಣಿಕೆಯಂತೆ ಭೋಗ್ಯವಾಗಿ ಅಂಗೀಕರಿಸಿದಂತಾಯಿತು.

ಇದರಿಂದ ಇತಿಹಾಸ ಶ್ರೇಷ್ಠವಾದ ಶ್ರೀ ರಾಮಾಯಣ, ಮಹಾಭಾರತ ಇವೆರಡರಿಂದಲೂ ಪ್ರತಿಪಾದಿಸಲ್ಪಟ್ಟ ಪುರುಷಕಾರೋಪಾಯ ವೈಭವಗಳನ್ನು ಅವುಗಳ ಸ್ವರೂಪಗಳೊಡನೆ ವಿಶದವಾಗಿ ಹೇಳಿದಂತಾಯಿತು.

ಇತ್ಯುಭಯವೈಭವಂ ಸಮಾಪ್ತಂ

ಅಥ ಸಾಧನ ಗೌರವನಿರೂಪಣ ಪ್ರಕರಣಂ

ಸೂತ್ರಂ - **ಪ್ರಪತ್ತಿಕ್ಕು ದೇಶನಿಯಮಮುಂ, ಕಾಲನಿಯಮಮುಂ, ಪ್ರಕಾರನಿಯಮಮುಂ, ಅಧಿಕಾರಿನಿಯಮಮುಂ, ಫಲನಿಯಮಮುಂ, ಇಲ್ಲೈ** ॥ ೨೩ ॥

ಶ್ಲೋಕಃ - ❋ ಪ್ರಪತ್ತೇರ್ನಿಯಮೋ ನಾಸ್ತಿ ಸರ್ವಥೇತಿ ನಿರೂಪಯನ್ ।
ದೇಶಕಾಲಪ್ರಕಾರಾದಿಕ್ರಮಮಾಗ್ರೇ ಪ್ರವಕ್ಷ್ಯತಿ ॥ ೪೦ ॥

ತಾತ್ಪರ್ಯ - ಪ್ರಪತ್ತಿಯೆಂದರೆ, ಭಗವಚ್ಚರಣವರಣವು. ಈ ರೀತಿ ಭಗವಚ್ಚರಣವರಣಕ್ಕೆ ಏನಾದರೂ ನಿಯಮವುಂಟೋ ಅಂದರೆ, ದೇಶ ಕಾಲಾದಿ ಯಾವ ನಿಯಮವೂ ಇಲ್ಲ. ಆ ದೇಶ ಕಾಲ ಪ್ರಕಾರಾದಿ ಕ್ರಮವನ್ನು ಮುಂದೆ ಹೇಳುವರು.

ಸೂತ್ರಂ - **ವಿಷಯನಿಯಮಮೇ ಉಳ್ಳದು** ॥ ೨೪ ॥

ಶ್ಲೋಕಃ - ❋ ಸರ್ವದಾ ನಿಯಮೋ ನಾಸ್ತೀತ್ಯೇವಂಚೇತ್ಕಿಮ್ದೈಶೋಽನ್ಯಥಾ ।
ಇತಿ ಚೇದುಚ್ಯತೇ ಸಾಕ್ಷಾನ್ನಿಯಮೋ ವಿಷಯಸ್ಯ ಯತ್ ॥ ೪೧ ॥

ತಾತ್ಪರ್ಯ - ಹಾಗಾದರೆ, ಒಂದು ನಿಯಮವೂ ಇಲ್ಲದೇ ಇದ್ದ ಪಕ್ಷದಲ್ಲಿ. ಪ್ರಪತ್ತಿಯು ಹೇಗೆ ಅಂದರೆ, ವಿಷಯನಿಯಮ ಒಂದೇ. ಆದ್ದರಿಂದ ಮುಂದೆ ಅದನ್ನೇ ವಿವರಿಸುತ್ತಾರೆ.

ಸೂತ್ರಂ - **ಕರ್ಮತತ್ತುಕ್ಕು ಪುಣ್ಯಕ್ಷೇತ್ರಂ, ವಸಂತಾದಿಕಾಲಂ, ಶಾಸ್ತ್ರೋಕ್ತಂಗಳಾನ ತತ್ತತ್ಕಾರಂಗಳ್, ತ್ರೈವರ್ಣಿಕರ್, ಎನ್ರಿವೈಯೆಲ್ಲಾಂ, ವ್ಯವಸ್ಥಿತಂಗಳಾಯಿರುಕ್ಕುಂ** ॥ ೨೫ ॥

ಶ್ಲೋಕಃ – ✱ ಪುಣ್ಯಕ್ಷೇತ್ರಂ ವಸಂತಾದಿಕಾಲಶ್ಚಾಸ್ತ್ರೋಕ್ತವರ್ತ್ಮನಾ ।
ತತ್ತ್ವಕಾರಸ್ತ್ರಿವರ್ಣಸ್ಥಾಃ ಕರ್ಮಣಸ್ಸ್ವವಸ್ಥಿತಾಃ ॥ ೪೨ ॥

ತಾತ್ಪರ್ಯ – ಜ್ಯೋತಿಷ್ಟೋಮಾದಿ ಕರ್ಮಗಳಿಗೆ, ಪರಿಶುದ್ಧವಾದ ಶಾಸ್ತ್ರದಲ್ಲಿ ಹೇಳಲ್ಪಟ್ಟ ಪುಣ್ಯಕ್ಷೇತ್ರಗಳು, ವಸಂತಾದಿ ಕಾಲಗಳು, ಶೌಚಾಚಮನಸ್ನಾನವ್ರತಜಪಾದಿರೂಪವಾದ ಆಯಾಯಾ ಕರ್ಮಗಳಿಗನುಗುಣವಾದ ಆಯಾಯಾ ಪ್ರಕಾರಗಳು, ಉಪನಯನ ಸಂಸ್ಕಾರಪೂರ್ವಕವಾದ ವೇದಾಧ್ಯಯನಾಧಿಕಾರಿಗಳಾದ ತ್ರೈವರ್ಣಿಕರು, ಇವೆಲ್ಲವೂ ನಿಯತವಾಗಿ ಹೇಳಲ್ಪಟ್ಟಿದೆ.

ಸೂತ್ರಂ - ಸ ಏಷ ದೇಶಃ ಕಾಲಃ, ಎನ್ಗೈಯಾಲೇ ಇದುಕ್ಕು ದೇಶಕಾಲ ನಿಯಮಮಿಲ್ಲೈ ॥ ೩೬ ॥

ಶ್ಲೋಕಃ – ✱ ಸ ಏಷ ದೇಶಸ್ತದೈಷ ಕಾಲಃ
ದೌರಾತ್ಮ್ಯಮಾಲೋಕ್ಯ ತದಗ್ರಜೇ ಯತ್ ।
ತ್ವದ್ವಿಕ್ರಮಂ ವೀಕ್ಷ್ಯ ವಿಭೀಷಣೋ ಯತ್
ಸಮಾಗತೋಽಯಂ ತ್ವಿತಿ ವಾನರೋಽಬ್ರವೀತ್ ॥ ೪೩ ॥

ತಾತ್ಪರ್ಯ – ವಿಭೀಷಣನು ರಾವಣನಿಂದ ತಿರಸ್ಕರಿಸಲ್ಪಟ್ಟು ನಾಲ್ಕುಜನ ಮಂತ್ರಿಗಳೊಡನೆ ಬಂದು ಆಕಾಶದಲ್ಲಿ ನಿಂತು ಶರಣಾಗತನಾದ ನನ್ನನ್ನು ನಿಮ್ಮೊಡನೆ ಸೇರಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತಲೇ ಜಾಂಬವಂತನೂ ಸುಗ್ರೀವ ಮಹಾರಾಜನೂ 'ಅದೇಶದಲ್ಲಿ, ಅಕಾಲದಲ್ಲಿ ಶತ್ರುವಾದ ರಾವಣನ ಕಡೆಯಿಂದ ಬಂದಿರುವ ನಾದ್ದರಿಂದ ಇವನನ್ನು ಸೇರಿಸಿಕೊಳ್ಳಕೂಡದು' ಎಂದು ಹೇಳಿದರು. ಆಗ ಆಂಜನೇಯನು 'ಎಲೈ ರಾಮಚಂದ್ರನೇ, ಈ ವಿಭೀಷಣನು ತನ್ನ ಅಣ್ಣನಾದ ರಾವಣನ ದುರ್ಬುದ್ಧಿಯನ್ನೂ ದೌರಾತ್ಮ್ಯವನ್ನೂ ನೋಡಿ, ಅವನನ್ನು ತ್ಯಜಿಸಿ, ನಿನ್ನ ಕಲ್ಯಾಣ ಗುಣಗಳನ್ನೂ ಪರಾಕ್ರಮವನ್ನೂ ನೋಡಿ ನಿನ್ನನ್ನು ಶರಣು ಹೊಂದಲು ಬಂದಿರುವನಾದ್ದರಿಂದ ಶರಣಾಗತನಾದ ಈ ವಿಭೀಷಣನು ಬಂದಿರುವ ದೇಶವೇ ಯೋಗ್ಯವಾದ ದೇಶ, ಬಂದಿರುವ ಕಾಲವೇ ಯೋಗ್ಯವಾದ ಕಾಲ, ಪ್ರಪತ್ತಿಗೆ ದೇಶ ಕಾಲ ನಿಯಮವಿಲ್ಲವಷ್ಟೇ' ಎಂದು ತಿಳಿಸಿದನು. ಆದ್ದರಿಂದ ಪ್ರಪತ್ತಿಗೆ ದೇಶ ಕಾಲ ನಿಯಮವಿಲ್ಲ.

ಸೂತ್ರಂ - ಇವ್ವರ್ಥಂ ಮಂತ್ರರತ್ನತ್ತಿಲ್, ಪ್ರಥಮಪದತ್ತಿಲೇ ಸುಸ್ಪಷ್ಟಂ ॥ ೩೭ ॥

ಶ್ಲೋಕಃ – ✱ ಸಕಲೋಪನಿಷತ್ಸಾರಸರ್ವಸೇವ್ಯದ್ವಯಸ್ಯ ತು ।
ಪದೇಪ್ರಾಥಮಿಕೇಽರ್ಥೇಽಯಂ ಸುಸ್ಪಷ್ಟ ಇತಿ ದರ್ಶಿತಂ ॥ ೪೪ ॥

ತಾತ್ಪರ್ಯ – ಸಕಲೋಪನಿಷತ್ಸಾರವಾಗಿಯೂ, ಎಲ್ಲರೂ ಪರಿಗ್ರಹಿಸುವುದಕ್ಕೆ ಯೋಗ್ಯವಾಗಿಯೂ, ಶೀಘ್ರಫಲಪ್ರದವಾಗಿಯೂ, ಸರ್ವೇಶ್ವರನಿಗೆ ಅತ್ಯಂತಾಭಿಮತವಾಗಿಯೂ, ಮಂತ್ರರತ್ನವೆಂದು ಪ್ರಸಿದ್ಧವಾದದ್ವಯದ ಪ್ರಥಮ ಪದದಲ್ಲಿನ ಮತುಬರ್ಥವಾದ ಪುರುಷಕಾರೋಪಾಯನಿತ್ಯಯೋಗದ ಪ್ರಯೋಜನವೇನೆಂದರೆ, ಯಾವುದೋ ದೇಶದಲ್ಲಿ, ಯಾವುದೋ ಕಾಲದಲ್ಲಿ ಚೇತನನಿಗೆ ಭಗವತ್ಸಮಾಶ್ರಯಣಾಭಿಲಾಷೆ ಉಂಟಾದೊಡನೆಯೇ ಆಶ್ರಯಿಸಬಹುದು. ಆದ್ದರಿಂದ ಪ್ರಪತ್ತಿಗೆ ದೇಶ ಕಾಲ ನಿಯಮವಿಲ್ಲ.

ಸೂತ್ರಂ - ಪ್ರಕಾರನಿಯತಿಯಿಲ್ಲೈಯೆನ್ನುಮಿಡವೆಂಗುಂ ಕಾಣಲಾಂ ॥ ೩೮ ॥

ಶ್ಲೋಕಃ – ✱ ಪ್ರಕಾರನಿಯಮೋ ನಾಸ್ತೀತ್ಯೇತತ್ಸರ್ವತ್ರ ವರ್ತತೇ ।
ತದದ್ಯ ದರ್ಶಯತ್ಯತ್ರ ದ್ರೌಪದ್ಯಾ ವೃತ್ತತಃ ಕ್ರಮಾತ್ ॥ ೪೫ ॥

ತಾತ್ಪರ್ಯ – ಪ್ರಕಾರನಿಯಮವಿಲ್ಲವೆಂಬುದನ್ನು ಎಲ್ಲಾ ಸ್ಥಳದಲ್ಲೂ ನೋಡಬಹುದು. ಅದನ್ನು ಮುಂದೆ ದ್ರೌಪದಿಯ ವೃತ್ತಾಂತದಿಂದ ತೋರಿಸುತ್ತಾರೆ.

ಸೂತ್ರಂ - **ದ್ರೌಪದೀ ಸ್ನಾತ್ಯೈಯಾಯನ್ರೀ ಪ್ರಪತ್ತಿಪಣ್ಡಿತ್ತು, ಅರ್ಜುನನ್, ನೀಶರ್ನಡುವೇಯಿರೇ ಇವ್ವರ್ಥಂ ಕೇಟ್ಟತು** ॥ ೨೯ ॥

ಶ್ಲೋಕಃ – ❋ ರಜಸ್ವಲಾ ತು ಪಾಂಚಾಲೀ ಕೃಷ್ಣಾ ದುಶ್ಶಾಸನೇನ ಸಾ ।
ಪ್ರಪತ್ತಿಂ ಕೃತವತ್ಯಾಶು ನೀವೀತ್ಯಕ್ಕರದ್ವಯಾ ॥ ೪೬ ॥

ಅರ್ಜುನಸ್ತ್ವತಿನೀಚಾನಾಂ ಮಧ್ಯೇ ಸ್ಥಿತ್ವಾ ಹರೇರ್ಮುಖಾತ್ ।
ಶ್ರುತವಾನ್ಯತ್ಪ್ರಪತ್ಯರ್ಥಂ ಪ್ರಕಾರನಿಯಮೋ ನ ತತ್ ॥ ೪೭ ॥

ತಾತ್ಪರ್ಯ – ದ್ರೌಪದಿಯು ರಜಸ್ವಲೆಯಾಗಿರುವಾಗ ದುಶ್ಶಾಸನನು ಬಲಾತ್ಕಾರದಿಂದ ತಲೆಯ ಕೂದಲಿಗೆ ಕೈಹಾಕಿ ಅವಳನ್ನು ಸಭೆಗೆ ಎಳೆತಂದನಷ್ಟೆ. ಆ ಸಮಯದಲ್ಲೂ ಐವರು ಪತಿಗಳು ನೋಡುತ್ತಾ ಸುಮ್ಮನಿದ್ದರು. ದುರ್ಯೋಧನನ ಅಪ್ಪಣೆಯಂತೆ ದುಶ್ಶಾಸನನು ಆ ಸಭೆಯಲ್ಲಿ ಅವಳ ಸೀರೆಯನ್ನು ಸೆಳೆಯಲು, ಆಗಲೂ ಪತಿಗಳು ಸುಮ್ಮನಿರಲು ದ್ರೌಪದಿಯು ಸ್ನಾನವಿಲ್ಲದೆಯೇ ಎರಡು ಕೈಗಳನ್ನೂ ಮೇಲಕ್ಕೆತ್ತಿ ಬದ್ಧಾಂಜಲಿಪುಟಳಾಗಿ, 'ಶಂಖಚಕ್ರಗದಾಪಾಣೇ ದ್ವಾರಕಾನಿಲಯಾಚ್ಯುತ - ಗೋವಿಂದ ಪುಂಡರೀಕಾಕ್ಷ ರಕ್ಷಮಾಂ ಶರಣಾಗತಾಂ' ಎಂದು, ಭಗವಂತನನ್ನು ಶರಣುಹೊಂದಿದಳು. ಆದ್ದರಿಂದ ಪ್ರಪತ್ತಿಗೆ ದೇಶ ಕಾಲ ನಿಯಮವಿಲ್ಲ.

ದೇಶ ಕಾಲ ನಿಯಮವಿಲ್ಲವೆನ್ನುವುದಕ್ಕೆ ಅರ್ಜುನನ ವೃತ್ತಾಂತವನ್ನು ಹೇಳುತ್ತಾರೆ. ಕುರುಕ್ಷೇತ್ರದಲ್ಲಿ ಎರಡು ಸೈನ್ಯಗಳ ಮಧ್ಯದಲ್ಲಿ ಶ್ರೀಕೃಷ್ಣನು ರಥವನ್ನು ನಿಲ್ಲಿಸಲು, ಅರ್ಜುನನು ಬಂಧುಗಳನ್ನು ಕೊಲ್ಲಬೇಕಾಗುವುದು, ಆದಕಾರಣ ನಾನು ಯುದ್ಧ ಮಾಡುವುದಿಲ್ಲ ಎಂದು ಹೇಳಿದಾಗ ಶ್ರೀಕೃಷ್ಣನು ಗೀತೋಪದೇಶ ಮಾಡಿ ಪ್ರಪತ್ತಿಯ ಅರ್ಥವನ್ನು ತಿಳಿಸಿದನು. ನೀಚರಾದ ದುರ್ಯೋಧನಾದಿಗಳ ಮಧ್ಯದಲ್ಲಲ್ಲವೇ ಅರ್ಜುನನು ಆ ಪ್ರಪತ್ತ್ಯರ್ಥವನ್ನು ಕೇಳಿದ್ದು, ಆದ್ದರಿಂದ ದೇಶ ಕಾಲ ನಿಯಮವಿಲ್ಲ.

ಸೂತ್ರಂ - **ಆಹ್ಯೆಯಾಲ್, ಶುದ್ಧ್ಯಶುದ್ಧಿಹಳಿರಂಡುಂ ತೇಡವೇಂಡಾ, ಇರುಂದಪಡಿಯೇಯಧಿಕಾರಿಯಾವಿತ್ತನೈ** ॥ ೩೦ ॥

ಶ್ಲೋಕಃ – ❋ ಶುದ್ಧ್ಯಶುದ್ಧಿ ವಿಚಾರೋಽತ್ರ ಮಾಸ್ತು ತದ್ವಿಷಯೇ ತತಃ ।
ಯಥಾವಸ್ಥಿತ ಏವಾಯಂ ಪ್ರಪತ್ತಿಕರಣೇ ಪ್ರಭುಃ ॥ ೪೮ ॥

ತಾತ್ಪರ್ಯ – ಇದರಲ್ಲಿ ಫಲಿತಾಂಶವನ್ನು ತಿಳಿಸುತ್ತಾರೆ. ಪ್ರಪತ್ತಿ ಮಾಡುವ ಕಾಲದಲ್ಲಿ ಪ್ರಪತ್ತಿ ಮಾಡುವವನು, ಶುದ್ಧನಾಗಿರಲಿ ಅಥವಾ ಅಶುದ್ಧನಾಗಿರಲಿ, ಪ್ರಪತ್ತಿಗೆ ಅಧಿಕಾರಿಯಾಗಬಹುದು, ಪ್ರಪತ್ತಿ ಮಾಡಬೇಕೆಂಬ ಇಚ್ಛೆ ಬಂದರೆ ಸಾಕು ಯಾವ ದೇಶದಲ್ಲೇ ಆಗಲಿ, ಯಾವ ಅವಸ್ಥೆಯಲ್ಲೇ ಆಗಲಿ, ಶರಣು ಹೊಂದಬಹುದು.

ಸೂತ್ರಂ - ಇವ್ವಿಡತ್ತಿಲೇ ವೇಲ್ಪೆಟ್ಟಪಿಳ್ಳೈಕ್ಕು ಪಿಳ್ಳೈಯರುಳಿಚ್ಚೈಯ್ದ ವಾರ್ತ್ತೈಯ್ಯೈ ಸ್ಮರಿಪ್ಪದು ॥ ೩೧ ॥

ಶ್ಲೋಕಃ – ✱ ಕಲಿಶಾತ್ರವದಾಸೋಕ್ತಾಂ ವೇಲ್ವಟ್ಟಿತನಯಂ ಪ್ರತಿ ।
ಅತ್ರ ವಾರ್ತಾಂ ಸ್ಮರೇದಗ್ರೇ ಪ್ರವಕ್ಷ್ಯಾಮಿ ಚ ತಾಮಪಂ ॥ ೪೯ ॥

ತಾತ್ಪರ್ಯ – ಈ ವಿಷಯದಲ್ಲಿ ಆಪ್ತವಚನವನ್ನು ಸ್ಮರಿಸುವಂತೆ ಹೇಳುತ್ತಾರೆ. ಆ ಆಪ್ತವಚನ ಕ್ರಮವನ್ನು ನಾನು ಮುಂದೆ ವಿವರಿಸುತ್ತೇನೆ.

ಶ್ಲೋಕಃ – ✱ ಅಸ್ನಾತ್ವಾ ಶರಣಂ ಪ್ರಾಪ ರಾಕ್ಷಸಸ್ತು ವಿಭೀಷಣಃ ।
ರಾಜಾ ದಾಶರಥಿಸ್ತ್ವೇಯಮಾಚಾರಂ ನ ಜಹೌ ತತಃ ॥ ೫೦ ॥

ಸ್ನಾತ್ವಾ ಚ ಪ್ರಾಙ್ಮುಖೋ ಭೂತ್ವಾ ಸಮುದ್ರಂ ಶರಣಂ ಯಯೌ ।
ತಸ್ಮಾತ್ಪ್ರಪತ್ತಿಕರಣೇ ನಿಯಮೋ ನಾಸ್ತಿ ಸರ್ವದಾ ॥ ೫೧ ॥

ತಾತ್ಪರ್ಯ – ವೇಲ್ವಟ್ಟಪಿಳ್ಳೈ ಎಂಬುವರು, ನಂಬಿಳ್ಳೈಯನ್ನು ಪ್ರಶ್ನಿಸಿದರು. ಪ್ರಪತ್ತಿಗೆ ನಿಯಮವಿಲ್ಲವೆಂದು ಹೇಳಿದಿರಿ. ಶ್ರೀರಾಮಚಂದ್ರನು ವಿಭೀಷಣನ ಮಾತಿನಂತೆ ಸಮುದ್ರನನ್ನು ಶರಣು ಹೊಂದುವಾಗ ಸಮುದ್ರದಲ್ಲಿ ಸ್ನಾನಮಾಡಿ ಪೂರ್ವದಿಕ್ಕಿಗೆ ಎದುರಾಗಿ ನಿಂತು ಶರಣು ಹೊಂದಿದನಲ್ಲವೇ ? ಇದಕ್ಕೆ ಕಾರಣವೇನು ? ಈ ರೀತಿ ಪ್ರಶ್ನಿಸಲ್ಪಟ್ಟ ನಂಬಿಳ್ಳೈಯು ರಾಕ್ಷಸ ಜಾತಿಯಲ್ಲಿ ಹುಟ್ಟಿದ ವಿಭೀಷಣನು ಸ್ನಾನವಿಲ್ಲದೆಯೇ ಪ್ರಪತ್ತಿ ಮಾಡಿದನು. ಕ್ಷತ್ರಿಯ ಜಾತಿಯಲ್ಲಿ ಹುಟ್ಟಿದ ಶ್ರೀರಾಮಚಂದ್ರನು ತನ್ನ ಆಚಾರವನ್ನು ಬಿಡದೇ ಸ್ನಾನಮಾಡಿ ಪೂರ್ವದಿಕ್ಕಿಗಭಿಮುಖನಾಗಿ ಪ್ರಪತ್ತಿ ಮಾಡಿದನು. ಆದ್ದರಿಂದ ಪ್ರಪತ್ತಿಗೆ ನಿಯಮವಿಲ್ಲವೆಂದು ಹೇಳಿದರು.

ಸೂತ್ರಂ - ಅಧಿಕಾರಿ ನಿಯಮಮಿನ್ನಿಕ್ಕೇಯೊಳಿಂದಪಡಿಯೆನ್ನೆನ್ನಿಲ್, ಧರ್ಮಪುತ್ರಾದಿಹಳುಂ, ದ್ರೌಪದಿಯುಂ, ಕಾಕವುಂ, ಕಾಳಿಯನುಂ, ಶ್ರೀ ಗಜೇಂದ್ರಾಳ್ವಾನುಂ, ಶ್ರೀ ವಿಭೀಷಣಾಳ್ವಾನುಂ, ಪೆರುಮಾಳುಂ, ಇಳ್ಯಪೆರುಮಾಳುಂ ತೊಡಕ್ಕವಾನವರ್ಹಳ್, ಶರಣಂ ಪುಹುರುಹ್ಯೆಯಾಲೇ ಅಧಿಕಾರಿ ನಿಯಮಮಿಲ್ಲೈ ॥ ೩೨ ॥

ಶ್ಲೋಕಃ – ✱ ಅಧಿಕಾರಿಣಾಂ ಚ ನಿಯಮೋ ನಹೀತಿ ಯ –
ದ್ವಿಶದೀಕರೋಮಿ ತದಿಹಾದ್ಯ ಪಂಕ್ತಿಶಃ ।
ಯಮಸೂನುರೇವಮಿಭರಾಡ್ವಿಭೀಷಣೋ
ದ್ರುಪದಾತ್ಮಜಾಚ ಭಗವಾನ್ಸಲಕ್ಷ್ಮಣಃ ॥ ೫೨ ॥

ಖಿಕವರ್ಧನೋಪಿ ಸ ತು ಕಾಳಿಯೋ ಮಹಾ-
ನ್ಮುಚಿಕುಂದ ಏವಮಹಿರಾಟ್ಕುಟುಂಬಿನೀ ।
ಸಕಲಾ ಅಪೀಹ ಶರಣಂ ಪ್ರಪೇದಿರೇ
ತದಪಿ ಪ್ರಪತ್ತಿನಿಯಮೋ ನಹೀತಿ ಚ ॥ ೫೩ ॥

ತಾತ್ಪರ್ಯ – ಪ್ರಪತ್ತಿಗೆ ಅಧಿಕಾರಿಗಳ ನಿಯಮವೂ ಇಲ್ಲವೆಂದು ಹೇಳುತ್ತಾರೆ. ಧರ್ಮರಾಜನೂ, ದ್ರೌಪದಿಯೂ, ಕಾಕಾಸುರನೂ, ಕಾಳಿಂಗನೂ, ಶ್ರೀ ಗಜೇಂದ್ರನೂ, ಶ್ರೀ ವಿಭೀಷಣನೂ, ಭಗವಂತನಾದ ಶ್ರೀರಾಮಚಂದ್ರನೂ, ಲಕ್ಷ್ಮಣನೂ ಇವರೇ ಮೊದಲಾದವರು ಪ್ರಪತ್ತಿ ಮಾಡಿರುವುದರಿಂದ ಅಧಿಕಾರಿ ನಿಯಮವೂ ಇಲ್ಲ.

ಸೂತ್ರಂ - ಫಲನಿಯಮಮಿನ್ನಿಕ್ಕೇ ಯೊಳಿಂದಪಡಿ ಯೆನ್ನೆನ್ನಿಲ್, ಧರ್ಮಪುತ್ರಾದಿಹಳುಕ್ಕು ಫಲಂ ರಾಜ್ಯಂ, ದ್ರೌಪದಿಕ್ಕು ಫಲಂ ವಸ್ತ್ರಂ, ಕಾಕತ್ತುಕ್ಕುಂ, ಕಾಳಿಯನುಕ್ಕುಂ, ಫಲಂ ಪ್ರಾಣಂ, ಶ್ರೀ ಗಜೇಂದ್ರಾಳ್ವಾನುಕ್ಕು ಫಲಂ ಕೈಂಕರ್ಯಂ, ಶ್ರೀವಿಭೀಷಣಾಳ್ವಾನುಕ್ಕು ಫಲಂ ರಾವುಪ್ರಾಪ್ತಿ, ಪೆರುವಾಳುಕ್ಕು ಫಲಂ ಸಮುದ್ರತರಣಂ, ಇಳೈಯ ಪೆರುವಾಳುಕ್ಕು ಫಲಂ ರಾವಾನುವೃತ್ತಿ ॥ ೩೩ ॥

ಶ್ಲೋಕಃ – ❋ ಫಲನಿಯತಿರಪೀಹ ನೇತಿಸಿದ್ಧಂ
ವಿಷಯಜಭೇದಗತಂ ಫಲಂ ಪ್ರಪತ್ತೇಃ ।
ಪಿತೃಪತಿತನಯಸ್ಯ ರಾಜ್ಯಮೇವಂ
ದ್ರುಪದಭುವೋವಸನಂ ಫಲಂತ್ವಿಭಸ್ಯ ॥ ೫೪ ॥

ಫಲಮತುಲಮಭೂಚ್ಚ ಕಿಂಕರತ್ವಂ
ರಘುಪತಿಲಬ್ಧರಭೂದ್ವಿಭೀಷಣಸ್ಯ ।
ಜಲನಿಧಿತರಣಂ ರಘೂದ್ವಹಸ್ಯ
ಪ್ರಥಿತಫಲಂ ಫಣಿಕಾಕಯೋಸ್ತು ಜೀವಃ ॥ ೫೫ ॥

ತಾತ್ಪರ್ಯ – ಇದರಲ್ಲಿ ಆಯಾಯಾ ಅಧಿಕಾರಿಗಳಿಗೆ ಅನುಗುಣವಾದ ಫಲವು ಲಭಿಸುವುದಾದ್ದರಿಂದ ಪ್ರಪತ್ತಿಗೆ ಫಲನಿಯಮವೂ ಇಲ್ಲವೆಂದು ಹೇಳುತ್ತಾರೆ. ಧರ್ಮರಾಜನಿಗೆ ರಾಜ್ಯವೂ, ದ್ರೌಪದಿಗೆ ವಸ್ತ್ರವೂ, ಕಾಕಾಸುರ ಮತ್ತು ಕಾಳಿಯ, ಇವರಿಬ್ಬರಿಗೂ ಪ್ರಾಣವೂ, ಗಜೇಂದ್ರನಿಗೆ ಕೈಂಕರ್ಯವೂ, ವಿಭೀಷಣನಿಗೆ ರಾವುಪ್ರಾಪ್ತಿಯೂ, ಶ್ರೀರಾಮನಿಗೆ ಸಮುದ್ರತರಣವೂ ಫಲಗಳು.

ಶ್ಲೋಕಃ – ❋ ಲಕ್ಷ್ಮಣಸ್ಯ ಫಲಂ ತಾವದ್ರಾಮಾನುಸರಣಂ ಕಿಲ ।
ಏವಂ ವಿಷಯಭೇದೇನ ಫಲಭೇದಃ ಪ್ರದರ್ಶಿತಃ ॥ ೫೬ ॥

ತಾತ್ಪರ್ಯ – ಲಕ್ಷ್ಮಣನಿಗೆ ಫಲವು ರಾಮಾನುಸರಣವು. ಈ ರೀತಿ ವಿಷಯಭೇದಗಳಿಂದ ಫಲಭೇದಗಳು ಹೇಳಲ್ಪಟ್ಟವು.

ಸೂತ್ರಂ - ವಿಷಯನಿಯಮಮಾವತು, ಗುಣಪೂರ್ತಿಯುಳ್ಳವಿಡವೇ ವಿಷಯಮಾಹ್ಯೆ, ಪೂರ್ತಿಯುಳ್ಳತುಮರ್ಚಾವತಾರತ್ತಿಲೇ ॥ ೩೪ ॥

ಶ್ಲೋಕಃ – ❋ ನಿಯಮೋ ವಿಷಯಸ್ಯಾತ್ರ ಗುಣಪೂರ್ತಿರ್ನಿರಂಕುಶಾ ।
ಪ್ರಾಯಶೋಽರ್ಚಾವತಾರೇಸ್ಯಾದ್ಗುಣಪೂರ್ತಿರ್ನಿರಂತರಾ ॥ ೫೭ ॥

ತಾತ್ಪರ್ಯ – ಪ್ರಪತ್ತಿಗೆ ದೇಶ ಕಾಲ ನಿಯಮವಿಲ್ಲವೆಂದು ಹೇಳಿ, ವಿಷಯನಿಯಮವೇ ಪ್ರಧಾನವೆಂದು ಹೇಳಿದ್ದನ್ನು ಉಪಪಾದಿಸುತ್ತಾರೆ. ವಿಷಯ ನಿಯಮವು ಯಾವುದೆಂದರೆ, ಎಲ್ಲಿ ಗುಣ ಪೂರ್ತಿ ಇರುವುದೋ,

ಆದೇ ಪ್ರಪತ್ತಿಗೆ ವಿಷಯವು. ಆ ರೀತಿಯಾದ ಗುಣಪೂರ್ತಿಯು ಅರ್ಚಾವತಾರದಲ್ಲಿದೆ. ಸಾಕ್ಷಾದ್ಭಗವಂತನೇ "ಅರ್ಚಾವತಾರದಲ್ಲಿರುವ ಗುಣಪೂರ್ತಿಯು ಇನ್ನೆಲ್ಲೂ ಇಲ್ಲ"ವೆಂದು ಹೇಳಿರುವನು. ಆದ್ದರಿಂದ ಪ್ರಪತ್ತಿಗೆ ಅರ್ಚಾವತಾರವೇ ವಿಷಯವು.

ಸೂತ್ರಂ - ಆಳ್ವಾರ್ಹಳ್ ಪಲವಿಡಂಗಳಿಲುಂ ಪ್ರಪತ್ತಿ ಪಣ್ಣಿತ್ತು - ಮರ್ಚಾವತಾರತ್ತಿಲೇ ॥ ೩೫ ॥

ಶ್ಲೋಕಃ – ❋ ಶಠಾರಿಪ್ರಮುಖಾಭಕ್ತಾಃ ಪ್ರಪತ್ತಿಂ ಚಕ್ರುರಾದರಾತ್ ।
ತತ್ರೈವಾರ್ಚಾವತಾರೇ ತು ಗುಣಪೂರ್ತಿಯುತೇ ಸ್ಥಿರೇ ॥ ೫೮ ॥

ತಾತ್ಪರ್ಯ – ಗುಣಪೂರ್ತಿಯುಳ್ಳ ಅರ್ಚಾವತಾರವೇ ಪ್ರಪತ್ತಿಗೆ ವಿಷಯವೆಂದು ತಿಳಿಸಿದರು. ಇದರಲ್ಲಿ ಪ್ರಪನ್ನಜನ ಕೂಟಸ್ಥರಾದ ಮತ್ತು ಭಗವಂತನ ನಿರ್ಹೇತುಕ ಕೃಪಾಕಟಾಕ್ಷಕ್ಕೆ ಪಾತ್ರರಾದ ನಮ್ಮಾಳ್ವಾರವರು, ಅನೇಕ ಸ್ಥಳಗಳಲ್ಲಿ ಅರ್ಚಾವತಾರಗಳಲ್ಲೇ ಪ್ರಪತ್ತಿ ಮಾಡಿದ ವಿಷಯವನ್ನು ಅನೇಕ ಪಾಶುರಗಳ ಮೂಲಕ ಪ್ರಕಾಶಪಡಿಸಿದರು.

ಸೂತ್ರಂ - ಪೂರ್ಣಂ ಎನ್ಗೈಯಾಲೇ, ಎಲ್ಲಾ ಗುಣಂಗಳುಂ ಪುಷ್ಕಲಂಗಳ್ ॥ ೩೬ ॥

ಶ್ಲೋಕಃ – ❋ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ।
ಸರ್ವಂ ಪೂರ್ಣಮಿತಿ ಶ್ರುತ್ಯಾ ಗುಣಾಹ್ಯತ್ರ ಸುಪುಷ್ಕಲಾಃ ॥ ೫೯ ॥

ತಾತ್ಪರ್ಯ – ಆಳ್ವಾರುಗಳೆಲ್ಲರೂ ಪ್ರಪತ್ತಿಮಾಡುವ ಸ್ಥಳಗಳಲ್ಲಿ ಪರತ್ವಾದಿ ಗುಣಗಳಿರುವಾಗ ಅರ್ಚಾವತಾರದಲ್ಲಿ ಪ್ರಪತ್ತಿ ಮಾಡಲು ಕಾರಣವೇನೆಂದರೆ, ಅರ್ಚಾವತಾರದಲ್ಲಿ ಆಶ್ರಯಿಸುವುದಕ್ಕೆ ಸೌಕರ್ಯವನ್ನು ಉಂಟುಮಾಡುವ ಸೌಲಭ್ಯಾದಿಗುಣಗಳೇನು, ಆಶ್ರಿತರ ಕಾರ್ಯವನ್ನು ಸಫಲಗೊಳಿಸುವ ಗುಣಗಳೇನು, ಎಲ್ಲಾ ಗುಣಗಳೂ ಈ ಅರ್ಚಾವತಾರದಲ್ಲಿ ಪೂರ್ಣವಾಗಿವೆ. ಆದ್ದರಿಂದ ಅರ್ಚಾವತಾರಗಳಲ್ಲಿ ಪ್ರಪತ್ತಿ ಮಾಡಿದರು.

ಸೂತ್ರಂ - ಪ್ರಪತ್ತಿಕ್ಕಪೇಕ್ಷಿತಂಗಳಾನ ಸೌಲಭ್ಯಾದಿಹಳ್, ಇರುಟ್ಪರೈಯಿಲ್ ವಿಳಕ್ಕುಪ್ಪೋಲೇ ಪ್ರಕಾಶಿಪ್ಪದಿಂಗೇ ॥ ೩೭ ॥

ಶ್ಲೋಕಃ – ❋ ಸೌಲಭ್ಯಾದಿ ಗುಣಃ ಪ್ರಾಯೋಹ್ಯರ್ಚ್ಯರೂಪೇ ರಮಾಪತೌ ।
ಆಶ್ರಯಾಪಾದಕೋನ್ಯೇಷಾಂ ಧ್ವಾಂತೇ ದೀಪೋ ಯಥೋಜ್ವಲಃ ॥೬೦ ॥

ತಾತ್ಪರ್ಯ – ಹೀಗಾದ ಪಕ್ಷದಲ್ಲಿ ಪರವಾಸುದೇವನೂ ಪೂರ್ಣನೆಂದು ಹೇಳಿರುವಾಗ ಅರ್ಚಾವತಾರದಲ್ಲಿ ವಿಶೇಷವೇನೆಂದರೆ, ಇದರಲ್ಲಿ ಅರ್ಚಾವತಾರದ ವಿಶೇಷವನ್ನು ಹೇಳುತ್ತಾರೆ. ಈ ಅರ್ಚಾವತಾರದಲ್ಲಿ, ಉಪಾಯವಾಗಿ ಹೊಂದುವುದಕ್ಕನುಗುಣವಾದ ಸೌಲಭ್ಯವೂ, ಸೌಶೀಲ್ಯವೂ, ನಮ್ಮ ಕೆಲಸವನ್ನು ನಡೆಸಿಕೊಡುವನೆಂಬ ವಿಶ್ವಾಸಕ್ಕನುಗುಣವಾದ ಸ್ವಾಮಿತ್ವವೂ, ಆಶ್ರಿತರ ದೋಷಗಳನ್ನು ಭೋಗ್ಯಗಳನ್ನಾಗಿ ಎಣಿಸುವ ವಾತ್ಸಲ್ಯವೂ, ಕತ್ತಲೆಯಲ್ಲಿ ಉಜ್ವಲವಾದ ದೀಪದಂತೆ ಪ್ರಕಾಶಿಸುವುವು. ಆದ್ದರಿಂದ ಅರ್ಚಾವತಾರವು ಆಶ್ರಯಾಪಾದಕವಾಗಿರುವುದು.

ಸೂತ್ರಂ - ಪೂರ್ತಿಯೈಯುಂ, ಸ್ವಾತಂತ್ರ್ಯತ್ತೈಯುಂ, ಕುಲೈತ್ತುಕ್ಕೊಂಡು ತನ್ನೈಯನಾದರಿಕ್ಕಿರವರ್ಹಳೈತ್ತಾನಾದರಿತ್ತು ನಿರ್ಕ್ಕರ ವಿಡಂ ॥ ೩೮ ॥

ಶ್ಲೋಕಃ – ❋ ಅವಾಪ್ತಸರ್ವಕಾಮತ್ವಂ ಸ್ವಾತಂತ್ರ್ಯಂ ಚೋಪಗೂಹಯನ್ ।
ಔದಾಸ್ಯೇನ ಸ್ಥಿತಾನ್ ಶ್ರೀಮಾನ್ಸಾದರಂ ಪಶ್ಯತೀಹ ಯತ್ ॥ ೬೧ ॥

ತಾತ್ಪರ್ಯ – ಹಿಂದೆ ಹೇಳಿದ ಗುಣಗಳು ಅರ್ಚಾವತಾರದಲ್ಲೇ ಪ್ರಕಾಶಿಸುವುವು ಎಂದು ಹೇಳುವರು. ಸರ್ವೇಶ್ವರನು ಸಮಸ್ತವನ್ನೂ ಹೊಂದಿದ್ದಾಗ್ಯೂ ಕೂಡ, ಅದನ್ನು ಮರೆಸಿಕೊಂಡು ಭಕ್ತರುಗಳು ಸಮರ್ಪಿಸಿದ್ದನ್ನೆಲ್ಲಾ ಸ್ವೀಕರಿಸುವನು. ತಾನು ಸ್ವತಂತ್ರನಾಗಿದ್ದಾಗ್ಯೂ ಆ ಸ್ವಾತಂತ್ರ್ಯವನ್ನು ಮರೆಸಿಕೊಂಡು ಅರ್ಚಕ ಪರಾಧೀನನಾಗಿ ಬಿಸಿಲು, ಮಳೆ ಇವುಗಳನ್ನು ಲಕ್ಷಿಸದೆ ಅರ್ಚಕನು ಮಾಡಿದ್ದೆಲ್ಲವನ್ನೂ ಅಂಗೀಕರಿಸುತ್ತಾ, ಉದಾಸೀನರಾದ ಜನಗಳನ್ನೂ ಆದರದಿಂದ ಕಟಾಕ್ಷಿಸುತ್ತಿರುವ ಕಾರಣ ಅರ್ಚಾವತಾರದಲ್ಲೇ ಸೌಲಭ್ಯಾದಿ ಗುಣಗಳು ಪ್ರಕಾಶಿಸುವುವು.

ಸೂತ್ರಂ - ಭೂಗತ ಜಲಂಪೋಲೇ ಅಂತರ್ಯಾಮಿತ್ವಂ, ಆವರಣ ಜಲಂಪೋಲೇ ಪರತ್ವಂ,
ಪಾರ್ಕಡಲ್ಪೋಲೇ ವ್ಯೂಹಂ, ಪೆರುಕ್ಕಾರುಪೋಲೇ ವಿಭವಂಗಳ್,
ಅತಿಲೇ ತೇಂಗಿನ ಮಡುಕ್ಕಳ್‌ಪೋಲೇ ಅರ್ಚಾವತಾರಂ ॥ ೩೯ ॥

ಶ್ಲೋಕಃ – ❋ ಭೂಗತಜಲವಚ್ಚಾಂತರ್ಯಾಮಿತ್ವಂ ಪರತಾಪಿ ಚ ।
ಭವೇದಾವರಣಾಂಭೋವದ್ವ್ಯೂಹೋ ದುಗ್ಧ ಸಮುದ್ರವತ್ ॥೬೨ ॥

ಸ್ವವತ್ಪ್ರವಾಹತುಲ್ಯೋ೭ಯಂ ವಿಭವೋ೭ರ್ಚಾಕೃತಿಸ್ಸದಾ ।
ಹೃದವತ್ಪ್ರಾಪ್ಸ್ಯ ಸಾಪಿಸ್ಯಾತ್ಸರ್ವಸೇವ್ಯ ಮನೋಹರಾ ॥ ೬೩ ॥

ತಾತ್ಪರ್ಯ – ಇದರಲ್ಲಿ ಪರತ್ವಾದಿಗಳ ದೌರ್ಲಭ್ಯವನ್ನೂ, ಅರ್ಚಾವತಾರದ ಸೌಲಭ್ಯವನ್ನೂ, ದೃಷ್ಟಾಂತ ಮುಖೇನ ತೋರಿಸಿಕೊಡುತ್ತಾರೆ. ಭಗವಂತನು ಅಂತರ್ಯಾಮಿಯಾಗಿ ಹೃದಯಕಮಲದಲ್ಲಿದ್ದಾಗ್ಯೂ ಬಾಯಾರಿಕೆಯಿಂದ ಬಳಲಿರುವವನು ಭೂಮಿಯೊಳಡಗಿರುವ ನೀರನ್ನು ಗುದ್ದಲಿಯಿಂದ ಅಗೆದು ಕುಡಿದು ಬಾಯಾರಿಕೆಯನ್ನು ಪರಿಹರಿಸಿಕೊಳ್ಳುವಂತೆ, ಅಷ್ಟಾಂಗಯೋಗವನ್ನೆಸಗಿ ಪ್ರಯತ್ನಪಟ್ಟು, ಆ ಅಂತರ್ಯಾಮಿಯನ್ನು ಕಾಣಬೇಕು. ಪರತ್ವವೋ ಅಂದರೆ ಅಂಡಾವ್ಯಹಿರ್ಭೂತವಾದ ಸ್ಥಳದಲ್ಲಿ ಹರಿಯುವ ನೀರಿನಂತೆ ಈ ಲೀಲಾವಿಭೂತಿಗೆ ಹೊರಗಡೆ ಇರುವುದರಿಂದ ನಮಗೆ ಉಪಯೋಗವಾಗುವುದಿಲ್ಲ. ವ್ಯೂಹವೂ ಹಾಗೆಯೇ ಪ್ರಕೃತಿ ಮಂಡಲದಲ್ಲಿದ್ದಾಗ್ಯೂ ಕ್ಷೀರ ಸಮುದ್ರವನ್ನು ಸೇರಲು ಯಾವ ರೀತಿ ಅಸಾಧ್ಯವೋ ಅದೇ ರೀತಿ ಕ್ಷೀರಸಮುದ್ರದಲ್ಲಿರುವ ಭಗವಂತನನ್ನೂ ಅನುಭವಿಸುವುದಕ್ಕಾಗುವುದಿಲ್ಲ. ವಿಭವಾವತಾರವೋ ಅಂದರೆ ಹರಿದು ಹೋಗುವ ನೀರಿನಂತೆ ಆ ಕಾಲದಲ್ಲಿದ್ದ ಜನಗಳಿಗೆ ಮಾತ್ರ ಅನುಭವಿಸಲು ಸಾಧ್ಯ, ಇತರರಿಗೆ ಸಾಧ್ಯವಾಗಲಾರದು. ಅರ್ಚಾವತಾರವೋ ಅಂದರೆ ನೀರು ತುಂಬಿದ ಮಡುವಿನ ಹಾಗೆ ಎಲ್ಲರಿಗೂ ಎಲ್ಲಾ ಕಾಲದಲ್ಲೂ, ಎಲ್ಲಾ ದೇಶದಲ್ಲೂ ಬಿಜವಾಡಿಸಿ ಸೇವಿಸುವಂತೆ ಸುಲಭವಾಗಿರುವುದು.

ಸೂತ್ರಂ - ಇತುತಾನ್ ಶಾಸ್ತ್ರಂಗಳಾಲ್ ತಿರುತ್ತವೊಣ್ಣಾತೇ ವಿಷಯಾಂತರಂಗಳಿಲೇ
ಮುಂಡಿ ವಿಮುಖರಾಯ್‌ಪ್ಪೋರುಂ ಚೇತನರ್ಕ್ಕ್ ವೈಮುಖ್ಯತ್ತೈ,
ಮಾತ್ತಿ ರುಚಿಯೈ ವಿಳಕ್ಕ್ಕಡವತಾಯ್ ರುಚಿಪಿರಂದಾಲ್
ಉಪಾಯಮಾಯ್, ಉಪಾಯಪರಿಗ್ರಹಂ ಪಣ್ಣಿನಾಲ್
ಭೋಗ್ಯಮುಮಾಯಿರುಕ್ಕುಂ ॥ ೪೦ ॥

ಶ್ಲೋಕಃ – ❋ ಕೃತ್ವಾ ಶಾಸ್ತ್ರವಿಲಂಘನಂ ಚ ವಿಷಯೇಷ್ವಾಸಕ್ತಚಿತ್ತಾನ್ಯನಾ
ನ್ಸೌಂದರ್ಯಾದಿ ಗುಣೈಶ್ಚ ತಾನ್ವಿವಶಯನ್ನುತ್ಪಾದಯನ್ಭೋಗ್ಯತಾಂ ।
ಕೃತ್ವಾ ಸ್ವಾಭಿಮುಖಾನುಪಾಯ ಇತಿ ಚಾದರ್ಶ್ಯ ಸ್ವಯಂ ಮಾಧವಃ
ಸೌಲಭ್ಯಾದಿಗುಣಾಕರೋ ವಿಲಸತೀಹಾರ್ಚಾವತಾರೇ ಯತಃ ॥ ೬೪ ॥

ತಾತ್ಪರ್ಯ – ಹೀಗೆ ಆಶ್ರಯಿಸಲು ಅಭಿಲಾಷೆಯುಳ್ಳವರಿಗೆ ಸುಲಭವಾಗಿ ಅರ್ಚಾವತಾರವನ್ನು ಆಶ್ರಯಿಸಿದ ಮೇಲೆ ಉಂಟಾಗುವ ಅನುಭವವನ್ನು ಹೇಳುತ್ತಾರೆ. ಶಾಸ್ತ್ರಗಳು ಇದು ಹೇಯ ಇದು ಉಪಾದೇಯ ಎಂದು ಉಪದೇಶ ಮಾಡಿದರೂ ಜನ್ಮಾಂತರ ವಾಸನೆಯಿಂದ ಚೇತನರು, ಆ ಉಪದೇಶವನ್ನು ನಿರರ್ಥಕಗೊಳಿಸಿ ಈ ವಿಷಯಸುಖದಲ್ಲೇ ಸಕ್ತರಾಗುವರಷ್ಟೆ. ಅಂಥ ಚೇತನರ ಆ ವಿಷಯಾಸಕ್ತಿಯನ್ನು ತಪ್ಪಿಸಿ ಭಗವಂತನನ್ನು ಸೇವಿಸಬೇಕೆಂಬ ಅಭಿಲಾಷೆಯನ್ನು ಉಂಟುಮಾಡುತ್ತದೆ. ಅಭಿಲಾಷೆಯುಂಟಾದ ಮೇಲೆ, ಅದೇ ಉಪಾಯವಾಗುತ್ತದೆ. ಇವನು ಉಪಾಯವಾಗಿ ಸ್ವೀಕರಿಸಿದ ಮೇಲೆ ಅದೇ ಭೋಗ್ಯವಾಗುತ್ತದೆ. ಇಷ್ಟೂ ಈ ಅರ್ಚಾವತಾರದಿಂದ ಉಂಟಾಗುವುದು.

ಸೂತ್ರಂ - ಇತಿಲ್ ಪ್ರಪತ್ತಿ ಪಣ್ಣುವುಧಿಕಾರಿಹಳ್ ಮೂವರ್ ॥ ೪೧ ॥

ಶ್ಲೋಕಃ – ❋ ಏವಮರ್ಚಾವತಾರೇ ತು ಪ್ರಪತ್ತಿಕರಣೇ ಕ್ರಮಾತ್ ।
ಅಧಿಕಾರಿತ್ರಯಂಸ್ಯಾಚ್ಚ ಸೌಲಭ್ಯಾದಿ ಗುಣಾಕರೇ ॥ ೬೫ ॥

ತಾತ್ಪರ್ಯ – ಹೀಗೆ ವಿಷಯ ವಿಶೇಷವನ್ನು ಹೇಳಿ ಅನಂತರ ಭಗವಚ್ಛಾಸ್ತ್ರಸಿದ್ಧವಾದ ಅಧಿಕಾರಿ ವಿಶೇಷಗಳನ್ನು ವಿಶದೀಕರಿಸುತ್ತಾರೆ. ಅದೇನೆಂದರೆ ಸೌಲಭ್ಯಾದಿ ಗುಣ ಪೂರ್ತಿಯುಳ್ಳ ಅರ್ಚಾವತಾರದಲ್ಲಿ ಪ್ರಪತ್ತಿ ಮಾಡುವ ಅಧಿಕಾರಿಗಳು ಮೂರು ವಿಧವಾಗಿರುವರು.

ಸೂತ್ರಂ - ಅಜ್ಞರುಂ, ಜ್ಞಾನಾಧಿಕರುಂ, ಭಕ್ತಿಪರವಶರುಂ ॥ ೪೨ ॥

ಶ್ಲೋಕಃ – ❋ ಅಜ್ಞಾಶ್ಚ ಜ್ಞಾನಿನಶ್ಚಾಪಿ ಭಕ್ತ್ಯಾ ಶಿಥಿಲಮಾನಸಾಃ ।
ಏತೇऽಧಿಕಾರಿಣಸ್ತತ್ರ ಪ್ರಪತ್ತಿಕರಣೇ ಕ್ರಮಾತ್ ॥ ೬೬ ॥

ತಾತ್ಪರ್ಯ – ಆ ಮೂರು ವಿಧವಾದವರು ಯಾರೆಂದರೆ, ಅದನ್ನು ಹೇಳುತ್ತಾರೆ. ಭಗವಂತನನ್ನು ಹೊಂದುವುದಕ್ಕೆ ಸಾಧನಾನುಷ್ಠಾನವನ್ನು ಮಾಡಬೇಕೆಂಬ ಜ್ಞಾನವಿಲ್ಲದವರು ಅಜ್ಞರು. ಭಗವದತ್ಯಂತಪರತಂತ್ರವಾದ ಆತ್ಮಸ್ವರೂಪವನ್ನರಿತು, ಉಪಾಯಾಂತರ ಸ್ವರೂಪವಿರುದ್ಧವೆಂಬ ಜ್ಞಾನವುಳ್ಳವರೇ ಜ್ಞಾನಾಧಿಕರು. ಭಗವಂತನಲ್ಲಿ ಉಂಟಾದ ಪ್ರೇಮಾತಿಶಯದಿಂದ ಶಿಥಿಲೇಂದ್ರಿಯರಾಗಿರುವವರು ಭಕ್ತಿಪರವಶರು. ಈ ರೀತಿ ಮೂರು ವಿಧವಾಗಿರುವರು.

ಸೂತ್ರಂ - ಅಜ್ಞಾನತ್ತಾಲೇ ಪ್ರಪನ್ನರ್ ಅಸ್ಮದಾದಿಹಳ್,
ಜ್ಞಾನಾಧಿಕ್ಯತ್ತಾಲೇ ಪ್ರಪನ್ನರ್ ಪೂರ್ವಾಚಾರ್ಯರ್ಹಳ್,
ಭಕ್ತಿಪಾರವಶ್ಯತ್ತಾಲೇ ಪ್ರಪನ್ನರ್ ಆಳ್ವಾರ್ಹಳ್ ॥ ೪೩ ॥

ಶ್ಲೋಕಃ – ❋ ಪೂರ್ವಾಚಾರ್ಯಾಸ್ತು ಸುಜ್ಞಾನಾದಜ್ಞಾನಾದಸ್ಮದಾದಯಃ ।
ಶಠಾರಿಪ್ರಮುಖಾ ಭಕ್ತ್ಯಾ ಪ್ರಪತ್ತೇರಧಿಕಾರಿಣಃ ॥ ೬೭ ॥

ತಾತ್ಪರ್ಯ – ಪ್ರಪತ್ತಿ ಮಾಡಲು ಮೂರು ವಿಧವಾದ ಅಧಿಕಾರಿಗಳೆಂದು ಹಿಂದೆ ಹೇಳಿದರು. ಆ ಮೂರು ವಿಧ ಅಧಿಕಾರಿಗಳು ಯಾರೆಂದರೆ, ಅದನ್ನು ಇದರಲ್ಲಿ ತಿಳಿಸುತ್ತಾರೆ. ಬೇರೆ ಉಪಾಯಗಳನ್ನನುಷ್ಠಿಸಲು ಮೊದಲು ಜ್ಞಾನವಿಲ್ಲದೇ ಇರೋಣದರಿಂದ ಅನ್ಯಗತಿಯಿಲ್ಲದೆ ಭಗವದ್ವಿಷಯದಲ್ಲಿ ಭರನ್ಯಾಸ, ಮಾಡುವವರು ಅಜ್ಞಾನದಿಂದ ಪ್ರಪನ್ನರು ನಮ್ಮಂತಹವರು. ಬೇರೆ ಉಪಾಯಗಳು ಸ್ವರೂಪನಾಶಕ ಗಳೆಂದರಿತು ಸ್ವರೂಪಯಾಥಾತ್ಮ್ಯಜ್ಞಾನದಿಂದ ಅನನ್ಯಗತಿಕರಾಗಿ ಭಗವಂತನಲ್ಲೇ ಇಡಲ್ಪಟ್ಟ ತಮ್ಮ ಭಾರವುಳ್ಳವರು ಜ್ಞಾನಾಧಿಕ್ಯದಿಂದ ಪ್ರಪನ್ನರಾ ಪೂರ್ವಾಚಾರ್ಯರು. ಭಗವಂತನಲ್ಲಿ ಉಂಟಾದ ಪ್ರೇಮಾತಿಶಯದಿಂದ ಇಂದ್ರಿಯಗಳೆಲ್ಲವೂ ಸೋತುಹೋಗಿ ಸಾಧನಾನುಷ್ಠಾನ ಮಾಡಲಾರದೆ ಅನನ್ಯಗತಿಗಳಾಗಿ ಅವನಲ್ಲಿ ಭರಸಮರ್ಪಣ ಮಾಡುವವರು, ಭಕ್ತಿಪಾರವಶ್ಯದಿಂದ ಪ್ರಪನ್ನರಾಗಿರುವವರು ಆಳ್ವಾರ್ರುಗಳು.

ಸೂತ್ರಂ - ಇಪ್ಪಡಿ ಶೊಲ್ಲುಹಿರದುಂ ಊತ್ತತ್ತ್ರೈಪತ್ತಿ ॥ ೪೪ ॥

ಶ್ಲೋಕಃ – ❋ ಪೃಥಕ್ಕ್ರಯಾ ಪ್ರಪತ್ತೇಷ್ತು ಕುತಃ ಕಾರಣಮೀರಿತಂ ।
ಇತಿ ಚೇದುಚ್ಯತೇ ತೇಷಾಂ ತತ್ತದಾದರಕಾರಣಾತ್ ॥ ೬೮ ॥

ತಾತ್ಪರ್ಯ – ಈ ರೀತಿ ಬೇರೆ ಬೇರೆ ಕಾರಣವನ್ನು ಹೇಳಲು ಕಾರಣವೇನೆಂದರೆ, ಅವರವರ ಆದರಾತಿಶಯಗಳೇ ಕಾರಣವೆಂದು ತಿಳಿಸುತ್ತಾರೆ. ಕೆಲವರಿಗೆ ಅಜ್ಞಾನವೇ ಹೆಚ್ಚಾಗಿದ್ದಪಕ್ಷದಲ್ಲಿ ಅವರು ಹಿಂದೆ ಹೇಳಿದಂತೆ ಪ್ರಪತ್ತಿ ಮಾಡುತ್ತಾರೆ. ಕೆಲವರು ಜ್ಞಾನಾಧಿಕ್ಯದಿಂದ ಹಿಂದೆ ತಿಳಿಸಿದಂತೆ ಪ್ರಪತ್ತಿ ಮಾಡುವರು. ಆಳ್ವಾರ್ರುಗಳು ಭಕ್ತಿಪಾರವಶ್ಯದಿಂದ ಹಿಂದೆ ಹೇಳಿದಂತೆ ಪ್ರಪತ್ತಿಮಾಡಿದರು. ಈ ರೀತಿ ಅವರವರ ಆದರಾತಿಶಯವೇ ಕಾರಣ.

ಸೂತ್ರಂ - ಇವಱ್ಱಿನ್ನುಂ ಮೂನ್ಱುತತ್ತತ್ತ್ರೈಯುಂ ಪತ್ತಿವರುಂ ॥ ೪೫ ॥

ಶ್ಲೋಕಃ – ❋ ಅಜ್ಞಾನಾದಿ ತ್ರಯಂಸ್ಯಾದ್ಯತ್ಕಾರಣಂ ನಿಗದಾಮ್ಯಹಂ ।
ಅಚಿತ್ಸಂಬಂಧತೋಽಜ್ಞಾನಂ ಜ್ಞಾನಂ ತ್ವಾತ್ಮಸು ತತ್ವತಃ ॥ ೬೯ ॥

ಭಗವತ್ತತ್ವತೋ ಭಕ್ತಿಪಾರವಶ್ಯಂ ಭವೇತ್ಪಲು ।
ಏವಂ ಭವೇದ್ವಿ ಸಂಬಂಧಾದೇತತ್ತ್ರಿತಯಮಪ್ಯನು ॥ ೭೦ ॥

ತಾತ್ಪರ್ಯ – ಈ ಅಜ್ಞಾನಾದಿಗಳುಂಟಾಗುವುದಕ್ಕೆ ಕಾರಣವೇನೆಂದರೆ, ಅದನ್ನು ತಿಳಿಸುತ್ತಾರೆ, ಸಾಧನಾನುಷ್ಠಾನ ಮಾಡಲು ಅಜ್ಞಾನಾಶಕ್ತಿಗಳುಂಟಾಗಲು ಕಾರಣವೇನೆಂದರೆ ಕರ್ಮಮೂಲಕವಾದ ಅಚಿತ್ಸಂಬಂಧವೇ ಕಾರಣ. ಜ್ಞಾನಾಧಿಕ್ಯವು ಉಂಟಾಗಲು ಕಾರಣವೇನೆಂದರೆ, ಶೇಷತ್ವರೂಪವಾದ ಆತ್ಮಯಥಾರ್ಥ ದರ್ಶನವೇ ಕಾರಣ. ಒಂದನ್ನೂ ಅನುಷ್ಠಿಸಲು ಅಶಕ್ತವಾದ ಇಂದ್ರಿಯಗಳ ಶೈಥಿಲ್ಯವನ್ನುಂಟು ಮಾಡುವ ಭಕ್ತಿಪಾರವಶ್ಯವೇ ಕಾರಣ.

ಸೂತ್ರಂ - "ಎನ್ನಾನ್ ಶೆಯ್ಹೇನ್" ಎನ್ಗಿರವಿಡತ್ತಿಲ್ ಇವಱ್ಱಿನ್ಸ್ರಮಮುಂಡು ॥ ೪೬ ॥

ಶ್ಲೋಕಃ – ಅಜ್ಞಾನಾದಿತ್ರಯಂ ಕಿನ್ನು ಕ್ವಾಪ್ಯೇಕತ್ರ ವರ್ತತೇ ।
ಇತಿ ಚೇಚ್ಛಶತಶ್ರೌ ಹಿ ದೃಶ್ಯತೇ ತತ್ತ್ರಯಂ ಕ್ರಮಾತ್ ॥ ೭೧ ॥

ತಾತ್ಪರ್ಯ – ಹಿಂದೆ ಹೇಳಿದ ಮೂರು ವಿಧ ಅಧಿಕಾರಿಗಳಿಗೂ ಅಜ್ಞಾನ ಜ್ಞಾನಾಧಿಕ್ಯ ಭಕ್ತಿಪಾರವಶ್ಯಗಳಲ್ಲಿ ಅನ್ವಯವುಂಟಾಗಿರುವ ಪ್ರಪತ್ತಿಗೆ ಒಂದೇ ಕಾರಣಸ್ಥಳವನ್ನು ಇದರಲ್ಲಿ ಹೇಳುತ್ತಾರೆ, ಭಗವಂತನು ತನ್ನ

ಆರ್ತಿಯನ್ನು ನೋಡಿ ಒರದೇ ಇರಲು ಬೇರೆ ಉಪಾಯಾನುಷ್ಠಾನ ಮಾಡಲು ಯೋಗ್ಯತೆ ಇಲ್ಲದ ಕಾರಣ ಅಜ್ಞನಾದ ನಾನು ಏನು ಮಾಡಲಿ! ನಾನು ನಿನಗೆ ಜ್ಞಾನವನ್ನು ಅನುಗ್ರಹಿಸಿರುವೆನು ಎಂದು ಹೇಳಿದ ಪಕ್ಷದಲ್ಲಿ, ನೀನು ಕೊಟ್ಟ ಜ್ಞಾನಾಧಿಕ್ಯದಿಂದ ಸ್ವರೂಪ ಪಾರತಂತ್ರ್ಯವನ್ನು ಬಿಟ್ಟು ಸಾಧನಾನುಷ್ಠಾನ ಮಾಡಲು ಯೋಗ್ಯನಲ್ಲದ ನಾನು ಏನು ಮಾಡಲಿ! ಭಕ್ತಿಪಾರವಶ್ಯದಿಂದ ಸೋತು ಹೋದ ಇಂದ್ರಿಯಗಳುಳ್ಳ ನಾನು ಏನು ಮಾಡಲಿ! ಈ ರೀತಿ ಆಳ್ವಾರ್ರಲ್ಲಿ ಒಬ್ಬರಲ್ಲೇ ಕಂಡುಬಂದಿರುವುದರಿಂದ ಪ್ರಪತ್ತಿಗೆ ಒಂದೇ ಸ್ಥಳವನ್ನು ತಿಳಿಸಿದಂತಾಯಿತು.

ಸೂತ್ರಂ - ಅಂಗೊನ್ನೈಪತ್ತಿಯಿರುಕ್ಕುಂ ॥ ೪೭ ॥

ಶ್ಲೋಕಃ – ❋ ಪ್ರಪತ್ತೇಃ ಕಾರಣಂ ತರ್ಹಿ ತತ್ಪ್ರಯಂ ಭವತೀಹ ಕಿಂ ।
ಇತಿ ಚೇಚ್ಛಠ ಶತ್ರೌ ಹಿ ಭಕ್ತೇರ್ಹೇತುತ್ವಮೀರಿತಂ ॥ ೭೧ ॥

ತಾತ್ಪರ್ಯ – ಹಾಗಾದ ಪಕ್ಷದಲ್ಲಿ ಹಿಂದೆ ಹೇಳಿದ ಮೂರೂ ಪ್ರಪತ್ತಿಗೆ ಕಾರಣವೋ ಅಂದರೆ, ನಮ್ಮಳ್ವಾರ್ರವರ ವಿಷಯದಲ್ಲಿ ಭಕ್ತಿಪಾರವಶ್ಯನೆಲೆಯಾಗಿರುವುದರಿಂದ ಆ ಭಕ್ತಿಪಾರವಶ್ಯವೇ ಕಾರಣ.

ಸೂತ್ರಂ - ಮುಖ್ಯಮುದುವೇ ॥ ೪೮ ॥

ಶ್ಲೋಕಃ – ❋ ಅಜ್ಞಾನಾದಿ ತ್ರಯೇ ತರ್ಹಿ ಕಿಂ ಮುಖ್ಯಮಿತಿಚೇದಿಹ ।
ಮುಖ್ಯತ್ವಂ ಭಕ್ತಿಕಾಷ್ಠಾಯಾಃ ಪ್ರಾಪ್ಯಾಭರುಚಿರತ್ರ ಯತ್ ॥ ೭೨ ॥

ತಾತ್ಪರ್ಯ – ಅಜ್ಞಾನಾದಿ ಮೂರರಲ್ಲಿ ಯಾವುದು ಮುಖ್ಯವೆಂದರೆ, ಆ ಮುಖ್ಯತೆಯನ್ನು ಹೇಳುವರು. ಭಕ್ತಿ ಪಾರವಶ್ಯದಿಂದ ಭಗವಂತನಲ್ಲಿ ಅಭಿರುಚಿಯುಂಟಾಗುವುದರಿಂದ ಆ ಭಕ್ತಿಪಾರವಶ್ಯಕ್ಕೇ ಮುಖ್ಯತ್ವವು.

ಸೂತ್ರಂ - ಅವಿದ್ಯಾತಃ, ಎನ್ಗಿರಶ್ಲೋಕತ್ತಿಲೇ ಇವಮ್ಮೂನ್ರುಂ ಶೊಲ್ಲಿತ್ತು ॥ ೪೯ ॥

ಶ್ಲೋಕಃ – ❋ ಶ್ರೀ ಪರಾಶರ ಭಟ್ಟಾರ್ಯ ಸೂಕ್ತೌ ಸ್ಪಷ್ಟಮಿದಂ ತ್ರಯಂ ।
ಅವಿದ್ಯಾತ ಇತಿ ಶ್ಲೋಕೇ ಹ್ಯೇತತ್ತ್ರಯಮುದೀರಿತಂ ॥ ೭೩ ॥

ತಾತ್ಪರ್ಯ – ಈ ರೀತಿ ಮೂರು ವಿಧ ಅಧಿಕಾರಿಗಳುಂಟು ಎನ್ನುವುದಕ್ಕೆ ಪ್ರಮಾಣವುಂಟೋ ಅಂದರೆ, ಶ್ರೀ ಪರಾಶರ ಭಟ್ಟರು ಹೇಳಿರುವ ಶ್ಲೋಕವನ್ನು ಪ್ರಮಾಣವನ್ನಾಗಿ ತೋರಿಸುತ್ತಾರೆ.

ಶ್ಲೋಕಃ – ❋ ಅವಿದ್ಯಾತೋ ದೇವೇ ಪರಿಬೃಢತಯಾ ವಾ ವಿದಿತಯಾ
ಸ್ವಭಕ್ತೇರ್ಭೂಮ್ನಾ ವಾ ಜಗತಿ ಗತಿಮನ್ಯಾಮವಿದುಷಾಂ ।

ಗತಿರ್ಗಮ್ಯಶ್ಚಾಸೌ ಹರಿರಿತಿ ಜಿತಂತಾಹ್ವಯೇ ಮನೋಃ
ರಹಸ್ಯಂ ವ್ಯಾಜಹ್ರೇ ಸ ಖಲು ಭಗವಾನ್ಯೌನಕ ಮುನಿಃ ॥ ೭೪ ॥

ತಾತ್ಪರ್ಯ – ಇದರ ಅರ್ಥವನ್ನು ಜಿತಂತಾವ್ಯಾಖ್ಯಾನೋಪೋದ್ಘಾತದಲ್ಲಿ ಹೇಳಿದೆ. ಪ್ರಪತ್ತಿಗೆ ಅಧಿಕಾರಿಗಳು, ಅಜ್ಞರು, ಜ್ಞಾನಾಧಿಕರು, ಭಕ್ತಿಪರವಶರು, ಭಗವಂತನನ್ನು ಹೊಂದಲು ತನ್ನಲ್ಲಿ ಜ್ಞಾನಶಕ್ತಿ ಗಳಿಲ್ಲದವನು, ಅಜ್ಞನು, ದೇಶಕಾಲವಸ್ತುಗಳಿಂದ ಪರಿಚ್ಛೇದಿಸಲಾಗದ ವೈಭವವುಳ್ಳವನು ಸರ್ವೇಶ್ವರ ನಾದ್ದರಿಂದ ಅನನ್ಯಸಾಧ್ಯನೆಂದು ತಿಳಿದಿರುವನು ಜ್ಞಾನಾಧಿಕನು, ಜ್ಞಾನಶಕ್ತಿಗಳಿದ್ದರೂ ಪ್ರೇಮಾತಿಶಯ ದಿಂದ ಅನುಷ್ಠಿಸದೇ ಇರುವವನು ಭಕ್ತಿಪರವಶನು, ಈ ವಿಧವಾದ ಮೂವರೂ ಭಗವದ್ವಿಷಯವನ್ನು ಬಿಟ್ಟು ಬೇರೆ ಉಪಾಯವನ್ನು ಆಶ್ರಯಿಸದೇ ಇರುವವರು.

ಸೂತ್ರಂ - ಇದಂ ಶರಣಮಜ್ಞಾನಾಂ ॥ ೫೦ ॥

ಶ್ಲೋಕಃ – ❋ ಇದಂ ಶರಣಮಜ್ಞಾನಾಮಿದಮೇವ ವಿಜಾನತಾಂ ।
ಇದಂ ತಿತೀರ್ಷತಾಂ ಪಾರಮಿದಮಾನಂತ್ಯಮಿಚ್ಛತಾಂ ॥ ೭೫ ॥

ತಾತ್ಪರ್ಯ – ಇದೇ ವಿಷಯವನ್ನು, ಸಮಸ್ತಲೋಕಕ್ಕೂ ತಾಯಿಯಾದ, ಆಪ್ತತಮೆಯಾದ ಲಕ್ಷ್ಮಿಯು ಲಕ್ಷ್ಮೀ ತಂತ್ರದಲ್ಲಿ ಹೇಳಿರುವುದನ್ನು ತಿಳಿಸುತ್ತಾರೆ. ಇಲ್ಲಿ ಶರಣಾಗತಿಯನ್ನು ನಿರ್ದೇಶಿಸಿ ಹೇಳುವಾಗ, ಇದಂ ಎಂದು ನಪುಂಸಕಲಿಂಗದಲ್ಲಿ ನಿರ್ದೇಶಿಸಿರುವುದು ಶರಣಶಬ್ದ ವಿವಕ್ಷೆಯಿಂದ ಹೇಳಿದೆ. ಇಲ್ಲಿ ಅಜ್ಞ, ಸರ್ವಜ್ಞ, ಇವರಿಬ್ಬರನ್ನೂ ಸ್ಪಷ್ಟವಾಗಿ ಹೇಳಿದ್ದರೂ ಇದಂ ತಿತೀರ್ಷತಾಂ ಪಾರಂ ಎಂದು ಹೇಳಿರುವುದರಿಂದ, ಈ ಕ್ಷಣವೇ ಅನಿಷ್ಟನಿವೃತ್ತಿಯುಂಟಾಗಬೇಕೆಂಬ ತ್ವರೆಯುಳ್ಳವರನ್ನು ಹೇಳಿದಂತಾಯಿತು. ಆನಂತ್ಯಮಿಚ್ಛತಾಂ ಎಂದು ಹೇಳಿರುವುದರಿಂದ, ಭಗವದನುಭವವಿಲ್ಲದೆ ಒಂದು ಕ್ಷಣವೂ ಬದುಕಿರಲಾರೆನೆಂದು, ಇರುವವರನ್ನು ಹೇಳಿದಂತಾಯಿತು, ಆದ್ದರಿಂದ ಭಕ್ತಿಪರವಶರನ್ನೂ ಹೇಳಿದಂತೆಯೇ.

ಸೂತ್ರಂ - ಭಕ್ತಿತನ್ನಿಲೇ ಅವಸ್ಥಾಭೇದಂ ಓರಂದವಾರೇ ಇದುತಾನ್ ಕುಲೈಯಕ್ಕಡವ ದಾಯಿರುಕ್ಕುಂ ॥ ೫೧ ॥

ಶ್ಲೋಕಃ – ❋ ಇದಾನೀಮೇವಾಹಂ ಮುರರಿಪು ಪದಾಬ್ಜಾಭಿಗಮನೇ
ತ್ವರಾವಾನಾಯಾಸ್ಯತ್ಯನು ಸ ಭಗವಾನ್ಮಾಮಿಹ ಕದಾ ।
ಇತಿ ಪ್ರಾಜ್ಯಪ್ರೀತ್ಯಾ ಶಿಥಿಲಕರಣೋ ಯತ್ನವಿಮುಖಿ
ಸ್ತದಾಯತ್ತಸ್ವೀಯ ಸ್ಥಿತಿರಿಹ ಹರೌ ನ್ಯಸ್ತಭರತಃ ॥ ೭೬ ॥

ತಾತ್ಪರ್ಯ – ಹಿಂದೆ ಭಕ್ತಿಯೇ ಮುಖ್ಯವೆಂದು ಹೇಳಿದರು. ಆ ಭಕ್ತಿ ಪಾರವಶ್ಯದಿಂದುಂಟಾಗುವ ಪರಿಣಾಮವನ್ನು ಇದರಲ್ಲಿ ತಿಳಿಸುತ್ತಾರೆ, ನಾನು ಈಗಲೇ ಆ ಭಗವಂತನ ಪಾದಾರವಿಂದವನ್ನು ಸೇರಬೇಕೆಂದು ತ್ವರೆಯುಳ್ಳವನಾಗಿರುವೆನು. ಆ ಭಗವಂತನು ಯಾವಾಗ ಬಂದು ನನ್ನನ್ನು ಕರೆದೊಯ್ಯುವನೋ ಎಂದು ನಿರತಿಶಯವಾದ ಭಕ್ತಿಯಿಂದ ಶಿಥಿಲೇಂದ್ರಿಯನಾಗಿ ತನ್ನ ಪ್ರಯತ್ನವೆಲ್ಲವನ್ನೂ ಬಿಟ್ಟು ನನ್ನ ಸ್ಥಿತಿಯು ಅವನಧೀನವೆಂದು ಅವನಲ್ಲಿ ತನ್ನ ಭಾರವನ್ನಿಟ್ಟಿರುತ್ತಾನೆ.

ಸೂತ್ರಂ - ತನ್ನೈಪ್ಪೇಣವುಂ ಪಣ್ಣುಂ, ಧರಿಕ್ಕವುಂ ಪಣ್ಣುಂ ॥ ೫೨ ॥

ಶ್ಲೋಕಃ – ❋ ಭಗವದ್ಭಕ್ತಿಪಾರವಶ್ಯಭೇದಂ ದರ್ಶಯತೀಹಕ್ಕ ಯತ್ ।
ಸ್ವಪ್ರಯತ್ನ ಪ್ರವೃತ್ತ್ಯಾ ಸ್ಯಾದಲಂಕಾರಸ್ತಿರಸ್ಕ್ರಿಯಾ ॥ ೭೭ ॥

ತಾತ್ಪರ್ಯ – ಈ ರೀತಿ ಪ್ರಪತ್ತಿನಿಷ್ಠೆಯೂ ಹೋದ ಮೇಲೆ ಭಕ್ತಿಪಾರವಶ್ಯದಿಂದುಂಟಾಗುವ ಅವಸ್ಥಾ ಭೇದವನ್ನು ಇದರಲ್ಲಿ ಹೇಳುತ್ತಾರೆ, ಭಗವಂತನು ಬರದೇ ಇರಲು ಅವನು ಶೀಘ್ರವಾಗಿ ತನ್ನ ಹತ್ತಿರ ಬರುವುದಕ್ಕನುಗುಣವಾದ ಅಲಂಕಾರವನ್ನು ಮಾಡಿಕೊಳ್ಳುವುದು, ಅವನು ಹತ್ತಿರ ಬಂದಾಗ, ನೀನು ಸಾವಕಾಶವಾಗಿ ಬಂದೆಯಲ್ಲವೇ, ಆದ್ದರಿಂದ ನೀನು ಬರಬೇಕಾದ್ದಿಲ್ಲ ಹೊರಟು ಹೋಗು ಎಂದು ಅವನನ್ನು ತಿರಸ್ಕರಿಸಿ ಅತ್ಮಧಾರಣೆ ಮಾಡಿಕೊಳ್ಳುವುದು, ಇವೆಲ್ಲವೂ ಉಂಟಾಗುವುವು.

ಸೂತ್ರಂ - ಇಂದ ಸ್ವಭಾವ ವಿಶೇಷಂಗಳ್, ಕಲ್ಯಾಣ ಗುಣಂಗಳಿಲುಂ, ತಿರುಚ್ಚರಂಗಳಿಲುಂ, ತಿರುನಾಮಂಗಳಿಲುಂ, ತಿರುಕ್ಕುಳಲೋಶೈಯಿಲುಂ, ಕಾಣಲಾಂ ॥ ೫೩ ॥

ಶ್ಲೋಕಃ – ❋ ಶುಭಂ ಯುಗುಣ ಸಂತತೌ ಭಗವತಶ್ಚರೇಷುಕ್ರಮಾ
ತ್ಸಹಸ್ರ ಶುಭನಾಮ ಸುಪ್ರಥಿತ ವೇಣು ನಾದೇಷು ಚ ।
ಪರಸ್ಪರ ವಿರೋಧ ಭಾಗ್ಭವತಿ ಚೇತನಾನಾಮಯಂ
ಸ್ವಭಾವ ಇಹದರ್ಶಯತ್ಯಮಿತ ಭಕ್ತ ಸೂಕ್ತ್ಯಾದಿಭಿಃ ॥ ೭೮ ॥

ತಾತ್ಪರ್ಯ – ಹಿಂದೆ ಭಕ್ತಿಪರವಶತೆಯು, ಭಗವಂತನನ್ನು ಬರಮಾಡಿಕೊಳ್ಳುವುದಕ್ಕಾಗಿ ಅಲಂಕಾರಾದಿಗಳನ್ನು ಮಾಡಿಸುವುದು, ಅವನು ಪತ್ರಿರ ಬಂದರೆ ಅವನನ್ನು ತಿರಸ್ಕರಿಸುವುದು, ಇವೆರಡೂ ಭಗವಂತನ ವಿಷಯದಲ್ಲಿ ಹೇಳಿದರು. ಈ ಸೂತ್ರದಲ್ಲಿ ಅವನ ವಿಷಯದಲ್ಲಿ ಮಾತ್ರವಲ್ಲ, ಅವನಿಗೆ ಸೇರಿದ ವಸ್ತುಗಳಲ್ಲೂ ಈ ರೀತಿಯಾಗುವುದೆಂದು ಹೇಳುತ್ತಾರೆ. 'ಕೋವಿಂದನ್ ಕುಣಂ ಪಾಡಿ' 'ಆವಿಕಾತ್ತಿರುಪ್ಪೇನೇ' ಎಂದು ಹೇಳಿರುವುದರಿಂದ ಧಾರಕವಾಗುವುದು. 'ವಲ್ವಿನಿಯೇನೈಯೀರ್ ಇನ್ನ್ರ್ ಕುಣಂಗಳು ಡೈಯಾಯ್' ಎಂದು ಹೇಳುವುದರಿಂದ ಬಾಧಕವೂ ಆಗುವುದು. 'ಶರಂಗಳಾಂಡ ತಂಡಾವುರೈಕ್ಕಣ್ಣನುಕ್ಕನ್ನಿಯೆನ್ಮನಂತಾಂಳ್ದ ನಿಲ್ಲಾದೇ' ಎಂದು ಹೇಳಿರುವುದರಿಂದ ಧಾರಕವಾಗುವುದು. 'ಶರಂಗಳೇ ಕೊಡಿತಾಯಡುಇನ್ನ್ರ್' ಎಂದು ಹೇಳಿರುವುದರಿಂದ ಬಾಧಕವೂ ಆಗುವುದು. 'ತಿರುಮಾಲೈಪ್ಪಾಡಕೇಟ್ಟು ಮಡಕ್ಕಿಳಯೈ ಕೈಕ್ಕೂಪ್ಪಿ ವಣಂಗಿನಾಳೇ' ಎಂದು ಅವನ ನಾಮಗಳ ವಿಷಯದಲ್ಲಿ ಹೇಳಿರುವುದರಿಂದ ಧಾರಕವಾಗಿರುವುದು. 'ಕಣ್ಣನ್ನಾಮಮೇಕುಳರಿ ಕೊನ್ನೀರ್' ಎಂದು ಹೇಳಿರುವುದರಿಂದ ಬಾಧಕವಾಗಿರುವುದು. 'ಎಂಗಳುಕ್ಕೇ ಒರುನಾಳ್ ವಂದೂದ ಉನ್ಕುಳಲಿನ್ನಿಶೈ ಪೋತರಾತೇ' ಎಂದು ಕೊಳಲುಗಾನದ ವಿಷಯದಲ್ಲಿ ಹೇಳಿರುವುದರಿಂದ ಧಾರಕವಾಗಿರುವುದು. 'ಅವನುಡೈತೀಂಕುಳಲೀರು ಮಾಲೋ' ಎಂದು ಹೇಳಿರುವುದರಿಂದ ಬಾಧಕವೂ ಆಗಿರುವುದು. ಈ ರೀತಿ ಭಗವಂತನ ಕಲ್ಯಾಣಗುಣಾದಿಗಳು ಭಕ್ತಿಪಾರವಶ್ಯದಿಂದ ಧಾರಕವಾಗಿಯೂ, ಬಾಧಕವಾಗಿಯೂ ಕಂಡುಬರುವುದು.

ಸೂತ್ರಂ - ಇತುಂ ತನ್ನೈಪ್ಪಾತ್ತಾಲ್ ಪಿತಾವುಕ್ಕು ಪುತ್ರನ್ ಎಳುತ್ತುವಾಂಗು ಮಾಪ್ಪೋಲೇ ಯಿರುಪ್ಪತೊನ್ನು ॥ ೫೪ ॥

ಶ್ಲೋಕಃ – ❋ ಸ್ವರಕ್ಷಣೇ ಪ್ರಪತ್ತಿಸ್ತು ಪುತ್ರ ಸರ್ವಧುರಂಧರಾತ್ ।
ಪಿತುಸ್ಸ್ವರಕ್ಷಾಲೇಖಿಸ್ಸಾತ್ಪ್ರಾರ್ಥಿತಸ್ಸೂನುನೇವಸಾ ॥ ೭೯ ॥

ತಾತ್ಪರ್ಯ – ಹಿಂದೆ ಪ್ರಪತ್ತಿಯು ಉಪಾಯವೆಂದು ಶಾಸ್ತ್ರಗಳಲ್ಲಿ ಹೇಳಿರುವುದರಿಂದ, ಪ್ರಪತ್ತಿಯನ್ನು ಉಪಾಯವನ್ನಾಗಿ ನೆನೆಸಿದ ಪಕ್ಷದಲ್ಲಿ ಉಂಟಾಗುವ ದೋಷವನ್ನು ಇದರಲ್ಲಿ ತಿಳಿಸುತ್ತಾರೆ. ಭಗವದ್ವಿಷಯದಲ್ಲಿ ಮಾಡುವ ಪ್ರಪತ್ತಿಯನ್ನು ಉಪಾಯವನ್ನಾಗಿ ಯೋಚಿಸಿದ ಪಕ್ಷದಲ್ಲಿ, ಬಾಲ್ಯದಿಂದಲೂ ತನ್ನ ಪುರೋಭಿವೃದ್ಧಿಯನ್ನು ಚಿಂತಿಸುತ್ತಾ ರಕ್ಷಿಸುತ್ತಲಿರುವ ತಂದೆಯ ಕೈಯಿಂದ ಮಗನು ನನ್ನನ್ನು ರಕ್ಷಿಸುತ್ತೇನೆಂದು ಪತ್ರ ಬರೆದುಕೊಡು ಎಂದು ಕೇಳಿದರೆ ಹೇಗೋ ಆದೇ ರೀತಿ, 'ನಾನು ಪ್ರಪತ್ತಿಮಾಡಿದ್ದೇನೆ. ನೀನು ನನ್ನನ್ನು ರಕ್ಷಿಸಬೇಕು' ಎಂದು ನಮ್ಮ ಸರ್ವ ರಕ್ಷಣ ಭಾರವನ್ನೂ ಹೊತ್ತಿರುವ ಭಗವಂತನನ್ನು ಕೇಳಿದಂತಾಗುವುದು. ಇದರಿಂದ, ಅಕಾರವಾಚ್ಯನಾದ ಭಗವಂತನಿಗೂ ಮಕಾರವಾಚ್ಯನಾದ ಚೇತನನಿಗೂ ಉಂಟಾದ ಸಂಬಂಧಕ್ಕೆ ಅವದ್ಯವುಂಟಾಗುವುದು.

ಸೂತ್ರಂ – ಇದುತನಕ್ಕು ಸ್ವರೂಪಂ ತನ್ನೈಪ್ಪೊರಾದೊಳಿಹಯ್ಯೆ ॥ ೫೫ ॥

ಶ್ಲೋಕಃ – ✱ ಪ್ರಪತ್ತೇಸ್ತು ಸ್ವರೂಪಂ ಸ್ಯಾದಸಾಧಾರಣ ರೂಪಭಾಕ್ ।
ಸ್ವಸ್ಮಿನ್ನುಪಾಯತಾಜ್ಞಾನ ಸಹಿಷ್ಣುತ್ವಂ ನಹೀತಿಯತ್ ॥ ೮೦ ॥

ತಾತ್ಪರ್ಯ – ಹಾಗಾದರೆ ಪ್ರಪತ್ತಿಯ ಸ್ವರೂಪವೇನೆಂದರೆ, ತನ್ನನ್ನು ಉಪಾಯವನ್ನಾಗಿ ಎಣಿಸದೇ ಇರುವಿಕೆಯೇ ಸ್ವರೂಪವು. ಆಪಾತತಃ ನೋಡಿದರೆ ಪ್ರಪತ್ತಿಯು ಉಪಾಯವಾಗಿ ತೋರುವುದು. ಆದರೆ ಅದನ್ನು ಪ್ರಪತ್ತಿಯು ಸಹಿಸುವುದಿಲ್ಲ.

ಸೂತ್ರಂ - ಅಂಗಂ ತನ್ನೈಯೊಳಿಂದವತ್ತೈಪ್ಪೊರಾದೊಳಿಹ್ಯೆ ॥ ೫೬ ॥

ಶ್ಲೋಕಃ – ✱ ಯತ್ಸಾಂಗಂ ತತ್ಸಾಧನಂಸ್ಯಾದಿತಿ ನ್ಯಾಯೋ ನಹೀಹಯತ್ ।
ನಿವೃತಿ ರೂಪಾಂಗತಯಾತ್ವನುಪಾಯತ್ವ ಸೂಚಕಂ ॥ ೮೧ ॥

ತಾತ್ಪರ್ಯ – ಹೀಗಾದ ಪಕ್ಷದಲ್ಲಿ, ಚರಮಶ್ಲೋಕದಲ್ಲಿ ಈ ಪ್ರಪತ್ತಿಯನ್ನು ಸಾಂಗವಾಗಿ ವಿಧಿಸಿದೆಯಲ್ಲವೇ? 'ಯದ್ಯತ್ಸಾಂಗಂ ತತ್ತತ್ಸಾಧನಂ' ಎಂಬ ನ್ಯಾಯವಿರುವುದರಿಂದ, ಈ ಪ್ರಪತ್ತಿಯೂ ಸಾಧನವಾಯಿತಲ್ಲ ಎಂದರೆ, ಸ್ವೀಕಾರ ರೂಪವಾದ ಪ್ರಪತ್ತಿಯು ಚೇತನರ ಪ್ರವೃತ್ತಿಗಳಲ್ಲಿ ಒಂದನ್ನೂ ಸಹಿಸಲಾರದು. ಅದೂ ಅಲ್ಲದೆ ಈ ಪ್ರಪತ್ತಿಯ ಅಂಗವು ನಿವೃತ್ತಿರೂಪವಾದ್ದರಿಂದ ಪ್ರಪತ್ತಿಯು ಉಪಾಯವಾಗಲಾರದು.

ಸೂತ್ರಂ - ಉಪಾಯಂ ತನ್ನೈಪ್ಪೊರುಕ್ಕುಂ ॥ ೫೭ ॥

ಶ್ಲೋಕಃ – ✱ ವಿಘ್ನೋರುಪಾಯತೋಕ್ತಿಸ್ತು ಯುಕ್ತಾಸದ್ಬಿರುದೀರಿತಾ ।
ಇಷ್ಟಪ್ರಾಪ್ತಿಮನಿಷ್ಟಸ್ಯ ಸ್ವಯಂ ನಾಶಂ ಕರೋತಿಯತ್ ॥ ೮೨ ॥

ತಾತ್ಪರ್ಯ – ಉಪಾಯವು ಯಾವುದೆಂದರೆ ಭಗವಂತನೇ ಉಪಾಯವು ಎಂದು ಹೇಳುತ್ತಾರೆ. ನಮ್ಮ ಇಷ್ಟವನ್ನು ನೆರವೇರಿಸಿಕೊಡುವನು ಅವನೇ, ಅನಿಷ್ಟವನ್ನು ಪರಿಹರಿಸುವನೂ ಅವನೇ. ಆದ್ದರಿಂದ ಭಗವಂತನನ್ನೇ ಉಪಾಯವನ್ನಾಗಿ ಹೊಂದುವುದೇ ಉಚಿತವು.

ಸೂತ್ರಂ - ಉಪಾಯಾಂತರವಿರಂಡ್ಡೈಯುಂ ಪೊರುಕ್ಕುಂ ॥ ೫೮ ॥

ಶ್ಲೋಕಃ – ✱ ಸಾಧ್ಯೋಪಾಯಸ್ಸ್ವತಂತ್ರಾಣಾಂ ಸ್ವಯತ್ನೇನ ಚ ಕರ್ಮಿಣಾಂ ।
ಮೋಕ್ಷಸಾಧನತೋಕ್ತ್ಯಾ ಚ ಶಾಸ್ತ್ರೇ ಸ್ವಸ್ಮಿನ್ನುಪಾಯತಾಂ ॥ ೮೩ ॥

ಸ್ವೋತ್ಪತ್ತ್ಯಾದಿ ಪ್ರವೃತ್ತ್ಯಂಗ ಸಾಪೇಕ್ಷಸ್ಸಹತೇಽಪರಂ ।
ಅನನ್ಯಥಾ ಚ ಭಕ್ತ್ಯೈವಲಭ್ಯ ಇತ್ಯತ ಈರಿತಂ ॥ ೮೪ ॥

ತಾತ್ಪರ್ಯ – ಸಿದ್ಧೋಪಾಯ ವ್ಯತಿರಿಕ್ತವಾದ ಸಾಧ್ಯೋಪಾಯವು ತನ್ನ ಪಾರತಂತ್ರ್ಯಜ್ಞಾನವಿಲ್ಲದೆ ತನ್ನ ಪ್ರಯತ್ನದಲ್ಲೇ ನಿಷ್ಠರಾಗಿರುವವರಿಗೆ ಮೋಕ್ಷಸಾಧನವೆಂದು ಶಾಸ್ತ್ರದಲ್ಲಿ ಹೇಳಿರುವುದರಿಂದ, ತನ್ನಲ್ಲಿ ಉಪಾಯತ್ವಬುದ್ಧಿ ಸಹವಾಗಿಯೂ ಪ್ರವೃತ್ತಿರೂಪಾಂಗ ಸಾಪೇಕ್ಷವಾಗಿಯೂ ತನಗಿಂತಲೂ ವ್ಯತಿರಿಕ್ತವಾದ್ದನ್ನು ಸಹಿಸುತ್ತದೆ. ಆದ್ದರಿಂದಲೇ 'ಭಕ್ತ್ಯೈಲಭ್ಯಸ್ತ್ವನನ್ಯಥಾ' ಎಂದು ಹೇಳಿರುವುದು.

ಸೂತ್ರಂ - ಇದು ಇರಂಡ್ಯೆಯುಂ ಪೊರಾದು ॥ ೫೯ ॥

ಶ್ಲೋಕಃ – ❋ ಉಪಾಯತ್ವಂ ಪ್ರಪತ್ತೇಸ್ಸ್ಯಾದಸ್ಯಾನೈವ ಕದಾಚನ ।
ನಿವೃತ್ತಿಸಾಧ್ಯತಾ ರೂಪಹೇತುಭಿಸ್ಸಾದ್ವಯಾ ಸಹಾ ॥ ೮೫ ॥

ತಾತ್ಪರ್ಯ – ಈ ಪ್ರಪತ್ತಿಯೋ ಅಂದರೆ ಸಿದ್ಧೋಪಾಯತ್ವವನ್ನೂ, ಸಾಧ್ಯೋಪಾಯತ್ವವನ್ನೂ ಸಹಿಸಲಾರದು.

ಸೂತ್ರಂ - ಫಲತ್ತುಕ್ಕು ಆತ್ಮಜ್ಞಾನಮುಮಪ್ರತಿಷೇಧಮುಮೇ ವೇಂಡುವತು ॥ ೬೦ ॥

ಶ್ಲೋಕಃ – ❋ ಸ್ವಸ್ವರೂಪಪರಿಜ್ಞಾನಂ ನಿರುಪಾಧಿಕರಕ್ಷಕೇ ।
ತಸ್ಮಿನ್ನಪ್ರತಿಷೇಧೋಕ್ತಿಃ ಫಲಸ್ಯಾಪೇಕ್ಷಿತಂ ದ್ವಯಂ ॥ ೮೬ ॥

ತಾತ್ಪರ್ಯ – ಪ್ರಪತ್ತಿಯು ಉಪಾಯವಾಗದೇ ಇದ್ದಪಕ್ಷದಲ್ಲಿ, ಫಲಸಿದ್ಧಿಯು ಹೇಗೆ ಉಂಟಾಗುವುದು ಎಂದರೆ ಫಲಸಿದ್ಧಿಸುವ ಕ್ರಮವನ್ನು ತಿಳಿಸುತ್ತಾರೆ. ಅವನಿಗೇ ನಾನು ಶೇಷಭೂತನು, ಅವನಿಂದಲೇ ನಾನು ರಕ್ಷಿಸಲ್ಪಡುವೆನು ಎಂಬ ಆತ್ಮಜ್ಞಾನವೂ, ನಿರುಪಾಧಿಕಶೇಷಿಯಾದ ಭಗವಂತನು ನಾನು ನಿನ್ನನ್ನು ರಕ್ಷಿಸುತ್ತೇನೆ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳದೆ ನಾನೇ ನನ್ನನ್ನು ರಕ್ಷಿಸಿಕೊಳ್ಳುವೆನು ಎಂದು ತಿರಸ್ಕರಿಸದೇ ಇರುವಿಕೆಯೂ, ಇವೆರಡೂ ಇದ್ದರೆ ಸಾಕು, ಫಲವು ತಾನಾಗಿಯೇ ಸಿದ್ಧಿಸುವುದು.

ಸೂತ್ರಂ - ಅಲ್ಲಾದ ಪೋದು ಬಂಧತ್ತುಕ್ಕುಂ ಪೂರ್ತಿಕ್ಕುಂ ಕೊತ್ತ್ಯೆಯಾಂ ॥ ೬೧ ॥

ಶ್ಲೋಕಃ – ❋ ಫಲಸಾಧನ ಬುದ್ಧ್ಯಾ ಯತ್ಕಿಂಚಿತ್ಕುರ್ವೀತ ಚೇನ್ನರಃ ।
ನಿರುಪಾಧಿಕ ಶೇಷಿತ್ವ ಸ್ವೋಪಾಯತ್ವೋಭಯಸ್ಯ ಚ ॥ ೮೭ ॥

ತದಾ ನಾರಾಯಣಸ್ಯ ಸ್ಯಾತ್ಕುಂಠನಂ ತನ್ಮನೀಷಿಣಾ ।
ತಸ್ಮಿನ್ನ್ಯಸ್ತ ಭರೇಣೈವ ಭವಿತವ್ಯಂ ಸದಾ ಹರೌ ॥ ೮೮ ॥

ತಾತ್ಪರ್ಯ – ಅದೂ ಅಲ್ಲದೆ ಫಲಸಾಧನವಾಗಿ ಏನಾದರೂ ಈ ಚೇತನನು ಮಾಡಬೇಕಲ್ಲವೇ ಅಂದರೆ ಅದರಿಂದುಂಟಾಗುವ ಅವದ್ಯವನ್ನು ತಿಳಿಸುತ್ತಾರೆ. ಫಲಸಾಧನವಾಗಿ ಈ ಚೇತನನು ಏನಾದರೂ ಕೆಲಸ ಮಾಡಿದ ಪಕ್ಷದಲ್ಲಿ ಭಗವಂತನ ನಿರುಪಾಧಿಕ ಶೇಷಿತ್ವಕ್ಕೂ ಈ ಚೇತನನ ಪ್ರವೃತ್ತಿಯೊಂದನ್ನೂ ಅಪೇಕ್ಷಿಸದೇ ಇರುವ ನಿರಪೇಕ್ಷೋಪಾಯತ್ವಕ್ಕೂ ಕುಂದುಂಟಾಗುವುದು. ಆದ್ದರಿಂದ ಭಗವಂತನಲ್ಲೇ ಇಡಲ್ಪಟ್ಟ ತನ್ನ ಸರ್ವವಿಧ ಭಾರವುಳ್ಳವನಾಗಿ ಜ್ಞಾನಿಯಾದವನು ಇರತಕ್ಕದ್ದು.

ಸೂತ್ರಂ - ಆಪತ್ತ್ಯೈ ಪೋಕ್ಕಿಕ್ಕೊಳ್ಳುಮಿರೋವೆನ್ನು ಭ್ರಮಿತ್ತು
ಅತ್ತೈ ವಿಳೈತ್ತುಕ್ಕೊಳ್ಳಾದೊಳಿಹ್ಯೆಯೇ ವೇಂಡುವದು ॥ ೬೨ ॥

ಶ್ಲೋಕಃ – ❋ ಸರ್ವೇಶ್ವರಂ ವಶೀಕರ್ತುಂ, ಸಂಸಾರಾಬ್ಧಿ ತಿತೀರ್ಷಯಾ ।
ಭ್ರಮಾತ್ಯಪತ್ತಿಂ ಯಃ ಕುರ್ಯಾತ್ತತ್ಸ್ವರೂಪ ಕ್ಷತಿರ್ಭವೇತ್ ॥ ೮೯ ॥

ತಾತ್ಪರ್ಯ – ಈ ಚೇತನನು ಸಂಸಾರವೆಂಬ ಸಮುದ್ರವನ್ನು ದಾಟಿ ಭಗವಂತನನ್ನು ಸೇರಬೇಕೆಂಬ ಇಚ್ಛೆಯಿಂದ ಆ ಭಗವಂತನನ್ನು ವಶೀಕರಿಸುವುದಕ್ಕಾಗಿ ಪ್ರಪತ್ತಿ ಮಾಡಬೇಡವೇ ಅಂದರೆ, ಅದಕ್ಕೆ ಹೇಳುತ್ತಾರೆ. ಈ ಸಂಸಾರವೆಂಬ ಆಪತ್ತನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಭ್ರಮಿಸಿ ಈ ಚೇತನನು ಮಾಡುವ

ಪ್ರಪತ್ತಿಯಿಂದ ಇನ್ನೊಂದು ಆಪತ್ತನ್ನು ಹೊಂದಿದಂತಾಗುವುದು. ಪಾರತಂತ್ರ್ಯ ಸ್ವರೂಪಹಾನಿಯೇ ಅವನಿಗೆ ಆಪತ್ತಲ್ಲವೇ, ಆದ್ದರಿಂದ ಈ ಚೇತನನು ಸಂಸಾರ ನಿವೃತ್ತಿಗಾಗಿ ಏನನ್ನೂ ಮಾಡದೆ ಭಗವಂತನಲ್ಲಿ ನ್ಯಸ್ತಭರನಾಗಿರಬೇಕು.

ಸೂತ್ರಂ - ರಕ್ಷಣತ್ತುಕ್ಕು ಅಪೇಕ್ಷಿತಂ ರಕ್ಷ್ಯತ್ವಾನುಮತಿಯೇ ॥ ೬೩ ॥

ಶ್ಲೋಕಃ - ❋ ರಕ್ಷಕೋಹಮಿತಿ ಚೇದಿಹೋಚ್ಯತೇ
ಶ್ರೀಮತಾ ಭಗವತಾ ತಥಾಸ್ತ್ವಿತಿ ।
ರಕ್ಷ್ಯತಾನುಮತಿರೇವ ಕಾಂಕ್ಷಿತಾ
ರಕ್ಷಣೇ ಭವತಿ ಚೇತನಸ್ಯ ಹಿ ॥ ೯೦ ॥

ತಾತ್ಪರ್ಯ - ಈ ಚೇತನನು ಭಗವಂತನನ್ನುದ್ದೇಶಿಸಿ, ನೀನು ನನ್ನನ್ನು ಕಾಪಾಡೆಂದು ಪ್ರಾರ್ಥಿಸಿದರಲ್ಲವೇ ಅವನು ರಕ್ಷಿಸುವುದು ಎಂದರೆ, ಅದಕ್ಕೆ ಹೇಳುತ್ತಾರೆ. ಭಗವಂತನು, ನಾನು ನಿನ್ನನ್ನು ರಕ್ಷಿಸುವೆನೆಂದು ಹೇಳಿದರೆ, ಈ ಚೇತನನು ನನ್ನನ್ನು ನಾನೇ ರಕ್ಷಿಸಿಕೊಳ್ಳುವೆನು, ನೀನು ರಕ್ಷಿಸಬೇಕಾಗಿಲ್ಲವೆಂದು ನಿಷೇಧಿಸದೆ, ಹಾಗೆಯೇ ಆಗಲಿ ಎಂದು ಅನುಮತಿಸಿದರೆ ಸಾಕು, ಇವನಿಗೆ ರಕ್ಷಣೆ ಉಂಟಾಗುವುದು.

ಸೂತ್ರಂ - ಎಲ್ಲಾ ವುಪಾಯತ್ತುಕ್ಕುಂ ಪೊದುವಾ ಹೈಯಾಲುಂ, ಚೈತನ್ಯ ಕಾರ್ಯ ಮಾಹೈಯಾಲುಂ,ಪ್ರಾಪ್ತಿ ದಶೈಯಿಲು ಮನುವರ್ತಿಕ್ಕೈಯಾಲುಂ, ಸ್ವರೂಪಾತಿರೇಕಿಯಲ್ಲಾ ಮೈಯಾಲುಂ, ಅಚಿದ್ವ್ಯಾವೃತ್ತ ವೇಷತ್ತೈ ಸಾಧನಮಾಕ್ಕ ವೊಣ್ಣಾತು ॥ ೬೪ ॥

ಶ್ಲೋಕಃ - ❋ ಸರ್ವೋಪಾಯ ಸಾಧಾರಣ್ಯಾತ್ತಥಾ ಚೈತನ್ಯ ಕಾರ್ಯತಃ ।
ಪ್ರಾಪ್ತಾಪ್ಯನುವರ್ತಿತ್ವಾತ್ಸಾಧನತ್ವಂ ನ ಸಂಮತೇಃ ॥ ೯೧ ॥

ತಾತ್ಪರ್ಯ - ಈ ಚೇತನನು ಅನುಮತಿಸಿದರೆ ಸಾಕು, ಅವನು ರಕ್ಷಿಸುವನು ಎಂದು ಹೇಳಿದ ಪಕ್ಷದಲ್ಲಿ, ಆ ಅನುಮತಿಯು ಸಾಧನವಾದಂತಾಯಿತಲ್ಲವೇ ಎಂದರೆ, ಅದು ಸಾಧನವಾಗುವುದಿಲ್ಲವೆಂದು ಹೇಳುತ್ತಾರೆ. ಭೋಗಮೋಕ್ಷೋಪಾಯಗಳಲ್ಲಿ ಯಾವುದೋ ಒಂದನ್ನು ಅನುಷ್ಠಿಸುವವನಿಗೂ "ನೀನು ಈ ಉಪಾಯವನ್ನು ಅನುಷ್ಠಿಸು" ಎಂದು ಹೇಳಿದರೆ ಹಾಗೆಯೇ ಮಾಡುವೆನೆಂದು ಅನುಮತಿಪೂರ್ವಕವಾಗಿ ಅದರಲ್ಲಿ ಸಕ್ತನಾಗುವನಾದ್ದರಿಂದ ಸಕಲೋಪಾಯಗಳಿಗೂ ಸಾಧಾರಣವಾಗಿರುವುದು. ಆದ್ದರಿಂದ ಅನುಮತಿಗೆ ಫಲಸಾಧನತ್ವವಿಲ್ಲ. ರಕ್ಷ್ಯತ್ವವು ಚೇತನಾಚೇತನ ಸಾಧಾರಣವಾಗಿರುವುದು. ಅಚೇತನಕ್ಕೆ ಜ್ಞಾನವಿಲ್ಲದಿರುವುದರಿಂದ ಅನುಮತಿಸಲು ಶಕ್ತಿಯಿಲ್ಲ. ಚೇತನನಿಗೆ ಜ್ಞಾನವಿರುವುದರಿಂದ ಅನುಮತಿಸಲು ಶಕ್ತಿಯಿದೆ. ಆ ಅನುಮತಿಯು ಜ್ಞಾನಕಾರ್ಯವಾದ್ದರಿಂದ ಆ ಅನುಮತಿಯು ಸಾಧನವಾಗುವುದಿಲ್ಲ. ಭಗವಂತನನ್ನು ಸೇರಿ, ನಿನ್ನ ಇಚ್ಛೆಯಂತೆ ಅಂಗೀಕರಿಸಬಹುದೆಂಬ ಅನುಮತಿಯು ಸಾಧನವಾಗುವುದಿಲ್ಲ. ಅದು ಸಾಧನವಾಗುವ ಪಕ್ಷದಲ್ಲಿ ಫಲಸಿದ್ಧಿಯಲ್ಲಿ ಸಕ್ತನಾಗಬೇಕಾಗುವುದು. ಶೇಷಿಯಾದ ಭಗವಂತನು ಮಾಡುವ ರಕ್ಷಣೆಯನ್ನು ಒಪ್ಪಿಕೊಂಡಿರುವಿಕೆಯು ಶೇಷನಾದ ಚೇತನನ ಪಾರತಂತ್ರ್ಯ ಕೆಲಸವಾದ್ದರಿಂದ ಸ್ವರೂಪಾನುಗುಣವಾಯಿತು. ಚೇತನನಿಗೆ ಜ್ಞಾನವಿರುವುದರಿಂದ ಜ್ಞಾನಶೂನ್ಯವಾದ ಅಚಿತ್ತಿನಂತೆ ಸುಮ್ಮನಿರದೆ ಅನುಮತಿಸುವುದು ಜ್ಞಾನಕಾರ್ಯವಾಯಿತು. ಆದ್ದರಿಂದ ಅನುಮತಿಯು ಸಾಧನವಾಗಲಾರದು.

ಸೂತ್ರಂ - ಆಚಿದ್ವ್ಯಾವೃತ್ತಿಕ್ಕು ಪ್ರಯೋಜನಂ ಉಪಾಯತ್ತಿಲುಪಕಾರ
ಸ್ಮೃತಿಯುಂ ಉಪೇಯತ್ತಿಲುಹಪ್ಪುಂ ॥ ೬೫ ॥

ಶ್ಲೋಕಃ – ✱ ಸಿದ್ಧೋಪಾಯೋಪಕಾರಸ್ಯ ಸ್ಮರಣಂ ಕಮಲಾಪತೇಃ ।
ಕೈಂಕರ್ಯೇ ಭೋಗ್ಯತಾ ಬುದ್ಧಿರಚಿದ್ವ್ಯಾವೃತ್ತಿಜಂ ಫಲಂ ॥ ೯೨ ॥

ತಾತ್ಪರ್ಯ – ಈ ಅಚಿದ್ವ್ಯಾವೃತ್ತಿಯಿಂದ ತನಗೇನಾದರೂ ಪ್ರಯೋಜನವುಂಟೇ ಅಂದರೆ, ಆ ಪ್ರಯೋಜನವನ್ನು ಇದರಲ್ಲಿ ಹೇಳುತ್ತಾರೆ. 'ಎನ್ನೈತ್ತೀಮನಂಕಡುತ್ತಾಯ್' ಮರುವಿತ್ತೊಳುಂ ಮನಮೇತಂದಾಯ್ ಎಂದು ಹೇಳಿರುವಂತೆ ಸಿದ್ಧೋಪಾಯದ ಉಪಕಾರಸ್ಮರಣವೂ, 'ಉಹಂದು ಪಣಿಶೈದು' ಎಂಬಂತೆ ತಾನು ಭಗವಂತನಿಗೆ ಮಾಡುವ ಕೈಂಕರ್ಯದಲ್ಲಿ ಭೋಗ್ಯತೆಯು, ಆ ಕೈಂಕರ್ಯದಿಂದ ಭಗವಂತನು ಸಂತೋಷಪಡುವುದನ್ನು ನೋಡಿ ತಾನು ಸಂತೋಷಿಸುವುದು, ಇವೇ ಪ್ರಯೋಜನಗಳು.

ಸೂತ್ರಂ - ಉನ್ನತತ್ತಾಲೆನ್ನಿನ್ನೈಂದಿರುಂದಾಯ್, ಎನ್ನಿರ ಪಡಿಯೇ
ಪ್ರಾಪ್ತಿಕ್ಕುಪಾಯಮುಮವನ್ನಿನ್ನೈವು ॥ ೬೬ ॥

ಶ್ಲೋಕಃ – ಪ್ರಾಪ್ತ್ಯುಪಾಯಃ ಕಥಂ ತರ್ಹಿ ಚೇತನಸ್ಯ ಭವೇದಿಹ ।
ಇತಿಚೇಚ್ಛ್ರೀಪತೇರೇತಚ್ಚೇತನೋಜ್ಜೀವನ ಸ್ಮೃತಿಃ ॥ ೯೩ ॥

ತಾತ್ಪರ್ಯ – ಈ ಚೇತನನು ಮಾಡುವುದು ಉಪಾಯವಾಗಲಾರದೆಂದು ಹೇಳಿದ ಪಕ್ಷದಲ್ಲಿ, ಅವನನ್ನು ಹೊಂದಲು ಉಪಾಯ ಯಾವುದೆಂದರೆ, ಶಠಾರಿಮುನಿಗಳು ಅಪ್ಪಣೆಕೊಡಿಸಿದಂತೆ ಸರ್ವಜ್ಞನಾಗಿಯೂ, ಸರ್ವಶಕ್ತನಾಗಿಯೂ, ಪ್ರಾಪ್ತನಾಗಿಯೂ, ಪರಮ ದಯಾಳುವಾಗಿಯೂ ಇರುವ ಭಗವಂತನು ಚೇತನೋಜ್ಜೀವನವನ್ನು ಸ್ಮರಿಸುವುದೇ ಉಪಾಯವು.

ಸೂತ್ರಂ - ಅತುತಾನೆಪ್ಪೋದುಮುಂಡು ॥ ೬೭ ॥

ಶ್ಲೋಕಃ – ಸರ್ವಾವಸ್ಥಾ ಸಮುದ್ವಿಗ್ನ ಚೇತನೋಜ್ಜೀವನ ಸ್ಮೃತಿಃ ।
ಸರ್ವದಾಥಾ ವರ್ತತೇ ತಸ್ಯ ದಯಾಳೋಶ್ಚ್ರೀಪತೇ ಸ್ಮರಾ ॥ ೯೪ ॥

ತಾತ್ಪರ್ಯ – ಭಗವಂತನಿಗೆ ಈ ಚೇತನೋಜ್ಜೀವನ ಸ್ಮರಣವು ಸರ್ವಕಾಲದಲ್ಲೂ ಉಂಟು.

ಸೂತ್ರಂ - ಅದು ಫಲಿಪ್ಪದು ಇವನ್ ನಿನ್ನೈವು ಮಾರಿನಾಲ್ ॥ ೬೮ ॥

ಶ್ಲೋಕಃ – ✱ ಕದಾ ಫಲಿಷ್ಯತಿ ಶ್ರೀಶ ಸ್ಮರಣಂ ಚೇತನೇಷ್ವಿತಿ ।
ಯದಿ ಸ್ವರಕ್ಷಾ ಚಿಂತಾ ತು ತ್ಯಜ್ಯತೇ ಚೇತನೈರಿಹ ॥ ೯೫ ॥

ತಾತ್ಪರ್ಯ – ಹಾಗಾದರೆ ಇದುವರೆವಿಗೂ ಯಾತಕ್ಕಾಗಿ ಅವನ ಸ್ಮರಣವು ಫಲಿಸಲಿಲ್ಲವೆಂದರೆ ಅದಕ್ಕೆ ಹೇಳುತ್ತಾರೆ, ಭಗವಂತನ ಚೇತನವಿಷಯಕವಾದ ಸ್ಮರಣವು ಯಾವಾಗ ಫಲಿಸುತ್ತದೆ ಎಂದರೆ ಈ ಚೇತನನು ಯಾವಾಗ ತನ್ನ ರಕ್ಷಣೆಯ ಚಿಂತೆಯನ್ನು ಬಿಡುವನೋ ಆವಾಗ ಆ ಸ್ಮರಣವು ಫಲಿಸುವುದು.

ಸೂತ್ರಂ - ಅಂತಿಮ ಕಾಲತ್ತುಕ್ಕುತ್ತಂಜಂ ಇಪ್ಪೋದು ತಂಜಮೆನ್
ಎನ್ನಿರನಿನ್ನೈವು ಕುಲೈಹೈ ಎನ್ನುಜೀಯರರುಳಿಚ್ಚೆಯ್ವರ್ ॥ ೬೯ ॥

ಶ್ಲೋಕಃ – ✱ ತ್ರಿದಂಡೀ ಮದ್ಯತೀಪೃಷ್ಟೋ ರುಗ್ಣಾಂತೇ ವಾಸಿನಾ ತದಾ ।
ಅಮುಮೇವಾರ್ಥ ಮೂಚೇತತ್ಸ್ವರಕ್ಷಾ ಚಿಂತನಾಂ ತ್ಯಜೇತ್ ॥ ೯೬ ॥

ತಾತ್ಪರ್ಯ – ತ್ರಿದಂಡಿ ಸಂನ್ಯಾಸಿಯಾದ ನಂಜೀಯರು ಮೈಸ್ವಸ್ಥವಿಲ್ಲದಿರುವ ತನ್ನ ಶಿಷ್ಯರನ್ನು ನೋಡಲು ಅವರ ಮನೆಗೆ ಹೋಗಿರುವಾಗ ಆ ಶಿಷ್ಯರು, 'ಆಚಾರ್ಯರೆ, ಅಂತಿಮಕಾಲದಲ್ಲಿ ಉಜ್ಜೀವನವು ಅವನ ಸ್ಮರಣೆಯಿಂದಾಗುವುದು ಈವಾಗ ಹೇಗೆ ?' ಎಂದು ಕೇಳುತ್ತಲು, ಈವಾಗ ತನ್ನ ರಕ್ಷಣೆಯ ಚಿಂತೆಯನ್ನು ಬಿಟ್ಟಿರುವುದೇ ಎಂದು ಹೇಳಿದ ಆಪ್ತರ ವಚನವನ್ನು ದೃಷ್ಟಾಂತವನ್ನಾಗಿ ಹೇಳಿರುವರು. ಫಲಿತಾಂಶ ವೇನೆಂದರೆ ಸರ್ವೇಶ್ವರನು ಚೇತನೋಜ್ಜೀವನಕ್ಕಾಗಿ ಸ್ಮರಿಸುತ್ತಿರುವಾಗ, ಈ ಚೇತನನು ಸ್ವರಕ್ಷಣೆಯ ಚಿಂತೆಯನ್ನು ತ್ಯಜಿಸಬೇಕು.

ಸೂತ್ರಂ - ಪ್ರಾಪ್ತಾವುಂ, ಪ್ರಾಪಕನುಂ, ಪ್ರಾಪ್ತಿಕ್ಕುಹಪ್ರಾನುಮವನೇ ॥ ೭೦ ॥

ಶ್ಲೋಕಃ – ✱ ಪ್ರಾಪ್ತಾಚ ಪ್ರಾಪಕಶ್ಚೈವ ಪ್ರಾಪ್ತಿ ಭೋಕ್ತಾಹರಿರ್ಭವೇತ್ ।
ಏತೇನ ಚೇತನಸ್ಯ ಸ್ಯಾನ್ನ ಸ್ವಯತ್ನ ಫಲಾನ್ವಯಃ ॥ ೯೭ ॥

ತಾತ್ಪರ್ಯ – ಈ ಚೇತನನ ಸ್ಮರಣೆಯು ಬೇಕಾಗಿಲ್ಲವೆಂದು ಹೇಳಬಹುದೇ ಎಂದರೆ, ಅದಕ್ಕೆ ಹೇಳುತ್ತಾರೆ. ಈ ಚೇತನನು ಹಿಂದೆ ಹೇಳಿದ ಎಲ್ಲರದಲ್ಲೂ ಉಪಾಯತ್ವ ಬುದ್ಧಿಬಿಟ್ಟು ಸರ್ವೇಶ್ವರನೇ ಉಪಾಯವೆಂದು ನಿಷ್ಕರ್ಷಿಸಿದಾಗಲೇ ಪ್ರಾಪ್ತತ್ವವೂ, ಪ್ರಾಪ್ತಿಯಲ್ಲುಂಟಾದ ಭೋಗ್ಯತೆಯೂ ಉಪಾಯಭೂತನಾದ ಸರ್ವೇಶ್ವರನದೇ ಆಗಿದೆ. ಸ್ವಸ್ವಾಮಿತ್ವ ಸಂಬಂಧವು ಸ್ವತಸ್ಸಿದ್ಧವಾಗಿರುವುದರಿಂದ, ಈ ಆತ್ಮನನ್ನು ತಾನೇ ಹೊಂದಿಸುವನು, ಹೊಂದಿಸುವುದಕ್ಕೆ ಉಪಾಯವೂ ಅವನೇ. ಸ್ವಶ್ರಿತ ಲಾಭದಿಂದ ಸ್ವಾಮಿಯು ಸಂತೋಷಪಡುವಂತೆ ಸರ್ವಜ್ಞನಾಗಿಯೂ ಸರ್ವಶಕ್ತನಾಗಿಯೂ ಸತ್ಯಸಂಕಲ್ಪನಾಗಿಯೂ ನಿರಂಕುಶ ಸ್ವತಂತ್ರನಾಗಿಯೂ ಇರುವ ಸರ್ವೇಶ್ವರನು, ಆತ್ಮನನ್ನು ಪ್ರಾಪಿಸಲು ಸದವಕಾಶ ದೊರಕಿತಲ್ಲವೇ ಎಂದು ಈ ಆತ್ಮನಿಗೆ ನಿತ್ಯ ಭೋಕ್ತಾವಾದವನು ತಾನೇ ಆದ್ದರಿಂದ ಸಂತೋಷಿಸುವನು. ಹೀಗೆ ಹೇಳಿದ್ದರಿಂದ ಈ ಚೇತನನಿಗೆ ತನ್ನ ಪ್ರಯತ್ನದಲ್ಲಿ ಸ್ವಲ್ಪವೂ ಅನ್ವಯವಿಲ್ಲವೆಂದು ಹೇಳಿದಂತಾಯಿತು.

ಸೂತ್ರಂ - ಸ್ವಯತ್ನ ನಿವೃತ್ತಿ ಪಾರತಂತ್ರ್ಯಫಲಂ ಸ್ವಪ್ರಯೋಜನ ನಿವೃತ್ತಿ ಶೇಷತ್ವಫಲಂ ॥ ೭೧ ॥

ಶ್ಲೋಕಃ – ✱ ಸ್ವಯತ್ನಸ್ಯ ನಿವೃತ್ತಿಸ್ತು ಪಾರತಂತ್ರ್ಯ ಫಲಂ ಭವೇತ್ ।
ಪ್ರಯೋಜನ ನಿವೃತ್ತಿಸ್ತು ಶೇಷತ್ವ ಫಲಮೀರಿತಂ ॥ ೯೮ ॥

ತಾತ್ಪರ್ಯ – ಹಾಗಾದರೆ ಜ್ಞಾನಕಾರ್ಯವಾದ ಕರ್ತೃತ್ವಭೋಕ್ತೃತ್ವ, ಇವೆರಡೂ ಚೇತನದಾಗಿರುವುದರಿಂದ ತನ್ನ ಪ್ರಯತ್ನವನ್ನೂ, ಪ್ರಯೋಜನವನ್ನೂ ಬಿಡುವುದಕ್ಕಾಗುವುದೇ ಅಂದರೆ ಹೇಳುತ್ತಾರೆ. ಭಗವಂತನನ್ನು ಸೇರುವುದಕ್ಕೆ ಈ ಚೇತನನು ಯಾವ ಪ್ರಯತ್ನವನ್ನೂ ಮಾಡದೇ ಪರಾಧೀನನಾಗಿರಬೇಕಾದ್ದರಿಂದ, ಸ್ವಯತ್ನ ನಿವೃತ್ತಿಯು ಪಾರತಂತ್ರ್ಯದ ಫಲವು. ಭಗವಂತನಿಗೇ ಅತಿಶಯವನ್ನುಂಟುಮಾಡುವುದರಿಂದ ತನಗಾಗಿ ಯಾವ ಪ್ರಯೋಜನವನ್ನೂ ಅಪೇಕ್ಷಿಸಕೂಡದು. ಆದ್ದರಿಂದ ಪ್ರಯೋಜನ ನಿವೃತ್ತಿಯು ಶೇಷತ್ವ ಫಲವು.

ಸೂತ್ರಂ - ಪರಪ್ರಯೋಜನ ಪ್ರವೃತ್ತಿ ಪ್ರಯತ್ನ ಫಲಂ, ತದ್ವಿಷಯಂಪ್ರೀತಿ ಚೈತನ್ಯ ಫಲಂ ॥ ೭೨ ॥

ಶ್ಲೋಕಃ – ❋ ವಿಷ್ಣು ಕೈಂಕರ್ಯ ರೂಪಾ ಯಾ ಪ್ರವೃತ್ತಿಶ್ಚೇತನಸ್ಯ ಸಾ ।
ಪ್ರವೃತ್ತ್ಯುದ್ಯೋಗರೂಪೋತ್ಥ ಸ್ವಪ್ರಯತ್ನ ಪ್ರಯೋಜನಂ ॥ ೯೯ ॥

ಸ್ವಕೈಂಕರ್ಯ ಪ್ರಹೃಷ್ಟಸ್ಯ ವಿಷ್ಣೋರ್ವಿಷಯಿಣೀ ಚ ಯಾ ।
ಸಾ ಪ್ರೀತಿಶ್ಚೇತನಸ್ಯ ಸ್ಯಾಚ್ಚೈತನ್ಯಸ್ಯ ಪ್ರಯೋಜನಂ ॥ ೧೦೦ ॥

ತಾತ್ಪರ್ಯ – ಹಾಗಾದರೆ ಈ ಚೇತನನಿಗೆ ತನ್ನ ಪ್ರಯತ್ನ, ತನ್ನ ಪ್ರಯೋಜನ ಇವೆರಡರಲ್ಲೂ ಅನ್ವಯವಿಲ್ಲದ ಪಕ್ಷದಲ್ಲಿ ಚೇತನನ ಪ್ರಯತ್ನಕ್ಕೂ ಚೈತನ್ಯಕ್ಕೂ ಪ್ರಯೋಜನವೇನು ಎಂದರೆ ಹೇಳುತ್ತಾರೆ. ಭಗವಂತನ ಕೈಂಕರ್ಯರೂಪವಾದ ಪ್ರವೃತ್ತಿಯು ಈ ಚೇತನನ ಪ್ರವೃತ್ತ್ಯುದ್ಯೋಗರೂಪವಾದ ಪ್ರಯತ್ನಕ್ಕೆ ಪ್ರಯೋಜನವು. ಈ ಚೇತನನು ಮಾಡುವ ಕೈಂಕರ್ಯದಿಂದ ಅತ್ಯಂತ ಹರ್ಷಯುಕ್ತನಾದ ಭಗವಂತನ ವಿಷಯಕವಾದ ಪ್ರೀತಿಯು ಚೈತನ್ಯ ಪ್ರಯೋಜನವು. ಹೀಗೆ ಹೇಳಿದ್ದರಿಂದ ಪಾರತಂತ್ರ್ಯ ಶೇಷತ್ವಾನುಗುಣವಾದ ಪ್ರಯೋಜನವನ್ನು ತಿಳಿಸಿದಂತಾಯಿತು.

ಸೂತ್ರಂ – ಅಹಮರ್ಥತ್ವತ್ತುಕ್ಕು ಜ್ಞಾನಾನಂದಂಗಳ್ ತಟಸ್ಥಮೆನ್ನುಂಪಡಿ ದಾಸ್ಯಮಿರೇ ಅಂತರಂಗನಿರೂಪಕಂ. ॥ ೭೩ ॥

ಶ್ಲೋಕಃ – ❋ ಸ್ವರೂಪಮಣುಮಾತ್ರಂ ಸ್ಯಾದ್ಜ್ಞಾನಾನಂದೈಕ ಲಕ್ಷಣಂ ।
ತತ್ಪ್ರಾಪ್ಯಸ್ಯ ತು ಶೇಷತ್ವ ಮಂತರಂಗ ನಿರೂಪಕಂ ॥ ೧೦೧ ॥

ದಾಸ ಭೂತಾಸ್ಸ್ವತಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ ।
ನಾನ್ಯಥಾ ಲಕ್ಷಣಂ ತೇಷಾಂ ಬಂಧೇ ಮೋಕ್ಷೇ ತಥೈವ ಚ ॥ ೧೦೨ ॥

ತಾತ್ಪರ್ಯ – ಶೇಷತ್ವವೂ ಜ್ಞಾತೃತ್ವವೂ ಆತ್ಮಧರ್ಮವಾಗಿರುವಾಗ ಶೇಷತ್ವವನ್ನು ಪ್ರಧಾನವಾಗಿ ಹೇಳಿ ಇತರ ಜ್ಞಾತೃತ್ವಾದಿಗಳನ್ನು ತದನುಗುಣವಾಗಿ ಹೇಳಲು ಕಾರಣವೇನೆಂದರೆ ಅದಕ್ಕೆ ಹೇಳುತ್ತಾರೆ. ಅಹಂ ಎಂದರೆ ನಾನು ಎಂಬ ಬುದ್ಧಿಯಿಂದ ಹೇಳಲು ಯೋಗ್ಯವಾದ ಆತ್ಮವಸ್ತುವು, ಜ್ಞಾನಾನಂದವೆಂದರೆ ಪ್ರಕಾಶತ್ವಾನುಕೂಲತ್ವಾದಿಗಳು ಆ ಜೀವಾತ್ಮನ ಸ್ವರೂಪವು. ಅಣುಮಾತ್ರವಾಗಿದ್ದು ಜ್ಞಾನಾನಂದ ಲಕ್ಷಣದೊಡನೆ ಕೂಡಿರುವುದು. ಈ ಲಕ್ಷಣವು ಬಹಿರಂಗ ನಿರೂಪಕವಾಗಿರುವುದು. ಈ ಶೇಷತ್ವವೋ ಅಂದರೆ ಅಂತರಂಗ ನಿರೂಪಕವಾಗಿರುವುದು. ಶೇಷತ್ವವೆಂದರೆ, ದಾಸ್ಯ. ಆದ್ದರಿಂದಲೇ, 'ದಾಸ ಭೂತಾಸ್ಸ್ವತಸ್ಸರ್ವೇ' ಎಂದು ಹೇಳಿರುವುದು, ಸಮಸ್ತವಾದ ಜೀವಾತ್ಮಗಳೂ ತಾವಾಗಿಯೇ ಪರಮಾತ್ಮನಿಗೆ ದಾಸರಾಗಿದ್ದಾರೆ, ಆ ಜೀವಾತ್ಮರುಗಳಿಗೆ ಈ ಸಂಸಾರದಲ್ಲೂ ಮೋಕ್ಷದಲ್ಲೂ ಶೇಷತ್ವವನ್ನು ಬಿಟ್ಟು ಬೇರೆ ಲಕ್ಷಣವಿಲ್ಲವೆಂದರ್ಥವು.

ಸೂತ್ರಂ – ಇದು ತಾನ್ನಂದೇರಿಯನ್ನು. ॥ ೭೪ ॥

ಶ್ಲೋಕಃ – ❋ ಸ್ವಾಭಾವಿಕಮಿದಂ ದಾಸ್ಯಂ ಚೇತನಾನಾಂ ಹರೌ ಸದಾ ।
ಸ್ವೋಜ್ಜೀವನ ನಿದಾನಂ ತು ನಾಗಂತುಕಮಿದಂ ಭವೇತ್ ॥ ೧೦೩ ॥

ತಾತ್ಪರ್ಯ – ಈ ದಾಸ್ಯವು ಔಪಾಧಿಕವಾಗಿ ಬಂದಂತೆ ತೋರುವುದಾದ್ದರಿಂದ ಚೇತನನಲ್ಲಿ ದಾಸ್ಯವು ಆರೋಪಿತವಲ್ಲವೇ ಎಂದರೆ ಹೇಳುತ್ತಾರೆ. ಈ ದಾಸ್ಯವು ಚೇತನನಲ್ಲಿ ಆಗಂತುಕವಲ್ಲ, ಸ್ವಭಾವಸಿದ್ಧವಾದದ್ದು. 'ನಾನುಮುನಕ್ಕೇ ಪಳವಡಿಯೇನ್' ಎಂದಲ್ಲವೇ ಆಳ್ವಾರರು ಹೇಳಿರುವುದು.

സൂത്രം - സ്വാതംത്ര്യമുമന്യശേഷത്വമും വംദേരി. ॥ ೭೫ ॥

ശ്ലോകഃ – ✱ സ്വാതംത്ര്യമന്യ ശേഷത്വമജ്ഞാനാദുഭയം ഭവേത് ।
ആഗംതുകതയാ മത്സ്യേഷ്വാത്മപാത്യേക ലക്ഷണം ॥ ೧೦೪ ॥

താത്പര്യ – ഈ ശേഷത്വക്കി വിരോധി യാവുദെംദരെ ഹേളുത്താരെ. നാനേ സ്വതംത്രനു, പരതംത്രനല്ലവെംദു ഇരുവികെ മത്തു ഇതരരിഗെ ദാസനാഗിരുവികെ – ഇവെരഡൂ ചേതനനിഗെ ആരോപിതവാദുദു പാരതംത്ര്യക്കൂ ശേഷത്വക്കൂ വിരോധിയാഗിരുവുദു.

സൂത്രം - ശേഷത്വ വിരോധി സ്വാതംത്ര്യം, തച്ഛേഷത്വവിരോധി തദിതരശേഷത്വം. ॥ ೭೬ ॥

ശ്ലോകഃ – ✱ സ്വാതംത്ര്യം ചേതനാനാം തു നിരുണദ്ധി സ്വശേഷതാം ।
തച്ഛേഷത്വ വിരുദ്ധം സ്യാദന്യശേഷത്വമാത്മനാം ॥ ೧೦೫ ॥

താത്പര്യ – ഹിംദെ ഹേളിദ്ദന്നേ ദൃഢീകരിസി തിളിസുത്താരെ. നാനേ സ്വതംത്രനു എംദു നെനെദരെ അദു ശേഷത്വ വിരോധിയാഗുവുദു. ഇതരരിഗെ ദാസനാദ പക്ഷദല്ലി അദു ഭഗവച്ഛേഷത്വക്കേ വിരോധി യാഗുവുദു.

സൂത്രം - അഹംകാരമാഹിര ആപ്പ്യെ തുഡൈത്താല് ആത്മാവുക്കളിയാദപേര് അഡിയാന് എന്നിരേ ॥ ೭೭ ॥

ശ്ലോകഃ – ✱ അഹംകാരോ ദ്വിധാ ഭിന്നസ്സദേഹാത്മാഭിമാനതഃ ।
സ്വാതംത്ര്യ രൂപതസ്തം ച ഹ്യുപദേശാദ്ഗുരോസ്ത്യജേത് ॥ ೧೦೬ ॥

നിരപായം സ്വതസ്സിദ്ധമാത്മനാം ദാസ്യനാമ തത് ।
അത ഉക്തം സ്വതസ്സേവ്യ ദാസഭൂതാ ഹരേരിതി ॥ ೧೦೭ ॥

താത്പര്യ – ഇദരല്ലി ദാസനാമവേ ചേതനനിഗെ മുഖ്യവെംദു ഹേളുത്താരെ. ദാസ്യവന്നു മരെസുവ സ്വാതംത്ര്യവന്നു ബിട്ടു നാനു ഭഗവംതനിഗെ ദാസനു എംബ ദാസനാമവേ മുഖ്യവാദുദു. ആദ്ദരിംദലേ, 'ദാസഭൂതാസ്സ്വതസ്സേവ്യ' എംദു ഹേളിദെ.

സൂത്രം - ഗ്രാമകുലാദിഹളാല് വരുംപേര് അനർഥ ഹേതു. ॥ ೭೮ ॥

ശ്ലോകഃ – ✱ ഗ്രാമ വംശാദി സംപ്രാപ്തോ വ്യപദേശസ്തു യോന്യഥാം ।
സത്വഹംകാര ഹേതുസ്സ്യാദ്വ്യപദേശം, ത്യജേച്ചതം ॥ ೧೦೮ ॥

താത്പര്യ – ഇവനു ഇംഥാ ഗ്രാമദല്ലി വ്യപദിഷ്ടനു, ഇവനു ഇംഥാ ദൊഡ്ഡ വംശദല്ലി ഹുട്ടിദവനു എംബ പ്രസിദ്ധിയുംടുമാഡുവ ഹെസരുഗളു ഈ ചേതനനിഗെ അഹംകാരവന്നുംടുമാഡി അനർഥക്കെ കാരണവാഗുവുദു. അദ്ദരിംദ ദാസനാമദിംദലേ വ്യവഹരിസബേകു.

സൂത്രം - ഏകാംതീ വ്യപദേഷ്ടവ്യഃ. ॥ ೭೯ ॥

ശ്ലോകഃ – ✱ ഏകാംതീവ്യപദേഷ്ടവ്യോ നൈവ ഗ്രാമ കുലാദിഭിഃ ।
വിഷ്ണുനാ വ്യപദേഷ്ടവ്യസ്യ സർവം സ ഏവഹി ॥ ೧೦೯ ॥

ತಾತ್ಪರ್ಯ – ಹಿಂದೆ ಹೇಳಿದ್ದಕ್ಕೆ ಪ್ರಮಾಣವನ್ನು ತೋರಿಸುವರು. 'ಏಕಾಂತೇವ್ಯಪದೇಷ್ಟವ್ಯಃ' ಎಂದು ಗ್ರಾಮ, ವಂಶ ಇವುಗಳ ಸಂಬಂಧವನ್ನು ಮುಂದಿಟ್ಟುಕೊಂಡು ವ್ಯಪದೇಶ ಮಾಡಕೂಡದು. ಭಗವತ್ಸಂಬಂಧವನ್ನು ಮುಂದಿಟ್ಟು ವ್ಯಪದೇಶಿಸಬೇಕು. ಭಗವಂತನನ್ನೇ ನಂಬಿರುವವನಿಗೆ ಈ ಗ್ರಾಮ ಕುಲಾದಿಗಳು ಭಗವಂತನೇ ಆಗಿರುವನು.

ಇತಿ ಉಪಾಯ ವೈಭವ ಪ್ರಕರಣಂ ಸಮಾಪ್ತಮ್.

ಅಥ ಅಧಿಕಾರಿ ಶೋಧನಂ :

ಸೂತ್ರಂ - ಉಪಾಯತ್ತುಕ್ಕು, ಪಿರಾಟ್ಟಿಯ್ಯೈಯುಂ, ದ್ರೌಪದಿಯ್ಯೈಯುಂ, ತಿರುಕ್ಕಣ್ಣಮಂಗೈಯಾಂಡಾನೈಯುಂ, ಪೋಲೇಯಿರುಕ್ಕವೇಣುಂ, ಉಪೇಯತ್ತುಕ್ಕು ಇಳೈಯ ಪೆರುಮಾಳೈಯುಂ, ಪೆರಿಯವುಡೈಯಾರೈಯುಂ, ಪಿಳ್ಳೈತಿರುನರೈಯೂರರೈಯರೈಯುಂ, ಚಿಂತಯಂತಿಯ್ಯೈಯುಂ ಪೋಲೆ ಯಿರುಕ್ಕವೇಣುಂ ॥ ೮೦ ॥

ಶ್ಲೋಕಃ – ❋ ಉಪಾಯಸ್ಯ ತು ಸೀತೇವ ದ್ರೌಪದೀವ ಚ ಚೇತನಃ ।
ಭವೇದತ್ರ ದೃಢಪ್ರಜ್ಞಃ ಕಣ್ಣಮಂಗೈ ಪ್ರಭುರ್ಯಥಾ ॥ ॥ ೧೧೦ ॥

ಸೌಮಿತ್ರಿವದುಪೇಯಸ್ಯ ಜಟಾಯುರಿವ ಚೇತನಃ ।
ವಿಜ್ಞಪ್ತಿಕರವಚ್ಚೈವ ಚಿಂತಯಂತೀವ ವರ್ತಯೇತ್ ॥ ॥ ೧೧೧ ॥

ತಾತ್ಪರ್ಯ – ಇದರಲ್ಲಿ ಉಪಾಯನಿಷ್ಠರಾದ ಅಧಿಕಾರಿಗಳನ್ನೂ, ಉಪೇಯನಿಷ್ಠರಾದ ಅಧಿಕಾರಿಗಳನ್ನೂ ದೃಷ್ಟಾಂತದೊಡನೆ ಹೇಳುತ್ತಾರೆ. ಉಪಾಯನಿಷ್ಠರು ಸೀತೆಯಂತೆಯೂ, ದ್ರೌಪದಿಯಂತೆಯೂ, ತಿರುಕ್ಕಣ್ಣಮಂಗೈಯಾಂಡಾನಂತೆಯೂ ಇರಬೇಕು. ಉಪೇಯನಿಷ್ಠರು ಲಕ್ಷ್ಮಣನಂತೆಯೂ, ಜಟಾಯುವಂತೆಯೂ, ಪಿಳ್ಳೈತಿರುನರೈಯೂರರೈಯರಂತೆಯೂ ಚಿಂತಯಂತಿಯಂತೆಯೂ ಇರಬೇಕು.

ಸೂತ್ರಂ - ಪಿರಾಟ್ಟಿಕ್ಕುಂ ದ್ರೌಪದಿಕ್ಕುಂ ವಾಶಿ ಶಕ್ತಿಯುಮಶಕ್ತಿಯುಂ. ॥ ೮೧ ॥

ಶ್ಲೋಕಃ – ❋ ವಿದೇಹ ರಾಜಪುತ್ರ್ಯಾಸ್ತು ವರ್ತತೇ ಶಕ್ತಿರುಜ್ವಲಾ ।
ದ್ರೌಪದ್ಯಾಸ್ತು ನ ಶಕ್ತಿಸ್ಸ್ಯಾದುಭಯೋರ್ಭೇದ ಈದೃಶಃ ॥ ॥ ೧೧೨ ॥

ತಾತ್ಪರ್ಯ – ಸೀತೆಗೂ ದ್ರೌಪದಿಗೂ ಭೇದವೇನೆಂದರೆ, 'ಶೀತೋಭವಹನೂಮತಃ' ಎಂದು ಆಂಜನೇಯನ ಬಾಲದಲ್ಲಿ ಜ್ವಲಿಸುವ ಬೆಂಕಿಯನ್ನು ಶೀತಲವಾಗಿ ಮಾಡಿದ ಸೀತೆಗೆ ದಗ್ಧೋಭವ ಎಂದು ರಾವಣನನ್ನು ಸುಡುವ ಶಕ್ತಿಯಿದೆ. ದ್ರೌಪದಿಗೋ ಅಂದರೆ, 'ರಕ್ಷಮಾಂ ಶರಣಾಗತಾಂ' ಎಂದು ಹೇಳಿದ್ದರಿಂದ ಶಕ್ತಿಯಿಲ್ಲ. ಈ ರೀತಿ ಭೇದಗಳುಂಟು.

ಸೂತ್ರಂ - ಪಿರಾಟ್ಟಿ ಸ್ವಶಕ್ತಿಯ್ಯೈ ವಿಟ್ಟಾಳ್, ದ್ರೌಪದಿ ಲಜ್ಜೈಯ್ಯೈ ವಿಟ್ಟಾಳ್, ತಿರುಕ್ಕಣ್ಣಮಂಗೈಯಾಂಡಾನ್ ಸ್ವವ್ಯಾಪಾರತ್ತೈ ವಿಟ್ಟಾನ್ ॥ ೮೨ ॥

ಶ್ಲೋಕಃ – ❋ ಶ್ರೀರಾಮೇ ಸತಿ ರಕ್ಷಕೇ ನಿಜಮಹಾಶಕ್ತ್ಯಾತ್ಮರಕ್ಷಾಭವೇ
ತ್ಯನ್ನಿಘ್ನತ್ವವಿನಾಶಿ ನೀತಿಮನಸಾ ಸಂಚಿಂತ್ಯ ಸೀತಾ ತದಾ ।
ಶೀತಸ್ತ್ವಂ ಭವ ಮಾರುತೇರಿತಿ ವಾರಂನ್ಮಿತ್ರಂ ಸ್ವಶಕ್ತ್ಯಾ ಜಗೌ
ಯಾತಂ ಸೈವ ದಶಾನನಂ ಭಸಿತತಾಂ ನೈವಾನಯಚ್ಛಕ್ತಿತಃ ॥ ೧೧೩ ॥

ಅಶಕ್ತಾ ದ್ರೌಪದೀ ಕೃಷ್ಣಾ ದುಶ್ಶಾಸನ ಕರೇಣ ಸಾ ।
ತ್ಯಕ್ತ ಸೀವೀಕರದ್ವಂದ್ವಾ ಸಮಿತೌ ವಿಜಹೌತ್ರಪಾಂ ॥ ೧೧೪ ॥

ಆಶ್ರಿತಸ್ಯತು ರಕ್ಷಾಯಾಂ ಬದ್ಧದೀಕ್ಷೇ ಸ್ಥಿತೇ ಹರೌ ।
ಕುತೋ ಮೇ ರಕ್ಷಣಾಸಕ್ತಿರಿತಿಮಂಗೈಃಪ್ರಭುಸ್ಮೃತಃ ॥ ೧೧೫ ॥

ತಾತ್ಪರ್ಯ – ಸೀತೆಯು ತನ್ನ ಶಕ್ತಿಯನ್ನು ಬಿಟ್ಟಿದ್ದು ಹೇಗೆಂದರೆ, ಅಗ್ನಿಗೆ ಸುಡುವುದೇ ಸ್ವಭಾವವಾದ್ದರಿಂದ ಆಂಜನೇಯನ ಬಾಲದಲ್ಲಿರುವ ಅಗ್ನಿಯು ಆಂಜನೇಯನನ್ನು ಸುಡದೇ ಇದ್ದುದಕ್ಕೆ ಕಾರಣ ? 'ಶೀತೋಭವ ಹನೂಮತಃ' ಎಂದು ಸೀತೆಯು ಹೇಳಿದ್ದಲ್ಲವೇ ಅಂಥ ಶಕ್ತಿಯುಳ್ಳ ಸೀತೆಯು ರಾವಣನನ್ನು ತನ್ನ ಶಕ್ತಿಯಿಂದ ಭಸ್ಮ ಮಾಡಬಹುದಾಗಿತ್ತು. ತನ್ನನ್ನು ತಾನು ರಕ್ಷಿಸಿಕೊಳ್ಳುವುದು ತನ್ನ ಪಾರತಂತ್ರ್ಯಕ್ಕೆ ಹಾನಿಯೆಂದರಿತು ತನ್ನ ಶಕ್ತಿಯನ್ನು ಉಪಯೋಗಿಸದೇ ಬಿಟ್ಟಳು. ದ್ರೌಪದಿಯು ಲಜ್ಜೆ ಬಿಟ್ಟಿದ್ದು ಹೇಗೆಂದರೆ, ದುಶ್ಶಾಸನನು ತನ್ನನ್ನು ಸಭಾ ಮಧ್ಯಕ್ಕೆ ಎಳೆತಂದು ಸೀರೆಯನ್ನು ಸೆಳೆಯುವಾಗ ಎಲ್ಲರೂ ನೋಡುತ್ತಾ ಸುಮ್ಮನಿರಲು, ಪೂರ್ಣರಕ್ಷಣೆಗಾಗಿ ಹಿಡಿದಿರುವ ಸೀರೆ ಗಂಟಿನ ಕೈಗಳೆರಡನ್ನೂ ಬಿಟ್ಟು ಭಗವಂತನಾದ ಶ್ರೀಕೃಷ್ಣನೇ ರಕ್ಷಕನೆಂದು ನಂಬಿ ತನ್ನ ಲಜ್ಜೆಯನ್ನು ಬಿಟ್ಟಳು. ತಿರುಮಂಗೈಯಾಂಡಾನೆಂಬುವರು ಸರ್ವೇಶ್ವರನು ನಮ್ಮ ರಕ್ಷಣೆಯ ಭಾರವನ್ನು ವಹಿಸಿರುವಾಗ, ನಮ್ಮ ರಕ್ಷಣೆಗೆ ನಾವು ಪ್ರಯತ್ನ ಪಡಬಾರದೆಂದು, ಭಗವಂತನನ್ನು ನಂಬಿ ಸ್ವಲ್ಪವೂ ಪ್ರಯತ್ನ ಪಡದೆ ಸುಮ್ಮನಿದ್ದರು.

ಸೂತ್ರಂ - **ಪಶಿಯಿರಾಯಿರುಷ್ಪಾರ್ ಅಟ್ಟಶೋರುವುಣ್ಣವೇಣುಂ,**
ಅಡುಹಿರಶೋರುವುಣ್ಣವೇಣುವೆನ್ನುಮಾಪ್ಪೋಲೆಕಾಟ್ಟುಕ್ಕು
ಪ್ಪೋಹಿರಪೋದು ಇಳ್ಳೆಯು ಪೆರುಮಾಳ್ ಪಿರಿಯಿಲ್,
ತೆರಿಯಾಮ್ಯೆಯ್ಯೆ ವುನ್ನಿಟ್ಟು ಅಡಿಮ್ಯೆ ಶೆಯ್ಯವೇಣುಂ,
ಯೆಲ್ಲಾವಡಿವ್ಯೆಯುಂ, ಶೆಯ್ಯವೇಣುಂ ಏವಿಕ್ಕೊಳ್ಳವುಂ ವೇಣುಂ
ಎನ್ನಾರ್, ಪಡ್ಯೆವೀಟ್ಟಿಲ್ ಪುಹುಂದ ಪಿನ್ಬು ಕಾಟ್ಟಿಲ್ ತನಿಯಿಡತ್ತಿಲ್
ಸ್ವಯಂ ಪಾಕತ್ತಿಲೇ ವಯಿತ್ತೈ ಪೆರುಕ್ಕಿನ ಪಡಿಯಾಲೇ
ಒಪ್ಪೂಣುಣ್ಣ ಮಾಟ್ಟಾದೇ ಒರು ತಿರುಕ್ಕೈಯ್ಯಾಲೇ,
ತಿರುವೆಣ್ಣೊತ್ತಕ್ಕುಡೈಯ್ಯೆಯುಂ, ಒರು ತಿರುಕ್ಕೈಯಾಲೇ ತಿರುವೆಣ್
ಶಾಮರತ್ತೈಯುಂ ಧರಿತ್ತಡಿಮ್ಯೆಶೆಯ್ದಾರ್ ॥ ೮೩ ॥

ಶ್ಲೋಕಃ – ❋ ಕ್ಷುಧಾ ಸರ್ವಾನ್ಸ್ವಾಪ್ಯಶನಮಭಿವಾಂಚ್ಛನ್ನಿವ ಜನೇ
ಸದಾ ಸೌಮಿತ್ರಿಶ್ಚಿರಘುಪತಿ ಸುಸೇವಾ ಮರಚಯತ್ ।
ಅಯೋಧ್ಯಾಯಾಂ ರಾಮೇ ಮುನಿಭಿರಭಿಷಿಕ್ತೇ ಕರಯುಂಗೇ
ಸಿತಚ್ಛತ್ರಂ ಧೃತ್ವಾ ಪರಿಚರಣವಾಂಶ್ಚಾಮರಮಪಿ ॥ ೧೧೬ ॥

ತಾತ್ಪರ್ಯ – ಒಹಳವಾಗಿ ಹಸಿದಿರುವವನು ಯಾವ ರೀತಿ ಎಲ್ಲಾ ಅನ್ನವನ್ನೂ ತಾನೇ ಊಟಮಾಡಬೇಕೆಂದು ಅಪೇಕ್ಷಿಸುವನೋ ಆದೇ ರೀತಿ ಲಕ್ಷ್ಮಣನು,"ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಸ್ಸ್ವಪತಶ್ಚತೇ" ಎಂದು ಹೇಳಿರುವಂತೆ ಶ್ರೀರಾಮಚಂದ್ರನು ಕಾಡಿನಲ್ಲಿರುವಾಗ ಅವನ ಸರ್ವವಿಧಕೈಂಕರ್ಯಗಳನ್ನೂ ಮಾಡಿದನಷ್ಟೆ. ಕಾಡಿನಿಂದ ಹಿಂದಿರುಗಿ ಬಂದು ಪಟ್ಟಾಭಿಷೇಕ ಮಾಡಿಕೊಂಡ ಮೇಲೂ ಅಯೋಧ್ಯೆಯಲ್ಲಿ ಅನೇಕ ಪರಿಜನಗಳಿದ್ದರೂ ತಾನೇ ಶ್ರೀರಾಮನಿಗೆ ಎಲ್ಲಾ ಕೈಂಕರ್ಯವನ್ನೂ ಮಾಡಬೇಕೆಂಬ ಆಶೆಯಿಂದ ಒಂದು ಕೈಯಲ್ಲಿ ಶ್ವೇತಚ್ಛತ್ರಿಯನ್ನೂ ಮತ್ತೊಂದು ಕೈಯಲ್ಲಿ ಚಾಮರವನ್ನೂ ಹಿಡಿದು ಉಪೇಯಾಧಿಕಾರಿಯಾದ ಲಕ್ಷ್ಮಣನು ಕೈಂಕರ್ಯವನ್ನು ಮಾಡಿದನು.

ಸೂತ್ರಂ – ಪೆರಿಯವುಡೈಯಾರುಂ, ಪಿಳ್ಳೈ ತಿರುನರೈಯೂರರೈಯರುಂ,
ಉಡಂಬೈ ಉಪೇಕ್ಷಿತ್ತಾರ್ಹಳ್ ಚಿಂತಯಂತಿಕ್ಕುಡಂಬು
ತನ್ನಡೈಯೇವೋಯ್ತ್ತು ॥ ೪೪ ॥

ಶ್ಲೋಕಃ – ❋ ದುರ್ವೃತ್ತಂ ಜನಕಾತ್ಮಜಾಂ ಪ್ರರುದತೀಂ ಹೃತ್ವಾ ನಯಂತಂ ಬಲಾ
ದ್ಧ್ವೋಮ್ನ್ಯಲೋಕ್ಯ ದಶಾನನಂ ತರುತಲೇ ತಿಷ್ಠನ್ಜಟಾಯುಃ ಕ್ರುಧಾ ।
ರುಧ್ವಾತಂ ಸ್ಮ ವಿನಾಶಮಪ್ಯಗಣಯನ್ಯುಧ್ವಾಚ ತೇನಾಂತತಃ
ತತ್ಖಡ್ಗೇನ ನಿಷೂದಿತಸ್ಸಮಪತಚ್ಛ್ರೀರಾಮ ಭಕ್ತಾಗ್ರಣೀಃ ॥ ೧೧೭ ॥

ಶ್ರೀವಿಷ್ಣುಶ್ಚಿಕರೋ ವೇದ ನಾರಾಯಣ ದಿದೃಕ್ಷಯಾ ।
ಗತೋಗ್ನಿನಾ ದಹ್ಯಮಾನಂ ತಮಾಲಿಂಗ್ಯ ತನುಂ ಜಹೌ ॥ ೧೧೮ ॥

ಚಿಂತಯಂತ್ಯಾ ವಾಸುದೇವಂ ಚಿಂತಯಂತ್ಯಾಶ್ಶರೀರತಃ ।
ನಿರ್ಜಗ್ಮುಸ್ಸ್ವಯಮೇವಾಸ್ತ ಪುಣ್ಯಪಾಪತಯಾಸವಃ ॥ ೧೧೯ ॥

ತಾತ್ಪರ್ಯ – ನೀಚನಾದ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋಗುವಾಗ ಅವಳ ಆರ್ತಧ್ವನಿಯನ್ನು ಕೇಳಿ ಸಮೀಪದ ಮರದ ಮೇಲೆ ಮಲಗಿದ್ದ ಜಟಾಯುವು ಎದ್ದು ಆ ರಾವಣನನ್ನು ತಡೆದು ಅವನೊಡನೆ ಯುದ್ಧಮಾಡಿ ಅವನಿಂದ ಕತ್ತರಿಸಲ್ಪಟ್ಟ ರೆಕ್ಕೆಯುಳ್ಳವನಾಗಿ ತನ್ನ ಶರೀರವನ್ನು ಬಿಟ್ಟನು.

ಪಿಳ್ಳೆಲ ತಿರುನರೈಯೂರರೈಯರೆಂಬವರು ತೋಟ್ಟಿತಿರುನಾರಾಯಣಪುರದಲ್ಲಿರುವ ವೇದ ನಾರಾಯಣನನ್ನು ದರ್ಶಿಸಲು ದೇವಸ್ಥಾನಕ್ಕೆ ಹೋಗಿದ್ದ ಸಮಯದಲ್ಲಿ ದೇವಸ್ಥಾನಕ್ಕೆ ಬೆಂಕಿ ಬೀಳಲು, ತಮ್ಮ ಹೆಂಡತಿ ಪುಕ್ಕಳೊಡನೆ ಆ ತಿರುನಾರಾಯಣ ವಿಗ್ರಹವನ್ನು ಆಲಿಂಗಿಸಿ ತಮ್ಮ ಶರೀರವನ್ನು ಬಿಟ್ಟರು.

ಚಿಂತಯಂತಿ ಎಂಬ ಗೋಪಿಯು ಶ್ರೀಕೃಷ್ಣನ ಕೊಳಲಿನ ಧ್ವನಿಯನ್ನು ಕೇಳಿ ಅವನ ಹತ್ತಿರ ಹೋಗಲು ಉದ್ಯುಕ್ತಳಾದ ಅವಳನ್ನು ಗಂಡ ಮಾವಂದಿರು ತಡೆಯಲು, ಅವಳು ನಿಂತ ಸ್ಥಳದಲ್ಲೇ ಭಗವಂತನನ್ನು ಸ್ಮರಿಸುತ್ತಿರುವಾಗ ತನ್ನಷ್ಟಕ್ಕೆ ತಾನೇ ಪ್ರಾಣವು ಹೋಯಿತು.

ಸೂತ್ರಂ – ಉಪಾಯತ್ತುಕ್ಕು ಶಕ್ತಿಯುಂ ಲಜ್ಜೈಯುಂ ಯತ್ನವುಂ ಕುಲೈಯು
ವೇಣುಂ, ಉಪೇಯತ್ತುಕ್ಕು ಪ್ರೇಮವುಂ ತನ್ನೈಪ್ಪೇಣಾವೈಯುಂ
ಧರಿಯಾವೈಯುಂ ವೇಣುಂ. ॥ ೪೫ ॥

ಶ್ಲೋಕಃ – ❋ ಸ್ವರಕ್ಷಾಶಕ್ತಿಮಪ್ಯೇವಂತದುಪಾಯಾಧಿಕಾರಿಣಃ ।
ಲೋಕಹಾಸ್ಯಜ ಲಜ್ಜಾಂಚ ತ್ಯಜೇಯುರ್ಯತ್ನಮಾತ್ಮನಃ ॥ ॥ ೧೨೦ ॥

ಕೈಂಕರ್ಯಜಂ ಪ್ರೇಮರಮಾಪತೇಸ್ಸ್ಯಾ
ತ್ತಸ್ಯಾಪ್ಯಪಾಯೇ ಸ್ವತನಾವುಪೇಕ್ಷಾ ।
ತದ್ವಿಗ್ರಹ್ವಸ್ಯಾನುಭವಾನವಾಪ್ತೌ
ಸ್ವಧಾರಣಾಭಾವ ಉಪೇಯಭಾಜಾಂ ॥ ॥ ೧೨೧ ॥

ತಾತ್ಪರ್ಯ – ಉಪಾಯಕ್ಕೆ ಅಧಿಕಾರಿಯಾಗುವಾಗ, ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳುವ ಶಕ್ತಿಯನ್ನೂ, ತಾನು ಅಂಗೀಕರಿಸುವ ಉಪಾಯಕ್ಕೆ ವಿರೋಧಿಯಾದ ಲಜ್ಜೆಯನ್ನೂ, ತನ್ನ ಪಾರತಂತ್ರ್ಯಕ್ಕೆ ವಿರೋಧಿಯಾದ ಸ್ವಯತ್ನವನ್ನೂ ತ್ಯಜಿಸಬೇಕು. ಉಪೇಯಕ್ಕೆ ಅಧಿಕಾರಿಯಾಗುವಾಗ ಶೇಷಿಯಾದ ಭಗವಂತನನ್ನು ಬಿಡದೆ ಹತ್ತಿರವಿದ್ದು ಎಲ್ಲಾ ಕೈಂಕರ್ಯಗಳನ್ನೂ ಮಾಡಬೇಕೆಂಬ ಪ್ರೇಮವೂ, ಆ ವಿಗ್ರಹಕ್ಕೆ ಯಾವುದಾದರೂ ಅವದ್ಯವುಂಟಾದ ಪಕ್ಷದಲ್ಲಿ ತನ್ನ ಶರೀರವನ್ನು ಉಪೇಕ್ಷಿಸುವಿಕೆಯೂ, ಭಗವದ್ವಿಗ್ರಹಾನುಭವವು ಲಭಿಸದಿರಲು, ತಾನು ಜೀವಿಸದೇ ಇರುವಿಕೆಯೂ ಇರಬೇಕು.

**ಸೂತ್ರಂ - ಇವನುಕ್ಕು ವೈಧವಮಾಯ್ ವರುಮುದಿರೇ ತ್ಯಜಿಕ್ಕಲಾವದು,
ರಾಗಪ್ರಾಪ್ತಮಾಯ್ವರುಮತು ತ್ಯಜಿಕ್ಕ ವೊಣ್ಣಾದಿರೆ ॥ ೮೬ ॥**

ಶ್ಲೋಕಃ – ❋ ಅನನ್ಯ ಸಾಧನ ಶ್ರೀಮಾನ್ವಿಧಿಪ್ರಾಪ್ತಂ ತ್ಯಜೇನ್ನರಃ ।
ರಾಗಪ್ರಾಪ್ತಂ ತು ಸಂತ್ಯಕ್ತುಂ ಕಥಮೀಶೋ ಭವೇದಿಹ ॥ ॥ ೧೨೨ ॥

ತಾತ್ಪರ್ಯ – ಭಗವಂತನನ್ನೇ ಉಪಾಯವನ್ನಾಗಿಯೂ, ಉಪೇಯವನ್ನಾಗಿಯೂ ಹೊಂದಿರುವವನು ವೈಧವಾಗಿ ಬಂದುದನ್ನು ಬಿಡಬಹುದೇ ಹೊರತು, ಪ್ರೇಮಾತಿಶಯದಿಂದ ಪ್ರಾಪ್ತವಾದದ್ದನ್ನು ಬಿಡುವುದಕ್ಕೆ ಆಗುವುದಿಲ್ಲ. ಆದ್ದರಿಂದಲೇ ಪಿಳ್ಳೈ ತಿರುನರೈಯೂರರೈಯರು ಪ್ರೇಮಾತಿಶಯದಿಂದ ತಮ್ಮ ದೇಹವನ್ನು ತ್ಯಾಗ ಮಾಡಿದರು.

**ಸೂತ್ರಂ - ಉಪಾಯತ್ವಾನುಸಂಧಾನಂ ನಿವರ್ತಕಂ,
ಉಪೇಯತ್ವಾನುಸಂಧಾನಂ ಪ್ರವರ್ತಕಂ ॥ ೮೭ ॥**

ಶ್ಲೋಕಃ – ❋ ವಿಷ್ಣು ವಿಗ್ರಹ ವಿನಾಶಸಂಭವೇ
ಚೇತನೋ ವಿಧಿ ವಶಾನುಗಂ ತನೋಃ ।
ತ್ಯಾಗಮಾತ್ಮನಿ ವಿಚಿಂತಯಂಸ್ತದಾ
ಸಾಧನಂ ಸ್ವಮರಣಾನ್ನಿವರ್ತತೇ ॥ ॥ ೧೨೩ ॥

ರಾಗತೋಽನುಗಮುಪೇಯತಾ ಸ್ಮೃತೇ
ಸ್ತ್ಯಾಗಮತ್ರ ನಿಜವಿಗ್ರಹಸ್ಯ ಸಃ ।
ಭೋಗ್ಯತಾಧಿಷಣಯಾ ಸ್ವಯಂ ತದಾ
ಕರ್ತುಮೇವ ಸಹಸಾ ಪ್ರವರ್ತತೇ ॥ ॥ ೧೨೪ ॥

ತಾತ್ಪರ್ಯ – ದೇಹತ್ಯಾಗವು ವಿಧಿಪ್ರಾಪ್ತವಾಗುವ ಪಕ್ಷದಲ್ಲಿ ಅದನ್ನೇ ಉಪಾಯವನ್ನಾಗಿ ಅನುಸಂಧಿಸಿ ದೇಹತ್ಯಾಗ ಮಾಡದೇ ಹಿಂತಿರುಗಬಹುದು. ಅದೇ ದೇಹತ್ಯಾಗವು ರಾಗ ಪ್ರಾಪ್ತವಾದ ಪಕ್ಷದಲ್ಲಿ ಉಪೇಯತ್ವಾನುಸಂಧಾನದಿಂದ ಪರಮ ಭೋಗ್ಯವಾಗಿ ಆ ದೇಹತ್ಯಾಗದಲ್ಲಿ ಪ್ರವರ್ತಿಸುವನು.

ಸೂತ್ರಂ - ಅಪ್ರಾಪ್ತವಿಷಯಂಗಳಿಲೇ ಸಕ್ತನಾನವನ್, ಅದು ಲಭಿಕ್ಕವೇಣು
ವೆನ್ನಿರಾನಿನ್ನಾಲ್ ಪ್ರಾಪ್ತವಿಷಯ ಪ್ರವಣನುಕ್ಕು
ಚ್ಚೊಲ್ಲವೇಂಡಾವಿರೇ ॥ ೮೮ ॥

ಶ್ಲೋಕಃ – ❋ ಸ್ವಕೀಯ ವೇಶ್ಯಾಗದನೋದನಾಯ
ಪ್ರಾರ್ಥ್ಯ ಸ್ವಶೀರ್ಷಂ ನಿಜದೇವತಾಯೈ ।
ಕೃಂತ್ವಾರ್ಪಯತ್ಕಂಪ್ರೀತಿಸ್ಥಿತೇಸ್ಸ
ವಿಷ್ಣ್ವರ್ಥಮಾತ್ಮಾರ್ಪಣಮಸ್ಯ ಯುಕ್ತಂ ॥ ೧೨೫ ॥

ತಾತ್ಪರ್ಯ – ಕಾಮುಕನಾದವನು, ತನ್ನ ವೇಶ್ಯಾಸ್ತ್ರೀಗೆ ಬಂದಿರುವ ವ್ಯಾಧಿಯು ಪರಿಹಾರವಾದರೆ ನನ್ನ ತಲೆಯನ್ನು ಕತ್ತರಿಸಿ ನಿನಗೆ ಅರ್ಪಿಸುವೆನೆಂದು ಪ್ರಾರ್ಥಿಸಿಕೊಂಡು. ಅವನ ಪ್ರಾರ್ಥನೆಯಂತೆ ಆ ವೇಶ್ಯಾಸ್ತ್ರೀಗೆ ಗುಣವಾದ ಮೇಲೆ ಆ ದೇವತೆಗೆ ತನ್ನ ತಲೆಯನ್ನು ಕತ್ತರಿಸಿಕೊಟ್ಟನೆಂದು ಹೇಳಿದೆ. ಈ ರೀತಿ ಹೇಯವಾದ ವಿಷಯದಲ್ಲಿ ಮಾಡಿದ ಪಕ್ಷದಲ್ಲಿ, ಉಪಾದೇಯತಮವಾದ ಭಗವಂತನಿಗೋಸ್ಕರ ಪ್ರೀತಿಯಿಂದ ತನ್ನ ದೇಹವನ್ನು ತ್ಯಜಿಸುವುದರಲ್ಲಿ ಆಶ್ಚರ್ಯವೇನಿದೆ. ಅದು ಅತ್ಯವಶ್ಯಕವಾಗಿರುವ ಕೆಲಸವೇ ಸರಿ.

ಸೂತ್ರಂ - ಅನುಷ್ಠಾನವುಂ ಅನನುಷ್ಠಾನವುಂ
ಉಪಾಯಕೋಟಿಯಿಲನ್ವಯಿಯಾದು ॥ ೮೯ ॥

ಶ್ಲೋಕಃ – ❋ ರಾಗಪ್ರಾಪ್ತತಯಾ ಶಾಸ್ತ್ರಸಿದ್ಧೋಽಪಿ ಸ್ವತನೋರಿಹ ।
ತ್ಯಾಗಸ್ಸಾಧನತಾಂ ನೈವ ಪ್ರಪನ್ನಸ್ಯ ಭಜೇತ್ಪಲು ॥ ೧೨೬ ॥

ತಾತ್ಪರ್ಯ – ಭಗವಂತನಿಗಾಗಿ ತನ್ನ ದೇಹತ್ಯಾಗವು ಮೋಕ್ಷಸಾಧನವೆಂದು, ಶಾಸ್ತ್ರದಲ್ಲಿ ಹೇಳಿದ್ದರೂ, ಪ್ರಪನ್ನನು ಪ್ರೇಮಪೂರ್ವಕವಾಗಿ ದೇಹತ್ಯಾಗ ಮಾಡುವುದರಿಂದ, ಅದು ಸಾಧನಕೋಟಿಯಲ್ಲಿ ಅನ್ವಯಿಸುವುದಿಲ್ಲ.

ಸೂತ್ರಂ - ಅನನ್ಯೋಪಾಯತ್ವಮುಂ ಅನನ್ಯೋಪೇಯತ್ವಮುಂ ಅನನ್ಯದೈವತ್ವಮುಂ
ಕುಲೈಯುಂ ಪಡಿಯಾನ ಪ್ರವೃತ್ತಿಕಾಣಾ ನಿನ್ನೋಮಿರೇ ॥ ೯೦ ॥

ಶ್ಲೋಕಃ – ❋ ಪ್ರೇಮಾಧೀನ ಮನಸ್ಕಾನಾಮನನ್ಯೋಪಾಯತಾ ತಥಾ ।
ಅನನ್ಯೋಪೇಯತಾನನ್ಯದೈವತಾ ಚ ಸ್ಥಿರಾ ಸದಾ ॥ ೧೨೭ ॥

ತಾತ್ಪರ್ಯ – ಪ್ರೇಮಪರವಶರ ಪ್ರವೃತಿಯನ್ನು ಇದರಲ್ಲಿ ಹೇಳುತ್ತಾರೆ. ವ್ರತಾದಿಗಳನ್ನು ಮಾಡಿ ಮಡಲೆತ್ತುವುದು, ಹಾಗೆಯೇ ಭಗವಂತನಿಗೇ ಅತಿಶಯವನ್ನುಂಟುಮಾಡುವುದನ್ನು ಬಿಟ್ಟು ತಾವು ಅಲಂಕರಿಸಿ ಕೊಳ್ಳುವುದು, ಹಾಗೆಯೇ ಕಾಮದೇವನನ್ನು ಪೂಜಿಸುವುದು, ಇವೆಲ್ಲವೂ ಭಗವಂತನಲ್ಲುಂಟಾದ ಪ್ರೇಮಾತಿಶಯದಿಂದ ಅವನ ಪ್ರಾಪ್ತಿಗಾಗಿ ಮಾಡುವ ಕೆಲಸವಾದ್ದರಿಂದ ಇವೆಲ್ಲವೂ ಉಪಾಯ ಕೋಟಿಯಲ್ಲಿ ಅನ್ವಯಿಸುವುದಿಲ್ಲ.

ಸೂತ್ರಂ - ಜ್ಞಾನ ವಿಪಾಕ ಕಾರ್ಯಮಾನ ಅಜ್ಞಾನತ್ತಾಲೇ
ವರುಮವ್ವೆಯೆಲ್ಲಾಂ ಅಡಿಕ್ಕಳಂಜುಪೆರುಂ ॥ ೯೧ ॥

ಶ್ಲೋಕಃ – ಪರಿಪಕ್ವಜ್ಞಾನಜನ್ಯಭಕ್ತ್ಯಾ ಯಾತ್ವವಿವೇಕಿತಾ ।
ತಯಾ ಪ್ರವೃತ್ತಿರತ್ಸ್ಯಾ ಚ್ಛ್ಲಾಘ್ಯಾ ಹಿ ನ ತು ಕರ್ಮಜಾ ॥ ೧೨೮ ॥

ತಾತ್ಪರ್ಯ – ಜ್ಞಾನದ ಪರಿಪಕ್ವವಾದ ಭಕ್ತಿಯಿಂದ ಉಂಟಾಗುವ ಅಜ್ಞಾನವು. ಅಂದರೆ ಭಕ್ತ್ಯತಿಶಯದಿಂದುಂಟಾಗುವ ಪ್ರಾಪ್ತಾಪ್ರಾಪ್ತ ವಿವೇಕಶೂನ್ಯತೆಯು. ಆದರಿಂದುಂಟಾಗುವ ಪ್ರವೃತ್ತಿಯು ಶ್ಲಾಘ್ಯವು. ಕರ್ಮಸಂಬಂಧವಾದ ಅಜ್ಞಾನದಿಂದ ಉಂಟಾಗುವ ಪ್ರವೃತ್ತಿಯು ಹೇಯವಾದದ್ದು.

ಸೂತ್ರಂ - ಉಪಾಯಫಲಮಾಯ್ ಉಪೇಯಾಂತರ್ಭೂತಮಾಯಿರುಕ್ಕುಮತು
ಉಪಾಯ ಪ್ರತಿಬಂಧಕಮಾಹಾತು ॥ ೯೨ ॥

ಶ್ಲೋಕಃ – ಉಪೇಯಾಂತರ್ಭವಾದೇತದುಪಾಯ ಫಲಮತ್ರ ಹಿ ।
ಸಿದ್ಧೋಪಾಯಕೃಷೇರ್ನಸ್ಯಾದುಪಾಯ ಪ್ರತಿಬಂಧಕಂ ॥ ೧೨೯ ॥

ತಾತ್ಪರ್ಯ – ಹಾಗಾದರೆ ಈ ರೀತಿಯಾದ ಅತಿ ಪ್ರವೃತ್ತಿಯು, ಪ್ರಪ್ಪತ್ತಿಯೊಂದನ್ನೂ ಸಹಿಸದೇ ಇರುವ ಸಿದ್ಧೋಪಾಯವು ತನ್ನ ಕೆಲಸ ಮಾಡುವುದಕ್ಕೆ ಪ್ರತಿಬಂಧಕವಾಗುವುದಿಲ್ಲವೇ ಅಂದರೆ ಹೇಳುತ್ತಾರೆ. ಸಿದ್ಧೋಪಾಯನಾದ ಭಗವಂತನು, ಪ್ರಪತ್ತಿಗೆ ಕಾರಣವಾದ ಭಕ್ತಿಯನ್ನುಂಟುಮಾಡುವವನಾಗಿಯೂ, ಆ ಭಕ್ತಿಯನ್ನು ವೃದ್ಧಿಗೊಳಿಸುವವನೂ ಆದ್ದರಿಂದ ಈ ಭಕ್ತಿ ಪಾರವಶ್ಯತೆಯಿಂದುಂಟಾದ ಪ್ರಪತ್ತಿಯನ್ನು ಉಪಾಯ ಫಲವೆಂದು ಹೇಳುವುದು. ತನ್ನನ್ನು ಹೊಂದಬೇಕೆಂಬ ತ್ವರೆಯಿಂದ, ಮಾಡಲೆತ್ನಿಸುವುದು ಇವೇ ಮೊದಲಾದ ಪ್ರವೃತ್ತಿಗಳು ಆ ಭಗವಂತನ ಕೈಂಕರ್ಯದೋಪಾದಿಯಲ್ಲಿ ಉಪೇಯಾಂತರ್ಭೂತವಾಗುವುದು. ಆದ್ದರಿಂದ ಉಪಾಯದ ಕಾರ್ಯಕರತ್ವಕ್ಕೆ ಪ್ರತಿಬಂಧಕವಾಗುವುದಿಲ್ಲ.

ಸೂತ್ರಂ - ಸಾಧ್ಯ ಸಮಾನಂ ವಿಳಂಬಾಸಹಂ ಎನ್ನಿರೇ ಸಾಧನತ್ತುಕ್ಕೇತ್ತಂ ;
ಸಾಧ್ಯ ಪ್ರಾವಣ್ಯಮುಡಿಯಾಹವಿರೇ ಸಾಧನತ್ತಿಲಿಳಿಹಿರತು ॥ ೯೩ ॥

ಶ್ಲೋಕಃ – ಸಾಧ್ಯ ಸಾಧನಯೋರೈಕ್ಯಾತ್ಕ್ಷಿಪ್ರ ಕಾರ್ಯಕರತ್ವತಃ ।
ಸಾಧ್ಯಪ್ರಾವಣ್ಯತಶ್ಚಾಪಿ ಸಾಧನೇ ಸ ಪ್ರವರ್ತತೇ ॥ ೧೩೦ ॥

ತಾತ್ಪರ್ಯ – ಮಾಡಲೆತ್ನಿಸುವುದು ಇವೇ ಮೊದಲಾದ ಪ್ರವೃತ್ತಿಗಳು, ಸಿದ್ಧೋಪಾಯ ಪ್ರತಿಬಂಧಕವಾಗುವುದಿಲ್ಲವೆಂದು ಹಿಂದೆ ತಿಳಿಸಿದರು. ಇದರಲ್ಲಿ ಅದಕ್ಕೆ ಸಿದ್ಧೋಪಾಯ ಸಾಮ್ಯವನ್ನು ಹೇಳುತ್ತಾರೆ. ಮಾಡಲೆತ್ನಿಸುವುದು ಇವೇ ಮೊದಲಾದ ಪ್ರವೃತ್ತಿಗಳು, ಶೇಷಿಯಾದ ಭಗವಂತನಿಗೆ ಅತಿಶಯವನ್ನುಂಟುಮಾಡುವ ಕೈಂಕರ್ಯ ರೂಪವಾದ ಸಾಧ್ಯಕ್ಕೆ ಸಮಾನವಾಗಿರುವುದು ಮತ್ತು ವ್ರತಾದಿಗಳನ್ನು ಮಾಡುವ ಅತಿಕ್ರಮ ಪ್ರವೃತ್ತಿ ಮಾಡಿದಾಗಲೇ ಭಗವಂತನು ತ್ವರೆಯಿಂದ ಇವನ ಹತ್ತಿರ ಬರುವಂತೆ ಮಾಡುವುದಾದ್ದರಿಂದ ಶೀಘ್ರ ಫಲಪ್ರದವಾಗುವುದು. ಇದೆಲ್ಲವೂ ಸಾಧ್ಯ ಪ್ರಾವಣ್ಯದಿಂದ ಉಂಟಾಗುವುದು. ಆದ್ದರಿಂದ ಸಿದ್ಧೋಪಾಯ ಪ್ರತಿಬಂಧಕವಾಗುವುದಿಲ್ಲ.

ಸೂತ್ರಂ - ಇವನುಕ್ಕು ಪಿರಕ್ಕುಮಾತ್ಮಗುಣಂಗಳಿಲ್ಲಾವತ್ತುಕ್ಕುಂ ಪ್ರಧಾನ ಹೇತು ಇಂದ ಪ್ರಾವಣ್ಯಂ ॥ ೯೪ ॥

ಶ್ಲೋಕಃ – ❋ ಗುರೂಪದೇಶ ಶಾಸ್ತ್ರಾರ್ಥ ಚಿಂತನಾ ಹೇತ್ವಪೇಕ್ಷಯಾ ।
ಸಾಧ್ಯ ಪ್ರಾವಣ್ಯಮೇವಾತ್ಮಸದ್ಗುಣಾನಾಂ ತು ಕಾರಣಂ ॥ ೧೩೧ ॥

ತಾತ್ಪರ್ಯ – ಶಾಸ್ತ್ರಾರ್ಥ, ಚಿಂತನ, ಗುರೂಪದೇಶ, ಇವುಗಳಿಗಿಂತಲೂ ಪ್ರಧಾನವಾದ ಕಾರಣ ಈ ಸಾಧ್ಯಪ್ರಾವಣ್ಯವೇ, ಇದರಿಂದಲೇ ಶಮದಮಾದ್ಯಾತ್ಮ ಗುಣಗಳುಂಟಾಗುವುವು.

ಸೂತ್ರಂ - ಮೂಲಾಲ್ಪನಂ ಶುಳಿಪ್ಪ 'ಪರಮಾತ್ಮನಿ ಯೋರಕ್ತಃ' ಕಂಡು ಕೇಟ್ಟುತ್ತು ವೋಂದುಂ ॥ ೯೫ ॥

ಶ್ಲೋಕಃ – ❋ ಶ್ರಿಯಃ ಪತೌ ಸಕ್ತಮನಾಸ್ಸಚೇತನಃ
ಸ್ವಕೀಯು ಯೋಷಿತ್ಸು ವಿರಕ್ತತಾಂ ವ್ರಜನ್ ।
ತಥೈವ ಸಂಪತ್ಸು ಚ ನಾಕ ಸೌಖ್ಯೇ
ವಿರಕ್ತಿಭಾಕ್ತತ್ವಗಣೋ ಭವತ್ಯಹೋ ॥ ೧೩೨ ॥

ತಾತ್ಪರ್ಯ – ಹಿಂದೆ ಹೇಳಿದ್ದಕ್ಕೆ ಪ್ರಮಾಣವನ್ನು ತೋರಿಸುತ್ತಾರೆ. ಯಾವ ಚೇತನನು ಭಗವಂತನಲ್ಲಿ ಸಕ್ತಮನಸ್ಸುಳ್ಳವನಾಗುತ್ತಾನೋ, ಅವನು ತನ್ನ ಹೆಂಗಸರಲ್ಲಿ, ಹಾಗೆಯೇ ಐಶ್ವರ್ಯದಲ್ಲಿ, ಕೊನೆಗೆ ಸ್ವರ್ಗಸುಖದಲ್ಲಿ ಕೂಡಾ ವೈರಾಗ್ಯ ಹೊಂದಿ ಭಗವದೇಕ ಪ್ರವಣನಾಗುತ್ತಾನೆ ಎಂದು ಆಳ್ವಾರ್ರು ಅಪ್ಪಣೆ ಕೊಡಿಸಿದ್ದಾರೆ.

ಸೂತ್ರಂ - ಆತ್ಮಗುಣಂಗಳಿಲ್ ಪ್ರಧಾನಂ ಶಮಮುಂ ದಮಮುಂ ॥ ೯೬ ॥

ಶ್ಲೋಕಃ – ❋ ಚಿತ್ತಪ್ರಶಾಂತಿ ರೂಪೋಯಶ್ಯಮಶ್ಚೇಂದ್ರಿಯ ನಿಗ್ರಹಃ
ದಮೋ ಯಶ್ಚ ತಯೋರತ್ರ ಪ್ರಾಧಾನ್ಯಂ ತ್ವಾತ್ಮನೋ ಗುಣೇ ॥ ೧೩೩ ॥

ತಾತ್ಪರ್ಯ – ಆಂತರಿಂದ್ರಿಯವಾದ ಮನಃಪ್ರಶಾಂತಿಯೇ ಶಮವು. ಬಾಹ್ಯೇಂದ್ರಿಯಗಳ ನಿಗ್ರಹವೇ ದಮವು. ಚೇತನನ ಆತ್ಮಗುಣಗಳಲ್ಲಿ ಮುಖ್ಯವಾದವು ಈ ಶಮ ಮತ್ತು ದಮ ಇವರಡೇ.

ಸೂತ್ರಂ - ಇವೈ ಇರಂಡುಮುಂಡಾನಾಲ್ ಆಚಾರ್ಯನ್ ಕೈ ಪುಹುರುಂ. ಆಚಾರ್ಯನ್ ಕೈ ಪುಹುಂದವಾರೇ ತಿರುಮಂತ್ರಂ ಕೈ ಪುಹುರುಂ. ತಿರುಮಂತ್ರಂ ಕೈ ಪುಹುಂದವಾರೇ ಈಶ್ವರನ್ ಕೈ ಪುಹುರುಂ. ಈಶ್ವರನ್ ಕೈ ಪುಹುಂದವಾರೇ 'ವೈಹುಂದ ಮಾನಹರ್ ಮತ್ತದು ಕೈ ಯತುವೇ' ಎನ್ನಿರ ಪಡಿಯೇ ಪ್ರಾಪ್ಯ ಭೂಮಿ ಕೈ ಪುಹುರುಂ ॥ ೯೭ ॥

ಶ್ಲೋಕಃ – ❋ ಶಮಾದಿ ಗುಣ ಪೂರ್ಣಂ ತಮಾಚಾರ್ಯೋಽಂಗೀಕರೋತ್ಯಮುಂ ।
ಆಂಗೀಕೃತಾಯ ತನ್ಮಂತ್ರಂ ಸಾಕ್ಷಾದುಪದಿಶತ್ಯಯಂ ॥ ೧೩೪ ॥

ಮಂತ್ರೋಪದೇಶತಸ್ಸಾಕ್ಷಾದೀಶ್ವರೋವಶ್ಯತಾಂವ್ರಜೇತ್ ।
ಈಶ್ವರೇ ವಶ್ಯತಾಂ ಪ್ರಾಪ್ತೇ ವೈಕುಂಠಂ ಸತುಯಾಸ್ಯತಿ ॥ ೧೩೫ ॥

ತಾತ್ಪರ್ಯ – ಯಾವನಲ್ಲಿ ಮುಖ್ಯವಾದ ಶಮದಮ ಗುಣಗಳಿರುವುವೋ, ಅವನಿಗೆ ಉಂಟಾಗುವ ಫಲ ಪರಂಪರೆಗಳನ್ನು ಇದರಲ್ಲಿ ಹೇಳುತ್ತಾರೆ. ಈ ಚೇತನನ ಆತ್ಮಗುಣವನ್ನು ನೋಡಿ ಭೋಗ್ಯತಾಬುದ್ಧಿಯಿಂದ ಸಂಸಾರವನ್ನು ಹೋಗಲಾಡಿಸುವ ತಿರುಮಂತ್ರವನ್ನು ಅರ್ಥದೊಡನೆ ಉಪದೇಶಿಸಬೇಕೆಂಬ ಆಶೆಯಿಂದ ಆಚಾರ್ಯನು ತಾನಾಗಿಯೇ ಆ ಚೇತನನ ಸಮೀಪವನ್ನು ಹೊಂದುವನು. ಆಚಾರ್ಯನು ಸಮೀಪಸ್ಥನಾದ ಮೇಲೆ, ಆಚಾರ್ಯನಿಗೆ ಅಧೀನವಾದ ತಿರುಮಂತ್ರವನ್ನು ಅರ್ಥದೊಡನೆ ಶಿಷ್ಯನ ಮನದಲ್ಲಿ ನೆಲಸುವಂತೆ ಆ ಆಚಾರ್ಯನು ಉಪದೇಶಿಸುವನು. ಆ ತಿರುಮಂತ್ರವು ಹೃದಯದಲ್ಲಿ ನೆಲಸಿದ ಮೇಲೆ, ಆ ಮಂತ್ರಕ್ಕೆ ಅಧೀನನಾದ ಭಗವಂತನು ಇವನಿಗೆ ವಶ್ಯನಾಗುವನು. ಭಗವಂತನು ವಶ್ಯನಾದ ಮೇಲೆ, ಪ್ರಾಪ್ಯ ಸ್ಥಾನವಾದ ವೈಕುಂಠವು ಇವನಿಗೆ ಸುಲಭವಾಗಿ ಲಭಿಸುವುದು.

ಸೂತ್ರಂ - ಪ್ರಾಪ್ಯ ಲಾಭಂ ಪ್ರಾಪಕತ್ತಾಲೇ; ಪ್ರಾಪಕಲಾಭಂ ತಿರುಮಂತ್ರತ್ತಾಲೇ; ತಿರುಮಂತ್ರಲಾಭಮಾಚಾರ್ಯನಾಲೇ; ಆಚಾರ್ಯಲಾಭಂ ಆತ್ಮ ಗುಣತ್ತಾಲೇ ॥ ೯೮ ॥

ಶ್ಲೋಕಃ – ✱ ಪ್ರಾಪ್ಯ ಲಾಭೋ ಭಗವತಾ ತಲ್ಲಾಭೋ ಮಂತ್ರತೋ ಭವೇತ್ ।
ಆಚಾರ್ಯತಸ್ತು ತನ್ಮಂತ್ರಲಾಭೋ ಭವತಿ ತತ್ವತಃ ॥ ೧೩೬ ॥

ಶಮಾದ್ಯಾತ್ಮಗುಣೇನೈವ ಸ್ವಾಚಾರ್ಯೋ ಲಭ್ಯತೇಽನಘಃ ।
ಅವರೋಹಕ್ರಮೇಣೈವ ಮುಕ್ತಂ ಪ್ರಾಗ್ಯದುದೀರಿತಂ ॥ ೧೩೭ ॥

ತಾತ್ಪರ್ಯ – ಹಿಂದೆ ಆರೋಹ ಕ್ರಮದಲ್ಲಿ ಹೇಳಿದ್ದನ್ನೇ ಅವರೋಹ ಕ್ರಮದಲ್ಲಿ ಹೇಳುತ್ತಾರೆ. ವೈಕುಂಠ ಪ್ರಾಪ್ತಿಯು, ಭಗವಂತನಿಂದಲೂ, ಭಗವತ್ಪ್ರಾಪ್ತಿಯು ತಿರುಮಂತ್ರದಿಂದಲೂ, ತಿರುಮಂತ್ರ ಪ್ರಾಪ್ತಿಯು, ಆಚಾರ್ಯನಿಂದಲೂ, ಆಚಾರ್ಯ ಪ್ರಾಪ್ತಿಯು ಶಮದಮಾದ್ಯಾತ್ಮ ಗುಣಗಳಿಂದಲೂ ಉಂಟಾಗುವುವು.

ಸೂತ್ರಂ - ಇತು ತಾನ್ ಐಶ್ವರ್ಯಕಾಮುಕ್ಕುಂ ಉಪಾಸಕರ್ಕುಂ ಪ್ರಪನ್ನರ್ಕುಂ ವೇಣುಂ ॥ ೯೯ ॥

ಶ್ಲೋಕಃ – ✱ ಉಪಾಸಕಾನಾಮೈಶ್ವರ್ಯಮಿಚ್ಛತಾಂ ಶರಣೈಷಿಣಾಂ ।
ಶಮಾದಿಗುಣಯೋಗಸ್ತು ತೇಷಾಮಾವಶ್ಯಕೋ ಭವೇತ್ ॥ ೧೩೮ ॥

ತಾತ್ಪರ್ಯ – ಈ ಶಮದಮಾದಿ ಗುಣಗಳು ಭೋಗ ಮೋಕ್ಷಗಳನ್ನು ಅಪೇಕ್ಷಿಸುವವರೆಲ್ಲರಿಗೂ ಬೇಕು ಎಂದು ಹೇಳುತ್ತಾರೆ. ಐಶ್ವರ್ಯಕಾಮರುಗಳು, ಶಬ್ದಾದಿ ಭೋಗಗಳನ್ನೇ ಪುರುಷಾರ್ಥವನ್ನಾಗಿ ಅಪೇಕ್ಷಿಸಿದರೂ, ಅದರ ಸಾಧನಾನುಷ್ಠಾನ ಸಮಯದಲ್ಲಿ ಶಮದಮಾದಿಗಳು ಬೇಕು. ಉಪಾಸಕರಿಗೆ ವಿದ್ಯಾಂಗವಾಗಿ ಶಮದಮಾದಿಗಳು ಬೇಕು. ಪ್ರಪನ್ನರುಗಳಿಗೆ ಅವರ ಅಧಿಕಾರಕ್ಕೋಸ್ಕರ ಶಮದಮಾದಿಗಳು ಬೇಕು.

ಸೂತ್ರಂ - ಮೂವರಿಲುಂ ವೈತ್ತುಕ್ಕೊಂಡು ವಿಹವುಂ ವೇಂಡುವದು
ಪ್ರಪನ್ನನುಕ್ಕು ॥ ೧೦೦ ॥

ಶ್ಲೋಕಃ – ❋ ಶಮಾದಿ ಗುಣ ಯೋಗಸ್ತು ತ್ರಿಷು ತೇಷು ಭವೇದಪಿ ।
ಆಧಿಕ್ಯೇನ ಪ್ರಪನ್ನಸ್ಯ ತೌ ಗುಣೌ ಸಾಧ್ವಪೇಕ್ಷಿತೌ ॥ ೧೩೯ ॥

ತಾತ್ಪರ್ಯ – ಈ ಮೂರು ವಿಧ ಅಧಿಕಾರಿಗಳಲ್ಲಿ ಪ್ರಪನ್ನನಿಗೆ ಇವೆರಡು ಗುಣಗಳೂ ಹೆಚ್ಚಾಗಿರಬೇಕು.

ಸೂತ್ರಂ - ಮತ್ತೈಯಿರುವರ್ಕುಂ ನಿಷಿದ್ಧ ವಿಷಯ ನಿವೃತ್ತಿಯೇ ಅಮ್ಮೈಯುಂ
ಪ್ರಪನ್ನನುಕ್ಕು ವಿಹಿತ ವಿಷಯ ನಿವೃತ್ತಿತನ್ನೇತ್ತಂ ॥ ೧೦೧ ॥

ಶ್ಲೋಕಃ – ❋ ಐಶ್ವರ್ಯೇಚ್ಛುರುಪಾಸಕೋಽಪಿ ಸತತಂ ಶಾಸ್ತ್ರೇ ನಿಷಿದ್ಧಂ ತ್ಯಜೇ
ದನ್ಯಸ್ತ್ರೀಗಮನಂ ಸ್ವದಾರಗಮನಂ ಶಾಸ್ತ್ರೋಚಿತಂ ಸ್ಯಾತ್ತಯೋಃ ।
ಶಾಸ್ತ್ರೇ ತಾವದುದೀರಿತಂ ಚ ವಿಹಿತಂ ಸ್ವಸ್ತ್ರೀಪ್ರವೇಶಂ ತ್ವಯಂ
ಧರ್ಮ್ಯಂ ಸ್ವಾಧಿಕೃತಿಪ್ರಭಂಜಕತಯಾ ತಂ ಚ ಪ್ರಪನ್ನಸ್ತ್ಯಜೇತ್ ॥ ೧೪೦ ॥

ತಾತ್ಪರ್ಯ – ಐಶ್ವರ್ಯ ಕಾಮನೂ, ಉಪಾಸಕನೂ ಇವರಿಬ್ಬರೂ ಶಾಸ್ತ್ರದಲ್ಲಿ ಮಾಡಬಾರದೆಂದು ನಿಷೇಧಿಸಿರುವ ಪರಸ್ತ್ರೀಗಮನಾದಿಗಳನ್ನು ಬಿಟ್ಟು ಶಾಸ್ತ್ರವಿಹಿತವಾದ ಸ್ವಪತ್ನೀಗಮನವನ್ನು ಮಾಡಬಹುದು. ಈ ಪ್ರಪನ್ನನೋ ಅಂದರೆ ಶಾಸ್ತ್ರ ವಿಹಿತವಾದ ಸ್ವಪತ್ನೀಗಮನವನ್ನು ಕೂಡಾ ತ್ಯಜಿಸಬೇಕು.

ಸೂತ್ರಂ - ಇತುತಾನ್ ಶಿಲರ್ಕ್ಕಳಹಾಲೇಪಿರಕ್ಕುಂ ಶಿಲರ್ಕ್ಕರುಳಾಲೇ ಪಿರಕ್ಕುಂ
ಶಿಲರ್ಕ್ಕಾಚಾರತ್ತಾಲೇ ಪಿರಕ್ಕುಂ ॥ ೧೦೨ ॥

ಶ್ಲೋಕಃ – ❋ ನಿವೃತ್ತಿಃ ಕೇಷಾಂ ಚಿದ್ಭವತಿ ತನು ಸೌಂದರ್ಯ ವಶತಃ
ತಥಾ ಕೇಷಾಂ ಚಿತ್ಸ್ವಾನ್ಯರಿಪು ಕೃಪಾಯಾಶ್ಚ ವಶತಃ ।
ಸದಾ ಪೂರ್ವಾಚಾರ್ಯೈರಚಿತಮನು ಸೃತ್ಯಾತ್ರರಚಿತಾ
ತ್ತಥೈವಾಚಾರಾದ್ಧಿ ಪ್ರಭವತಿ ಚ ಕೇಷಾಂ ಚಿದಪಿಸಾ ॥ ೧೪೧ ॥

ತಾತ್ಪರ್ಯ – ಅನಾದಿಕಾಲದಿಂದ ಸಂಸ್ಕಾರವಾಸನಾಪ್ರಯುಕ್ತವಾದ ವಿಷಯಾನುಭವದ ನಿವೃತ್ತಿಯು ಹೇಗೆ ಉಂಟಾಗುವುದೆಂದರೆ ಹೇಳುತ್ತಾರೆ. ಸಾಕ್ಷಾತ್ಕೃತ ಭಗವತ್ತತ್ವರಾದ ಪ್ರಪನ್ನರಿಗೆ ಭಕ್ತಿಪಾರವಶ್ಯ ದಿಂದ ಜಗನ್ಮೋಹಕವಾದ ಭಗವದ್ವಿಗ್ರಹ ಸೌಂದರ್ಯಾನುಭವದಿಂದ, ವಿಷಯ ನಿವೃತ್ತಿಯು ಉಂಟಾಗುವುದು. ತತ್ತ್ವಯಾಥಾತ್ಮ್ಯದರ್ಶಿಗಳಾದ ಅಧಿಕ ಜ್ಞಾನವುಳ್ಳ ಪ್ರಪನ್ನರಿಗೆ ಭಗವಂತನ ಕೃಪೆಯಿಂದುಂಟಾಗುವುದು, ಅಜ್ಞಾನ ಪ್ರಪನ್ನರುಗಳಿಗೆ ಭಗವಂತನು ತಾನಾಚರಿಸಿಯೂ ಪೂರ್ವಾಚಾರ್ಯರುಗಳ ಉಪದೇಶದಿಂದ ಅದರಂತೆ ಆಚರಿಸಿ ಅದರ ಮನನದಿಂದ ವಿಷಯನಿವೃತ್ತಿ ಉಂಟಾಗುವುದು.

ಸೂತ್ರಂ – ಪಿರಕ್ಕುಂ ಕ್ರಮವೆನ್ನೆನ್ನಿಲ್ ಅಳಹು ಅಜ್ಞಾನತ್ತೈ ವಿಳೈಕ್ಕುಂ, ಅರುಳ್
ಅರುಚಿಯೈ ವಿಳೈಕ್ಕುಂ ಆಚಾರಂ ಅಚ್ಚತ್ತೈ ವಿಳೈಕ್ಕುಂ ॥ ೧೦೩ ॥

ಶ್ಲೋಕಃ – ❋ ಸೌಂದರ್ಯಂ ನಿಜ ಹೃದಯೂಪಹಾರ ಕಾರ್ಯೂ
ದಜ್ಞಾನಂ ಹೃದಯಗತಂ ವಿನಾಶಯೇದ್ಧಿ ।
ಕಾರುಣ್ಯಂ ವಿಷಯಗತಾಂ ಸ್ಪೃಹಾಂ ಭಿನತ್ತಿ
ಸ್ವಾಚಾರಸ್ಸ್ವವಿಷಯತೋ ಭಯಂ ವ್ಯನಕ್ತಿ ॥ ೧೪೨ ॥

ತಾತ್ಪರ್ಯ – ನಿವೃತ್ತಿಯುಂಟಾಗುವ ಕ್ರಮವನ್ನು ಇದರಲ್ಲಿ ಹೇಳುತ್ತಾರೆ. ಭಗವಂತನ ದಿವ್ಯ ಮಂಗಳ ವಿಗ್ರಹದ ಸೌಂದರ್ಯವು ಚೇತನನ ವಿಷಯದಲ್ಲುಂಟಾದ ಅಜ್ಞಾನವನ್ನು ಹೋಗಲಾಡಿಸುವುದು. ಭಗವಂತನ ದಯೆಯು, ವಿಷಯೋನ್ಮುಖನಾದ ಚೇತನನಿಗೆ ಆ ವಿಷಯಗಳಲ್ಲಿ ಜಿಗುಪ್ಸೆಯನ್ನುಂಟುಮಾಡುವುದು. ಆಚಾರವು, ಹಿಂದೆ ಆಚಾರ್ಯರು ನಡೆದಂತೆ ನಾವು ಆಚಾರ ಮಾರ್ಗದಲ್ಲಿ ನಡೆಯದೇ ಹೋದರೆ, ಏನು ಅನರ್ಥವುಂಟಾಗುವುದೋ ಎಂಬ ಭಯವನ್ನುಂಟುಮಾಡುವುದು.

ಸೂತ್ರಂ - ಇವ್ವೈಯುಂ ಊತ್ತತ್ತೈಪ್ಪತ್ತಿಲ್ಲುಂಹಿರತು ॥ ೧೦೪ ॥

ಶ್ಲೋಕಃ – ❋ ತ್ರಿಪ್ರಕಾರ ಪ್ರಪನ್ನಾನಾಂ ಸೌಂದರ್ಯಾದಿಷು ಚೈಕಶಃ ।
ವಿರಕ್ತಿ ಹೇತುತೋಕ್ತಾ ಹಿ ತತ್ತದಾದರ ಕಾರಣಾತ್ ॥ ೧೪೩ ॥

ತಾತ್ಪರ್ಯ – ಹಿಂದೆ ಹೇಳಿದ ಮೂರು ವಿಧ ಪ್ರಪನ್ನರಿಗೂ ವಿಷಯ ವಿರಕ್ತಿಯನ್ನುಂಟುಮಾಡುವ ಸೌಂದರ್ಯಾದಿಗಳನ್ನು ಬೇರೆ ಬೇರೆ ಕಾರಣವಾಗಿ ಹೇಳಲು ಕಾರಣವೇನೆಂದರೆ ಅವರವರ ಆದರಾತಿಶಯಗಳೇ ಕಾರಣ.

ಸೂತ್ರಂ - ಅರುಚಿ ಪಿರಕ್ಕುಂ ಪೋದ್ಯೈಕ್ಕು ದೋಷದರ್ಶನ ಮುಪೇಕ್ಷಿತವಾಯಿರುಕ್ಕುಂ ॥ ೧೦೫ ॥

ಶ್ಲೋಕಃ – ❋ ದುರ್ಗಂಧ ವಿಣ್ಮೂತ್ರ ವಸಾಸ್ಥಿ ಮಾಂಸ
ಮಜ್ಜಾಮಯೀಂ ಸ್ತ್ರೀತನುಮಾತ್ಮ ಬುದ್ಧ್ಯಾ ।
ವಿಚಾರ್ಯ ತತ್ರೋಜ್ಝಿತರಾಗಬಂಧೋ
ವಿರಕ್ತಿಭಾಗೇವ ಭವೇತ್ಪ್ರಪನ್ನಃ ॥ ೧೪೪ ॥

ತಾತ್ಪರ್ಯ – ಪ್ರಪನ್ನನಿಗೆ ಸ್ತ್ರೀ ವಿಷಯದಲ್ಲಿ ಅಭಿಲಾಷೆ ಹುಟ್ಟಿದೇ ಇರಬೇಕಾದರೆ, ಸ್ತ್ರೀಯರ ದೇಹವು ದುರ್ಗಂಧಮಯವಾದ ಅಮೇಧ್ಯಮೂತ್ರವಸಾ ಮೂಳೆ ಮಾಂಸ ಮಜ್ಜಾ ಇವುಗಳಿಂದ ಕೂಡಿರುವುದು ಎಂದು ತನ್ನಲ್ಲೇ ತಾನು ವಿವೇಕದಿಂದ ವಿಚಾರ ಮಾಡಿ ಆ ವಿಷಯದಲ್ಲಿ ವೈರಾಗ್ಯ ಹೊಂದಬೇಕು.

ಸೂತ್ರಂ - ಅತು ಪ್ರಧಾನಹೇತುವನ್ನು ॥ ೧೦೬ ॥

ಶ್ಲೋಕಃ – ❋ ವಿರಕ್ತೇರಬಲಾದೇಹ ದೋಷದರ್ಶನಮೇವಕಿಂ ।
ಪ್ರಧಾನ ಕಾರಣಂ ಚೇತಿ ಚೇತ್ಯಧಾನಂ ನತತ್ಕಿಲ ॥ ೧೪೫ ॥

ತಾತ್ಪರ್ಯ – ವಿರಕ್ತಿಗೆ ಹೆಂಗಸರ ಶರೀರ ದೋಷ ದರ್ಶನವೇ ಪ್ರಧಾನವಾದ ಕಾರಣವೋ ಅಂದರೆ ಹೇಳುತ್ತಾರೆ. ಹೆಂಗಸರ ಶರೀರ ದೋಷದರ್ಶನ ಮುಖ್ಯ ಕಾರಣವಲ್ಲ.

ಸೂತ್ರಂ - ಅವ್ವಾಪ್ತತ್ತೈಯೇ ಪ್ರಧಾನಹೇತು ॥ ೧೦೭ ॥

ಶ್ಲೋಕಃ – ✱ ನಾರಾಯಣೈಕ ಭೋಗಸ್ಯ ಸ್ವಸ್ವರೂಪಸ್ಯ ನಿತ್ಯಶಃ ।
ಅಪ್ರಾಪ್ತಿರೇವ ಹೇತುರ್ಹಿ ಪ್ರಾಧಾನ್ಯೇನ ಭವೇದಿಹ ॥ ॥ ೧೪೬ ॥

ತಾತ್ಪರ್ಯ – ಪ್ರಧಾನಹೇತು ಯಾವುದೆಂದರೆ ಹೇಳುತ್ತಾರೆ. ಭಗವದೇಕಭೋಗವಾದ ಸ್ವರೂಪಕ್ಕೆ ಸೇರದೇ ಇರುವಿಕೆಯೇ ಪ್ರಧಾನಹೇತು.

ಸೂತ್ರಂ - ಭಗವದ್ವಿಷಯತ್ತಿಲಿಳಿಹಿರತುಂ ಗುಣಂ ಕಂಡನ್ನು
ಸ್ವರೂಪಪ್ರಾಪ್ತವೆನ್ನು ॥ ೧೦೮ ॥

ಶ್ಲೋಕಃ – ✱ ಭಗವದ್ವಿಷಯೇ ತಾವತ್ಪ್ರಾವಣ್ಯಂ ಚೇತನಸ್ಯ ತು ।
ತತ್ಕಲ್ಯಾಣ ಗುಣಾನ್ನಾಸ್ತಿ ಸ್ವಸ್ವರೂಪ ಭವಂ ಭವೇತ್ ॥ ॥ ೧೪೭ ॥

ತಾತ್ಪರ್ಯ – ಭಗವದ್ವಿಷಯದಲ್ಲಿ ಪ್ರಾವಣ್ಯ ಮಾಡುವುದು ಅವನ ಕಲ್ಯಾಣ ಗುಣಗಳನ್ನು ನೋಡಿಯಲ್ಲ. ಈ ಚೇತನನ ಸ್ವರೂಪವೇ ಅಂತಹದು.

ಸೂತ್ರಂ - ಇಪ್ಪಡಿ ಕೊಳ್ಳಾದ ಪೋದು ಗುಣಹೀನವೆನ್ನು ನಿನ್ನೈತ್ತದಶೈಯಿಲ್
ಭಗವದ್ವಿಷಯ ಪ್ರವೃತ್ತಿಯುಂ ದೋಷಾನುಸಂಧಾನದಶೈಯಿಲ್
ಸಂಸಾರತ್ತಿಲ್ ಪ್ರವೃತ್ತಿಯುಂಕೂಡಾತು ॥ ೧೦೯ ॥

ಶ್ಲೋಕಃ – ✱ ನಾಂಗೀಕ್ರಿಯೇತ ಯದಿ ಚೈವಮನಾಗಮೇನ
ವಿಷ್ಣೋರ್ವಿಯೋಗ ಪರಿತಪ್ತ ಹೃದೋಜನಸ್ಯ ।
ನ ಸ್ಯಾತ್ಪ್ರವೃತ್ತಿರಗುಣೇತಿ ಚ ತದ್ಗತಾ ಹಿ
ಸಂಸಾರ ದೋಷಮನನಾತ್ತದನುಪ್ರವೃತ್ತಿಃ ॥ ॥ ೧೪೮ ॥

ತಾತ್ಪರ್ಯ – ಹಿಂದೆ ಹೇಳಿದಂತೆ ಅಂಗೀಕರಿಸದೇ ಇದ್ದ ಪಕ್ಷದಲ್ಲಿ ವಿರೋಧವನ್ನು ತೋರಿಸುವರು. ಭಗವಂತನ ವಿರಹವನ್ನು ಸಹಿಸಲಾರದೆ ಈ ಚೇತನನು ಪರಿತಪಿಸುತ್ತಿರುವಾಗ ಒಡನೆಯೇ ಭಗವಂತನು ಬರದಿರಲು, "ಅವನೈಯಲ್ಲದರಿಯೇನ್" ಎಂಬಂತೆ ಗುಣಹೀನನೆಂದು ನೆನೆಸಿ ಅವನ ಪ್ರಾಪ್ತಿಗಾಗಿ ಪ್ರವೃತ್ತಿಸುವುದೂ ಮತ್ತು ಸಂಸಾರದಲ್ಲಿ ದೋಷವನ್ನನುಸಂಧಿಸಿದಾಗ ಅದನ್ನು ಬಿಡದೇ ಶಾಸ್ತ್ರವಿಹಿತವೆಂದು ಅದರಲ್ಲಿ ಪ್ರವೃತ್ತಿಯೂ ಕೂಡದು.

ಸೂತ್ರಂ - ಕೊಡಿಯ ವೆನ್ನೆಂಜಮವನೆನ್ನೇ ಕಿಡಕ್ಕುಂ ಅಡಿಯೇನ್ ನಾನ್ ಪಿನ್ನುಮುನ್
ಶೇವಡಿಯನ್ನಿ ನಯವೇನ್ ಎನ್ನಾನಿನ್ನಾರ್ಹಳಿರೇ ॥ ೧೧೦ ॥

ಶ್ಲೋಕಃ – ✱ ಗುಣ ಹೀನೇಽಪಿ ಭಗವದ್ವಿಷಯೇ ದೃಶ್ಯತೇ ಖಲು ।
ಪ್ರವೃತ್ತಿಶಶಿಶಜಿತ್ಸಾಕ್ಷಾ್ಯ ತಲ್ಲಾಭೇಚ್ಛಾಪ್ರವೃತ್ತಯಾ ॥ ॥ ೧೪೯ ॥

ತಾತ್ಪರ್ಯ – ಗುಣಹೀನನಾದ ಭಗವದ್ವಿಷಯ ಪ್ರವೃತಿಯನ್ನು ಹೇಳಿರುವ ಪಾಶುರವನ್ನು ಇದರಲ್ಲಿ ಹೇಳುತ್ತಾರೆ. ತನ್ನ ಕೆಲಸ ಮಾಡಿಕೊಳ್ಳುವುದರಲ್ಲಿ ಸಮರ್ಥನು, ಇತರರ ಕಷ್ಟವನ್ನು ತಿಳಿಯದೇ ಇರುವವನು, ಒಬ್ಬರ ಕೈಗೂ ಸಿಕ್ಕದೇ ಇರುವವನು, ವಂಚಕನು. ಈ ರೀತಿ ಅವನ ಗುಣ ಹಾನಿಗಳನ್ನು ಹೇಳಿ ಅವನು ಹೀಗಿದ್ದರೂ, ನನ್ನ ಕ್ರೂರವಾದ ಮನಸ್ಸು ಅವನನ್ನು ಬಿಟ್ಟಿರಲಾರದು. ಬಿದುರಿನಲ್ಲಿ ಹುಟ್ಟಿದ ಹುಳುವು

ಬಿದುರನ್ನೇ ಭುಜಿಸಿ ಜೀವಿಸುವುದೇ ಹೊರತು ಭೋಗ್ಯವಾದ ಕಬ್ಬನ್ನು ಭುಜಿಸುವುದಿಲ್ಲವಷ್ಟೇ ಎಂದು ನಮ್ಮಾಳ್ವಾರ್ರು ಗುಣಹೀನನಾದ ಭಗವದ್ವಿಷಯದಲ್ಲಿ ಪ್ರವೃತ್ತಿಸಿರುವುದನ್ನು ತೋರಿಸಿದ್ದಾರೆ.

ಸೂತ್ರಂ - ಗುಣ ಕೃತದಾಸ್ಯತ್ತಿಲುಂ ಕಾಟ್ಟಿಲ್ ಸ್ವರೂಪ
ಪ್ರಯುಕ್ತಮಾನ ದಾಸ್ಯಮಿರೇ ಪ್ರಧಾನಂ ॥ ೧೧೧ ॥

ಶ್ಲೋಕಃ - ❋ ಗುಣ ಪ್ರಯುಕ್ತ ಸಂಭೂತಂ ಯದ್ದಾಸ್ಯಂ ತದಪೇಕ್ಷಯಾ ।
ಸ್ವಸ್ವರೂಪ ಸಮುದ್ಭೂತಂ ದಾಸ್ಯಂ ಶ್ರೇಷ್ಠತಮಂ ವಿದುಃ ॥ ೧೫೦ ॥

ತಾತ್ಪರ್ಯ - ಭಗವಂತನ ಕಲ್ಯಾಣಗುಣಗಳಿಗೆ ಸೋತು ದಾಸನಾಗುವುದಕ್ಕಿಂತಲೂ, ತನ್ನ ಶೇಷತ್ವ ಪ್ರಯುಕ್ತವಾದ ದಾಸ್ಯವೇ ಶ್ರೇಷ್ಠವಾದದ್ದು.

ಸೂತ್ರಂ - ಅನಸೂಯೈಕ್ಕು ಪಿರಾಟ್ಟಿಯರುಳಿಚ್ಚಿಯ್ದ ವಾರ್ತೈಯೈ ಸ್ಮರಿಪ್ಪದು ॥ ೧೧೨ ॥

ಶ್ಲೋಕಃ - ❋ ಅತ್ರೇರಾಶ್ರಮಮಾಗತೇ ರಘುಪತೌ ಸೀತಾ ತು ತದ್ಭಾರ್ಯಯಾ
ಪ್ರೋಕ್ತಾ ಸಂಪದಮಾತ್ಮಬಂಧುಜನತಾಂ ಪ್ರೋಜ್ಝಿತ್ಯ ರಾಜ್ಯಂ ಸ್ವಕಂ ।
ರಾಮಂ ತದ್ಗುಣ ನಿಘ್ನಮಾನಸತಯೇವಾನ್ವಾವ್ರಜೋಹೀತಿ ಸಾ
ಪ್ರಾಹ ಸ್ವಾನುಗುಣಂ ಹಿ ದಾಸ್ಯಮನುಗಾ ತಂ ನಿರ್ಗುಣಂ ಚಾಪ್ಯಹಂ ॥ ೧೫೧ ॥

ತಾತ್ಪರ್ಯ - ಹಿಂದೆ ಹೇಳಿದ ಅರ್ಥಕ್ಕೆ ಸಂವಾದಕವಾಗಿ ಸೀತೆಯು ಅನಸೂಯೆಗೆ ಹೇಳಿದ ಮಾತನ್ನು ಸ್ಮರಣಕ್ಕೆ ತರುತ್ತಾರೆ. ಶ್ರೀರಾಮಚಂದ್ರನು ಅತ್ರಿಮಹರ್ಷಿಯ ಆಶ್ರಮಕ್ಕೆ ಬಂದು, ಅತ್ರಿಮಹರ್ಷಿಯೊಡನೆ ಮಾತನಾಡುತ್ತಿರುವಾಗ ಒಳಗಡೆ ಅನಸೂಯೆಯು, 'ಅಮ್ಮಾ ಸೀತೆ, ನೀನು ಐಶ್ವರ್ಯವನ್ನೂ ಬಂಧು ಜನಗಳನ್ನೂ ರಾಜ್ಯವನ್ನೂ ಬಿಟ್ಟು, ರಾಮನ ಕಲ್ಯಾಣಗುಣಗಳಿಗೆ ಸೋತು ಅವನೊಡನೆ ಕಾಡಿಗೆ ಬಂದದ್ದು ಒಳ್ಳೇದಾಯಿತು. ಸ್ತ್ರೀಯರಿಗೆ ಪತಿಯೇ ದೈವವಲ್ಲವೇ' ಎಂದು ಹೇಳುತ್ತಲು, ಸೀತೆಯು, 'ಪೂಜ್ಯಳೇ, ಇದೇನು ಹೀಗೆ ಹೇಳುವಿರಿ. ನನಗೆ ದಾಸ್ಯವು ಸ್ವತಸ್ಸಿದ್ಧವಲ್ಲವೆ. ಅವರ ಗುಣಗಳಿಗೆ ಸೋತು ಬಂದವಳಲ್ಲ. ಅವರು ನಿರ್ಗುಣರೇ ಆಗಿರಲಿ ಕುರೂಪಿಯೇ ಆಗಿರಲಿ, ಅವರನ್ನು ಅನುಸರಿಸಿ ಸೇವೆ ಮಾಡುವುದು ನನ್ನ ಸ್ವರೂಪವು' ಎಂದು ಹೇಳಿದಳಲ್ಲವೇ. ಆದ್ದರಿಂದ ಗುಣ ಪ್ರಯುಕ್ತವಾದ ದಾಸ್ಯಕ್ಕಿಂತಲೂ ಸ್ವರೂಪ ಪ್ರಯುಕ್ತವಾದ ದಾಸ್ಯವೇ ಪ್ರಧಾನವು.

ಸೂತ್ರಂ - ಭಗವದ್ವಿಷಯ ಪ್ರವೃತ್ತಿ ತಿನ್ನೈ ಶೇರುವೋ ವೆನ್ನಿಲ್ ಅತುಕ್ಕಡಿ
ಪ್ರಾವಣ್ಯಂ ಅತುಕ್ಕಡಿ ಸಂಬಂಧಂ ಅತು ತಾನ್
ಔಪಾಧಿಕಮನ್ನು ಸತ್ತಾಪ್ರಯುಕ್ತಂ ॥ ೧೧೩ ॥

ಶ್ಲೋಕಃ - ❋ ಭಗವದ್ವಿಷಯ ಪ್ರವೃತ್ತಿರತ್ರ
ಪ್ರವಣತ್ವಾದ್ಭಗವತ್ಕನಾಶಿನೋ ಹಿ ।
ನನು ಶೇಷಿ ಸುಶೇಷ ಭಾವಬಂಧಾ
ತ್ಪ್ರವಣತ್ವಂ ತ್ವನುಪಾಧಿಕಂ ಭವೇದ್ಧಿ ॥ ೧೫೨ ॥

ತಾತ್ಪರ್ಯ - ಭಗವದ್ವಿಷಯ ಪ್ರವೃತ್ತಿಯು ಅತ್ಯಧಿಕವಾದ ಸ್ನೇಹದಿಂದುಂಟಾಗುವುದು. ಆ ಅತ್ಯಧಿಕವಾದ ಸ್ನೇಹವು ಶೇಷಿ ಶೇಷಭಾವ ಸಂಬಂಧದಿಂದುಂಟಾಗುವುದು. ಆದ್ದರಿಂದ ಅದು ನಿರುಪಾಧಿಕವಾದ್ದು.

ಸೂತ್ರಂ - ಅಂದ ಸತ್ತೈಪ್ರಾವಣ್ಯಕಾರ್ಯವಾನವನುಭವವಿಲ್ಲಾದಪೋದು
ಕುಲೈಯುಂ ಅತುಕುಲೈಯಾವೈಕ್ಕಾಹ ವರುವುವೈಯೆಲ್ಲಾ
ವುವರ್ಜನೀಯಂಗಳುವಾಯ್ ಪ್ರಾಪ್ತಂಗಳು ವಾಯಿರುಕ್ಕುಂ
ಆ ಹೈಯಾಲೇ ಭಗವದ್ವಿಷಯು ಪ್ರವೃತ್ತಿ ಶೇರುಂ ॥ ೧೧೪ ॥

ಪಿಳ್ಳೈ ಲೋಕಾಚಾರ್ಯರ್ ತಿರುವಡಿಹಳೇ ಶರಣಂ

ಶ್ಲೋಕಃ - ✱ ಚೇತನಸ್ಯ ತು ಸತ್ಯಾತಿಸ್ನೇಹಾದನುಭವಂ ಹರೇಃ ।
ವರ್ಧಯತ್ಕತ ಏವಾತ್ರ ಪ್ರವೃತ್ತಿರಪಿ ಜಾಯತೇ ॥ ೧೫೩ ॥

ತಾತ್ಪರ್ಯ - ಚೇತನನ ಸತ್ತೆಯುಂ ಅತ್ಯಂತ ಸ್ನೇಹಕಾರ್ಯವಾದ ಭಗವದನುಭವವಿಲ್ಲದ ಕಾಲದಲ್ಲಿ ನಾಶವಾಗುವುದು. ಆ ಸತ್ತೆಯು ನಾಶವಾಗದೇ ಇರುವುದಕ್ಕಾಗಿ ಮಾಡುವ ಮಡಲೇತ್ತುವುದು ಇವೇ ಮೊದಲಾದ ಪ್ರವೃತ್ತಿಗಳನ್ನು ಬಿಡುವುದಕ್ಕಾಗುವುದಿಲ್ಲ. ಅದು ಪ್ರಾಪ್ತವಾಗಿಯೂ ಆಗುವುದು. ಆದ್ದರಿಂದ ಭಗವದ್ವಿಷಯಪ್ರವೃತ್ತಿಯುಂ ಸತ್ತೆ ನಿಲ್ಲುವುದಕ್ಕಾಗಿ ಉಂಟಾಗಿಯೇ ಉಂಟಾಗುವುದು.

ಇತಿ ಶ್ರೀ ಬಾಲ ಧನ್ವಿ ಜಗ್ಗೂವಕುಲಭೂಷಣ
ಕವಿವಿರಚಿತೇ ಸಂಸ್ಕೃತ ಶ್ಲೋಕಾತ್ಮಕೇ
ಶ್ರೀ ವಚನಭೂಷಣೇ
ಪ್ರಥಮ ಪ್ರಕರಣಂ

– ಶ್ರೀಃ –

ಶುಭಮಸ್ತು

ಶ್ರೀ ವಚನಭೂಷಣಂ

ಅಥ ದ್ವಿತೀಯ ಪ್ರಕರಣಂ

ಸೂತ್ರಂ - ಪ್ರಾಪಕಾಂತರ ಪರಿತ್ಯಾಗತ್ತುಕ್ಕುಂ ಅಜ್ಞಾನಾಶಕ್ತಿಹಳನ್ನು ಸ್ವರೂಪವಿರೋಧವೇ ಪ್ರಧಾನಹೇತು ॥ ೧೧೩ ॥

ಶ್ಲೋಕಃ – ❋ ಪ್ರಾಪಕಾಂತರ ವಿಸರ್ಜನಸ್ಯ ತ -
ದ್ಜ್ಞಾನ ಶಕ್ತಿವಿರಹೋ ನ ಕಾರಣಂ ।
ಮುಖ್ಯ ಕಾರಣಮಿಹ ಸ್ವರೂಪ ತ -
ತ್ಪಾರತಂತ್ರ್ಯ ಸಂವಿರೋಧ ಏವ ಹಿ ॥ ೧೫೪ ॥

ತಾತ್ಪರ್ಯ – ಬೇರೆ ವಿಷಯವನ್ನು ಬಿಡುವುದಕ್ಕೂ ಭಗವದ್ವಿಷಯವನ್ನು ಆಂಗೀಕರಿಸುವುದಕ್ಕೂ ಮುಖ್ಯವಾದ ಕಾರಣವನ್ನು ಹಿಂದೆ ಹೇಳಿದರಷ್ಟೆ. ಇದೇ ಪ್ರಸಂಗದಲ್ಲಿ ಬೇರೇ ಉಪಾಯಂಗಳನ್ನು ಬಿಡುವುದಕ್ಕೆ ಮುಂಖ್ಯ ಕಾರಣ ಯಾವುದೆಂದರೆ ಅದನ್ನು ಈ ಸೂತ್ರದಲ್ಲಿ ಹೇಳುತ್ತಾರೆ. ಪ್ರಪತ್ತ್ಯುಪಾಯವನ್ನು ಬಿಟ್ಟು ಬೇರೇ ಉಪಾಯಗಳನ್ನು ತ್ಯಜಿಸಲು ಅಜ್ಞಾನವೂ ಅಶಕ್ತಿಯೂ ಕಾರಣವಲ್ಲ, ಭಗವಂತನಿಗೆ ಅತ್ಯಂತ ಪರತಂತ್ರನಾಗಿರುವಿಕೆಗೆ ಸೇರದೇ ವಿರೋಧವೇ ಪ್ರಧಾನ ಕಾರಣವು.

ಸೂತ್ರಂ - ಪ್ರಾಪಕಾಂತರಮುಜ್ಜುಕ್ಕುಪಾಯಂ ॥ ೧೧೪ ॥

ಶ್ಲೋಕಃ – ❋ ಸ್ವರಕ್ಷಣೇ ಸ್ವಯತ್ನಸ್ಯ ಗಂಧಾ ಸಹಮಜಾನತಾಂ ।
ಸ್ವರೂಪಂ ಸ್ಯಾದುಪಾಯಸ್ತು ಮರ್ತ್ಯಾನಾಂ ಪ್ರಾಪಕಾಂತರಂ ॥ ೧೫೫ ॥

ತಾತ್ಪರ್ಯ – ಪ್ರಾಪಕಾಂತರವೂ ಕೂಡ ಮೋಕ್ಷೋಪಾಯವೆಂದು ಹೇಳಿರುವಾಗ ಅದನ್ನು ತಳ್ಳಿಹಾಕಬಹುದೇ ಅಂದರೆ ಹೇಳುತ್ತಾರೆ. ತನ್ನ ರಕ್ಷಣೆಯಲ್ಲಿ ತನ್ನ ಪ್ರಯತ್ನದ ಲೇಶಾಂಶವನ್ನೂ ಸಹಿಸದೇ ಇರುವ ಪಾರತಂತ್ರ್ಯ ಸ್ವರೂಪವನ್ನು ಪ್ರಕಾಶಪಡಿಸುವ ಜ್ಞಾನವಿಲ್ಲದ ಅಜ್ಞರುಗಳಿಗೆ ಪ್ರಾಪಕಾಂತರವು ಉಪಾಯವಾಗುವುದು.

ಸೂತ್ರಂ - ಜ್ಞಾನಿಹಳುಕ್ಕಪಾಯಂ ॥ ೧೧೫ ॥

ಶ್ಲೋಕಃ – ❋ ಯೇ ತು ಸ್ವರೂಪಯಾಥಾತ್ಮ್ಯಜ್ಞಾನವಂತೋ ಮನೀಷಿಣಃ ।
ತೇಷಾಮುಪಾಯ ಏವ ಸ್ಯಾದುಪಾಯಃ ಪ್ರಾಪಕಾಂತರಂ ॥ ೧೫೬ ॥

ತಾತ್ಪರ್ಯ – ಸ್ವರೂಪ ಯಾಥಾತ್ಮ್ಯ ಜ್ಞಾನವುಳ್ಳ ಜ್ಞಾನಿಗಳಿಗೆ ಪ್ರಾಪಕಾಂತರವನ್ನು ಉಪಾಯವನ್ನಾಗಿ ಸ್ವೀಕರಿಸುವುದು ಅಪಾಯಕರವು.

ಸೂತ್ರಂ - ಅಪಾಯ ಮಾಯ್ತ್ತದು ಸ್ವರೂಪ ನಾಶಕಮಾಹ್ಯೆಯಾಲೇ ॥ ೧೧೪ ॥

ಶ್ಲೋಕಃ – ❋ ಅನ್ಯೋಪಾಯೋ ವ್ರಜೇತ್ಸತ್ಯಂ ಸ್ವರೂಪ ಜ್ಞಾನಿನಾಂ ನೃಣಾಂ ।
ಪಾರತಂತ್ರ್ಯ ಸ್ವರೂಪಸ್ಯ ನಾಶಕತ್ವಾದಪಾಯತಾಂ ॥ ೧೫೭ ॥

ತಾತ್ಪರ್ಯ – ಸ್ವರೂಪಜ್ಞಾನವುಳ್ಳ ಜ್ಞಾನಿಗಳಿಗೆ ಬೇರೇ ಉಪಾಯವು ತನ್ನ ಪಾರತಂತ್ರ್ಯ ಸ್ವರೂಪವನ್ನು ನಾಶ ಮಾಡುವುದಾದ್ದರಿಂದ ಅಪಾಯಕರವು.

ಸೂತ್ರಂ - ನೆರಿ ಕ್ಕಾಟ್ಟಿ ನೀಕ್ಕುದಿಯೋ ಎನ್ನಾನಿನ್ನದಿರೇ ॥ ೧೧೫ ॥

ಶ್ಲೋಕಃ – ❋ ಉಪಾಯಾಂತರವಶಾದಶ್ಯ ವಿನಾತ್ಮಾನಂ ಶ್ರಿಯಃಪತೇ ।
ತ್ಯಕ್ತುಂ ಮಾಂ ಯತಸೇಹಂ ತೇತ್ಯೂಚೇ ಪ ಕುಲಭೂಷಣಃ ॥ ೧೫೮ ॥

ತಾತ್ಪರ್ಯ – ನಮ್ಮಾಳ್ವಾರ್ರು ಕೂಡಾ ಇದೇ ಮಾತನ್ನೇ **ಹೇಳಿರುವರು**. ಬೇರೇ ಉಪಾಯವನ್ನು **ತೋರಿಸಿ** ನನ್ನನ್ನು ಬಿಟ್ಟುಬಿಡಲು ಯೋಚಿಸಿರುವೆಯಾ **ಶ್ರಿಯಃಪತಿಯೇ** ಎಂದು.

ಸೂತ್ರಂ - ವರ್ತತೇ ಮೇ ಮಹದ್ಭಯಂ ಎನ್ಗೈಯಾಲೇ ಭಯಜನಕಂ ಮಾ ಶುಚಃ ಎನ್ಗೈಯಾಲೇ ಶೋಕಜನಕಂ ॥ ೧೫೦ ॥

ಶ್ಲೋಕಃ – ❋ ಯದ್ಯುಪಾಯತ್ವ ಬುದ್ಧಿಸ್ಸ್ಯಾದ್ಜ್ಞಾನಿನಾಂ ಪ್ರಾಪಕಾಂತರೇ ।
ಸಾಧ್ವಸಂಜನಯೇತ್ಸೈವ ತೇಷಾಂ ಶೋಕಂ ಚ ಸರ್ವದಾ ॥ ೧೫೯ ॥

ತಾತ್ಪರ್ಯ – ಇದರ ಸ್ವರೂಪನಾಶಕತ್ವಪ್ರಯುಕ್ತವಾದ ದೂಷಣವನ್ನು ಹೇಳುತ್ತಾರೆ. "ಕಾಲೇಷ್ವಪಿ ಚ ಸರ್ವೇಷು ದಿಕ್ಷು ಸರ್ವಾಸು ಚಾಚ್ಯುತ । ಶರೀರೇ ಚ ಗತೌ ಚಾಪಿ ವರ್ತತೇ ಮೇ ಮಹದ್ಭಯಂ" ಎಂದು ಹೇಳಿರುವುದರಿಂದ ಉಪಾಯಾಂತರಾನುಷ್ಠಾನಕ್ಕೆ ಯೋಗ್ಯವಾದ ಕಾಲ ದೇಶ ದೇಹ ವಿಷಯವಾಗಿಯೂ ಉಪಾಯಾಂತರ ವಿಷಯವಾಗಿಯೂ ನನಗೆ ಸರ್ವದಾ ಭಯವುಂಟಾಗುತ್ತಲಿದೆ ಎಂದು ಹೇಳಿದಂತಾಯಿತು. ಉಪಾಯಾಂತರವನ್ನು ಕೇಳಿದ ಮೇಲೆ ಅರ್ಜುನನಿಗೆ ಶೋಕವು ಉಂಟಾಗುತ್ತಲು ಸ್ವರೂಪಾನುರೂಪವಾದ ಉಪಾಯವನ್ನು ಉಪದೇಶಿಸಿ "ಮಾಶುಚಃ" ಎಂದು ಶೋಕನಿವಾರಣೆ ಮಾಡಿದ್ದರಿಂದಲೂ ಸ್ವರೂಪ ವಿರೋಧಿಯಾದ ಪ್ರಾಪಕಾಂತರವು ಜ್ಞಾನಿಗಳಿಗೆ ಭಯಜನಕವೂ ಶೋಕಜನಕವೂ ಆಗುವುದು.

ಸೂತ್ರಂ - ಇಪ್ಪಡಿ ಕೊಳ್ಳಾದ ಪೋದು ಏತತ್ಪ್ರವೃತ್ತಿಯಿಲ್ ಪ್ರಾಯಶ್ಚಿತ್ತ ವಿಧಿ ಕೂಡಾದು ॥ ೧೫೧ ॥

ಶ್ಲೋಕಃ – ❋ ಸ್ವರೂಪ ನಾಶಕತ್ವಂ ತು ತಸ್ಯ ನಾಂಗೀಕ್ರಿಯೇತ ಚೇತ್ ।
ಅನ್ಯೋಪಾಯ ಪ್ರವೃತ್ತೌ ನ ಪ್ರಾಯಶ್ಚಿತ್ತಿರ್ವಿಧೀಯತೇ ॥ ೧೬೦ ॥

ತಾತ್ಪರ್ಯ – ಉಪಾಯಾಂತರವು ಸ್ವರೂಪನಾಶಕವೆಂದು ಅಂಗೀಕರಿಸದೇ ಇದ್ದ ಪಕ್ಷದಲ್ಲಿ ಪ್ರಪನ್ನನಾದವನಿಗೆ ಪ್ರಮಾದದಿಂದ ಉಪಾಯಾಂತರದಲ್ಲಿ ಪ್ರವೃತ್ತಿಯುಂಟಾದ ಕಾಲದಲ್ಲಿ ಅಪಾಯ ಪ್ರವೃತ್ತಿಗೆ ವಿಧಿಸುವಂತೆ ಪ್ರಾಯಶ್ಚಿತ್ತವಿಧಿಯು ಕೂಡದು.

ಸೂತ್ರಂ - திருக்குருஹைப்பிரான்பிள்ளான் பணிக்கும் படி மதிரா பிந்து மிஶ்ரமான ஶாத கும்ப மய கும்ப கத தீர்த்த ஸலிலம் போலே அஹங்கார மிஶ்ரமான உபாயாந்தரம் ॥ ೧೨೨ ॥

ಶ್ಲೋಕಃ – ✱ ಯಃ ಪ್ರಾಪಕಾಂತರಮುಪಾಯತಯಾ ಭಜೇದ್ವಾ
ಗ್ರೋಷೀ ಹ್ಯಹಂ ಕೃತಿಯುತಸ್ಸ ತು ಚೇತನ ಸ್ಸ್ಯಾತ್ ।
ಸೌವರ್ಣ ಕುಂಭ ಮದಿರಾಪೃಷದಾಕ್ತ ತೀರ್ಥ
ತುಲ್ಯೋಯಮಾತ್ಮ ಗುಣ ಭೂಷಣ ಭೂಷಿತೋಪಿ ॥ ॥ ೧೬೧ ॥

ತಾತ್ಪರ್ಯ – ಈ ರೀತಿ ಸ್ವರೂಪನಾಶಕವಾದ ಉಪಾಯಾಂತರವು ಅತ್ಯಂತ ನಿಷಿದ್ಧವು ಎಂದು ತಿರುಕ್ಕುರುಹೈ ಪ್ಪಿರಾನ್ಪಿಳ್ಳಾನ್ ಎಂಬ ಅಭಿಯುಕ್ತರ ವಾಕ್ಯದಿಂದ ತಿಳಿಸುತ್ತಾರೆ. ಅವರು ಹೇಳಿರುವ ವಾಕ್ಯ ಇದು. ಅತ್ಯಂತ ಶಾಸ್ತ್ರನಿಷಿದ್ಧವಾದ ತನ್ನ ಸ್ಪರ್ಶದಿಂದ ತನ್ನ ಹಾಗೆಯೇ ಎಲ್ಲಾ ವಸ್ತುಗಳನ್ನೂ ನಿಷಿದ್ಧವನ್ನಾಗಿಸುವ ಮದ್ಯದ ಒಂದು ಬಿಂದು ಮಿಶ್ರವಾದ ಚಿನ್ನದ ಕೊಡದಲ್ಲಿ ತುಂಬಲ್ಪಟ್ಟ ಪುಣ್ಯ ತೀರ್ಥದಂತೆ ಅಹಂಕಾರದೊಡನೆ ಕೂಡಿರುವ ಉಪಾಯಾಂತರವು ಅತ್ಯಂತ ನಿಷಿದ್ಧವು.

ಸೂತ್ರಂ - ரத்னத்துக்கு ப்பலஹரை போலேயும் ராஜ்யத்துக்கு எலுமிச்சம் பழம் போலேயும் ஫லத்துக்கு ஸத்ருஶமன்று ॥ ೧೨೩ ॥

ಶ್ಲೋಕಃ – ✱ ವರಾಟಿಕಾ ಪ್ರದಾನೇನ ರತ್ನಾದಾನಂ ಯಥಾ ಭವೇತ್ ।
ಜಂಬೀರ ಫಲದಾನೇನ ರಾಜ್ಯಾದಾನಂ ಪ್ರಭೋರ್ಯಥಾ ॥ ॥ ೧೬೨ ॥

ಭಕ್ತಿ ವಾತ್ರಂ ತಥೋದ್ದಿಶ್ಯ ಭಕ್ತಿ ವಶ್ಯೇನ ವಿಷ್ಣುನಾ ।
ಮೋಕ್ಷ ರೂಪ ಫಲಸ್ಯೇದಂ ದತ್ತಸ್ಯ ಸದೃಶಂ ನಹಿ ॥ ॥ ೧೬೩ ॥

ತಾತ್ಪರ್ಯ – ಇನ್ನೂ ಒಂದು ದೂಷಣವನ್ನು ಹೇಳುತ್ತಾರೆ. ದ್ವೀಪಾಂತರದಲ್ಲಿ ವಾಸ ಮಾಡುವವರಿಗೆ ಕವಡೆಯು, ದುರ್ಲಭವು. ಅವರಲ್ಲಿ ಶ್ರೇಷ್ಠವಾದ ರತ್ನಗಳು ಇದ್ದರೂ ಅವುಗಳನ್ನು ಆಭರಣವನ್ನಾಗಿ ಉಪಯೋಗಿಸುವುದಕ್ಕೆ ತಿಳಿಯದು. ಕವಡೆಗಳನ್ನು ವಾತ್ರ ಆಭರಣವನ್ನಾಗಿ ಉಪಯೋಗಿಸುತ್ತಾರೆ. ಆದ್ದರಿಂದ ಆ ದ್ವೀಪಾಂತರ ವಾಸಿಗಳಿಗೆ ಕವಡೆಗಳನ್ನು ಕೊಟ್ಟು ಬೆಲೆ ಬಾಳುವ ರತ್ನಗಳನ್ನು ಅವರಿಂದ ತೆಗೆದುಕೊಳ್ಳುವಂತೆಯೂ ಮಹಾರಾಜನಿಗೆ ಒಂದು ನಿಂಬೇಹಣ್ಣನ್ನು ಕೊಟ್ಟು ಅವನಿಂದ ಸಂಪತ್ಸಮೃದ್ಧವಾದ ರಾಜ್ಯವನ್ನು ತೆಗೆದುಕೊಳ್ಳುವಂತೆಯೂ ಭಕ್ತಿವಾತ್ರದಿಂದ ಮೋಕ್ಷಸಾಮ್ರಾಜ್ಯ ವೆಂಬ ಫಲಕ್ಕೆ ಸದೃಶವಾಗಲಾರದು.

ಸೂತ್ರಂ - தான் தரித்ரனாஹையாலே தனக்குக்கொடுக்கலாவதொன்றில்லை ॥ ೧೨೪ ॥

ಶ್ಲೋಕಃ – ✱ ಅಕಿಂಚನತಯಾ ಸ್ವಸ್ಮಿಂಶ್ಚೇತನೇ ವಸ್ತು ಕಿಂಚನ ।
ದಾತವ್ಯಂ ವಿಷ್ಣವೇ ನಾಸ್ತಿ ತದೀಯಂ ಸರ್ವಮೇವ ಹಿ ॥ ॥ ೧೬೪ ॥

ತಾತ್ಪರ್ಯ – ತಾನು ಅಕಿಂಚನನಾದ್ದರಿಂದ ಅಂದರೆ ತನ್ನದಾಗಿ ತನ್ನಲ್ಲಿ ಯಾವುದೂ ಇಲ್ಲದೇ ಇರುವುದರಿಂದಲೂ, ಎಲ್ಲವೂ ಭಗವಂತನದೇ ಆಗಿರುವುದರಿಂದಲೂ ಅವನಿಗೆ ನಾವು ಕೊಡತಕ್ಕದ್ದು ಯಾವುದೂ ಇಲ್ಲ.

ಸೂತ್ರಂ - ಅವನ್ ತಂದತ್ತೈ ಕೊಡುಕ್ಕುಮಿಡತ್ತಿಲ್ ಅಡೈವಿಲೇ ಕೊಡುಕ್ಕಿಲ್ ಅನುಪಾಯಮುಂ ಅಡೈವುಕ್ಕೆಡ ಕೊಡುಕ್ಕಿಲ್ ಕಳವುವೆಳಿಪ್ಪಡುಂ ॥ ೧೩೫ ॥

ಶ್ಲೋಕಃ – ❋ ದತ್ತಂ ತೇನ ಕಳೇಬರಂ ಭಗವತಾ ಜೀವಾತ್ಮನಾಮಿಂದ್ರಿಯಾ
ಣ್ಯೇವಂ ಸ್ವಾರ್ಚನ ವಂದನಾದಿ ಕರಣಾಯೈವಾರ್ಪಯೇತಿ ಸ್ವಯಂ ।
ಕುರ್ಯಾಚ್ಚೇನ್ನಸುಜಸ್ತಥೈವ ನ ತದಾ ತತ್ಸಾಧನತ್ವಂ ವ್ರಜೇ -
ತ್ತಸ್ಮೈಸ್ವೀಯ ಧಿಯಾರ್ಪಣಂ ಯದಿ ತದಾ ದೈವಸ್ವಚೌರ್ಯಂ ಭವೇತ್ ॥ ॥ ೧೬೫ ॥

ತಾತ್ಪರ್ಯ – 'ವಿಚಿತ್ರಾ ದೇಹ ಸಂಪತ್ತಿರೀಶ್ವರಾಯ ನಿವೇದಿತುಂ' ಎಂಬಂತೆ ಭಗವಂತನು ಈ ಚೇತನನಿಗೆ ಕರಣ ಕಳೇಬರಗಳನ್ನು ಕೊಟ್ಟದ್ದು ಯಾತಕ್ಕೋಸ್ಕರವೆಂದರೆ ಆ ಭಗವಂತನ ಅರ್ಚನ ವಂದನ ಕೀರ್ತನಾದಿ ಗಳನ್ನು ಮಾಡುವುದಕ್ಕಾಗಿಯಲ್ಲವೇ ? ಅದೇ ಬುದ್ಧಿಯಿಂದ ನೀನು ಕೊಟ್ಟ ನಿನ್ನ ವಸ್ತುವಾದ ಕರಣ ಕಳೇಬರಗಳನ್ನು ನಿನಗೇ ಅರ್ಪಿಸುವೆನೆಂದು ಅರ್ಪಿಸಿದ ಪಕ್ಷದಲ್ಲಿ ಅದು ಉಪಾಯವಾಗಲಾರದು. ನನ್ನ ವಸ್ತುವನ್ನು ನಿನಗೇ ಅರ್ಪಿಸುವೆನೆಂಬ ಬುದ್ಧಿಯಿಂದ ಅರ್ಪಿಸಿದ ಪಕ್ಷದಲ್ಲಿ ಅವನ ವಸ್ತುವನ್ನು ಈ ಚೇತನನು ಕದ್ದಂತಾಗುವುದು.

ಸೂತ್ರಂ - ಭರ್ತೃ ಭೋಗತ್ತೈ ವಯಿರುವಳಕ್ಕೈಕ್ಕುರುಪ್ಪಾಕ್ಕುಮಾ ಪೋಲೇ ಇರುವಕ್ಕುಮವದ್ಯಂ ॥ ೧೩೬ ॥

ಶ್ಲೋಕಃ – ❋ ಮೋಕ್ಷೋಪಾಯ ತಯೈವ ಭಕ್ತಿಮಚಲಾಂ ಯಶ್ಚಾಚರೇದೀಶ್ವರೇ
ತಜ್ಜೇಷಸ್ಯ ಚ ತಸ್ಯ ಶೇಷಿಣ ಇಹಾವದ್ಯಂ ದ್ವಯೋಸ್ಸಂಭವೇತ್ ।
ಭಾರ್ಯಾಸ್ವೋದರ ಪೂರಣಾಯ ದಯಿತಾ ಶ್ಲೇಷಾದಿ ಭೋಗಪ್ರದಾ
ಭೂಯಾಚ್ಚೇತ್ಪತಿ ದಾರ ಭಾವಗತಯೋಃ ಪಾಪಂ ಯಥೈವ ದ್ವಯೋಃ ॥ ॥ ೧೬೬ ॥

ತಾತ್ಪರ್ಯ – ಅಚಲವಾದ ಭಕ್ತಿಯನ್ನು ಭಗವಂತನಲ್ಲಿ ಯಾವ ಚೇತನನು ಮೋಕ್ಷಕ್ಕೆ ಉಪಾಯವನ್ನಾಗಿ ಆಚರಿಸುವನೋ ಪರತಂತ್ರನಾದ ಆ ಚೇತನನಿಗೂ ಶೇಷನನ್ನಾಗಿ ಸ್ವೀಕರಿಸಿದ ಭಗವಂತನಿಗೂ ಇಬ್ಬರಿಗೂ ಅವದ್ಯವು ತಪ್ಪಿದ್ದಲ್ಲ. ಹೇಗೆಂದರೆ ಅಗ್ನಿಸಾಕ್ಷಿಕವಾಗಿ ಮದುವೆಯಾದ ಭಾರ್ಯೆಯು ತನ್ನ ಪತಿಗೆ ಭೋಗಗಳನ್ನುಂಟುಮಾಡುವುದು ತನ್ನ ಉದರಂಭರಣಕ್ಕಾಗಿ ಎಂದು ನೆನೆಸಿದ ಪಕ್ಷದಲ್ಲಿ ಇವಳು ನನ್ನ ಭಾರ್ಯೆಯೆಂದು ಸ್ವೀಕರಿಸಿದ ಪತಿಗೂ ನನ್ನ ಪತಿಯೆಂದು ಸ್ವೀಕರಿಸಿದ ಭಾರ್ಯೆಗೂ ಯಾವ ರೀತಿ ಅವದ್ಯವು ಸಂಭವಿಸುವುದೋ ಅದೇ ರೀತಿ ಶೇಷಿಗೂ ಶೇಷನಿಗೂ ಅವದ್ಯವು ತಪ್ಪಿದ್ದಲ್ಲ.

ಸೂತ್ರಂ - ವೇದಾಂತಂಗಳ್ ಉಪಾಯಮಾಹ ವಿಧಿಕ್ಕಿರಪಡಿಯಿನ್ನಿನ್ನಿಲ್ ॥ ೧೩೭ ॥

ಶ್ಲೋಕಃ – ❋ ಹಿತಾನುಶಾಸನಂ ಕುರ್ವನ್ವೇದಾಂತಸ್ತ್ವಾಪಾಯತಾಂ ।
ಆತ್ಮಾವೇತ್ಯಾದಿ ವಾಕ್ಯೇನ ಕಥಂ ಬ್ರೂಯಾದ್ವಿಧಿಕ್ರಮಾತ್ ॥ ॥ ೧೬೭ ॥

ತಾತ್ಪರ್ಯ – ಹಾಗಾದ ಪಕ್ಷದಲ್ಲಿ ಹಿತವನ್ನು ಉಪದೇಶಿಸುವ ವೇದಾಂತವು 'ಆತ್ಮಾ ವಾ ಅರೇದ್ರಷ್ಟವ್ಯಶ್ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ' ಎಂದು ಈ ಚೇತನನಿಗೆ ಮೋಕ್ಷೋಪಾಯವನ್ನಾಗಿ ಉಪದೇಶಿಸಿದ್ದು ಯಾತಕ್ಕಾಗಿ ?

ಸೂತ್ರಂ - ಔಷಧಸೇವೈ ಪಣ್ಣಾದವರ್ಗಳುಕ್ಕು ಅಭಿಮತ ವಸ್ತುಕ್ಕಳಿಲೇ ಅತ್ತೈ ಕಲಶಿಯಿಡುವಾರೈಪ್ಪೋಲೇ ಈಶ್ವರನೈಕ್ಕಲಂದು ವಿಧಿಕ್ಕಿರವಿತ್ತನೈ ॥ ೧೩೮ ॥

ಶ್ಲೋಕಃ - ❋ ಲಘೂಲ್ಲಾಘತ್ವಾಯಂ ಪ್ರಬಲ ಗದಬಾಧಾಕ್ಷಶ ಶಿಶೋಃ
ಪ್ರಯಂಚ್ಛಂತೀ ಮಾತಾ ಗುಡಕಲಿತಮಾಪ್ಯೌಷಧಮಿವ ।
ಸ್ವಯಂತ್ನೇ ಸಂಸ್ಕಾರಾತ್ಪಚುರಮನಸಾಂ ಸಾಧನತಯಾ
ಮಿಲತ್ಸದ್ಧೋಪಾಯಾಂ ಹ್ಯವದದುಪಸತ್ತಿಂ ಶ್ರುತಿರಪಿ ॥ ॥ ೧೬೮ ॥

ತಾತ್ಪರ್ಯ - ಹಿತವನ್ನು ಉಪದೇಶಿಸುವ ವೇದಾಂತವು ಉಪಾಸನೆಯನ್ನು ಉಪಾಯವನ್ನಾಗಿ ಹೇಳಿದುದಕ್ಕೆ ಕಾರಣವೇನೆಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾರೆ. ತಾಯಿಯಾದವಳು ರೋಗಪೀಡಿತವಾದ ಮಗುವಿಗೆ ಶೀಘ್ರವಾಗಿ ಗುಣವಾಗಲೆಂದು ಕಹಿಯಾದ ಔಷಧಕ್ಕೆ ಬೆಲ್ಲವನ್ನು ಮಿಶ್ರಮಾಡಿ ಕೊಡುವಂತೆ ಅನಾದಿ ಸಂಸ್ಕಾರದಿಂದ ಸ್ವಂತ ಯತ್ನದಲ್ಲೇ ಮನಸ್ಸುಳ್ಳ ಚೇತನರಿಗೆ ಸಿದ್ಧೋಪಾಯನಾದ ಭಗವಂತನನ್ನು ಸೇರಿಸಿ ಉಪಾಸನೆಯನ್ನು ಸಂಸಾರವಿಮೋಚನೆಗಾಗಿ ವೇದಾಂತವು ಉಪದೇಶ ಮಾಡಿತು.

ಸೂತ್ರಂ - ಇತ್ತೈ ಪ್ರವೃತ್ತಿಪ್ಪಿತ್ತದು ಪರಹಿಂಸೈಯೈ ನಿವೃತ್ತಿಪ್ಪಿಕ್ಕೈಕ್ಕಾಹ ॥ ೧೩೯ ॥

ಶ್ಲೋಕಃ - ❋ ಅಸ್ಮಿನ್ನುಪಾಸನೇ ವೇದಾಸ್ತ್ರೈಗುಣ್ಯವಿಷಯಾ ಜನಾನ್ ।
ಕುತಃ ಪ್ರವರ್ತಯಂತೀತಿ ಚೇದ್ಧಿಂಸಾಪರಿನಿವೃತ್ತಯೇ ॥ ॥ ೧೬೯ ॥

ತಾತ್ಪರ್ಯ - ಸತ್ವರಜಸ್ತಮೋಗುಣವಿಷಯಕವಾದ ವೇದವು ಜನಗಳನ್ನು ಈ ಉಪಾಸನೆಯಲ್ಲಿ ಪ್ರವೃತ್ತಿಸುವಂತೆ ಮಾಡಿದ್ದು ಯಾತಕ್ಕೆಂದರೆ ಕ್ರೂರವಾದ ಹಿಂಸೆಯನ್ನು ಹೋಗಲಾಡಿಸುವುದಕ್ಕಾಗಿ.

ಸೂತ್ರಂ - ಇತು ತಾನ್ ಪೂರ್ವವಿಹಿತಹಿಂಸೈ ಪೋಲೇ ವಿಧಿ ನಿಷೇಧಂಗಳಿರಂಡುಕ್ಕುಂ ಕುರೈಯಿಲ್ಲೈ ॥ ೧೪೦ ॥

ಶ್ಲೋಕಃ - ❋ ತಮಃ ಪ್ರಚುರಮಾನಸಾಭ್ಯಭಿಚರಂತಿ ಹಿಂಸಾತ್ಮಕಾಃ
ರಜಃ ಪ್ರಚುರ ಮಾನಸಾಸ್ತ್ವಿದಭೋಗ ಕಾಮ್ಯಾರ್ಥಿನಃ ।
ಯಜಂತಿ ಹಿ ನಿಷಿಧ್ಯತೇ ತದುಭಯಂ ಪರಾಪೇಕ್ಷಯಾ
ಯತಶ್ಚ ಪರತಂತ್ರ ಏವ ಸ ತು ಶೇಷಿಣಃ ಕರ್ಮಕೃತ್ ॥ ॥ ೧೭೦ ॥

ತಾತ್ಪರ್ಯ - ಈ ರೀತಿ ಮೊದಲು ವಿಧಿಸುವುದೂ ಆಮೇಲೆ ಅದನ್ನು ನಿಷೇಧಿಸುವುದೂ ಯಾತಕ್ಕಾಗಿ ಎಂದರೆ ಹೇಳುತ್ತಾರೆ. ತಮೋಗುಣವೇ ಅಧಿಕವಾಗಿರುವ ನಾಸ್ತಿಕರಿಗೆ ಶಾಸ್ತ್ರದಲ್ಲಿ ವಿಶ್ವಾಸವುಂಟಾಗುವುದಕ್ಕಾಗಿ ಶ್ಯೇನ ಯಾಗವನ್ನು ವಿಧಿಸಿತು. ಅದೇ ಶ್ಯೇನ ಯಾಗವನ್ನು ಆಸ್ತಿಕರಾಗಿ ಕಾರೀರ್ಯಾದಿ ಕಾಮ್ಯ ಕರ್ಮಗಳನ್ನು ಮಾಡುವ ರಜಃಪ್ರಚುರರಾದವರ ವಿಷಯದಲ್ಲಿ ನಿಷೇಧಿಸಿತು. ಸ್ವಾತಂತ್ರ್ಯ, ಅನ್ಯಶೇಷತ್ವ ಇವುಗಳಲ್ಲಿ ನಿರತರಾಗಿರುವವರಿಗೆ ಉಪಾಸನೆಯನ್ನು ವಿಧಿಸಿತು. ಸತ್ವಗುಣ ಪ್ರಚುರರಾದ ಭಗವದೇಕ ಶೇಷರಾದ ಸ್ವರೂಪ ಜ್ಞಾನವುಳ್ಳವರ ವಿಷಯದಲ್ಲಿ ಆ ಉಪಾಸನೆಯನ್ನು ನಿಷೇಧಿಸಿತು.

ಸೂತ್ರಂ - ಅತ್ತೈ ಶಾಸ್ತ್ರವಿಶ್ವಾಸತ್ತುಕ್ಕಾಹ ವಿಧಿತ್ತದು ; ಇತ್ತೈಸ್ವರೂಪವಿಶ್ವಾಸತ್ತುಕ್ಕಾಹ ವಿಧಿತ್ತದು. ॥ ೧೪೧ ॥

ಶ್ಲೋಕಃ – ✱ ನಾಸ್ತಿಕಾನಾಂ ತು ವಿಶ್ವಾಸಂ ಶಾಸ್ತ್ರೇ ಜನಯಿತುಂ ಶ್ರುತಿಃ ।
ಆಭಿಚಾರಿಕಕೃತ್ಯಂ ಹಿ ನಿಜಗಾದ ಫಲೋನ್ಮುಖಂ ॥ ॥ ೧೭೧ ॥

ಸ್ವತಂತ್ರತ್ವಾನ್ಯಶೇಷತ್ವ ನಿರಾಸಾಯ ಸುಚೇತಸಾಂ ।
ಉಪಾಸನವಿಧಿಃ ಪ್ರೋಕ್ತೋ ವಿಶ್ವಾಸಾರ್ಥಂ ಸ್ವರೂಪಕೇ ॥ ॥ ೧೭೨ ॥

ತಾತ್ಪರ್ಯ – ಈ ರೀತಿ ನಿಷೇಧಿಸಲ್ಪಡುವುದನ್ನು ಯಾತಕ್ಕಾಗಿ ವಿಧಿಸಿತು ಅಂದರೆ ಹೇಳುತ್ತಾರೆ. ದೇವರಿಲ್ಲ, ವೇದವಿಲ್ಲ, ಶಾಸ್ತ್ರವಿಲ್ಲ ಎಂದು ನಾಸ್ತಿಕವಾದವನ್ನು ಮಾಡುವವರಿಗೆ ಶಾಸ್ತ್ರದಲ್ಲಿ ನಂಬಿಕೆ ಉಂಟಾಗುವುದಕ್ಕಾಗಿ ಕ್ಷಿಪ್ರ ಫಲಪ್ರದವಾದ ಹಿಂಸಾತ್ಮಕವಾದ ಶ್ಯೇನಯಾಗವನ್ನು ವಿಧಿಸಿತು. ಆಸ್ತಿಕರಿಗೆ ಸ್ವಸ್ವರೂಪದಲ್ಲಿ ವಿಶ್ವಾಸವುಂಟಾಗುವುದಕ್ಕಾಗಿ ಉಪಾಸನೆಯನ್ನು ವಿಧಿಸಿತು.

ಸೂತ್ರಂ - ಅತುತೋಲ್ಪರ್ಯೆಯೇಪ್ಪೋಂ ; ಇತುಮರ್ಮಸ್ಪರ್ಶಿ. ॥ ೧೫೨ ॥

ಶ್ಲೋಕಃ – ✱ ಆಭಿಚಾರ ಕೃತ್ಯ ಭವದುಃಖಮಲ್ಪಕಂ
ತ್ವಚಿ ಲಗ್ನಮೇವ ಭವತೀಹ ನಾಂತರಂ ।
ತದಹಂ ಕೃತಿಪ್ರಕಟಿತಂ ಹ್ಯುಪಾಸನಂ
ಸ್ವವಿನಾಶನಾದಿಹ ಭವೇದರುಂತುದಂ ॥ ॥ ೧೭೩ ॥

ತಾತ್ಪರ್ಯ – ಆಭಿಚಾರ ಕೃತ್ಯದಿಂದುಂಟಾದ ದುಃಖವು ಸ್ವಲ್ಪವೆಂದೇ ಹೇಳಬೇಕು. ಯಾತಕ್ಕೆಂದರೆ ಅದು ಚರ್ಮದಲ್ಲಿ ಮಾತ್ರ ಲಗ್ನವಾಗುವುದು, ಮರ್ಮಸ್ಥಾನವನ್ನು ಮುಟ್ಟುವುದಿಲ್ಲ. ಅಹಂಕಾರಮಿಶ್ರವಾದ ಈ ಉಪಾಸನೆಯೋ ಅಂದರೆ ತನ್ನ ಪಾರತಂತ್ರ್ಯಸ್ವರೂಪವನ್ನು ನಾಶಮಾಡುವುದರಿಂದ ಮರ್ಮಸ್ಥಾನವನ್ನು ಭೇದಿಸುವುದು.

**ಸೂತ್ರಂ - ಇತುತಾನ್ ಕರ್ಮಸಾಧ್ಯಮಾಹೈಯಾಲೇ
ದುಷ್ಕರಮುಮಾಯಿರುಕ್ಕುಂ. ॥ ೧೫೪ ॥**

ಶ್ಲೋಕಃ – ✱ ಉಪಾಸನಂ ತು ಮರ್ತ್ಯಾನಾಂ ಕರ್ಮ ಸಾಧ್ಯತಯಾ ಸದಾ ।
ದುಷ್ಕರಂ ಸ್ಯಾತ್ತಥಾತ್ಮಾಪಿ ಸರ್ವಥಾ ನಿಪತೇದಧಃ ॥ ॥ ೧೭೪ ॥

ಇತ್ಯುಪಾಯಾಂತರದೋಷ ನಿರೂಪಣಂ ಸಂಪೂರ್ಣಂ

ತಾತ್ಪರ್ಯ – ಹಿಂದೆ ಹೇಳಿದ್ದಷ್ಟೇ ಅಲ್ಲ, ಮಾಡಲು ಅಸಾಧ್ಯವೆಂದೂ ಹೇಳುತ್ತಾರೆ. 'ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ' 'ಸರ್ವಾಪೇಕ್ಷಾಚ' 'ಕಷಾಯೇಪಕ್ತಿಃ ಕರ್ಮಾಣಿ ಜ್ಞಾನಂ ತು ಪರಮಾ ಗತಿಃ । ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ' 'ಜನ್ಮಾಂತರ ಸಹಸ್ರೇಷು ತಪೋ ಜ್ಞಾನಸಮಾಧಿಭಿಃ । ನರಾಣಾಂ ಕ್ಷೀಣ ಪಾಪಾನಾಂ ಕೃಷ್ಣೇ ಭಕ್ತಿಃ ಪ್ರಜಾಯತೇ' ಇತ್ಯಾದಿಗಳಲ್ಲಿ ಹೇಳಿರುವಂತೆ ಕಾಯಕ್ಲೇಶಕರವಾದ ಕರ್ಮಾನುಷ್ಠಾನದಿಂದ ಸಾಧಿಸಲ್ಪಡಬೇಕಾಗಿರುವುದರಿಂದ ಅಶಕ್ತನಾದವನಿಗೆ ಆ ರೀತಿ ಮಾಡುವುದು ದುಷ್ಕರವಾಗಿರುವುದು.

ಇತ್ಯುಪಾಯಾಂತರದೋಷ ನಿರೂಪಣಂ ಸಂಪೂರ್ಣಂ

ಅಥ ಪ್ರಪತ್ತಿ ವೈಲಕ್ಷಣ್ಯ ನಿರೂಪಣಂ

ಸೂತ್ರಂ - **ಪ್ರಪತ್ತ್ಯುಪಾಯತ್ತುಕ್ಕು ಇಕ್ಕುತ್ತಂಗಳೊನ್ನು ಮಿಲ್ಲೈ** ॥ ೧೩೪ ॥

ಶ್ಲೋಕಃ – ❋ ನಾಸ್ತಿಪ್ರಪತ್ತ್ಯುಪಾಯಸ್ಯ ಸ್ವಸ್ವರೂಪ ವಿರೋಧಿತಾ ।
ಅಹಂಕಾರಾದಿ ಗರ್ಭತ್ವಂ ದುಷ್ಕರತ್ವಂ ಚ ನಾಸ್ತಿಹಿ ॥ ೧೭೫ ॥

ತಾತ್ಪರ್ಯ – ಹಿಂದೆ ಹೇಳಿದಂತೆ ಉಪಾಯಾಂತರಕ್ಕೆ ಅನೇಕ ದೋಷಗಳುಂಟು. ಈ ಪ್ರಪತ್ತ್ಯುಪಾಯಕ್ಕೋ ಅಂದರೆ ಯಾವ ದೋಷವೂ ಇಲ್ಲ ಎಂದು ಹೇಳುತ್ತಾರೆ. ಈ ಪ್ರಪತ್ತ್ಯುಪಾಯಕ್ಕೆ ಸ್ವರೂಪ ವಿರೋಧ ಮೊದಲಾಗಿ ದುಷ್ಕರತ್ವದವರೆವಿಗೂ ಹೇಳಿದ ದೋಷಗಳು ಯಾವುವೂ ಇಲ್ಲ.

ಸೂತ್ರಂ - **ಆತ್ಮಯಾಥಾತ್ಮ್ಯ ಜ್ಞಾನ ಕಾರ್ಯ್ಯಮಾಹೈಯಾಲೇ ಸ್ವರೂಪತ್ತುಕ್ಕು ಉಚಿತಮುಮಾಯ್ 'ಶಿತ್ತವೇಂಡಾ' ಎನ್ಗಿರಪಡಿಯೇ ನಿವೃತ್ತಿಸಾಧ್ಯಮಾಹೈಯಾಲೇ ಸುಕರಮುಮಾಯಿರುಕ್ಕುಂ.** ॥ ೧೩೫ ॥

ಶ್ಲೋಕಃ – ❋ ಆತ್ಮಯಾಥಾತ್ಮ್ಯ ಸುಜ್ಞಾನ ಕಾರ್ಯತ್ವಾದುಚಿತಸ್ವಯಂ ।
ನಿರ್ವ್ಯಾಪಾರತಯೋಪಾಯಸ್ಸುಕರಸ್ತ್ವನ್ನಿವೃತ್ತಿಜಃ ॥ ೧೭೬ ॥

ತಾತ್ಪರ್ಯ – ಹಿಂದೆ ಹೇಳಿದ ದೋಷಗಳೊಂದೂ ಈ ಪ್ರಪತ್ತ್ಯುಪಾಯಕ್ಕೆ ಇಲ್ಲವೆಂಬುದನ್ನು ಪ್ರಕಾಶಪಡಿಸುವುದಕ್ಕಾಗಿ ಇದರ ಸ್ವರೂಪೋಚಿತತ್ವವನ್ನೂ ಸುಕರತ್ವವನ್ನೂ ಹೇಳುತ್ತಾರೆ. ತಿರುಮಂತ್ರದಲ್ಲಿ ಮಧ್ಯಮ ಪದದಲ್ಲಿ ಹೇಳಿರುವಂತೆ ಆತ್ಮದ ಯಥಾವಸ್ಥಿತವಾದ ಭಗವದತ್ಯಂತಪಾರತಂತ್ರ್ಯಕಾರ್ಯ್ಯವಾದ್ದರಿಂದ ಸ್ವರೂಪೋಚಿತವಾಗಿರುವುದು. ಒಂದೂ ವ್ಯಾಪಾರವನ್ನೂ ಮಾಡದೆ ನಿವೃತ್ತಿ ಸಾಧ್ಯವಾದ್ದರಿಂದ ಸುಕರವಾಗಿಯೂ ಇರುವುದು. ಆದ್ದರಿಂದ ಹಿಂದೆ ಹೇಳಿದ ದೋಷಗಳು ಇದಕ್ಕೆ ಯಾವುವೂ ಇಲ್ಲ.

ಸೂತ್ರಂ - **ಪೂರ್ಣವಿಷಯಮಾಹೈಯಾಲೇ ಪೆರುಮೈಕ್ಕೀಡಾಹ ಪಚ್ಚೈಯಿಡವೊಣ್ಣಾತು** ॥ ೧೩೬ ॥

ಶ್ಲೋಕಃ – ❋ ಅವಾಪ್ತಸರ್ವಕಾಮತ್ವಾತ್ಪರಿಪೂರ್ಣಾಯವಿಷ್ಣವೇ ।
ಕಿಂಕರೇಣ ಮನುಷ್ಯೇಣ ದಾತವ್ಯಂ ನಾಸ್ತಿ ಕಿಂಚನ ॥ ೧೭೭ ॥

ತಾತ್ಪರ್ಯ – ಹಾಗಾದರೆ ಉಪಾಯವು ಅವನೇ ಎಂದು ಅಧ್ಯವಸಿಸಿ ತನ್ನ ಪ್ರವೃತ್ತಿಯನ್ನು ಬಿಟ್ಟ ಪಕ್ಷದಲ್ಲಿ ಅವನ ಸಂತೋಷಕ್ಕಾಗಿ ಈ ಚೇತನನು ಏನಾದರೂ ಕೈಕಾಣಿಕೆ ಕೊಡಬೇಡವೇ ಅಂದರೆ ಹೇಳುತ್ತಾರೆ. ಭಗವಂತನು ಆವಾಪ್ತಸಮಸ್ತಕಾಮನಾದ್ದರಿಂದ ಅವನಿಗೆ ಯಾತರಲ್ಲೂ ಅಪೇಕ್ಷೆಯಿಲ್ಲವಾದ್ದರಿಂದಲೂ ಅವನ ವೈಭವಕ್ಕೆ ಅನುಗುಣವಾದ ಕೈಕಾಣಿಕೆಯನ್ನು ಸಮರ್ಪಿಸಲಾಗುವುದಿಲ್ಲವಾದ್ದರಿಂದ ಇವನು ಕೈ ಕಾಣಿಕೆಯನ್ನು ಸಮರ್ಪಿಸಬೇಕಾಗಿಲ್ಲ.

ಸೂತ್ರಂ - **ಆಭಿಮುಖ್ಯ ಸೂಚಕ ಮಾತ್ರತ್ತಿಲೇ ಸಂತೋಷಂ ವಿಳೈಯುಂ** ॥ ೧೩೭ ॥

ಶ್ಲೋಕಃ – ❋ ನಾರಾಯಣಸ್ಯ ಪುರತ ಆಭಮುಖ್ಯಸ್ಯ ಸೂಚನಂ ।
ಯತ್ತಾವತಾ ಸಮಾಪ್ನೋತಿ ಸಂತೋಷಂ ಭಗವಾನ್ಹರಿಃ ॥ ೧೭೮ ॥

ತಾತ್ಪರ್ಯ – ಹಾಗಾದರೆ ಈ ಚೇತನನ ವಿಷಯದಲ್ಲಿ ಭಗವಂತನಿಗೆ ಸಂತೋಷವು ಬೆಳೆಯುವ ಕ್ರಮ ಹೇಗೆ ಅಂದರೆ ಹೇಳುತ್ತಾರೆ. ಈ ಚೇತನನು, ವಿಮುಖನಾಗಿರುವಿಕೆಯನ್ನು ಮರೆತು ಅಭಿಮುಖ್ಯವನ್ನು ಸೂಚಿಸುವ ವ್ಯಾಪಾರವನ್ನು ಮಾಡಿದರೆ ಸಾಕು. ಈ ಚೇತನನು ಇದುವರೆವಿಗೂ ವಿಮುಖನಾಗಿದ್ದು ಈಗ ಅಭಿಮುಖನಾದನಲ್ಲಾ ಎಂದು ಬಹಳವಾಗಿ ಸಂತೋಷಿಸುವನು. ಆದ್ದರಿಂದ ಭಗವಂತನ ಸಂತೋಷಕ್ಕೆ ಈ ಚೇತನನ ಅಭಿಮುಖ್ಯವೊಂದಿದ್ದರೆ ಸಾಕು.

ಸೂತ್ರಂ - ಪೂರ್ತಿಕೈವಾಂಗಾದೇ ಮೇಲ್ ವಿಳುಪ್ಪೈಕ್ಕು ಹೇತುವಿತ್ತನೈ ॥ ೧೩೮ ॥

ಶ್ಲೋಕಃ – ✱ ಅವಾಪ್ತ ಸರ್ವಕಾಮತ್ವಾತ್ಸಂತೋಷಯಿತುಮೀಶ್ವರಂ ।
ಅಸಮರ್ಥ ಇತಿತ್ಯಕ್ತುಂ ಪೂರ್ತಿರ್ನೈವಾವಕಾಶದಾ ॥ ॥ ೧೭೯ ॥

ತಾತ್ಪರ್ಯ – ಆ ಭಗವಂತನು ಪಾಗಿದ್ದರೂ ಅವನ ಪೂರ್ತಿಯು ಅಕಿಂಚಿನರಾದ ನಾವು ಅವನನ್ನು ಸಂತೋಷ ಪಡಿಸಲಾಗುವುದಿಲ್ಲ ಎಂದು ಹಿಂಜರಿಯುವಂತೆ ಮಾಡುವುದಿಲ್ಲವೇ ಅಂದರೆ ಹೇಳುತ್ತಾರೆ. ಆ ಭಗವಂತನ ಆಪಾಪ್ತ ಸಮಸ್ತಕಾಮತ್ವವು ನಮ್ಮಿಂದ ಒಂದು ವಿಧದಲ್ಲೂ ಅವನನ್ನು ಸಂತೋಷ ಪಡಿಸುವುದಕ್ಕಾಗುವುದಿಲ್ಲ ಎಂದು ಹಿಂಜರಿಯದೆ ನಾವು ಕೊಟ್ಟಿದ್ದನ್ನು ಸಂತೋಷದಿಂದ ಸ್ವೀಕರಿಸುತ್ತಾನೆ ಎಂಬ ಅಭಿನಿವೇಶವನ್ನುಂಟುಮಾಡಿ ಅವನನ್ನು ಆಶ್ರಯಿಸುವಂತೆ ಮಾಡುವುದು.

ಸೂತ್ರಂ - ಪತ್ರಂ ಪುಷ್ಪಂ ಅನ್ಯತೂರ್ಣಾತ್ ಪುರಿವದುವುಂ ಪುಹೈ ಪೂವೇ ॥ ೧೩೯ ॥

ಶ್ಲೋಕಃ – ✱ ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥ ॥ ೧೭೦ ॥

ಅನ್ಯತೂರ್ಣಾದಪಾಂಕುಂಭಾದನ್ಯತ್ರಾದಾವನೇಜನಾತ್ ।
ಅನ್ಯತ್ಕುಶಲ ಸಂಪ್ರಶ್ನಾನ್ನಚೇಚ್ಛತಿ ಜನಾರ್ದನಃ ॥ ॥ ೧೮೧ ॥

ತಾತ್ಪರ್ಯ – ಹಾಗಾದ ಪಕ್ಷದಲ್ಲಿ ಭಗವಂತನು ಅಲ್ಪಸಂತುಷ್ಟನು ಎಂಬುವುದಕ್ಕೆ ಪ್ರಮಾಣವುಂಟೋ ಅಂದರೆ ಪ್ರಮಾಣವನ್ನು ತೋರಿಸುತ್ತಾರೆ. ಒಂದು ಎಲೆಯನ್ನೇ ಆಗಲಿ, ಹೂವನ್ನೇ ಆಗಲಿ, ಹಣ್ಣನ್ನೇ ಆಗಲಿ, ನೀರನ್ನೇ ಆಗಲಿ, ಯಾವನು ಭಕ್ತಿಪುರಸ್ಸರವಾಗಿ ಅನನ್ಯಪ್ರಯೋಜನವೆಂಬ ಶುದ್ಧಿಯೊಡನೆ ಕೂಡಿದ ಮನಸ್ಸಿನಿಂದ ಸಮರ್ಪಿಸುವನೋ ಅವನ ಪ್ರೇಮಾತಿಶಯಕ್ಕೆ ಮನಸೋತು ಇದನ್ನು ತಿನ್ನಬಹುದು, ಇದನ್ನು ತಿನ್ನಬಾರದು ಎಂಬ ವಿವೇಚನೆಯಿಲ್ಲದೆ ಎಲ್ಲವನ್ನೂ ಊಟಮಾಡುತ್ತೇನೆ ಎಂದು ಭಗವಂತನೇ ಸಾಕ್ಷಾತ್ತಾಗಿ ಅಪ್ಪಣೆ ಕೊಡಿಸಿರುತ್ತಾನೆ. ಇನ್ನೂ ಒಂದು ದೃಷ್ಟಾಂತವನ್ನು ತೋರಿಸುತ್ತಾರೆ. ಶ್ರೀಕೃಷ್ಣನು ದೂತನಾಗಿ ಬರುವನೆಂದು ತಿಳಿದು ಧೃತರಾಷ್ಟ್ರನು ಪಾಂಡವಪಕ್ಷಪಾತಿಯಾದ ಆ ಕೃಷ್ಣನಿಗೆ ಕೆಲವು ರಾಜ್ಯಗಳನ್ನೂ, ಆಭರಣಾದಿಗಳನ್ನೂ ಕೊಟ್ಟು ತನ್ನ ಕಡೆಗೆ ಸೇರುವಂತೆ ವಶಪಡಿಸಿ ಕೊಳ್ಳೋಣವೆಂದು ಹೇಳುತ್ತಲು ಆ ಮಾತನ್ನು ಕೇಳಿ ಸಂಜಯನು ಹೇಳುತ್ತಾನೆ. ಶೀತಲವಾದ ನೀರಿನಿಂದ ತುಂಬಿದ ಒಂದು ಕೊಡವನ್ನು ಮನೆ ಬಾಗಿಲಿನಲ್ಲಿ ಕಾಲು ತೊಳೆದುಕೊಳ್ಳುವುದಕ್ಕಾಗಿ ಇಟ್ಟಿದ್ದರೆ ಸಾಕು. ಬೇರೆ ಯಾವುದನ್ನೂ ಅವನು ಅಪೇಕ್ಷಿಸುವುದಿಲ್ಲ. ಮನಃಪೂರ್ವಕವಾಗಿ ಸುಖವಾಗಿ ಬಂದೆಯಾ ? ಎಂದು ಕುಶಲ ಪ್ರಶ್ನೆ ಮಾಡಿದರೆ ಸಾಕು. ಅದಕ್ಕಿಂತಲೂ ಬೇರೆ ಯಾವುದನ್ನೂ ಅಪೇಕ್ಷಿಸುವುದಿಲ್ಲ ಎಂದು ಧೃತರಾಷ್ಟ್ರನಿಗೆ ತಿಳಿಸಿದನು. ಭಗವಂತನಿಗೆ ಧೂಪ, ಹೂವು ಇವುಗಳನ್ನು ಸಮರ್ಪಿಸಿದರೆ ಸಾಕು ಎಂದು ನಮ್ಮಾಳ್ವಾರ್ರು ಕೂಡಾ ಅಪ್ಪಣೆ ಕೊಡಿಸಿದ್ದಾರೆ. ಈ ರೀತಿ ಭಗವಂತನನ್ನು ಸುಖವಾಗಿ ಆರಾಧಿಸಬಹುದು.

ಸೂತ್ರಂ - ಪುಲ್ಲೈಕ್ಕಾಟ್ಟಿಯಳೈತ್ತುಪ್ಪುಲ್ಲೈಯಿಡುವಾರೈಪ್ಪೋಲೇ ಫಲ ಸಾಧನಂಗಳುಕ್ಕು ಭೇದಮಿಲ್ಲೈ ॥ ೧೪೦ ॥

ಶ್ಲೋಕಃ - ✱ ತೃಣಂ ಪ್ರದರ್ಶ್ಯ ಸ್ವಕರೇಣ ಧೇನು
ಮಾನೀಯ ತಸ್ಯೈತೃಣ ಮತ್ತುಮಗ್ರೇ ।
ಯಥಾ ದದಾತೀಹ ತಥೈವ ಸಿದ್ಧೋ -
ಪಾಯಸ್ಯ ಭೇದೋ ನ ಫಲಸ್ಯ ಚಾಪಿ ॥ ॥ ೧೪೨ ॥

ತಾತ್ಪರ್ಯ - ಸಿದ್ಧೋಪಾಯಕ್ಕೂ ಫಲಕ್ಕೂ ಯಾವ ಭೇದವೂ ಇಲ್ಲ ಎಂದು ಹೇಳುತ್ತಾರೆ. ಹುಲ್ಲನ್ನು ತೋರಿಸಿ, ಹಸುವನ್ನು ಕರೆತಂದು ಆದೇ ಹುಲ್ಲನ್ನು ಆ ಹಸುವು ತಿನ್ನುವುದಕ್ಕೆ ಕೊಡುವಂತೆ. ಅಂದರೆ ಹಸುವನ್ನು ಕರೆತರುವ ಸಾಧನವೂ ಅದು ತಿನ್ನುವ ಫಲವೂ ಹುಲ್ಲೇ ಆಗಿ ಯಾವ ರೀತಿ ಫಲಸಾಧನಗಳಲ್ಲಿ ಭೇದವಿಲ್ಲದೆ ಒಂದೇ ಆಯಿತೋ, ಆದೇ ರೀತಿ ಸಿದ್ಧೋಪಾಯಕ್ಕೂ, ಫಲಕ್ಕೂ ಯಾವ ಭೇದವೂ ಇಲ್ಲ.

ಸೂತ್ರಂ - ಆಹ್ಯೆಯಾಲೇ ಸುಖ ರೂಪಮಾಯಿರುಕ್ಕುಂ ॥ ೧೪೧ ॥

ಶ್ಲೋಕಃ - ✱ ಫಲಸಾಧನಯೋರೈಕ್ಯಾದ್ಬದ್ಧಾಂಜಲಿಪುಟೈರ್ನರೈಃ ।
ಸುಖರೂಪಂ ಭವೇತ್ಕರ್ತುಮತ್ರ ತದ್ವರಣಾತ್ಮಕಂ ॥ ॥ ೧೪೩ ॥

ಇತಿ ಪ್ರಪತ್ತಿ ವೈಲಕ್ಷಣ್ಯ ನಿರೂಪಣಂ ಸಂಪೂರ್ಣಂ

ತಾತ್ಪರ್ಯ - ಇದರಿಂದ ಪ್ರಪತ್ತಿಯ ವೈಲಕ್ಷಣ್ಯವು ಫಲಿಸಿದ ಕ್ರಮವನ್ನು ಹೇಳುತ್ತಾರೆ. ಸಾಧ್ಯವಸ್ತುವೇ ಸಾಧನವಾಗಿರುವುದರಿಂದ ತದ್ವರಣರೂಪವಾದ ಪ್ರಪತ್ತಿಯು ಸುಖರೂಪವಾಗಿರುವುದು.

ಇತಿ ಪ್ರಪತ್ತಿ ವೈಲಕ್ಷಣ್ಯ ನಿರೂಪಣಂ ಸಂಪೂರ್ಣಂ

ಅಥ ಸಿದ್ಧೋಪಾಯ ನಿಷ್ಠ ಪ್ರಭಾವ ನಿರೂಪಣಂ

ಸೂತ್ರಂ - ಇವನವನೈಪ್ಪೆರ ನಿನೈಕ್ಕುಂ ಪೋದು ಇಂದ ಪ್ರಪತ್ತಿಯುಮುಪಾಯಮುನ್ನು ॥ ೧೪೪ ॥

ಶ್ಲೋಕಃ - ✱ ಭಗವತ್ಪ್ರಾಪ್ತಿ ಕಾಮೇನ ಪ್ರಪತ್ತಿಸ್ತು ನೃಣಾ ಕೃತಾ ।
ಉಪಾಯೋ ನ ಭವತ್ಯೇವ ಸ್ವಾಮೀ ಸ್ವಮಿವಾಪ್ನುಯಾತ್ ॥ ॥ ೧೪೪ ॥

ತಾತ್ಪರ್ಯ - ಈ ರೀತಿ ಸ್ವರೂಪಾನುರೂಪವಾದ ಪ್ರಪತ್ತಿಯನ್ನು ಸಾಧನವನ್ನಾಗಿಸಿ ಸ್ವತಂತ್ರನಾದ ಭಗವಂತನನ್ನು ಈ ಚೇತನನು ಹೊಂದಬೇಕೆಂದು ನೆನೆಸಿದರೆ ಅದು ಆಗುವುದಿಲ್ಲ. ಸ್ವಾಮಿಯಾದವನು ಸ್ವತ್ತನ್ನು ತಾನಾಗಿಯೇ ಸ್ವೀಕರಿಸುವಂತೆ ಇರಬೇಕು.

ಸೂತ್ರಂ - ಅವನಿವನೈಪ್ಪೆರ ನಿನೈಕ್ಕುಂ ಪೋದು ಪಾತಕಮುಂ ವಿಲಕ್ಕನ್ನು ॥ ೧೪೫ ॥

ಶ್ಲೋಕಃ - ✱ ಸ್ವೀಕರ್ತುಂ ಭಗವಾನಿಚ್ಛೇದ್ಯದಿ ಚೇತನಮಾದರಾತ್ ।
ಪಾತಕಂ ನ ತದಾ ತಸ್ಯ ಪ್ರತಿಬಂಧಕತಾಂ ವ್ರಜೇತ್ ॥ ॥ ೧೪೫ ॥

ತಾತ್ಪರ್ಯ – ಭಗವಂತನೇ ಈ ಚೇತನನನ್ನು ಸ್ವೀಕರಿಸುವುದಾದರೆ, ಆ ಚೇತನನ ಪಾತಕವೂ ಪ್ರತಿಬಂಧಕವಾಗುವುದಿಲ್ಲ. ಇವೆರಡರಿಂದ ಸ್ವಗತ ಸ್ವೀಕಾರಾನುಪಾಯತ್ವವೂ ಪರಗತಸ್ವೀಕಾರೋಪಾಯತ್ವವೂ ಹೇಳಲ್ಪಟ್ಟಿತು.

ಸೂತ್ರಂ - ಇವ್ವೈಯಿರಂಡುಂ ಶ್ರೀ ಭರತಾಳ್ವಾನ್ಪಕ್ಕಲಿಲುಂ
ಶ್ರೀ ಗುಹಪ್ಪೆರುಮಾಳ್ಪಕ್ಕಲಿಲುಂ ಕಾಣಲಾಂ ॥ ೧೪೪ ॥

ಶ್ಲೋಕಃ – ❋ ಏತತ್ತು ವೀಕ್ಷಣೀಯಂ ಹಿ ಪಾಪಪುಣ್ಯಾತ್ಮಕಂ ದ್ವಯಂ ।
ಭರತೇ ಶ್ರೀಮತಿ ಪ್ರಾಯೋ ನಾವಿಕೇಪಿ ತಥಾ ಗುಹೇ ॥ ॥ ೧೪೬ ॥

ತಾತ್ಪರ್ಯ – ಪಾಪ ಪುಣ್ಯ ಸ್ವರೂಪವಾದ ಇವೆರಡನ್ನೂ ಭರತನಲ್ಲಿಯೂ, ಗುಹನಲ್ಲಿಯೂ ಕಾಣಬಹುದು. ಅದನ್ನೇ ಮುಂದಿನ ಸೂತ್ರದಲ್ಲಿ ವಿವರಿಸುತ್ತಾರೆ.

ಸೂತ್ರಂ - ಶ್ರೀಭರತಾಳ್ವಾನುಕ್ಕು ನನ್ಮೈ ತಾನೇ ತೀಮ್ಮೈಯಾಯ್ತ್ತು
ಶ್ರೀಗುಹಪ್ಪೆರುಮಾಳುಕ್ಕು ತೀಮ್ಮೈ ತಾನೇ ನನ್ಮೈಯಾಯ್ತ್ತು ॥ ೧೪೫ ॥

ಶ್ಲೋಕಃ – ❋ ಶ್ರೀರಾಮಂ ಭರತಸ್ಸಮೇತ್ಯ ಶರಣಂ ಶ್ರೀ ಚಿತ್ರಕೂಟೇ ವ್ರಜ -
ನ್ವ್ಯರ್ಥಪ್ರಾರ್ಥನ ಏವ ನಿಷ್ಫಲಮನಾಃ ಪ್ರಾವರ್ತತ ಗ್ರಾಮಕೇ ।
ಪಾಪಾತ್ಮಾಪಿ ಗುಹೋರಘೂದ್ವಹ ಮಹಾವೀಕ್ಷೈಕ ಪಾತ್ರಂ ಬಭೌ
ಯಸ್ಮಾತ್ತತ್ಪ್ರಿಯಮತ್ರ ಪುಣ್ಯಮಿತರತ್ಪಾಪಂ ತ್ವಿತಿ ಪ್ರೋಚ್ಯತೇ ॥ ॥ ೧೪೭ ॥

ತಾತ್ಪರ್ಯ – ಶ್ರೀ ಭರತನು ಚಿತ್ರಕೂಟಕ್ಕೆ ಹೋಗಿ ಶ್ರೀರಾಮಚಂದ್ರನನ್ನು ಹಿಂತಿರುಗಿ ಕರೆತಂದು ರಾಜ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡಿ ಅವನ ಸರ್ವವಿಧ ಕೈಂಕರ್ಯಗಳನ್ನೂ ಮಾಡಬೇಕೆಂದು ಪ್ರಾರ್ಥಿಸುತ್ತಲು ಅದಕ್ಕೆ ಶ್ರೀರಾಮನು ಒಪ್ಪದಿರಲು ವ್ಯರ್ಥಮನೋರಥನಾಗಿ ನಂದಿಗ್ರಾಮದಲ್ಲಿ ವಾಸಮಾಡಿದನಲ್ಲವೇ ? ಆದ್ದರಿಂದ ಭರತನು ಭಗವಂತನಾದ ರಾಮನನ್ನು ಹೊಂದಬೇಕೆಂದು ಮಾಡಿದ ಪ್ರಪತ್ತಿಯು ಸಾಧನವಾಗಲಿಲ್ಲ. ಶ್ರೀರಾಮನೇ ಗುಹನನ್ನು ಕಟಾಕ್ಷಿಸಿದ್ದರಿಂದ ಅವನ ಪಾತಕವು ಪ್ರತಿಬಂಧಕವಾಗಲಿಲ್ಲ. ಹೀಗೆ ಹೇಳಿದ್ದರಿಂದ ಭಗವಂತನಿಗೆ ಯಾವುದು ಪ್ರಿಯವೋ ಅದೇ ಪುಣ್ಯವು. ಯಾವುದು ಅಪ್ರಿಯವೋ ಅದೇ ಪಾಪವು ಎಂದು ಹೇಳಿದಂತಾಯಿತು.

ಸೂತ್ರಂ – ಸರ್ವಾಪರಾಧಂಗಳುಕ್ಕುಂ ಪ್ರಾಯಶ್ಚಿತ್ತಮಾನ ಪ್ರಪತ್ತಿ ತಾನುಂ
ಅಪರಾಧಕೋಟಿಯಿಲೇಯಾಯ್ ಕ್ಷಾಮಣಂ
ಪಣ್ಣವೇಂಡುಂ ಪಡಿನಿಲ್ಲಾನಿನ್ನತಿರೇ ॥ ೧೪೮ ॥

ಶ್ಲೋಕಃ – ❋ ಸರ್ವಾಗಸಾಂ ಚಯಾ ಪ್ರಾಯಶ್ಚಿತ್ತರೂಪಾ ಪ್ರಪನ್ನತಾ ।
ಮಂತುಕೋಟಿ ಪ್ರವಿಷ್ಟತ್ವಾತ್ತಸ್ಯಾಃ ಪ್ರಾರ್ಥ್ಯಾಕ್ಷಮಾಹತಾ ॥ ॥ ೧೪೯ ॥

ತಾತ್ಪರ್ಯ – ಎಲ್ಲಾ ಅಪರಾಧಗಳಿಗೂ ಪ್ರಾಯಶ್ಚಿತ್ತವಾದ ಈ ಪ್ರಪತ್ತಿಯೂ ಕೂಡ ಈ ಚೇತನನು ತನ್ನ ಹಿಂದಿನ ಕೃತ್ಯವನ್ನು ನೆನೆಸಿಕೊಂಡ ಪಕ್ಷದಲ್ಲಿ ಅಪರಾಧ ಕೋಟಿಯಲ್ಲಿ ಸೇರುವುದಾದ್ದರಿಂದ ಭಗವಂತನಲ್ಲಿ ಕ್ಷಮೆಯನ್ನು ಬೇಡಬೇಕು.

ಸೂತ್ರಂ - ನೆಡುನಾಳನ್ಯಪರ್ಯಯಾಯ್ ಪೋಂದ ಭಾರ್ಯ್ಯೈ ಲಜ್ಜಾಭಯಂಗಳಿನ್ನಿಕ್ಕೇ ಭರ್ತೃಸಕಾಶತ್ತಿಲೇ ನಿನ್ನು ಎನ್ನೈ ಅಂಗೀಕರಿಕ್ಕವೇಣುಂ ಎನ್ನಪೇಕ್ಷಿಕ್ಕುಮಾಪ್ಪೋಲೇ ಇರುಪ್ಪತೊನ್ನಿರೇ ಇವನ್ಪಣ್ಣುಂ ಪ್ರಪತ್ತಿ ॥ ೧೪೭ ॥

ಶ್ಲೋಕಃ – ❋ ಪರಪುರುಷಗತಾ ಚಿರಾತ್ತು ಭಾರ್ಯಾ
ವಿಗಲಿತ ಭೀತಿರುಪೇತ್ಯ ವಲ್ಲಭಂ ಸ್ವಂ ।
ಸವಿನಯಮುರರೀಕುರುಷ್ವ ಮಾಮಿ
ತ್ಯವದದಿವಾಸ್ಯಭವೇಚ್ಚ ಸಾ ಪ್ರಪತ್ತಿಃ ॥ ॥ ೧೪೯ ॥

ತಾತ್ಪರ್ಯ – ಈ ಚೇತನನು ಭಗವಂತನಲ್ಲಿ ಮಾಡುವ ಪ್ರಪತ್ತಿಯು ಹೇಗೆಂದರೆ, ಅಗ್ನಿಸಾಕ್ಷಿಕವಾಗಿ ಮದುವೆಯಾದ ಹೆಂಡತಿಯು ಪತಿಯೆನ್ನು ಬಿಟ್ಟು ಬಹಳ ಕಾಲ ಪರಪುರುಷನ ಹತ್ತಿರವಿದ್ದು ಪುನಃ ತನ್ನ ಪತಿಯ ಸಮೀಪದಲ್ಲಿ ನಿಂತು ಲಜ್ಜೆ ಭಯವಿಲ್ಲದೆ ನನ್ನನ್ನು ನೀನು ಅಂಗೀಕರಿಸಬೇಕೆಂದು ಕೇಳಿದರೆ ಹೇಗೋ ಅದೇ ರೀತಿಯಾಯಿತು.

ಸೂತ್ರಂ - ಕೃಪೈಯಾಲೇ ವರುಂ ಪಾರತಂತ್ರ್ಯತ್ತಿಲ್ಕಾಟ್ಟಿಲ್ ಸ್ವಾತಂತ್ರ್ಯತ್ತಾಲೇ ವರುಂ ಪಾರತಂತ್ರ್ಯಂ ಪ್ರಬಲಂ ॥ ೧೪೮ ॥

ಶ್ಲೋಕಃ – ❋ ಅನುಕಂಪಯೈವ ನಿಜ ಭಕ್ತ ನಿಷ್ಠತಾ
ಭವತೀಹಯಾ ಚ ತದಪೇಕ್ಷಯಾ ಸ್ವಯಂ ।
ಪ್ರಬಲಾ ಭವೇದ್ಧಿ ಸಹಜ ಸ್ವತಂತ್ರತಾ
ಭವ ನಿಷ್ಠತೈವ ನಿಜ ಭಕ್ತ ಸನ್ನಿಧೌ ॥ ॥ ೧೫೦ ॥

ತಾತ್ಪರ್ಯ – ತನ್ನನ್ನು ಆಶ್ರಯಿಸಿದ ಭಕ್ತರಲ್ಲಿ ಕೃಪೆಯಿಂದ ಅಧೀನನಾಗಿರುವುದಕ್ಕಿಂತಲೂ ಭಗವಂತನು ತನ್ನ ಸ್ವಾತಂತ್ರ್ಯದಿಂದ ಭಕ್ತಾಧೀನನಾಗಿರುವುದೇ ಪ್ರಬಲವಾದದ್ದು.

ಸೂತ್ರಂ - ಇವ್ವರ್ಥತ್ತೈ ವೇದಪುರುಷನಪೇಕ್ಷಿತ್ತಾನ್ ॥ ೧೪೯ ॥

ಶ್ಲೋಕಃ – ❋ ಪರಗತ ಸ್ವೀಕೃತಿರ್ಯಸ್ಮಾತ್ಸರ್ವಥಾ ವೇದ ಸಮ್ಮತಾ ।
ನಾಯಮಾತ್ಮಾದಿ ವಾಕ್ಯೇಷು ಶ್ರುತ್ಯಾ ತಸ್ಮಾತ್ಸಮೀರಿತಾ ॥ ॥ ೧೫೧ ॥

ತಾತ್ಪರ್ಯ – ಈ ಪರಗತ ಸ್ವೀಕಾರವು ವೇದಪುರುಷನಿಗೆ ಇಷ್ಟವಾದದ್ದು ಎಂದು ಹೇಳುತ್ತಾರೆ. 'ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ । ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ' ವಿವೃಣುತೇ ತನೂಂ ಸ್ವಾಂ।' ಎಂದು ಕಠವಲ್ಲಿಯಲ್ಲೂ ಮುಂಡಕೋಪನಿಷತ್ತಿನಲ್ಲೂ ಪರಗತಸ್ವೀಕಾರಕ್ಕೇ ಪ್ರಾಶಸ್ತ್ಯವನ್ನು ಹೇಳಿದೆ.

ಸೂತ್ರಂ - ಅಪೇಕ್ಷಾ ನಿರಪೇಕ್ಷಮಾಹತ್ತಿರುವಡಿಕ್ಕುಂ ಶ್ರೀ ಗುಹಪ್ಪೆರುಮಾಳುಕ್ಕುಂ ಇತುಂಡಾಯ್ತ್ತು ॥ ೧೫೦ ॥

ಶ್ಲೋಕಃ – ❋ ಪರಗತಸ್ವೀಕೃತಿಃ ಪಂಪಾಕೂಲೇ ವಾಯು ತನೂಭುವಃ ।
ಭಾಗೀರಥೀ ತಟೇಪ್ಯಾಸೀದ್ಗುಹಸ್ಯಾಪೇಕ್ಷಯಾ ವಿನಾ ॥ ॥ ೧೫೨ ॥

ತಾತ್ಪರ್ಯ – ಈ ಪರಗತಸ್ವೀಕಾರವು ಪಂಪಾಸರಸ್ಸಿನ ದಡದಲ್ಲಿ ಆಂಜನೇಯನಿಗೂ ಗಂಗಾನದಿಯ ತೀರದಲ್ಲಿ ಗುಹನಿಗೂ ಉಂಟಾಯಿತು.

ಸೂತ್ರಂ - ಇವನ್ ಮುನ್ನಿಡುಮವರ್ಕಳ್ ಅವನ್ ಮುನ್ನಿಡುಮೆನ್ನುಮಿಡಂ
ಅಭಯಪ್ರದಾನತ್ತಿಲುಂ ಕಾಣಲಾಂ ॥ ೧೫೧ ॥

ಶ್ಲೋಕಃ – ✱ ವಿಭೀಷಣಮುಪಾಗತಂ ಗಗನಗಂ ರಘೂಣಾಂ ಪತಿಃ
ಸಪಾನಯತಮಾಶ್ವಿತಿದ್ಯುಮಣಿ ಸೂನುಮೂಹ ಪ್ರಭುಂ ।
ಸಮೀರಣಸುತಂ ಯಥಾ ಪ್ರಥಮಮೇನಮೂಭಾಷಯೇ
ತ್ಯುವಾಚ ಸ ತು ಲಕ್ಷ್ಮಣಂ ಜನಕಜಾಕಟಾಕ್ಷಾಸ್ಪದಂ ॥ ॥ ೧೯೩ ॥

ತಾತ್ಪರ್ಯ – ಈ ರೀತಿ ಸ್ವತಂತ್ರನಾದ ಭಗವಂತನು ಚೇತನರನ್ನು ಅಂಗೀಕರಿಸುವಾಗ ಒಬ್ಬರನ್ನು ಮುಂದಿಟ್ಟೇ ಅಂಗೀಕರಿಸುತ್ತಾನೆ. ಅದು ಹೇಗೆಂದರೆ ಆಂಜನೇಯನನ್ನು ಅಂಗೀಕರಿಸುವುದಕ್ಕೆ ಮೊದಲು ಲಕ್ಷ್ಮಣನನ್ನು ಕುರಿತು, 'ಎಲ್ಲೆ ಲಕ್ಷ್ಮಣನೇ, ಈ ಸುಗ್ರೀವನ ಮಂತ್ರಿಯಾದ ಆಂಜನೇಯನನ್ನು ನೀನು ಮೊದಲು ಮಾತನಾಡಿಸು' ಎಂದು ಹೇಳಿ ಲಕ್ಷ್ಮಣನನ್ನು ಮುಂದಿಟ್ಟು ಆಂಜನೇಯನನ್ನು ಅಂಗೀಕರಿಸಿದನು. ಇದೇ ರೀತಿ ಗುಹನನ್ನೂ ಅಂಗೀಕರಿಸಿದನಲ್ಲವೇ. ಹಾಗೆಯೇ ವಿಭೀಷಣನನ್ನು ಅಂಗೀಕರಿಸುವಾಗಲೂ ಸುಗ್ರೀವ ಮಹಾರಾಜನನ್ನು ಕುರಿತು, 'ಎಲ್ಲೆ ಸುಗ್ರೀವನೇ, ನಾನು ಅಭಯ ಪ್ರದಾನ ಮಾಡಿರುವೆನು. ಆದ್ದರಿಂದ ಈ ವಿಭೀಷಣನನ್ನು ಶೀಘ್ರವಾಗಿ ನನ್ನ ಹತ್ತಿರ ಕರೆದುಕೊಂಡು ಬಾ' ಎಂದು ಹೇಳಿ ಸುಗ್ರೀವ ಮಹಾರಾಜನನ್ನು ಮುಂದಿಟ್ಟು ವಿಭೀಷಣನನ್ನು ಅಂಗೀಕರಿಸಿದನು.

ಸೂತ್ರಂ - ಇರುವರ್ ಮುನ್ನಿಡುಹಿರದುಂ ತಂತಾಂ
ಕುತ್ತಂಗಳೈ ಶಮಿಪ್ಪಿಕ್ಕೈಕ್ಕಾಹ ॥ ೧೫೨ ॥

ಶ್ಲೋಕಃ – ✱ ನಿರುಪಾಧಿಕ ಕಿಂಕರಸ್ಯ ದೋಷೋ
ವಿಷಯಾಂತರ್ಗತ ಮಾನಂ ಪರಾಙ್ಮುಖಿತ್ವಂ ।
ನ್ಯಮು ಶೇಷಿಗತಸ್ತು ದೋಷ ಏಷ
ಹ್ಯಪರಾಧೇಕ್ಷಣತಃ ಪರಾಙ್ಮುಖಿತ್ವಂ ॥ ॥ ೧೯೪ ॥

ಪೂರ್ವೋಕ್ತಮುಭಯೋರ್ದೋಷಂ ಪರಿಹರ್ತುಮಪೇಕ್ಷಿತಂ ।
ದ್ವಯೋಃ ಪುರುಷಕಾರತ್ವಂ ಪರಸ್ಪರ ಹಿತೈಷಿಣೋಃ ॥ ॥ ೧೯೫ ॥

ತಾತ್ಪರ್ಯ – ಈ ಚೇತನನು ನಿರುಪಾಧಿಕ ಶೇಷನಾದ್ದರಿಂದಲೂ, ಭಗವಂತನು ನಿರುಪಾಧಿಕ ಶೇಷಿಯಾದ್ದರಿಂದಲೂ, ಈ ಚೇತನನು ಆಶ್ರಯಿಸುವುದು, ಭಗವಂತನು ಅಂಗೀಕರಿಸುವುದು ಇವೆರಡೂ ಸ್ವತಸ್ಸಿದ್ಧವಾಗಿರುವಾಗ ಇಬ್ಬರೂ ಪುರುಷಕಾರವನ್ನು ಮುಂದಿಡುವುದು ಯಾತಕ್ಕಾಗಿ ಎಂದರೆ ಹೇಳುತ್ತಾರೆ. ಇಬ್ಬರ ದೋಷಗಳ ಪರಿಹಾರಕ್ಕಾಗಿ ಈ ಚೇತನನಿಗೆ ದೋಷವೇನೆಂದರೆ ಅನಾದಿಕಾಲದಿಂದಲೂ ಭಗವಂತನ ವಿಷಯದಲ್ಲಿ ವಿಮುಖನಾಗಿ ಅನ್ಯ ವಿಷಯಗಳಲ್ಲಿ ಆಸಕ್ತನಾಗಿ ಭಗವಂತನ ಆಜ್ಞಾತಿಲಂಘನವು, ದೋಷವು, ಸರ್ವೇಶ್ವರನಿಗೆ ದೋಷವೇನೆಂದರೆ, ಪರಿಹರಿಸಲಸಾಧ್ಯವಾದ ಸಂಬಂಧವಿರುವಾಗ ಈ ಚೇತನನ ಅಪರಾಧಗಳನ್ನೇ ಲೆಕ್ಕಿ ಮಾಡುತ್ತಾ ಬಹಳ ಕಾಲ ಅಗಲಿಸಿರುವಿಕೆಯೇ ದೋಷವು. ಈ ರೀತಿಯಾದ ದೋಷಗಳ ಪರಿಹಾರವು ಪರಸ್ಪರ ಪುರುಷಕಾರದಿಂದುಂಟಾಗುವುದು.

ಸೂತ್ರಂ - ಸ್ವರೂಪಸಿದ್ಧಿಯುಮತ್ತಾಲೇ ॥ ೧೫೩ ॥

ಶ್ಲೋಕಃ – ❋ ತದೀಯ ಪಾರತಂತ್ರ್ಯಂ ತು ಚೇತನಸ್ಯೇಹ ಸಿದ್ಧ್ಯತಿ ।
ವಿಷ್ಣೋರಾಶ್ರಿತನಿಷ್ಠತ್ವಂ ಭವೇತ್ಪುರುಷಕಾರತಃ ॥ ॥ ೧೯೬ ॥

ತಾತ್ಪರ್ಯ – ಇಷ್ಟೇ ಅಲ್ಲ, ಇನ್ನೂ ಆದಕ್ಕೆ ಪ್ರಯೋಜನವುಂಟೆಂದು ಹೇಳುತ್ತಾರೆ. ಈ ಚೇತನನಿಗೆ ಸ್ವರೂಪವೇನೆಂದರೆ, ಭಗವಂತನಿಗೆ ಪರತಂತ್ರನಾಗಿರುವಿಕೆ. ಭಗವಂತನ ಸ್ವರೂಪವೇನೆಂದರೆ ಆಶ್ರಿತರಾದ ಭಕ್ತರಿಗೆ ಅಧೀನನಾಗಿರುವಿಕೆ – ಇವೆರಡೂ ಸಿದ್ಧಿಸುವುದು.

ಸೂತ್ರಂ - ಔಪಾಧಿಕಮುಮಾಯ್ ನಿತ್ಯಮುಮಾನ ಪಾರತಂತ್ರ್ಯಂ ಇರುವಕ್ಕುಮುಂಡಿರೇ ॥ ೧೫೪ ॥

ಶ್ಲೋಕಃ – ❋ ತದೀಯತೌಪಾಧಿಕಪಾರತಂತ್ರ್ಯಂ
ಸ್ಯಾಚ್ಚೇತನಸ್ಯಾಪಿ ಚ ನಿತ್ಯಮೇವ ।
ತತ್ಪಾರತಂತ್ರ್ಯಂ ಮುರವೈರಿಣೋಽಪಿ
ಸ್ಯಾನ್ನಿತ್ಯಮೌಪಾಧಿಕ ಮಾಶ್ರಿತತ್ವಾತ್ ॥ ॥ ೧೯೭ ॥

ತಾತ್ಪರ್ಯ – ಹಿಂದೆ ಸ್ವರೂಪವೆಂದು ಹೇಳಿದ್ದನ್ನು ಉಪಪಾದಿಸುತ್ತಾರೆ. ಅದೇನೆಂದರೆ, ಚೇತನನಿಗೆ ಪಾರತಂತ್ರ್ಯವು ತದೀಯತ್ವಪ್ರಯುಕ್ತವಾದ್ದರಿಂದ ಔಪಾಧಿಕವು. ಆ ಉಪಾಧಿಯೂ ನಿತ್ಯವು. ಸರ್ವೇಶ್ವರನಿಗೆ ಭಕ್ತರ ವಿಷಯದಲ್ಲಿ ಪಾರತಂತ್ರ್ಯವು ಆಶ್ರಿತತ್ವ ಪ್ರಯುಕ್ತವಾದ್ದರಿಂದ ಔಪಾಧಿಕವು. ಆ ಉಪಾಧಿಯೂ ನಿತ್ಯವು. ಅದ್ದರಿಂದ ಇಬ್ಬರಿಗೂ ಸಿದ್ಧಿಸುವುದು.

ಸೂತ್ರಂ - ಅನಿತ್ಯಮಾನ ವಿರುವರ್‌ಪಾರತಂತ್ರ್ಯಮುಂ ಕುಲೈವದುಮತ್ತಾಲೇ ॥ ೧೫೫ ॥

ಶ್ಲೋಕಃ – ❋ ಪರಸ್ಪರಪುರಸ್ಕೃತಃ ಪುರುಷಕಾರಪತದ್ದ್ವಯೋ
ರನಿತ್ಯಭವಕರ್ಮಜ ಪ್ರಬಲಪಾರತಂತ್ರ್ಯಂ ಹರೇತ್ ।
ಸ್ವಕರ್ಮ ಪರತಂತ್ರತಾ ಭವ ಪಥೇ ನೃಣಾಂ ಸಂಸೃತಿಃ
ಹರೇಸ್ತು ಪರತಂತ್ರತಾ ಮನುಜ ಕರ್ಮವೀಕ್ಷಾಸ್ಥಿತಿಃ ॥ ॥ ೧೯೮ ॥

ತಾತ್ಪರ್ಯ – ಇದಕ್ಕೆ ಇನ್ನೂ ಒಂದು ಪ್ರಯೋಜನವುಂಟೆಂದು ಹೇಳುತ್ತಾರೆ. ಅನಿತ್ಯವಾದ ಪಾರತಂತ್ರ್ಯವು. ಕರ್ಮಪಾರತಂತ್ರ್ಯವು. ಅದರಲ್ಲಿ ಚೇತನನಿಗೆ ಕರ್ಮಪಾರತಂತ್ರ್ಯವು "ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ" ಎಂಬಂತೆ ಈ ಸಂಸಾರದಲ್ಲಿ ಅನುಭವಿಸುವಂತೆ ಮಾಡುವುದು. ಸರ್ವೇಶ್ವರನಿಗೆ ಪಾರತಂತ್ರ್ಯವು ಯಾವುದೆಂದರೆ ಈ ಚೇತನನು ಮಾಡಿದ ಕರ್ಮವನ್ನು ತಾನು ಅನುಭವಿಸುತ್ತಾನೆ. ಅದಕ್ಕೆ ನಾನು ಮಾಡುವುದೇನು ಎಂದು ಈ ಚೇತನನು ಮಾಡಿದ ಕರ್ಮವನ್ನೇ ಪ್ರಧಾನವನ್ನಾಗಿಟ್ಟು ಕೊಂಡು ಅದಕ್ಕನುಗುಣವಾಗಿ ನಿರ್ವಹಿಸಿಕೊಂಡು ಹೋಗುವಿಕೆ. ಇದು "ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂದು ಹೇಳುವುದರಿಂದ ಅನಿತ್ಯವೆಂದು ಹೇಳುವುದು. ಇದು ಇಬ್ಬರ ಪುರುಷಕಾರ ಪುರಸ್ಕಾರದಿಂದ ರಕ್ಷ್ಯ ರಕ್ಷಕ ಭಾವವು ಸೇರುವಂತೆ ಮಾಡುವುದರಿಂದ ತನ್ನಷ್ಟಕ್ಕೆ ತಾನೇ ನಿವೃತ್ತವಾಗುವುದು.

ಸೂತ್ರಂ - ಸಸಾಕ್ಷಿಕಮಾಹ್ಯೆಯೂಲೀ ಇಬ್ಬಂಧತ್ತೈ ಇರುವರಾಲುಂ ಇಲ್ಲೈಶೆಯ್ಯಪ್ಪೋಹಾದು ॥ ೧೫೬ ॥

ಶ್ಲೋಕಃ – ❋ ರಕ್ಷ್ಯ ರಕ್ಷಕ ಸಂಬಂಧಸ್ಸಾಕ್ಷಾತ್ಪುರುಷಕಾರತಃ ।
ಸಸಾಕ್ಷಿಕಂ ಸಮುದ್ಭೂತೋ ದ್ವಾಭ್ಯಾಂ ನೇತಿ ನ ಶಕ್ಯತೇ ॥ ॥ ೧೯೯ ॥

ತಾತ್ಪರ್ಯ – ಅನಾದಿಕಾಲದಿಂದಲೂ ಸ್ವತಂತ್ರನಾಗಿ ವಿಷಯಾಸಕ್ತನಾಗಿ ಆಲೆದಲೆದು, ಈಗ ತಾನೇ ಅಭಿಮುಖ್ಯವನ್ನು ತೋರಿಸಿದನು. ಪ್ರಕೃತಿ ಸಂಬಂಧದಿಂದ ದುರ್ವಾಸನೆಯೊಡಗೂಡಿ ಅಶ್ರಯಣಾಂಗೀಕಾರದಿಂದುಂಟಾದ ಈ ರಕ್ಷ್ಯ ರಕ್ಷಕ ಸಂಬಂಧವನ್ನು ಬಿಡಿಸಿ ಮೊದಲಿನಂತೆಯೇ ಇರಿಸಿ ನಿರಂಕುಶ ಸ್ವತಂತ್ರನಾದ್ದರಿಂದ ಲೀಲಾ ವಿಭೂತಿಯಲ್ಲೇ ಆಲೆದಾಡುವಂತೆ ಮಾಡಿದ ಸರ್ವೇಶ್ವರನು ಕೂಡಾ ಈ ರಕ್ಷ್ಯ ರಕ್ಷಕ ಸಂಬಂಧವನ್ನು ಬಿಡಿಸಬೇಕೆಂದು ಯೋಚಿಸಿದ ಪಕ್ಷದಲ್ಲಿ ಹೇಳುತ್ತಾರೆ. ಈ ರಕ್ಷ್ಯ ರಕ್ಷಕ ಸಂಬಂಧವು ಪರಸ್ಪರ ತಿಳಿದೇ ಬಂದಿರುವುದಲ್ಲದೆ ಪುರುಷಕಾರ ರೂಪವಾದ ಸಾಕ್ಷಿಯೊಡನೇ ಬಂದಿದೆಯಾದ್ದರಿಂದ ಇಬ್ಬರಿಂದಲೂ ಇಲ್ಲವೆಂದು ಹೇಳಲಾಗುವುದಿಲ್ಲ.

ಸೂತ್ರಂ - ಎನ್ನೈ ನೆಹಿಳ್ಕಿಲುಂ ಕೋಲಮಲರ್ಪಾವೈಕ್ಕನ್ಬಾಹಿಯು ॥ ೧೫೭ ॥

ಶ್ಲೋಕಃ – ❋ ಅಂಗೀಕೃತಾಸ್ಮಿ ತೇನೈವ ಭಕ್ತಮಧ್ಯೇಪ್ರವೇಶಿತಾ ।
ತತ್ಸಂಬಂಧೋ ದ್ವಯೋಸ್ತ್ಯಕ್ತುಂ ಶಕ್ತೇನಾಪಿ ನ ಶಕ್ಯತೇ ॥ ॥ ೨೦೦ ॥

ಅಂಗೀಕೃತಾ ಜಗನ್ಮಾತ್ರಾ ಪ್ರೀತ್ಯಾ ತ್ಯಕ್ತುಂ ನ ಶಕ್ಯತೇ ।
ಇತ್ಯುಕ್ತಂ ಚೇತನೇನಾಪಿ ತಸ್ಮಾತ್ಪುರುಷಕಾರತಃ ॥ ॥ ೨೦೧ ॥

ನಾಸ್ತಿ ಸಂಬಂಧ ಇತ್ಯೇವಂ ವಕ್ತುಂ ಚಾಪಿ ನ ಶಕ್ಯತೇ ।
ಇತಿ ನಪ್ಪಿನ್ನೈಸೂಕ್ತ್ಯೈವ ಪ್ರಮಾಣಂ ದರ್ಶಿತಂ ಖಿಲಂ ॥ ॥ ೨೦೨ ॥

ತಾತ್ಪರ್ಯ – ಹಿಂದೆ ಹೇಳಿದ್ದಕ್ಕೆ ಪ್ರಮಾಣವನ್ನು ತೋರಿಸುತ್ತಾರೆ. ನನ್ನನ್ನು ಭಗವಂತನು ಅಂಗೀಕರಿಸಿ ನಿತ್ಯಸೂರಿಗಳ ಮಧ್ಯದಲ್ಲಿ ಸೇರಿಸಿಕೊಂಡಮೇಲೆ, ಸರ್ವಶಕ್ತನಾದ ತಾನೂ ಕೂಡಾ ಕೈಬಿಡುವುದಿಲ್ಲ ಎಂದು 'ಎನ್ನೈನೆಹಿಳ್ಕಿಲುಂ' ಎಂಬ ಪಾಶುರವು ಭಗವಂತನಿಂದಲೂ ಈ ಸಂಬಂಧವನ್ನು ಬಿಡಿಸಲಾಗುವುದಿಲ್ಲ ಎನ್ನುವುದಕ್ಕೆ ಪ್ರಮಾಣವು. ಮಹಾಲಕ್ಷ್ಮಿಗೆ ಸ್ನೇಹಿತೆಯಾದ್ದರಿಂದ ಆವಳು ನನ್ನನ್ನು ಅಂಗೀಕರಿಸಿದ ಮೇಲೆ ಕೈಬಿಡುವಳೇ, ಎಂದು ಹೇಳಿದ್ದರಿಂದ 'ಕೋಲಮಲರ್ಪಾವೈಕ್ಕು' ಎಂಬ ಪಾಶುರವು ಪುರುಷಕಾರ ಪೂರ್ವಕವಾಗಿ ಬಂದ ಈ ಸಂಬಂಧವನ್ನು ಚೇತನನಿಂದಲೂ ಇಲ್ಲವೆಂದು ಹೇಳಲಾಗುವುದಿಲ್ಲ ಎನ್ನುವುದಕ್ಕೆ ಪ್ರಮಾಣವು.

ಸೂತ್ರಂ - ಕರ್ಮಣಿ ವ್ಯುತ್ಪತ್ತಿಯಿಲ್ ಸ್ವರೂಪ ಗುಣಂಗಳಾಲ್ ವರುಹಿರ ಕರ್ತೃ ಸಂಕೋಚ ರಾಹಿತ್ಯತ್ತೈ ನಿನೈಪ್ಪತು ॥ ೧೫೮ ॥

ಶ್ಲೋಕಃ – ❋ ವ್ಯುತ್ಪತ್ತ್ಯಾ ಶ್ರೀಯುತ ಇತಿ ಶ್ರೀ ಸ್ಸರ್ವೈರಪಿ ಸೇವಿತಾ ।
ಶೇಷತ್ವ ಪ್ರಣಯಿತ್ವಾಭ್ಯಾಂ ನಿತ್ಯಸೇವಾದ್ವಿಕರ್ತೃಕಾ ॥ ॥ ೨೦೩ ॥

ತಾತ್ಪರ್ಯ – ಹಿಂದೆ ಸಸಾಕ್ಷಿಕವಾಗಿ ಎಂದು ಹೇಳಿತಲ್ಲವೇ, ಆ ಸಾಕ್ಷಿಯಾದ ಪುರುಷಕಾರ ವಿಷಯದಲ್ಲಿ ಇಬ್ಬರಿಗೂ ಉಂಟಾದ ನಿತ್ಯ ಪಾರತಂತ್ರ್ಯದಲ್ಲಿ ಪ್ರಮಾಣವನ್ನು ತೋರಿಸುತ್ತಾರೆ. 'ಶ್ರೀಙಸೇವಾಯಾಂ' ಎಂಬ

ಧಾತುವಿನಲ್ಲಿ ಶ್ರೀಯತೇ ಎಂಬ ವ್ಯುತ್ಪತ್ತಿಯಿಂದ ಸೇವಿಸಲ್ಪಡುತ್ತಾಳೆ ಎಂಬ ಅರ್ಥವು ಲಬ್ಧವಾಗುವುದು. ಇದರಿಂದುಂಟಾಗುವ ಸ್ವರೂಪ ಗುಣಗಳಿಂದ ಬರುವ ಕರ್ತೃಸಂಕೋಚರಾಹಿತ್ಯವು ಯಾವುದೆಂದರೆ, ಶೇಷತ್ವವೆಂಬ ಸ್ವರೂಪದಿಂದಲೂ, ಪ್ರಣಯಿತ್ವವೆಂಬ ಗುಣದಿಂದಲೂ ಉಂಟಾಗುವ ಚೇತನ ಪರಮಚೇತನರುಗಳಾದ ಸೇವಾಕರ್ತೃಗಳ ಸಂಕೋಚವಿಲ್ಲದಿರುವಿಕೆ ಅಂದರೆ ಇಬ್ಬರಿಗೂ ಇವಳ ವಿಷಯದಲ್ಲುಂಟಾದ ಸೇವೆಯು ಅವಿಚ್ಛಿನ್ನವಾಗಿರುವುದು. ಈ ರೀತಿ ಈ ವಿಷಯದಲ್ಲಿ ಇಬ್ಬರಿಗೂ ಉಂಟಾದ ಪಾರತಂತ್ರ್ಯವನ್ನು ಸ್ಮರಿಸಬೇಕು.

ಸೂತ್ರಂ - ಅಧಿಕಾರಿತ್ರಯತ್ತುಕ್ಕುಂ ಪುರುಷಕಾರಮವರ್ಜನೀಯಂ ॥ ೧೫೯ ॥

ಶ್ಲೋಕಃ – ❋ ಅಜ್ಞಾನಾಂ ಜ್ಞಾನಿನಾಂ ಭಕ್ತಿಪಾರವಶ್ಯಜುಷಾಂ ತಥಾ ।
ಸದಾ ಪುರುಷಕಾರಸ್ತು ವರ್ಜನೀಯೋ ಭವೇನ್ನಹಿ ॥ ॥ ೨೦೪ ॥

ತಾತ್ಪರ್ಯ – ಹೀಗೆ ಹೇಳಿದ್ದರಿಂದ ಈ ಪುರುಷಕಾರವು ಎಲ್ಲಾ ಪ್ರಪತ್ತ್ಯಧಿಕಾರಿಗಳಿಗೂ ಅತ್ಯಾವಶ್ಯಕವಾಗಿ ಅಪೇಕ್ಷಿತವಾಗಿರುವುದೆಂದು ಹೇಳುತ್ತಾರೆ. ಅಜ್ಞರು, ಜ್ಞಾನಿಗಳು, ಭಕ್ತಿಪರವಶರು ಇವರುಗಳಿಗೆ ತಮ್ಮ ತಮ್ಮ ಅಪರಾಧಾದಿಗಳನ್ನು ಕ್ಷಮಿಸುವಂತೆ ಮಾಡಲು ಪುರುಷಕಾರಾನ್ವಯವು ಅತ್ಯವಶ್ಯಕವಾಗಿ ಬೇಕಾಗಿದೆ. ಅಥವಾ ಈ ಪುರುಷಕಾರವು ಅನನ್ಯಪ್ರಯೋಜನರಾಗಿ ಪ್ರಪತ್ತಿ ಮಾಡುವವರಿಗೆ ಮಾತ್ರವೇಯೋ ಅಥವಾ ಪ್ರಯೋಜನಾಂತರಪರರಾಗಿ ಪ್ರಪತ್ತಿ ಮಾಡುವವರಿಗೂ ಈ ಪುರುಷಕಾರವು ಬೇಕೋ ಅಂದರೆ ಹೇಳುತ್ತಾರೆ. ಅಧಿಕಾರಿತ್ರಯವೆಂದರೆ ಐಶ್ವರ್ಯ, ಕೈವಲ್ಯ, ಭಗವಚ್ಚರಣಾರ್ಥಿಗಳು ಇವರುಗಳಿಗೂ ಪುರುಷಕಾರವು ಅವರ್ಜನೀಯವು. ಯಾತಕ್ಕೆಂದರೆ ತಮ್ಮ ತಮ್ಮ ಇಷ್ಟಾರ್ಥಗಳು ಸಿದ್ಧಿಸುವುದಕ್ಕಾಗಿ ಸರ್ವೇಶ್ವರನನ್ನು ಉಪಾಯವನ್ನಾಗಿ ಅಂಗೀಕರಿಸುವಾಗ ಇವರುಗಳ ಅಪರಾಧಗಳನ್ನು ಕ್ಷಮಿಸಿ ಅವನು ಅಂಗೀಕರಿಸುವಂತೆ ಮಾಡುವುದಕ್ಕೆ ಅತ್ಯವಶ್ಯಕವಾಗಿ ಪುರುಷಕಾರವು ಬೇಕು.

ಸೂತ್ರಂ - ತನಕ್ಕುತಾನ್ತೇಡುಂ ನನ್ಮೈ ತೀಮ್ಮೈಯೋಪಾದಿ ವಿಲಕ್ಕಾಯಿರುಕ್ಕುಂ ॥ ೧೬೦ ॥

ಶ್ಲೋಕಃ – ❋ ಭೋಗಾಸಕ್ತೇ ಭಗವತಿ ಸ್ವಶೇಷತ್ವ ಪ್ರದರ್ಶನಂ ।
ಅಕೃತ್ಯಕರಣಂ ಭೂಯಾಚ್ಚೇತನಸ್ಯ ತದಾ ಹರೌ ॥ ॥ ೨೦೫ ॥

ತಾತ್ಪರ್ಯ – ಇಲ್ಲಿ ಶ್ರೀಭಗವದ್ಭಾಷ್ಯಕಾರರು ಗದ್ಯದಲ್ಲಿ ಉತ್ತರ ಖಂಡಾರ್ಥವಾದ ನಮಶ್ಶಬ್ದಾರ್ಥವನ್ನು ಹೇಳಿದರಷ್ಟೇ. ಅದನ್ನೇ ಮುಂದಿಟ್ಟು ಹೇಳುತ್ತಾರೆ. ಈ ನಮಸ್ಸು ಪ್ರಾಪ್ಯ ವಿರೋಧಿ ನಿವೃತ್ತಿ ಪ್ರದಿಪಾದಕವಾದ್ದರಿಂದ ಪ್ರಾಪ್ಯ ವಿರೋಧಿಗಳನ್ನು ಮೊದಲು ತಿಳಿಸಲು ನಿಶ್ಚಯಿಸಿ, ಮೊದಲು ಆ ವಿರೋಧಿಗಳಲ್ಲಿ ಒಂದನ್ನು ಹೇಳುತ್ತಾರೆ. ಹಿಂದೆ 'ಶ್ರೀ ಭರತಾಳ್ವಾನುಕ್ಕು ನನ್ಮೈ ತಾನೇ ತೀಮ್ಮೈಯಾಯ್‌ತ್ತು' ಎಂದು ಸ್ವಗತ ಪ್ರಪತ್ತಿಯು ಭಗವಂತನ ಹೃದಯಾನುಸಾರಿಯಲ್ಲದಿರಲು, ಭರತನ ಇಷ್ಟಾರ್ಥವು ನೆರವೇರಲಿಲ್ಲ. ಆದ್ದರಿಂದ ಉಪಾಯ ದಶೆಯಲ್ಲಿ ತನಗೆ ತಾನು ಹುಡುಕುವ ಒಳ್ಳೆಯದು ಕೆಟ್ಟದ್ದಾಗಿ ಪರಿಣಮಿಸುತ್ತದೆ ಎಂದು ತಿಳಿಸಿದರು. ಇಲ್ಲೋ ಅಂದರೆ ಉಪೇಯ ದಶೆಯಲ್ಲಿಯೂ ತಾನು ತನಗೆ ಹುಡುಕುವ ಒಳ್ಳೆಯದು ಕೆಟ್ಟದ್ದಾಗಿ ಪರಿಣಮಿಸುತ್ತದೆ ಎಂದು ಹೇಳುತ್ತಾರೆ. ಅದೇನೆಂದರೆ ಭಗವಂತನು ಭೋಗದಶೆಯಲ್ಲಿ ವ್ಯಾಮೋಹದಿಂದ ಒಂದಾಗಿ ಕಲೆತಿರುವಾಗ, ನಾನು ಶೇಷನಲ್ಲವೆ, ನನ್ನ ಶೇಷತ್ವವನ್ನು ಅವನು ನೋಡಬೇಡವೇ ಎಂದೂ ತನ್ನ ನೈಚ್ಯಾನುಸಂಧಾನದಿಂದ ತೋರಿಸುವ ಶೇಷತ್ವವೆಂಬ ಒಳ್ಳೆಯದು, ಅನಾದಿಕಾಲದಿಂದಲೂ ನಾನು ಸ್ವತಂತ್ರನು ಎಂದಿದ್ದ ಕೆಟ್ಟದೋಷಾದಿಯಲ್ಲಿ ಭೋಗಕ್ಕೆ ಪ್ರತಿಬಂಧಕವಾದ್ದರಿಂದ ಅದೂ ಕೆಟ್ಟದ್ದೇ.

ಸೂತ್ರಂ - ಅಳಹುಕ್ಕಿಟ್ಟಶಟ್ಟೈಅಣ್ಣೈಕ್ಕೈಕ್ಕು ವಿರೋಧಿಯಾವಾಪ್ಪೋಲೇ ॥ ೧೬೧ ॥

ಶ್ಲೋಕಃ – ✱ ಸೌಂದರ್ಯಾಪಾದನಾರ್ಥಂತು ಧೃತಾಕಂಚುಳಿಕಾ ಯಥಾ ।
ಆಲಿಂಗನಾದಿ ಕಾರ್ಯಾಯ ಭವೇನ್ನಾರ್ಯಾ ವಿರೋಧಿನೀ ॥ ೨೦೬ ॥

ತಾತ್ಪರ್ಯ – ಶೇಷಿಯಾದ ಭಗವಂತನಿಗೆ ಅಭಿಮತವಾಗಿಯೂ ಆತ್ಮಾವಿಗೆ ಅಲಂಕಾರವಾಗಿಯೂ ಇರುವ ಶೇಷತ್ವವು ಭೋಗ ವಿರೋಧಿಯಾಗುವ ರೀತಿಯನ್ನು ಹೇಳುತ್ತಾರೆ. ಸೌಂದರ್ಯಕ್ಕಾಗಿ ತೊಡಿಸಿದ ಕುಪ್ಪಸವು ಸ್ತ್ರೀಗೆ ಅಲಂಕಾರವಾಗಿದ್ದಾಗ್ಯೂ ಪತಿಯು ಆಲಿಂಗಿಸುವ ಸಮಯದಲ್ಲಿ ಭೋಗ ವಿರೋಧಿಯಾಗುವಂತೆ ಈ ಶೇಷನಾದ ಚೇತನನ ಶೇಷತ್ವವು ಭಗವಂತನ ಭೋಗಕ್ಕೆ ವಿರೋಧಿಯಾಗುತ್ತದೆ.

ಸೂತ್ರಂ - ಹಾರೋಪಿ ॥ ೧೬೨ ॥

ಶ್ಲೋಕಃ – ✱ ಹಾರೋಪಿನಾರ್ಪಿತಃ ಕಂಠೇ ಸ್ವಶ್ಲೇಷಸಂರೋಧಭೀತಯಾ ।
ವೈದೇಹ್ಯಾ ತಾವದಿತ್ಯುಕ್ತಂ ಭೋಗ ರೋಧಮನೀಷಯಾ ॥ ೨೦೭ ॥

ತಾತ್ಪರ್ಯ – ಸೌಂದರ್ಯವನ್ನುಂಟುಮಾಡುವುದಾದರೂ ಅದು ಭೋಗ ವಿರೋಧಿಯಾಗುವುದು ಎಂಬ ವಿಷಯವನ್ನು ಶೇಷಿಯಾದ ಭಗವಂತನ ಮಾತಿನಿಂದ ತಿಳಿಸುತ್ತಾರೆ. ಆಲಿಂಗನಕ್ಕೆ ಅಡ್ಡಿ ಮಾಡುವುದೆಂಬ ಭಾವನೆಯಿಂದ ಸೀತೆಯು ಮುತ್ತಿನ ಹಾರವನ್ನು ಕೂಡಾ ಕಂಠದಲ್ಲಿ ಧರಿಸಲಿಲ್ಲ. ಹೀಗಿರುವಾಗ ನಮ್ಮಗಳ ಮಧ್ಯದಲ್ಲಿ ಈಗ ಪರ್ವತಗಳು, ನದಿಗಳು, ವೃಕ್ಷಗಳು ಅಡ್ಡಿಯಾಗಿ ಬಂದಿವೆ ಎಂದು ವಿರಹಿಯಾದ ಶ್ರೀರಾಮನು ಹೇಳಿದ ಮಾತನ್ನು ಇಲ್ಲಿ ತಿಳಿಸಿದರು.

ಸೂತ್ರಂ - ಪುಣ್ಯಂ ಪೋಲೇ ಪಾರತಂತ್ರ್ಯಮುಂ ಪರಾನುಭವತ್ತುಕ್ಕು ವಿಲಕ್ಕು ॥ ೧೬೩ ॥

ಶ್ಲೋಕಃ – ✱ ಕೇವಲಂ ಪಾರತಂತ್ರ್ಯಂ ಚ ಶೇಷತ್ವಂ ಸ್ಯಾದ್ವಿರೋಧಭಾಕ್ ।
ಸ್ವಪಾರತಂತ್ರ್ಯಸಂಮಿಶ್ರ ಶೇಷತ್ವಂ ನ ವಿರೋಧಿ ಹಿ ॥ ೨೦೮ ॥

ತಾತ್ಪರ್ಯ – ಹಾಗಾದರೆ ಪಾರತಂತ್ರ್ಯವೇ ಒಳ್ಳೆದಲ್ಲವೇ ಎಂದರೆ ಹೇಳುತ್ತಾರೆ. ಪುಣ್ಯವೆಂದರೆ ಶೇಷತ್ವವು. ಕೇವಲ ಶೇಷತ್ವವು ಯಾವ ರೀತಿ ಭೋಗವಿರೋಧಿಯೋ ಅದೇ ರೀತಿ ಅಚಿತ್ತಿನ ಹಾಗೆ ಪಾರತಂತ್ರ್ಯವೂ ಅವನಿಗೆ ಅನುಕೂಲವಾಗಿರದೆ ಸುಮ್ಮನಿದ್ದರೆ ಭೋಗ ವಿರೋಧಿಯು. ಆದ್ದರಿಂದ ಶೇಷತ್ವದೊಡನೇ ಕೂಡಿದ ಪಾರತಂತ್ರ್ಯವು ಉದ್ದೇಶ್ಯವು.

ಸೂತ್ರಂ - ಗುಣಂಪೋಲೇದೋಷನಿವೃತ್ತಿ ॥ ೧೬೪ ॥

ಶ್ಲೋಕಃ – ✱ ಚೇತನಸ್ಯ ಪರತಂತ್ರತಾ ಗುಣೋ
ಭೋಗರೋಧಕ ಇಹೇಹ ಶೇಷಿಣಃ ।
ಸ್ವೀಯದೋಷವಿನಿವೃತ್ತಿರಪ್ಯಹೋ
ತಾದೃಶೀ ಭವತಿ ಭೋಗರೋಧಿನೀ ॥ ೨೦೯ ॥

ತಾತ್ಪರ್ಯ – ಹೀಗೆ ಉಪೇಯದಶೆಯಲ್ಲಿ ಶೇಷತ್ವ ಪಾರತಂತ್ರ್ಯಗಳು ಪರಾನುಭವಕ್ಕೆ ವಿರೋಧಿಯಾಗುವುದನ್ನು ಹೇಳಿ ಪ್ರಾಪ್ತಿದಶೆಯಲ್ಲಿ ಅವನ ನಿರ್ಬಂಧ ಮೂಲಕವಾಗಿ ಬಂದ ದೋಷ ನಿವೃತ್ತಿಯು ಪರಾನುಭವಕ್ಕೆ

ವಿರೋಧಿಯಾಗುವ ವಿಷಯವನ್ನು ಹೇಳುತ್ತಾರೆ. ಇಲ್ಲಿ ಗುಣವೆಂದರೆ ಹಿಂದೆ ಹೇಳಿದ ಶೇಷತ್ವ ಪಾರತಂತ್ರ್ಯಗಳೆರಡೂ ಆತ್ಮಾವಿಗೆ ಅಂತರಂಗ ನಿರೂಪಕವಾದ ಗುಣವಷ್ಟೇ. ಇವೆರಡೂ ಯಾವ ರೀತಿ ಪರಾನುಭವಕ್ಕೆ ವಿರೋಧಿಗಳೋ ಅದೇ ರೀತಿ ಈ ಚರಮ ಶರೀರವನ್ನು ದೋಷದೊಡನೇ ಕೆಲವು ಕಾಲ ಅನುಭವಿಸಬೇಕೆಂದಿರುವ ಭಗವಂತನ ಭೋಗಕ್ಕೆ ಆ ದೋಷ ನಿವೃತ್ತಿಯು ವಿರೋಧಿಯಾಗುವುದು. ಇಲ್ಲಿ ಗುಣವೆಂದರೆ ಪಾರತಂತ್ರ್ಯ ಪರ್ಯಾಪ್ತ ಹೇಳುವುದು.

ಸೂತ್ರಂ - ಆಭರಣಮನಭಿಮತಮಾಯ್ ಅಳುಕ್ಕಭಿಮತಮಾಯಿರಾನಿನ್ನತಿರೇ ॥ ೧೬೫ ॥

ಶ್ಲೋಕಃ – ❋ ವಿಷಯಃ ಪ್ರವಣಸ್ಯ ಚೇತನಸ್ಯ
ಪ್ರಚುರಾಲಂಕೃತಯೋ ನ ಸಮ್ಮತಾಸ್ಸ್ಯುಃ ।
ಅಪಿ ತು ಪ್ರಮದಾಗತಂ ಮಲಂ ಸ್ಯಾ
ದನುಭೋಕ್ತುಂ ಹೃದಯಂಗಮಂ ಯಥಾ ವಾ ॥ ॥ ೨೧೦ ॥

ತಾತ್ಪರ್ಯ – ದೋಷ ನಿವೃತ್ತಿಯಾದ ಪಕ್ಷದಲ್ಲಿ ಆತ್ಮ ಸ್ವರೂಪವು ಅತ್ಯಂತ ಪರಿಶುದ್ಧವಾಗಿಯೂ, ಭೋಗ್ಯವಾಗಿಯೂ, ಇರುವುದಲ್ಲವೇ. ಹೀಗಿರುವಾಗ ದೋಷ ನಿವೃತ್ತಿಯು ಯಾತಕ್ಕಾಗಿ ಇಷ್ಟವಿಲ್ಲ ಎಂದರೆ ಹೇಳುತ್ತಾರೆ. ಲೋಕದಲ್ಲಿ ವಿಷಯ ಪ್ರವಣನಾಗಿರುವವನಿಗೆ ತನ್ನ ಪತ್ನಿಯ ಔಜ್ವಲ್ಯಕ್ಕೆ ಕಾರಣವಾದ ಆಭರಣಗಳನ್ನು ತೆಗೆದಿಟ್ಟು ಔಜ್ವಲ್ಯವಿಲ್ಲದಿರುವ ಕೊಳೆಯು ಯಾವ ರೀತಿ ಇಷ್ಟವಾಗುವುದೋ ಅದೇ ರೀತಿ ಭಗವಂತನೂ ಕೂಡ ದೋಷದೊಡಗೂಡಿದ ಈ ಚೇತನನನ್ನು ಅನುಭವಿಸುವನು.

ಸೂತ್ರಂ - ಸ್ನಾನಂರೋಷಜನಕಂ ಎನ್ನಿರವಾರ್ತ್ತೈಯೈಸ್ಮರಿಪ್ಪದು ॥ ೧೬೬ ॥

ಶ್ಲೋಕಃ – ❋ ಅಸ್ನಾತ್ವಾ ದಶಮಾಸಾಂಸ್ತು ಸ್ಥಿತಾಂ ಸ್ನಾತ್ವಾ ಸಮಾಗತಾಂ ।
ದೃಷ್ಟ್ವಾ ಸೀತಾಂ ಸರುಷ್ಟೋಽಭೂದಿತ್ಯೇತತ್ಸ್ಮರಿತಂ ಖಿಲು ॥ ॥ ೨೧೧ ॥

ತಾತ್ಪರ್ಯ – ಇದು ಲೌಕಿಕದಲ್ಲಿ ಮಾತ್ರವಲ್ಲ ಸಾಕ್ಷಾತ್ ಸೀತೆಯ ವಿಷಯದಲ್ಲೂ ಶ್ರೀರಾಮನಿಗೆ ಕೋಪವುಂಟಾಗಲು ದೋಷ ನಿವೃತ್ತಿಯೇ ಕಾರಣವೆಂದು ಹೇಳುತ್ತಾರೆ. ಸೀತೆಯು ಸ್ನಾನಮಾಡಿ ಬಂದದ್ದು ಶ್ರೀರಾಮನಿಗೆ ಕೋಪವನ್ನುಂಟುಮಾಡಿತು ಎಂಬುದನ್ನು ಪ್ರಕಾಶಪಡಿಸುವ ಶ್ಲೋಕವಿದು: 'ದೀಪ್ತೋ ನೇತಾ ಪ್ರತುರಸ್ಯೇವ ಪ್ರತಿಕೂಲಾಸಿ ಮೇ ಧ್ರುವಂ.' ಇದರ ಅರ್ಥವೇನೆಂದರೆ ಕಣ್ಣುನೋವು ಬಂದವನಿಗೆ ದೀಪವು ಯಾವ ರೀತಿ ಪ್ರತಿಕೂಲವೋ ಅದರಂತೆ ನೀನು ನನಗೆ ಪ್ರತಿಕೂಲಳಾಗಿದ್ದೀಯೆ, ನಿನ್ನನ್ನು ನೋಡಲು ನನಗೆ ಸಾಧ್ಯವಿಲ್ಲವೆಂದರ್ಥವು. ಹೀಗೆ ಹೇಳಿದ್ದರಿಂದ ಹತ್ತು ತಿಂಗಳು ರಾವಣನ ಕಾರಾಗೃಹದಲ್ಲಿ ಸ್ನಾನವಿಲ್ಲದೆ ಮಲಿನಳಾಗಿ ಇದ್ದವಳನ್ನು ಹಾಗೆಯೇ ನೋಡಬೇಕೆಂಬ ಇಚ್ಛೆಯುಳ್ಳ ರಾವಣನಿಗೆ, ಇವಳು ಸ್ನಾನಮಾಡಿ ಬಂದದ್ದು ರೋಷವನ್ನುಂಟುಮಾಡಿತು.

ಸೂತ್ರಂ - ವಂಜಕ್ಕಳ್ವನ್ ಮುಂಗವೊಟ್ಟು ॥ ೧೬೭ ॥

ಶ್ಲೋಕಃ – ❋ ಶಠಜಿಚ್ಛರೀರಮನುಭೋಕ್ತುಮಾದರಃ
ಪ್ರಕಟೀಕೃತೋಹಿ ಮುರವೈರಿಣಾಮುದಾ ।
ಸಶರೀರಮೇನಮಪಿ ಮೋಕ್ಷಮಾದರಾ
ದ್ಬತ ನೇತುಮತ್ರ ಯತನಂ ಕೃತಂ ತದಾ ॥ ॥ ೨೧೨ ॥

ತಾತ್ಪರ್ಯ – ಈ ರೀತಿ ಆತ್ಮಜ್ಞಾನವುಂಟಾಗಿ ಈ ದೇಹವು ಹೇಯವಾದದ್ದು, ಈ ದೇಹವನ್ನು ಬಿಟ್ಟುಬಿಡಬೇಕು ಎಂದಿರುವ ಜ್ಞಾನಿಯ ದೇಹವನ್ನು ಸರ್ವೇಶ್ವರನು ಅನುಭವಿಸಲು ಆಶೆಪಟ್ಟದ್ದು ಎಲ್ಲಾದರೂ ಉಂಟೇ ಅಂದರೆ ಹೇಳುತ್ತಾರೆ. 'ವಂಜಕ್ಕೆಳ್ದನ್' ಎಂಬ ಪಾಶುರದಲ್ಲಿ ನಮ್ಮಾಳ್ವಾರ್ರು ತಮ್ಮ ಅನುಭವವನ್ನು ಹೇಳುತ್ತಾರೆ. ತಮ್ಮ ಈ ಶರೀರದಲ್ಲಿ ಅತ್ಯಾದರವನ್ನು ತೋರಿಸಿ ಆ ಭಗವಂತನು ಅನುಭವಿಸಿದ ರೀತಿಯನ್ನೂ ಅದೂ ಅಲ್ಲದೆ ಅತಿ ಚಪಲತೆಯಿಂದ ಭಗವಂತನು ತನ್ನನ್ನು ಈ ದೇಹದೊಡನೆಯೇ ಪರಮಪದಕ್ಕೆ ಕರೆದೊಯ್ಯಬೇಕೆಂಬದಾಗಿ ಇಚ್ಛೆಪಟ್ಟಾಗ ನಮ್ಮಾಳ್ವಾರ್ರು, 'ಎಲೈ ಉಪಕಾರಕನೇ, ನೀನು ಈ ರೀತಿ ಮಾಡುವುದುಂಟೇ' ಎಂದು ಆ ದೇಹದ ಹೇಯತೆಯನ್ನು ಭಗವಂತನಿಗೆ ತಿಳಿಸಿ ಈ ದೇಹವು ಇಲ್ಲೇ ನಶಿಸಿ ಹೋಗಬೇಕೆಂದು ಪ್ರಾರ್ಥಿಸಿದರು. ಆದ್ದರಿಂದ ಭಗವಂತನಿಗೆ ಜ್ಞಾನಿಯ ದೇಹವನ್ನು ದೋಷಸಹಿತವನ್ನಾಗಿಯೇ ಅನುಭವಿಸುವನು ಎಂದಾಯ್ತು.

ಸೂತ್ರಂ - ವೇರ್ ಶೂಡುಮವರ್ಗಳ್ ಮುಣ್ಪತ್ತ ಕ್ಕಳಿತ್ತಾದಾಪ್ಪೋಲೇ
ಜ್ಞಾನಿಯೈ ವಿಗ್ರಹತ್ತೋಡೇ ಯಾದರಿಕ್ಕುಂ ॥ ೧೬೮ ॥

ಶ್ಲೋಕಃ – ❋ ರಸಿಕೋ ವಿದಿತೋಚ್ಚಗಂಧಭೇದೋ
ಮೃದುಮೃತ್ನಾ ಸಹಿತಂ ಚ ಸಸ್ಯಮೂಲಂ ।
ಧರತೀವ ಶಿರಸ್ಯಯಂ ರಮೇಶೋ
ಪ್ಯಮಲ ಜ್ಞಾನ ಸುಗಂಧಿ ಭಕ್ತಕಾಯಂ ॥ ॥ ೨೧೩ ॥

ತಾತ್ಪರ್ಯ – ಅಭಿಮತ ವಿಷಯದಲ್ಲಿ ದೋಷವನ್ನು ಭೋಗ್ಯವನ್ನಾಗಿ ಅಂಗೀಕರಿಸುವಂತೆ ಆ ಜ್ಞಾನಿಯ ಜ್ಞಾನ ಪರಿಮಳವು ಅವನ ದೇಹದಲ್ಲಿ ಪ್ರಕಾಶಿಸುವುದಾದ್ದರಿಂದ ಆ ದೇಹವನ್ನು ಆದರಿಸುವನೆಂಬ ವಿಷಯವನ್ನು ದೃಷ್ಟಾಂತದೊಡನೇ ಹೇಳುತ್ತಾರೆ. ಹೇಗೆಂದರೆ ವಾಸನೆಗಳ ಭೇದವನ್ನು ತಿಳಿದ ರಸಿಕನು ವಾಸನೆಯುಳ್ಳ ಬೇರುಗಳಲ್ಲಿ ಅಂಟಿಕೊಂಡಿರುವ ಮಣ್ಣನ್ನು ತೆಗೆದುಹಾಕಿದರೆ, ಆ ವಾಸನೆಯ ಸ್ವಾರಸ್ಯವು ಕೆಡುವುದೆಂದು ಭಾವಿಸಿ ಆ ಮಣ್ಣನ್ನು ತೆಗೆದುಹಾಕದೆಯೇ ಮಣ್ಣಿನೊಡನೆಯೇ ಯಾವ ರೀತಿ ಶಿರಸ್ಸಿನಲ್ಲಿ ಧರಿಸುವನೋ ಅದೇ ರೀತಿ ಪರಮ ಭೋಗಿಯಾದ ಭಗವಂತನು ಆ ಜ್ಞಾನಿಯನ್ನು ಆಶೆಪಟ್ಟು ಆ ಜ್ಞಾನ ಪರಿಮಳದಿಂದ ಕೂಡಿದ ಅವನ ಶರೀರವನ್ನು ಅನುಭವಿಸುವನು.

ಸೂತ್ರಂ - ಪೆರುಮಾರ್ತನಾನ ಇವನುಡೈಯ ಶರೀರಸ್ಥಿತಿಕ್ಕು ಹೇತು
ಕೇವಲ ಭಗವದಿಚ್ಛೈಯಿರೇ ॥ ೧೬೯ ॥

ಶ್ಲೋಕಃ – ❋ ಭವಾಬ್ಧೇರುತ್ತೀರ್ಣಃ ಪರಮಪದಮಾಸಾದ್ಯ ಭಗವನ್
ಕದಾ ವಾ ತ್ವತ್ಸೇವಾಮಹಮಪಿ ಕರಿಷ್ಯಾಮಿ ಸತತಂ ।
ಇತೀವಾರ್ತಸ್ಯಾಪಿ ಪ್ರಪದನ ವಿಧೌ ತಸ್ಯ ಜಗತಿ
ಸ್ಥಿತೌ ಶ್ರೀಶೇಚ್ಛಾಸ್ಯಾನ್ನತು ತದನುಗಂ ಕರ್ಮ ಭವತಿ ॥ ॥ ೨೧೪ ॥

ತಾತ್ಪರ್ಯ – ಇನ್ನೂ ಬೇರೆ ರೀತಿಯಿಂದ ಭಗವಂತನಿಗೆ ಭಕ್ತನ ಶರೀರದಲ್ಲಿರುವ ಆಶೆಯನ್ನು ತಿಳಿಸುತ್ತಾರೆ. ಈ ಸಂಸಾರದಲ್ಲಿ ಜಿಹಾಸೆಯಿಂದಲೂ, ಭಗವದನುಭವದಲ್ಲಿ ಬಹಳ ಆಶೆಯಿಂದಲೂ ಈ ಹೇಯವಾದ ಶರೀರವನ್ನು ತ್ಯಜಿಸಬೇಕೆಂದು ಪರಮಾರ್ತಿಯಿಂದಿದ್ದರೂ ಆ ಶರೀರಸ್ಥಿತಿಯು ಭಗವದಿಚ್ಛೆಯಿಂದಿರುವುದೇ ವಿನಃ ಪ್ರಾರಬ್ಧಕರ್ಮವು ಕಾರಣವಲ್ಲ ಅಂದರೆ ಭಗವಂತನಿಗೆ ಈ ಪ್ರಪನ್ನನನ್ನು ಈ ಶರೀರದೊಡನೆಯೇ ಇಟ್ಟುಕೊಂಡು ಕೆಲವು ಕಾಲ ತಾನು ಅನುಭವಿಸಬೇಕೆಂಬ ಇಚ್ಛೆ ಇರೋಣದರಿಂದ ಆ ಶರೀರಸ್ಥಿತಿಯಿದೆಯೇ ವಿನಃ ಪ್ರಾರಬ್ಧಕರ್ಮದಿಂದಲ್ಲ.

ಸೂತ್ರಂ - திருமாலிருஞ்சோலீ மலீயேோ எந்நிரபடியேோ உகந்தருளின நிலங்களில்லாவத்திலும் பண்ணும் விருப்பத்தீ இவனுடீய சரீரீகதேசத்திலீ பண்ணும் ॥ ೧೭೦ ॥

ಶ್ಲೋಕಃ – ❋ க்ஷீராப்தீ திவ்ய தேசீஷு வைகுண்டீ யாத்ருசீம் ஸ்திதிம் ।
கர்தும்மிச்சதி கோவிந்தோ பக்தாங்கே தாத்ருசீம் ஸ்திதிம் ॥ ॥ ೨೧೫ ॥

ತಾತ್ಪರ್ಯ – ಈ ರೀತಿ ಭಗವಂತನು ಆಶೆಪಡುವುದಕ್ಕೆ ವಿಷಯವಾದ ಭಕ್ತನ ಶರೀರವನ್ನು ಆಶೆಪಡುವ ಪ್ರಕಾರವನ್ನು ಹೇಳುತ್ತಾರೆ. ತಿರುಪತಿ, ಕ್ಷೀರಸಮುದ್ರ, ವೈಕುಂಠ ಇವೇ ಮೊದಲಾದ ದಿವ್ಯದೇಶಗಳಲ್ಲಿ ವಾಸಮಾಡುವ ಆಶೆಯನ್ನು ಜ್ಞಾನಿಯಾದ ಇವನ ಶರೀರೈಕದೇಶದಲ್ಲಿ ಮಾಡುವನು.

ಸೂತ್ರಂ - அங்குத்தீ வாஸம் ஸாதனம். இங்குத்தீ வாஸம் ஸாத்யம் ॥ ೧೭೧ ॥

ಶ್ಲೋಕಃ – ❋ உசிதீரபி சீதனானுபாயீ
விவசீகர்தும்மயம் து ஸாதனத்வம் ।
ஸபஜன்வஸதி ஸ்வதிவ்யதேசீ
ஶ்ரிதசித்தீ பத ஸாத்யதா தியீவ ॥ ॥ ೨೧೬ ॥

ತಾತ್ಪರ್ಯ – ತನಗೆ ಭೋಗ್ಯವಾದ ದಿವ್ಯ ದೇಶಗಳಲ್ಲೆಲ್ಲಾ ಮಾಡುವ ಆಶೆಯನ್ನು ಈ ಭಕ್ತನ ಶರೀರ ಒಂದರಲ್ಲೇ ಮಾಡುವನೆಂದು ಹಿಂದೆ ಹೇಳಿದರು. ಈ ವಿಷಯವು ಸಿದ್ಧಿಸಿದರೆ ತನಗೆ ಭೋಗ್ಯವಾದ ದಿವ್ಯ ದೇಶಗಳಲ್ಲಿ ಆದರವು ಕಡಿಮೆಯಾಗುವುದು ಎಂಬ ವಿಷಯವನ್ನು ಹೇಳುತ್ತಾರೆ. ಹೀಗೆ ಹೇಳುವುದಕ್ಕೆ ಮೊದಲು ಇವೆರಡರಲ್ಲಿಯೂ ಉಂಟಾದ ವ್ಯತ್ಯಾಸವನ್ನು ತಿಳಿಸುತ್ತಾರೆ. ಭಗವಂತನು ತನಗೆ ಭೋಗ್ಯವಾದ ದಿವ್ಯದೇಶಗಳಲ್ಲಿ ಆಶೆಯೊಡನೆ ವಾಸಮಾಡುವುದು ಯಾತಕ್ಕೆಂದರೆ, ಉಚಿತವಾದ ಉಪಾಯಗಳಿಂದ ಚೇತನರನ್ನು ವಶೀಕರಿಸುವುದಕ್ಕಾಗಿ. ಆದ್ದರಿಂದ ಆ ದಿವ್ಯದೇಶಗಳಲ್ಲಿ ವಾಸವು ಸಾಧನವಾಯಿತು. ಭಗವಂತನು ಜ್ಞಾನಿಯ ಹೃದಯದಲ್ಲಿ ವಾಸಮಾಡುವುದು ಆ ದಿವ್ಯದೇಶಗಳಲ್ಲಿ ನಿಂತು ಮಾಡಿದ ಕೃಷಿ ಫಲವಾದ್ದರಿಂದ ಸಾಧ್ಯವೆಂದು ಹೇಳುವುದು.

ಸೂತ್ರಂ - கல்லும் கனீகடலும் எந்நிரபடியேோ இது ஸித்தாத்தால் அவத்திலாதரம் மட்டுவாயிருக்கும் ॥ ೧೭೨ ॥

ಶ್ಲೋಕಃ – ❋ ஸாத்யபக்தஹ்ருதயஸ்திதிர்ஹரேஃ
ஸித்யதீஹ யதி போக்யதாதியா ।
திவ்ய தேச பரதாமதுர்க்ததி
ஸ்தான வாஸ திஷணா ஹி குண்டிதா ॥ ॥ ೨೧೭ ॥

ತಾತ್ಪರ್ಯ – ಈ ಸಾಧನ ಸಾಧ್ಯ ಪ್ರಯುಕ್ತವಾದ ಆದರ ತಾರತಮ್ಯವನ್ನು ಹೇಳುತ್ತಾರೆ. ಸಾಧ್ಯವಾದ ಜ್ಞಾನಿಯ ಹೃದಯವಾಸವು ಭಗವಂತನಿಗೆ ಲಭಿಸಿದ ಮೇಲೆ ದಿವ್ಯದೇಶಗಳಲ್ಲೂ, ಕ್ಷೀರಸಮುದ್ರದಲ್ಲೂ, ಪರಮ ಪದದಲ್ಲೂ ಸಾಧನ ಪ್ರಯುಕ್ತವಾದ ವಾಸದಲ್ಲಿ ಆದರವು ಕಡಿಮೆಯಾಗುವುದು.

ಸೂತ್ರಂ - ಇಳಂ ಕೋಯಿಲ್ ಕೈವಿಡೇಲ್ ಎನ್ನು, ಇವನ್ ಪ್ರಾರ್ಥಿಕ್ಕವೇಂಡುಂ ಪಡಿಯಾಯಿರುಕ್ಕುಂ ॥ ೧೭೩ ॥

ಶ್ಲೋಕಃ - ❋ ದೃಷ್ಟ್ವಾ ಸ್ವಹೃದಯಾವಾಸೇ ವಿಷ್ಣೋರಾದರವಾನತಃ ।
ಭೂತಾರ್ಯೋ ಮಾತ್ಯಜೇತ್ಯೂಚೇ ಕ್ಷೀರಾಬ್ಧೌ ವಸತಿಂ ಹರೇಃ ॥ ॥ ೨೧೮ ॥

ತಾತ್ಪರ್ಯ - ಪೂತತ್ತಾಳ್ವಾರ್ರು ಭಗವಂತನಿಗೆ ತನ್ನ ಹೃದಯದಲ್ಲಿ ವಾಸಮಾಡಲು ಆದರಾತಿಶಯವನ್ನು ಕಂಡು, 'ಎಲೈ ಭಗವಂತನೇ ನನ್ನ ಹೃದಯದಲ್ಲಿ ಬಂದು ನಿಂತ ಮಾತ್ರಕ್ಕೆ ಕ್ಷೀರಸಮುದ್ರದ ವಾಸದಲ್ಲಿ ಉದಾಸೀನ ಮಾಡಬೇಡ'ವೆಂದು ಪ್ರಾರ್ಥಿಸಿದರು. ಅಂದರೆ ಜ್ಞಾನಿಯು ಹೃದಯವಾಸದಲ್ಲಿ ಭಗವಂತನಿಗೆ ಅಷ್ಟು ಆದರಾತಿಶಯವು ಎಂದು ಹೇಳಿದಂತಾಯಿತು.

ಸೂತ್ರಂ - ಪ್ರಾಪ್ಯ ಪ್ರೀತಿವಿಷಯತ್ವತ್ತಾಲುಂ ಕೃತಜ್ಞತೈಯಾಲುಂ ಪಿನ್ಬವೈ ಅಭಿಮತಂಗಳಾಯಿರುಕ್ಕುಂ ॥ ೧೭೪ ॥

ಶ್ಲೋಕಃ - ❋ ಪ್ರಾಪ್ಯ ಚೇತನಜಮೋದಭಾಜನಾ
ತ್ತತ್ಕೃತೋಪಕೃತಿ ಸಂಸ್ಮೃತೇರಪಿ ।
ದಿವ್ಯ ದೇಶ ವಸತಿರ್ಹರೇಸ್ಸದಾ
ಸಮ್ಮತಾ ಭವತಿ ಸಾದರಂ ಖಲು ॥ ॥ ೨೧೯ ॥

ತಾತ್ಪರ್ಯ - ಹೀಗೆ ಭಗವಂತನಿಗೆ ಅಭಿಮತವಾದ ಸಾಧ್ಯ ಸಿದ್ಧಿಯು ಅಂದರೆ ಜ್ಞಾನಿಯ ಹೃದಯವಾಸವು ಸಿದ್ಧಿಸಿದ ಮೇಲೆ ಆ ದಿವ್ಯ ದೇಶಾದಿಗಳು ಅಭಿಮತವಾಗಿವೆಯೇ ಅಂದರೆ ಹೇಳುತ್ತಾರೆ. ತನಗೆ ಪ್ರಾಪ್ಯಭೂತನಾದ ಚೇತನನ ಭೋಗ್ಯತೆಗೆ ವಿಷಯವಾಗಿರುವುದರಿಂದಲೂ, ಈ ದಿವ್ಯದೇಶಗಳಲ್ಲಿ ನಾನು ವಾಸ ಮಾಡಿದ್ದರಿಂದಲ್ಲವೇ ಜ್ಞಾನಿಯಾದ ಚೇತನನ ಲಾಭವು ನನಗುಂಟಾಯಿತು ಎಂದು ಆ ದಿವ್ಯದೇಶಗಳು ಮಾಡಿದ ಉಪಕಾರದ ಕೃತಜ್ಞತೆಯಿಂದಲೂ, ಸಾಧ್ಯವಾದ ಭಕ್ತನು ಸಿಕ್ಕಿದ್ದರೂ ಕೂಡ ಆ ದಿವ್ಯದೇಶಗಳಲ್ಲಿ ವಾಸವು ಭಗವಂತನಿಗೆ ಅಭಿಮತವಾಗಿರುವುದು.

ಸೂತ್ರಂ - ಆಹ್ಯೆಯಾಲೇ ದೋಷ ನಿವೃತ್ತಿ ಪೋಲೇ ಆಂತರಗುಣಮುಂ ವಿರೋಧಿಯಾಯಿರುಕ್ಕುಂ ॥ ೧೭೫ ॥

ಶ್ಲೋಕಃ - ❋ ಸಿಹ್ಮಾವಲೋಕನನ್ಯಾಯಾದ್ದೋಷತ್ಯಾಗ ಇವಾತ್ಮನಾಂ ।
ಗುಣೋಪಿ ಭೋಗವಿರೋಧೀ ಸ್ಯಾದಿತಿ ವಕ್ತಿ ಪುನರ್ಮಹಾನ್ ॥ ॥ ೨೨೦ ॥

ತಾತ್ಪರ್ಯ - ಈ ರೀತಿ ದೋಷ ನಿವೃತ್ತಿಯು ಭಗವದನುಭವಕ್ಕೆ ವಿರೋಧಿಯೆಂಬುದನ್ನು ಸ್ಪಷ್ಟವಾಗಿ ಕಾರಣಗಳಿಂದ ಹೇಳಿದರಷ್ಟೆ, ಅದು ಸಿದ್ಧಿಸಿದ ಮೇಲೆ ಅದನ್ನೇ ದೃಷ್ಟಾಂತವನ್ನಾಗಿಸಿ ಸಿಹ್ಮಾವಲೋಕನನ್ಯಾಯದಂತೆ ಹಿಂದೆ ಹೇಳಿದ ಶೇಷತ್ವ ಪಾರತಂತ್ರ್ಯರೂಪ ಆತ್ಮಗುಣಗಳಿಗೆ ಪರಾನುಭವ ವಿರೋಧಿತ್ವವನ್ನು ಸ್ಥಿರೀಕರಿಸುತ್ತಾರೆ. ಆದ್ದರಿಂದ ದೋಷ ನಿವೃತ್ತಿಯು ಸ್ವರೂಪೌಜ್ವಲ್ಯಕ್ಕೆ ಕಾರಣವಾಗಿದ್ದರೂ ದೋಷವನ್ನೇ ಭೋಗ್ಯವನ್ನಾಗಿ ಆಶಿಪಡುವ ಪ್ರಣಯಿಯಾದ ಅವನಿಗೆ ಅನಭಿಮತವಾದ್ದರಿಂದ ಆ ದೋಷ ನಿವೃತ್ತಿಯು ಹೇಗೆ ಭಗವದನುಭವಕ್ಕೆ ವಿರೋಧಿಯೋ, ಅದೇ ರೀತಿ ಆತ್ಮಾವಿಗೆ ಆಂತರ

ಗುಣವಾದ ಶೇಷತ್ವ ಪಾರತಂತ್ರ್ಯಗಳೂ ಕೂಡ ವಿರೋಧಿಯಾಗುವುವು. ಆದರೆ ಇಲ್ಲಿ ಆಂತರಗುಣವು ಯಾವುದೆಂದರೆ ಪಾರತಂತ್ರ್ಯ ಮಾತ್ರ.

ಸೂತ್ರಂ - ದೋಷನಿವೃತ್ತಿತಾನೇ ದೋಷಮಿರೇ ॥ ೧೭೬ ॥

ಶ್ಲೋಕಃ – ✱ ಮಲಯುತಮನುಭೋಕ್ತುಂ ಕಾಂಕ್ಷಮಾಣಸ್ಯ ಕಾಯಂ
ಸ್ವಪನ ಹೃತಮಲಾ ಸಾವಲ್ಲಭಸ್ಯೇವ ಯೋಷಾ ।
ಪರಿಹೃತ ನಿಜದೋಷಶ್ಚೇತನೋ ಭೋಗರೋಧೀ
ನನುಭವತಿ ಮುರಾರೇಸ್ತದ್ಯಥಾವಸ್ಥಿತಸ್ಯಾತ್ ॥ ॥ ೨೨೧ ॥

ಸೂತ್ರಂ - ಹೀಗೆ ಹೇಳುವುದಕ್ಕೆ ದೋಷ ನಿವೃತ್ತಿಯಲ್ಲಿ ಬರುವ ದೋಷವೇನೆಂದರೆ, ಅದನ್ನು ಹೇಳುತ್ತಾರೆ. ಕಾಮಿನಿಯಾದವಳು ತನ್ನ ದೇಹದ ಕೊಳೆಯನ್ನು ತೊಳೆದುಕೊಂಡು ಪತಿಯೊಡನೆ ಸೇರಬೇಕೆಂದೂ ಇಚ್ಛಿಸುವಂತೆ ಸ್ವತಃ ಪರಿಶುದ್ಧವಾದ ಆತ್ಮಸ್ವರೂಪಕ್ಕೆ ಆರೋಪಿತವಾದ ದೋಷಗಳನ್ನು ನಿವೃತ್ತಿ ಮಾಡಿಕೊಂಡು ತನಗೆ ಶೇಷಿಯಾದ ಭಗವಂತನಿಗೆ ಭೋಗ್ಯವಾಗುವಂತೆ ಇರಬೇಕೆಂದು ತನ್ನ ನಿರ್ಬಂಧದಿಂದ ದೋಷ ನಿವೃತ್ತಿಮಾಡಿದ್ದೇ ಆದರೆ ಕಾಮಿನಿಯು ಕೊಳೆಯನ್ನೇ ಭೋಗ್ಯವನ್ನಾಗಿ ಆಶೆಪಡುವ ಕಾಮುಕನಂತೆ ದೋಷವೇ ಅಭಿಮತವಾಗಿ ಆ ದೋಷದೊಡನೆ ಈ ಚೇತನನನ್ನು ಅನುಭವಿಸಬೇಕೆಂದಿರುವ ಭಗವಂತನ ಭೋಗಕ್ಕೆ ವಿರೋಧಿಯಾಗುವುದು. ಆದ್ದರಿಂದ ದೋಷ ನಿವೃತ್ತಿಯೇ ದೋಷವು.

ಸೂತ್ರಂ - ತನ್ನಾಲ್ ವರುಂ ನನ್ಮೈ ವಿಲೈಪ್ಪಾಲ್‌ಪೋಲೇ ಅವನಾಲ್ ವರುಂ
ನನ್ಮೈ ಮುಲೈಪ್ಪಾಲ್ ಪೋಲೇ ಎನ್ನುಪಿಳ್ಳಾನ್ನಾತ್ತ್ರ್ಯ ॥ ೧೭೭ ॥

ಶ್ಲೋಕಃ – ✱ ರುಭೋದರ್ಕಂ ಸಾಕ್ಷಾದ್ಮದಿಮ್ಯಗಯತಿ ಪ್ರಾಯ ಇಹತ -
ದ್ಮಥಾ ಕ್ರೀತಂ ದುಗ್ಧಂ ಭವತಿ ಚ ರಸಾಸ್ವಾದ ವಿರಸಂ ।
ಸಮಾಯಾತಂ ವಿಷ್ಣೋಃ ಪರಮಕೃಪಯಾ ಭದ್ರಮಿಹ ತ
ದ್ಭವೇದ್ದುಗ್ಧಂ ಸ್ತನ್ಯಂ ರಸಯಿತುಮಿವ ಸ್ವಾದುಜನಕಂ ॥ ॥ ೨೨೨ ॥

ತಾತ್ಪರ್ಯ – ತನಗೆ ತಾನು ಹುಡುಕುವ ಒಳ್ಳೆಯದು ಹೇಯವು, ಭಗವಂತನು ಉಂಟುಮಾಡುವ ಒಳ್ಳೆಯದು ಉಪಾದೇಯವು ಎಂದು ಆಪ್ತವಚನದಿಂದ ತಿಳಿಸುತ್ತಾರೆ. ತನಗೆ ತಾನು ಉಂಟುಮಾಡಿಕೊಳ್ಳುವ ಒಳ್ಳೆಯದು ಉಪಾಧಿಪ್ರಯುಕ್ತವಾಗಿಯೂ, ವಿರಸವಾಗಿಯೂ, ಅಪ್ರಾಪ್ತವಾಗಿಯೂ ಇರುವುದರಿಂದ ದುಡ್ಡು ಕೊಟ್ಟು ತೆಗೆದುಕೊಂಡ ಹಾಲಿನಂತೆ ನಿರುಪಾಧಿಕ ಸ್ವಾಮಿಯಾದ ಭಗವಂತನಿಂದ ಉಂಟಾಗುವ ಒಳ್ಳೆಯದು ನಿರುಪಾಧಿಕವಾಗಿಯೂ, ಸರಸವಾಗಿಯೂ, ಪ್ರಾಪ್ತವಾಗಿಯೂ ಇರುವುದರಿಂದ ತಾಯಿಯ ಸ್ತನ್ಯದಂತೇ ಎಂದು ಪಿಳ್ಳಾನ್ ಹೇಳಿರುವರು.

ಸೂತ್ರಂ - ಅವನ್ಮೈಯೊಳಿಯು ತಾನ್‌ತನಕ್ಕು ನನ್ಮೈತೇಡುಹ್ಮೈಯಾವದು
ಸ್ತನಂಧಯಪ್ರಜ್ಮೈಯ್ಮೈ ಮಾತಾಪಿತಾಕ್ಕಳ್ ಕ್ಮೈಯಿಲ್ ನಿನ್ನುಂವಾಂಗಿ
ಘಾತುಕನಾನ ಆಟ್ಪುವಾಣಿಯಿನ್‌ಕ್ಮೈಯಿಲೇಕಾಟ್ಪಿಕ್ಕೊಡುಕ್ಕು
ಮಾಪ್ಪೋಲೇಯಿರುಪ್ಪತೊನ್ನು ॥ ೧೭೮ ॥

ಶ್ಲೋಕಃ – ✱ ತ್ಯಕ್ತ್ವಾ ಮುಕುಂದಂ ಯದಿ ಕಾಮಯೇತ
ಸ್ವೋಜ್ಜೀವನಾರ್ಥಂ ಶುಭಕರ್ಮಶೇಷಃ ।
ಸ್ತನಂಧಯಂ ತಂ ಪಿತೃಹಸ್ತತೋ ದ್ರಾ
ಗಾಚ್ಛಿದ್ಯದೇಯಾದಿವ ಹಿಂಸ್ರಹಸ್ತೇ ॥ ೨೨೩ ॥

ತಾತ್ಪರ್ಯ – ಇದೂ ಅಲ್ಲದೆ ಇನ್ನೊಂದು ದೋಷವೇನೆಂದರೆ ಭಗವಂತನನ್ನು ಬಿಟ್ಟು ತನಗೆ ತಾನು ತನ್ನ ಉಜ್ಜೀವನಕ್ಕಾಗಿ ಒಳ್ಳೆಯದನ್ನು ಹುಡುಕಿದ್ದೇ ಆದರೆ ತನಗೆ ನಾಶವುಂಟಾಗುವುದು ಎಂಬುದನ್ನು ದೃಷ್ಟಾಂತ ದೊಡನೆ ಹೇಳುತ್ತಾರೆ. ಪ್ರಾಪ್ತನಾಗಿಯೂ, ಆಪ್ತನಾಗಿಯೂ ಇರುವ ಭಗವಂತನು ಈ ಚೇತನನಿಗೆ ಒಳ್ಳೆಯದನ್ನು ಉಂಟುಮಾಡಬೇಕೇ ವಿನಃ ಅದಕ್ಕೆ ಪ್ರತಿಯಾಗಿ ತನಗೆ ತನ್ನ ಉಜ್ಜೀವನಕ್ಕಾಗಿ ಒಳ್ಳೆಯದನ್ನು ಸಂಪಾದಿಸುವುದು ಹೇಗಾಯಿತೆಂದರೆ ತನ್ನ ರಕ್ಷಣೆಗೆ ಉಪಯುಕ್ತವಾದ ಜ್ಞಾನ ಶಕ್ತಿಗಳೊಂದೂ ಇಲ್ಲದ ತಾಯಿಯಿಂದ ಮಾತ್ರ ರಕ್ಷಿಸಲ್ಪಡಬೇಕಾದ ಹಾಲು ಅಂದರೆ ಸ್ತನ್ಯವನ್ನು ಕುಡಿಯುವ ಮಗುವನ್ನು ರಕ್ಷಕರಾದ ತಂದೆತಾಯಿಗಳ ಕೈನಿಂದ ಬಲಾತ್ಕಾರವಾಗಿ ಕಿತ್ತು ಕೊಲೆಪಾತಕನಾದ ಕಟುಕನ ಕೈಯಲ್ಲಿ ಕೊಟ್ಟಂತೆ ಆಗುವುದು. ಹೀಗೆ ಹೇಳಿದ್ದರಿಂದ ಭಗವಂತನೇ ರಕ್ಷಕನು, ತಾನು ತನಗೆ ನಾಶಕನು ಎಂದು ಹೇಳಿದಂತಾಯಿತು.

ಸೂತ್ರಂ - ತನ್ನೈತ್ತಾನೇಯಿರೇಮುಡಿಪ್ಪಾನ್ ॥ ೧೭೯ ॥

ಶ್ಲೋಕಃ – ✱ ಅಸನ್ನೇವೇತಿ ವೇದೋಕ್ತ್ಯಾ ಹ್ಯುಜ್ಜೀವಯಿತುಮಿಚ್ಛಯಾ ।
ಸ್ಥಿತಂ ವಿಷ್ಣುಂ ಪರಿತ್ಯಜ್ಯ ಸ್ವಯಂ ನಶ್ಯತಿ ಚೇತನಃ ॥ ೨೨೪ ॥

ತಾತ್ಪರ್ಯ – ಈ ರೀತಿ ತನ್ನನ್ನು ತಾನೇ ನಾಶಪಡಿಸಿಕೊಳ್ಳುವನೋ ಅಂದರೆ ಹೇಳುತ್ತಾರೆ. ಅದು ಹೇಗೆಂದರೆ ಸರ್ವೇಶ್ವರನು ಇವನನ್ನು ಉಜ್ಜೀವಿಸುವಂತೆ ಮಾಡುವುದಕ್ಕೆ ಕಾಲವನ್ನು ನಿರೀಕ್ಷಿಸುತ್ತಿರುವನಾದ್ದರಿಂದ ಇವನ ವಿನಾಶಕ್ಕೆ ಆ ಸರ್ವೇಶ್ವರನು ಒಂದು ದಿನವೂ ಕಾರಣವಾಗುವುದಿಲ್ಲ. ಹೀಗಿರುವಾಗ 'ಅಸನ್ನೇವ' ಎಂಬಂತೆ ತನ್ನನ್ನು ನಾಶಮಾಡಿಕೊಳ್ಳುವನು ತಾನೇಯಾಗಿರುವನು, 'ಯಾನೇಯನ್ನೈ' ಎಂಬ ಪಾಶುರದಲ್ಲಿ 'ಯಾನೇ' ಎಂದು ಹೇಳಿರುವುದರಿಂದ ಭಗವಂತನಿಗೆ ಪ್ರತಿಯಾಗಿ ನಿಂತಿರುವ ನಾನೇ ನನ್ನ ನಾಶಕ್ಕೆ ಕಾರಣ ಭಗವಂತನಲ್ಲ ಎಂದು ನಮ್ಮಾಳ್ವಾರ್ರು ಹೇಳಿರುವರು

ಸೂತ್ರಂ - ತನ್ನೈತ್ತಾನೇ ಮುಡಿಕ್ಕೈಯಾವತು ಅಹಂಕಾರತ್ತೈಯುಂ ವಿಷಯಂಗಳೈಯುಂ ವಿರುಂಬುಹೈ ॥ ೧೮೦ ॥

ಶ್ಲೋಕಃ – ✱ ವಿಷಯಾನಪ್ಯಹಂಕಾರಂ ಕಾಂಕ್ಷತೇ ಯೋಸಿಜೇಚ್ಛಯಾ ।
ಸಸ್ವರೂಪವಿನಾಶಿತ್ವಾದಾತ್ಮಾನಂ ಪಾತಯತ್ಯಧಃ ॥ ೨೨೫ ॥

ತಾತ್ಪರ್ಯ – ತನ್ನನ್ನು ತಾನೇ ನಾಶಪಡಿಸಿಕೊಳ್ಳುವುದು ಹೇಗೆಂದರೆ ಹೇಳುತ್ತಾರೆ. ಅಹಂಕಾರವು ಯಾವುದೆಂದರೆ ದೇಹಾತ್ಮಾಭಿಮಾನವೂ, ಸ್ವಾತಂತ್ರ್ಯಾಭಿಮಾನವೂ, ವಿಷಯಗಳು ಯಾವುದೆಂದರೆ ವಿಹಿತವೂ ನಿಷಿದ್ಧವೂ. ಇವುಗಳನ್ನು ಆಶೆಪಡುವುದೆಂದರೆ ಇವುಗಳಲ್ಲೇ ಹೆಚ್ಚಾಗಿ ಪ್ರವಣನಾಗುವುದು. ಆತ್ಮ ಸ್ವರೂಪವೋ ಅಂದರೆ ಭಗವಂತನಿಗೆ ಅನನ್ಯಾರ್ಹಶೇಷನಾಗಿರುವಿಕೆಯೂ, ಭಗವದೇಕಭೋಗವಾಗಿರುವಿಕೆಯೂ, ಈ ಸ್ವರೂಪಗಳನ್ನು ನಾಶಮಾಡುವುದು ಹೇಗೆಂದರೆ ಈ ಅಹಂಕಾರ ವಿಷಯಗಳಲ್ಲಿ ಪ್ರವಣನಾದ ಪಕ್ಷದಲ್ಲಿ ತನಗೆ ತಾನೇ ನಾಶವಾದಂತಾಗುವುದು.

ಸೂತ್ರಂ – **ಅಹಂಕಾರಮಗ್ನಿಸ್ಪರ್ಶಂವೋಲೇ** ॥ ೧೪೧ ॥

ಶ್ಲೋಕಃ – ❋ ಆಶ್ರಯಾಶೋಯಥಾಶ್ನಾತಿ ಪ್ರಾಣಿನಂ ತು ಸಮಾಶ್ರಿತಂ ।
ಅಹಂಕಾರಸ್ವರೂಪಂ ತು ಸ್ವಾಶ್ರಿತಸ್ಯ ತಥಾತ್ಮನಃ ॥ ॥ ೨೨೬ ॥

ತಾತ್ಪರ್ಯ – ಈ ಅಹಂಕಾರಾದಿಗಳ ಕ್ರೌರ್ಯವನ್ನು ಉಪಪಾದಿಸಲು ಯೋಚಿಸಿ ಮೊದಲು ಅಹಂಕಾರದ ಕ್ರೌರ್ಯವನ್ನು ಹೇಳುತ್ತಾರೆ. ಬೆಂಕಿಗೆ ಆಶ್ರಯಾಶವೆಂದೂ ಹೆಸರುಂಟು. ಆಶ್ರಯಾಶವೆಂದರೆ ತನ್ನನ್ನು ಆಶ್ರಯಿಸಿದ್ದೆಲ್ಲವನ್ನೂ ತಿಂದು ಹಾಕುವುದು ಎಂದರ್ಥವು. ಆದ್ದರಿಂದ ಅಗ್ನಿಯು ಆಶ್ರಯಿಸಿದ್ದನ್ನು ಯಾವ ರೀತಿ ನಾಶಪಡಿಸುವುದೋ ಅದೇ ರೀತಿ ಅಹಂಕಾರವು ತನ್ನನ್ನು ಆಶ್ರಯಿಸಿದ ಆತ್ಮವನ್ನು ನಾಶಪಡಿಸುವುದು.

ಸೂತ್ರಂ – **ನಕಾಮಂಕಲುಷಂಚಿತ್ತಂ, ನಹಿ ಮೇ ಜೀವಿತೇನಾರ್ಥಃ**
ನದೇಹಂ, ಎವಮ್ಮಾವೀಟ್ಟುತ್ತಿರವುಂ ॥ ೧೪೨ ॥

ಶ್ಲೋಕಃ – ❋ ನ ಕಾಮಕಲುಷಂ ಚಿತ್ತಂ ಮಮತೇ ಪಾದಯೋಃಸ್ಥಿತಂ ।
ಕಾಮಯೇ ವೈಷ್ಣವತ್ವಂ ತು ಸರ್ವಜನ್ಮಸು ಕೇವಲಂ ॥ ॥ ೨೨೭ ॥

ತಾತ್ಪರ್ಯ – ಈ ಅಹಂಕಾರದ ಕ್ರೌರ್ಯಕ್ಕೆ ಪ್ರಮಾಣಗಳನ್ನು ತೋರಿಸುತ್ತಾರೆ. ಅವುಗಳಲ್ಲಿ ಮೊದಲು ಋಗ್ವೇದ ವಿಲವಾದ ಜಿತಂತೆಯ ವಚನವನ್ನು ಹೇಳುತ್ತಾರೆ. ನಿರುಪಾಧಿಕ ಶೇಷಿಯಾಗಿಯೂ, ನಿರತಿಶಯ ಭೋಗ್ಯನಾಗಿಯೂ, ಇರುವ ನಿನ್ನ ಪಾದಾರವಿಂದಗಳಲ್ಲಿ ವ್ಯವಸ್ಥಿತವಾದ ನನ್ನ ಮನಸ್ಸು ಮೋಕ್ಷವೇ ಮೊದಲಾದ ಬೇರೇ ಒಂದನ್ನು ಸ್ವಯಂ ಪುರುಷಾರ್ಥವನ್ನಾಗಿ ನೆನೆಸಿ ಕಲಗಿಯಿಲ್ಲ. ಸಮಸ್ತವಾದ ಜನ್ಮಗಳಲ್ಲೂ ನಿನಗೇ ರಸಿಸುವಂತೆ ಇರುವ ದಾಸ್ಯವನ್ನು ಆಶೆ ಪಡುತ್ತಲಿದೆ. ಇಲ್ಲಿ ಕೇವಲ ಶಬ್ದದಿಂದ ಇವನಲ್ಲುಂಟಾದ ಅಭಿನಿವೇಶವು ಹೋಗಲಾಡಿಸಲ್ಪಡುವುದು, ಇಲ್ಲಿ ತು ಶಬ್ದವು ಅವಧಾರಣಾರ್ಥಕವು. ಈ ಅರ್ಥದಿಂದ ಮೋಕ್ಷದವರಿವಿಗೂ ತನಗೆ ಭೋಗ್ಯವಾಗಿ ಬರುವುದಿಲ್ಲವೂ ಅಹಂಕಾರಗರ್ಭವಾದ್ದರಿಂದ ತ್ಯಾಜ್ಯವೆಂದು ಹೇಳಲ್ಪಟ್ಟಿತು.

ಇದೇ ವಿಷಯದಲ್ಲಿ ಸೀತೆಯ ವಚನವನ್ನು ಹೇಳುತ್ತಾರೆ.

ಶ್ಲೋಕಃ – ❋ ನ ಹಿ ಮೇ ಜೀವಿತೇನಾರ್ಥೋ ನೈವಾರ್ಥೈರ್ನಚಭೂಷಣೈಃ ।
ವಸಂತ್ಯಾ ರಾಕ್ಷಸೀ ಮಧ್ಯೇ ವಿನಾ ರಾಮಂ ಮಹಾರಥಂ ॥ ॥ ೨೨೮ ॥

ತಾತ್ಪರ್ಯ – ಮಹಾರಥನಾದ ರಾಮನನ್ನು ಬಿಟ್ಟು ಈ ರಾಕ್ಷಸಸ್ತ್ರೀಯರ ಮಧ್ಯದಲ್ಲಿ ವಾಸ ಮಾಡುತ್ತಲಿರುವ ನನಗೆ ಪ್ರಾಣಗಳಿಂದಲೂ ಏನೂ ಪ್ರಯೋಜನವಿಲ್ಲ. ಅರ್ಥಗಳಿಂದಲೂ ಏನೂ ಪ್ರಯೋಜನವಿಲ್ಲ. ಆಭರಣ ಗಳಿಂದಲೂ ಏನೂ ಪ್ರಯೋಜನವಿಲ್ಲ. ಇವೆಲ್ಲವೂ ರಾಮನಿಗೋಸ್ಕರವೇ ವಿನಃ ತನಗಾಗಿ ಎಂದ ಪಕ್ಷದಲ್ಲಿ ಅಹಂಕಾರ ಗರ್ಭವಾದ್ದರಿಂದ ತ್ಯಾಜ್ಯವು.

ಇದೇ ವಿಷಯದಲ್ಲಿ ಪರಮಾಚಾರ್ಯರಾದ ಆಳವಂದಾರ್ರವರ ವಚನವನ್ನು ಹೇಳುತ್ತಾರೆ.

ಶ್ಲೋಕಃ – ❋ ನ ದೇಹಂ ನ ಪ್ರಾಣಾನ್ನಚಸುಖಮಶೇಷಾಭಿಲಷಿತಂ
ನ ಚಾತ್ಮಾನಂ ನಾನ್ಯತ್ಕಿಮಪಿ ತವ ಶೇಷತ್ವ ವಿಭವಾತ್ ।
ಬಹಿರ್ಭೂತಂ ನಾಥ, ಕ್ಷಣಮಪಿ ಸಹೇ ಯಾತು ಶತಧಾ
ವಿನಾಶಂ ತತ್ಸತ್ಯಂ ಮಧುಮಥನವಿಜ್ಞಾಪನಮಿದಂ ॥ ॥ ೨೨೯ ॥

ತಾತ್ಪರ್ಯ – ಎಲೈ ನನಗೆ ಭೋಗ್ಯನಾದ ಶೇಷಿಯಾದವನೇ ನಿನ್ನ ಶೇಷತ್ವವೆಂಬ ಐಶ್ವರ್ಯಕ್ಕಿಂತಲೂ ವ್ಯತಿರಿಕ್ತವಾದ ದೇಹವನ್ನೂ ಒಂದು ಕ್ಷಣವೂ ಸಹಿಸಲಾರೆನು. ಈ ದೇಹಕ್ಕೆ ಧಾರಕಗಳಾದ ಪ್ರಾಣಗಳನ್ನೂ ಸಹಿಸಲಾರೆನು. ಎಲ್ಲರೂ ಆಶೆಪಡುವ ಸುಖವನ್ನೂ ಸಹಿಸಲಾರೆನು. ಪುತ್ರಮಿತ್ರಕಳತ್ರಗಳೇ ಮೊದಲಾದ ಬೇರೆ ಯಾವುದನ್ನೂ ಸಹಿಸಲಾರೆನು. ಇವುಗಳೆಲ್ಲವನ್ನೂ ಅನುಭವಿಸುವ ಆತ್ಮನನ್ನೂ ಸಹಿಸಲಾರೆನು. ಹಿಂದೆ ಹೇಳಿದ್ದೆಲ್ಲಾ ನೂರುಪಾಲಾಗಿ ಚೂರು, ಚೂರಾಗಿ ಹೋಗಲಿ. ಈ ವಿಜ್ಞಾಪನೆಯು ಸತ್ಯವು. ಹೀಗೆ ಹೇಳಿದ್ದರಿಂದ ಶೇಷತ್ವಕ್ಕೆ ಬಹಿರ್ಭೂತವಾದ್ದೆಲ್ಲಾ ಅಹಂಕಾರ ದುಷ್ಟವಾದ್ದರಿಂದ ತ್ಯಾಜ್ಯವು.

ಜ್ಞಾನಾಧಿಕರಾದ ನಮ್ಮಾಳ್ವಾರ್ರು ಶ್ರೀಸೂಕ್ತಿಯನ್ನು ಹೇಳುತ್ತಾರೆ.

'ಎವಞ್ಞೀಟ್ಟುಚ್ಚಿರಮುಂ' ಇದರ ಅರ್ಥ, 'ಎಲೈ ಆಳ್ವಾರ್ರೇ, ಮೋಕ್ಷವನ್ನು ಕೊಡುವೆನು ಅಂಗೀಕರಿಸಿ' ಎಂದು ಭಗವಂತನು ಹೇಳಿದ್ದಕ್ಕೆ 'ನನ್ನ ಭೋಗ್ಯತೆಗಾಗಿ ಕೊಡುವ ಮೋಕ್ಷವು ಯಾವ ರೀತಿಯಲ್ಲೂ ವಿಲಕ್ಷಣವಾಗಿದ್ದಾಗ್ಯೂ ಕೂಡ ನನಗೆ ಬೇಕಾಗಿಲ್ಲ' ಎಂದು ನಮ್ಮಾಳ್ವಾರ್ರು ಹೇಳಿದರು. ಹೀಗೆ ಹೇಳಿದ್ದರಿಂದ ತನ್ನ ಭೋಗ್ಯತೆಗಾಗಿ ಬರುವ ಮೋಕ್ಷವೂ ಕೂಡ ಅಹಂಕಾರ ಗರ್ಭವಾದ್ದರಿಂದ ತ್ಯಾಜ್ಯವು ಎಂದಾಯಿತು.

ಸೂತ್ರಂ - **ಪ್ರತಿಕೂಲವಿಷಯಸ್ಪರ್ಶಂವಿಷಸ್ಪರ್ಶಂಪೋಲೇ**
ಅನುಕೂಲವಿಷಯಸ್ಪರ್ಶಂವಿಷಮಿಶ್ರಭೋಜನಂಪೋಲೇ ॥ ೧೪೩ ॥

ಶ್ಲೋಕಃ – ❋ ಶಾಸ್ತ್ರೇ ನಿಷಿದ್ಧವಿಷಯಾನುಭವೋ ಭವೇದ್ಧಿ
ಕ್ಷ್ವೇಳೋಪಮೋ ಯದಯಮಾತ್ಮವಿನಾಶಕಾರೀ ।
ಶಾಸ್ತ್ರಾನುಕೂಲವಿಷಯಾನುಭವೋ೭ಪಿ ಭೂಯೋ
ಕ್ಷ್ವೇಳಾನ್ನಭೋಜನಮಿವಾವಿದಿತಂ ನಿಹಂತಿ ॥ ೨೩೦ ॥

ತಾತ್ಪರ್ಯ – ಹಿಂದೆ ಅಹಂಕಾರದ ಕ್ರೌರ್ಯವನ್ನು ಹೇಳಿದರು. ಈಗ ವಿಷಯಗಳ ಕ್ರೌರ್ಯವನ್ನು ಹೇಳುತ್ತಾರೆ. ಲೋಕವಿರುದ್ಧವಾಗಿಯೂ ನರಕಕ್ಕೆ ಕಾರಣವಾಗಿಯೂ ಇರುವ ಶಾಸ್ತ್ರ ನಿಷಿದ್ಧವಾದ ಸ್ಪರ್ಶಂದನಾದಿ ವಿಷಯಗಳ ಅನುಭವವು ವಿಷವನ್ನು ಉಂಡಂತೆ ನಾಶಕವು. ಲೋಕವಿರುದ್ಧವಲ್ಲದೆಯೂ ನರಕಕ್ಕೆ ಕಾರಣವಲ್ಲದೆಯೂ, ಶಾಸ್ತ್ರನಿಷಿದ್ಧವಲ್ಲದೆಯೂ ಇರುವ ವಿಷಯಾನುಭವವು ವಿಷಮಿಶ್ರವಾದ ಅನ್ನವನ್ನು ಊಟಮಾಡಿದಂತೆ ಇವನಿಗೆ ತಿಳಿಯದಂತೆಯೇ ನಾಶಮಾಡುವುದು. ಆದ್ದರಿಂದಲೇ ಹೇಳಿದೆ, 'ವಿಷಸ್ಯ ವಿಷಯಾಣಾಂ ಚ ದೂರಮತ್ಯಂತಮಂತರಂ । ಉಪಭುಕ್ತಂ ವಿಷಂ ಹಂತಿ ವಿಷಯಾ ಸ್ಮರಣಾದಪಿ' ಎಂದು. ಇದರ ಅರ್ಥವೇನೆಂದರೆ ವಿಷವು ತಿಂದವನನ್ನು ಕೊಲ್ಲುವುದು, ವಿಷಯಗಳೋ ಅಂದರೆ ಸ್ಮರಿಸಿದ ಮಾತ್ರದಲ್ಲಿ ಅವನನ್ನು ಕೊಲ್ಲುವುವು ಅಂದರೆ ವಿಷಕ್ಕಿಂತಲೂ ವಿಷಯಗಳು ಕ್ರೂರವು ಎಂದು ಹೇಳಿದಂತಾಯಿತು.

ಸೂತ್ರಂ - **ಅಗ್ನಿಜ್ವಾಲೈಯೈ ವಿಳುಂಗಿ ವಿಡಾಯ್ಕೆಡನಿನ್ಯೈಕ್ಕುಮಾಪೋಲೇಯುಂ**
ಆಡುಹಿರ ಪಾಂಬಿನ್ನಿಳಲಿಲೇ ಯೊತುಂಗನಿನ್ಯೈಕ್ಕುಮಾಪ್ಪೋಲೇಯುಂ
ವಿಷಯಪ್ರವಣನಾಯ್ ಸುಖಿಕ್ಕನಿನ್ಯೈಕ್ಕೈ ॥ ೧೪೪ ॥

ಶ್ಲೋಕಃ – ❋ ಪಿಪಾಸಾ ಶಾಂತ್ಯರ್ಥಂ ಜ್ವಲದನಲ ಪಾನಂ ಹ್ಯಭಿಲಷ
ನ್ನಿವೋಚ್ಚಂಡಾದಿತ್ಯಪ್ರಖರ ಕಿರಣಾಜ್ಞೋಹನ ಕೃತೇ ।
ಫಣೋರುಚ್ಚಾಯಾಯಾಶ್ರ್ರಯಣಮಿವ ಪಾಂಚ್ಚಂಶ್ಚ ಫಣಿನಃ
ಸುಖಾಪೇಕ್ಷೀ ಮರ್ತ್ಯೋ ಜಗತಿ ವಿಷಯಾಣಾಂ ಬತ ಭವೇತ್ ॥ ॥ ೨೩೧ ॥

ತಾತ್ಪರ್ಯ – ಹೀಗೆ ವಿನಾಶಕರವಾದ ವಿಷಯಗಳಲ್ಲಿ ಆಸಕ್ತರಾಗಿ ಸುಖ ಪಡಬೇಕೆಂದು ಆಶೆಪಡುವುದು ವಿಪರೀತ ಜ್ಞಾನ ಕಾರ್ಯವೆಂಬುದನ್ನು ಪ್ರಮಾಣದಲ್ಲಿ ಪ್ರಸಿದ್ಧವಾದ ದೃಷ್ಟಾಂತದೊಡನೆ ಹೇಳುವರು. ದೃಷ್ಟಾಂತವು ಯಾವುದೆಂದರೆ ? "ಆಸ್ವಾದ್ಯ ದಹನಜ್ವಾಲಾಮುದನ್ಯಾಶಮನಂ ಯಥಾ । ತಥಾ ವಿಷಯ ಸಂಸರ್ಗಾತ್ಸುಖಿ ಚಿಂತಾ ಶರೀರಿಣಃ ॥ ವಿಷಯಾಣಾಂ ತು ಸಂಸರ್ಗಾದ್ಯೋ ಬಿಭರ್ತಿ ಸುಖಿಂ ನರಃ । ನೃತ್ಯತಃ ಫಣಿನಶ್ಛಾಯಾಂವಿಶ್ರಮಾಯಾಶ್ರಯೇತ ಸಃ ॥" ಎಂದು ಹೇಳಿರುವಂತೆ, ಬಾಯಾರಿಕೆಯು ತಣ್ಣೀರಿನಿಂದ ಉಪಶಮನವಾಗುವಾಗ ವಿಪರೀತಜ್ಞಾನದಿಂದ ಬೆಂಕಿಯ ಜ್ವಾಲೆಯನ್ನು ಪಾನಮಾಡಲು ಇಚ್ಛಿಸಿದರೆ ಹೇಗೋ ಬಿಸಿಲಿನ ತಾಪವನ್ನು ಪರಿಹಾರ ಮಾಡಿಕೊಳ್ಳಲು ಆಡುತ್ತಲಿರುವ ಹಾವಿನ ಹೆಡೆಯ ನೆರಳನ್ನು ಅಜ್ಞಾನದಿಂದ ಇಚ್ಛಿಸಿದರೆ ಹೇಗೋ ಆದೇ ರೀತಿ ವಿಷಯಗಳ ಸಂಬಂಧದಿಂದ ಸುಖಿಪಡಲು ಇಚ್ಛಿಸುವುದು.

ಸೂತ್ರಂ - ಅಶುಣಮಾಮುಡಿಯುಮಾಪೋಲೇ, ಭಗವದನುಭವೈಕಪರನಾಯ್ ಮೃದು ಪ್ರಕೃತಿಯಾಯಿರುಕ್ಕುಮವನ್ ವಿಷಯದರ್ಶನತ್താಲೇ ಮುಡಿಯುಂಪಡಿ ॥ ೧೪೫ ॥

ಶ್ಲೋಕಃ – ❋ ಅಶುಣಮಾಭಿಧಪಕ್ಷಿವರೋಯಥಾ
ಮೃದುಲ ಸುಸ್ವರಗಾನ ಮಿಲಚ್ಛ್ರವಾಃ ।
ಕಠಿನ ಭೇರಿ ರವಾನ್ಮೃತಿಮಾಪ್ನುಯಾ
ದ್ಭಗವದೇಕ ರಸೋ ವಿಷಯಾತ್ತಥಾ ॥ ॥ ೨೩೨ ॥

ತಾತ್ಪರ್ಯ – ವಿಷಯಾನುಭವವು ಸ್ವರೂಪನಾಶಕವು. ವಿಷಯಗಳಲ್ಲಿ ಆಸಕ್ತನಾಗಿ ಸುಖಿಸಲು ಆಶೆಪಡುವುದು ವಿಪರೀತಜ್ಞಾನ ಕಾರ್ಯವೆಂದೂ ಹಿಂದೆ ತಿಳಿಸಿದರು. ಈಗ ಭಗವದನುಭವ ಒಂದರಲ್ಲೇ ಲೀನನಾಗಿರುವನು ಈ ವಿಷಯಗಳನ್ನು ಕಂಡ ಕ್ಷಣವೇ ನಾಶಹೊಂದುವನು ಎಂದು ಹೇಳುತ್ತಾರೆ. ಅಶುಣಮಾ ಎಂಬ ಪಕ್ಷಿಯು ಮೃದುವಾದ ಗಾನದಲ್ಲಿ ಲೀನವಾಗಿರುವಾಗ ನಗಾರಿಯ ಕಠಿನ ಶಬ್ದವನ್ನು ಕೇಳಿದೊಡನೆ ಹೇಗೆ ಸಾಯುವುದೋ, ಆದೇ ರೀತಿ ಭಗದವನುಭವ ಒಂದರಲ್ಲೇ ಲೀನನಾಗಿ ಮೃದು ಪ್ರಕೃತಿಯಾದವನು ವಿಷಯಗಳನ್ನು ಕಂಡೊಡನೆ ಮೃತಿಯನ್ನು ಹೊಂದುವನು.

ಸೂತ್ರಂ - ಕಾಟ್ಟಿಪ್ಪಡುಪ್ಪಾಯೋ ಎನ್ನಕ್ಕಡವದಿರೇ ॥ ೧೪೬ ॥

ಶ್ಲೋಕಃ – ❋ ಪ್ರದರ್ಶ್ಯ ದುಷ್ಟಾನ್ವಿಷಯಾನಲ್ಪಾಸ್ಥಿರ ರಸಾನ್ಹರೇ ।
ವಿನಾಶಯಿತುಮೇನಂ ಮಾಂ ಪಾಪಿನಂ ಯತಸೇಕಿಮು ॥ ॥ ೨೩೩ ॥

ತಾತ್ಪರ್ಯ – ಈ ಅರ್ಥವನ್ನು ಆಪ್ತ ವಚನದಿಂದ ತಿಳಿಸುತ್ತಾರೆ. ಎಲೈ ಭಗವಂತನೇ ಅಲ್ಪಾಸ್ಥಿರವಾಗಿಯೂ, ದುಷ್ಟವಾಗಿಯೂ ಇರುವ ವಿಷಯಗಳನ್ನು ಪಾಪಿಷ್ಠನಾದ ನನಗೆ ತೋರಿಸಿ ನನ್ನನ್ನು ನಾಶಮಾಡ ಬೇಕೆಂದಪೇಕ್ಷಿಸುವೆಯಾ ಎಂದು ಆಳ್ವಾರ್ರು ಆಪ್ತಣೆಕೊಡಿಸಿದ್ದಾರೆ.

ಸೂತ್ರಂ - **അജ്ഞാന വിഷയപ്രവണന് കേവല നാസ്തികനൈപ്പോലേ ; ജ്ഞാനവാനാന വിഷയപ്രവണന് ആസ്തികനാസ്തികനൈപ്പോലേ** ॥ ೧೪೭ ॥

ಶ್ಲೋಕಃ - ✱ ವಿಷಯಪ್ರವಣೋಽಜ್ಞಃ ಕೇವಲಂ ನಾಸ್ತಿಕೋ ಯಥಾ ।
ವಿಷಯಪ್ರವಣೋ ಜ್ಞಾನೀ ನಾಸ್ತಿಕಾಸ್ತಿಕವದ್ಭವೇತ್ ॥ ॥ ೨೩೪ ॥

ತಾತ್ಪರ್ಯ - ವಿಷಯಂಗಳ ಕ್ರೌರ್ಯವನ್ನು ತಿಳಿಯದೇ ವಿಷಯಂಗಳಲ್ಲಿ ಆಸಕ್ತನಾಗಿರುವವನಿಗೂ ಅವುಗಳ ಕ್ರೌರ್ಯವನ್ನು ತಿಳಿದೂ ಅವುಗಳಲ್ಲಿ ಆಸಕ್ತನಾಗಿರುವವನಿಗೂ ವ್ಯತ್ಯಾಸವನ್ನು ತಿಳಿಸುತ್ತಾರೆ. ವಿಷಯಗಳ ದೋಷಬಾಹುಳ್ಯವನ್ನೂ ಸ್ವರೂಪ ವಿರುದ್ಧತೆಯನ್ನೂ ತಿಳಿಯದೇ ಅವುಗಳಲ್ಲಿ ಆಸಕ್ತನಾಗಿರುವನು ಪಾಪಪುಣ್ಯ ಧರ್ಮಾಧರ್ಮ, ಚೇತನ ಈಶ್ವರ ಇವುಗಳನ್ನು ಪ್ರತಿಪಾದಿಸುವ ಶಾಸ್ತ್ರದಲ್ಲಿ ಪ್ರಾಮಾಣ್ಯ ಬುದ್ಧಿಯಿಲ್ಲದೆ ಸ್ವೇಚ್ಛಾಚಾರಿಯಾಗಿ ತಿರುಗುವ ಶುದ್ಧನಾಸ್ತಿಕನಂತೆ, ವಿಷಯಂಗಳ ದೋಷಗಳನ್ನೂ ಸ್ವರೂಪವಿರುದ್ಧತೆಯನ್ನೂ ತಿಳಿದೂ ತಿಳಿದೂ ಅವುಗಳಲ್ಲಿ ಆಸಕ್ತನಾಗುವನು ಧರ್ಮಾಧರ್ಮಾದಿಗಳನ್ನು ಪ್ರತಿಪಾದಿಸುವ ಶಾಸ್ತ್ರದಲ್ಲಿ ವಿಶ್ವಾಸವುಳ್ಳವನಾದ್ದರಿಂದ ಆಸ್ತಿಕನೆಂದೂ ಆ ಶಾಸ್ತ್ರಮರ್ಯಾದೆಯನ್ನು ಉಲ್ಲಂಘಿಸುವುದರಿಂದ ನಾಸ್ತಿಕನೆಂದೂ ಹೇಳುವುದು.

ಸೂತ್ರಂ - **കേവലനാസ്തികനൈത്തിരുത്തലാം ആസ്തികനാസ്തികനൈയൊരുനാളുംതിരുത്തവൊണ്ണാതു** ॥ ೧೪೮ ॥

ಶ್ಲೋಕಃ - ✱ ആನೇತುಂ ಸತ್ಪಥಂ ಕ್ಷಿಪ್ರಂ ಕೇವಲಂ ನಾಸ್ತಿಕಂ ಭವೇತ್ ।
ನಾಸ್ತಿಕಾಸ್ತಿಕಮೇವಂ ಸ್ಯಾತ್ಕರ್ತುಂ ದಕ್ಷಃ ಕದಾಪಿ ನ ॥ ॥ ೨೩೫ ॥

ತಾತ್ಪರ್ಯ - ದೃಷ್ಟಾಂತಭೂತರಾದ ಇವರಿಬ್ಬರಿಗೂ ಇರುವ ವಿಶೇಷವನ್ನು ಹೇಳುತ್ತಾರೆ. ಅದೇನೆಂದರೆ ಶಾಸ್ತ್ರವೇ ಇಲ್ಲವೆಂದು ಅಪಲಾಪ ಮಾಡಿ ಇಚ್ಛೆ ಬಂದಂತೆ ತಿರುಗುತ್ತಲಿರುವ ನಾಸ್ತಿಕನನ್ನು ಶಾಸ್ತ್ರದಲ್ಲಿ ವಿಶ್ವಾಸ ಉಂಟಾಗುವಂತೆ ಉಪದೇಶಮಾಡಿ ವಿಧಿ ನಿಷೇಧಗಳಿಗೆ ವಶನನ್ನಾಗಿಸಿ ಒಳ್ಳೇ ಮಾರ್ಗಕ್ಕೆ ತರಬಹುದು. ಶಾಸ್ತ್ರದಲ್ಲಿ ವಿಶ್ವಾಸವುಳ್ಳವನಾಗಿಯೂ, ಆ ಶಾಸ್ತ್ರದಲ್ಲಿ ಪ್ರತಿಪಾದ್ಯವಾದ ಪ್ರಮೇಯಂಗಳನ್ನು ತಿಳಿದವನಾಗಿಯೂ ಪಾಪಭಯವಿಲ್ಲದೇ ನಾಸ್ತಿಕನಂತೆ ಸ್ವೇಚ್ಛೆಯಾಗಿ ತಿರುಗುವನನ್ನು ತಿಳಿದವನಾದ್ದರಿಂದ ಉಪದೇಶಮಾಡಿ ಸನ್ಮಾರ್ಗಕ್ಕೆ ತರಲು ಸಾಧ್ಯವಾಗುವುದೇ ಇಲ್ಲ.

ಸೂತ್ರಂ - **ഇവ്വൈയിരണ്ടും സ്വരൂപേണ മുടിക്കുമിളവന്നിക്കേ ഭാഗവത വിരോധത്തൈയും വിളൈത്തു മുടിക്കും** ॥ ೧೪೯ ॥

ಶ್ಲೋಕಃ - ✱ ಅಹಂಕಾರಸ್ಸಾಕ್ಷಾದ್ವಿಷಯರತತಾಚ್ಚೈತದುಭಯಂ
ಸ್ವರೂಪೈಕೋಚ್ಛಿತ್ತಿಂ ಜನಯತಿ ನ ತತ್ಕೇವಲಮಿಹ ।
ಅಪಿ ತ್ವೇತದ್ಘೋರಂ ಭಗವತಿ ಮಹಾ ಭಕ್ತನಿವಹೇ
ಽಪ್ಯಸಹ್ಯಂ ಮಂತುಂ ಚಾಪ್ಯುಪಜನಯತಿ ಸ್ವಾತ್ಮಪತನಂ ॥ ॥ ೨೩೬ ॥

ತಾತ್ಪರ್ಯ - ಹಿಂದೆ ಅಹಂಕಾರ ಮತ್ತು ವಿಷಯಂಗಳು ಇವುಗಳ ಕ್ರೌರ್ಯಗಳನ್ನು ಬೇರೆಬೇರೆ ತಿಳಿಸಿದರು. ಈಗ ಅವೆರಡರ ಕ್ರೌರ್ಯವನ್ನು ಸೇರಿಸಿ ಹೇಳುತ್ತಾರೆ. ಈ ಅಹಂಕಾರ ಮತ್ತು ವಿಷಯಾಸಕ್ತಿ ಇವೆರಡೂ

ಸ್ವರೂಪನಾಶವನ್ನುಂಟುಮಾಡುವುದಲ್ಲದೆ ಭಾಗವತಾಪಚಾರವನ್ನುಂಟುಮಾಡುವುದು. ಯಾವಾಗ ಭಾಗವತಾಪಚಾರವನ್ನುಂಟುಮಾಡುವುದೋ ಆವಾಗ ಭಗವನ್ನಿಗ್ರಹಕ್ಕೆ ಪಾತ್ರನಾಗುವನು.

ಸೂತ್ರಂ - ನಾಮರೂಪಂಗಳೈಯುಡೈಯರಾಯ್ ಭಾಗವತವಿರೋಧಂ
ಪಣ್ಣಿಪ್ಪೋರುಮವರ್ಹಳ್ ದಗ್ಧಪಟಂಪೋಲೇ ॥ ೧೯೦ ॥

ಶ್ಲೋಕಃ – ❋ ಶ್ರೀವೈಷ್ಣವತ್ವಸ್ಯ ತು ಚಿಹ್ನಮೇತ
ದ್ದಾಸ್ಯಾಭಿಧಾನಂ ತದನುಪ್ರಯುಕ್ತಂ ।
ರೂಪಂ ದಧಾನೋಪ್ಯಪರಾಧಭಾಗೀ
ಭಕ್ತೇಷು ದಗ್ಧಾಂಶು ಕವದ್ವಿಭಾತಿ ॥ ॥ ೨೩೭ ॥

ತಾತ್ಪರ್ಯ – ಹಾಗಾದರೆ ಭಾಗವತಾಪಚಾರವನ್ನು ಮಾಡಿದಾಗಲೇ ಸ್ವರೂಪನಾಶವುಂಟಾಗುವ ಪಕ್ಷದಲ್ಲಿ ನಾಮ ರೂಪಗಳೊಡನೆ ಇರುವುದು ಹೇಗೆಂದರೆ ಹೇಳುತ್ತಾರೆ. ಅದೇನೆಂದರೆ ವೈಷ್ಣವತ್ವಕ್ಕೆ ಗುರುತಾದ ದಾಸ್ಯನಾಮವನ್ನೂ ಅದಕ್ಕನುಗುಣವಾದ ರೂಪವನ್ನೂ ಹೊಂದಿ ಅಹಂಕಾರಕ್ಕೆ ವಶರಾಗಿ ಭಾಗವತಾಪಚಾರಮಾಡುವವರು ಸುಟ್ಟ ವಸ್ತ್ರದಂತೆ ಬದುಕಿರುವರು.

ಸೂತ್ರಂ - ಮಡಿ ಪುಡೈವೈ ವೆಂದಾಲ್ ಉಣ್ಡೈಯುಂ ಪಾವುವೊತ್ತು ಕಿಡಕ್ಕುಂ
ಕಾತ್ತಡಿತ್ತವಾರೇ ಪರಂದುವೋಂ ॥ ೧೯೧ ॥

ಶ್ಲೋಕಃ – ❋ ತ್ರಿಗುಣೇಕೃತ ದಗ್ಧಚೇಲಮೇತ
ನ್ನಿಜರೂಪೇಣ ತಥೈವ ಯತ್ಸ್ಥಿತಂ ತತ್ ।
ಪವಮಾನ ಹತಂ ಯಥಾ ವಿಭಿನ್ನಂ
ಪ್ರವಿನಶ್ಯತ್ಯಪರಾಧ ಭಾಕ್ತಥೈವ ॥ ॥ ೨೩೮ ॥

ತಾತ್ಪರ್ಯ – ಹಿಂದೆ ಸುಟ್ಟ ಬಟ್ಟೆಯಂತೆ ಎಂದು ದೃಷ್ಟಾಂತವನ್ನು ಹೇಳಿದರಷ್ಟೆ. ಆ ಸುಟ್ಟ ಬಟ್ಟೆಯ ಸ್ಥಿತಿಯನ್ನು ಇದರಲ್ಲಿ ತಿಳಿಸುತ್ತಾರೆ. ಚೆನ್ನಾಗಿ ತಟ್ಟಿ ಮಡಿಸಿ ಇಟ್ಟಿರುವ ಸೀರೆಯು ಸುಟ್ಟು ಹೋದರೆ ಆ ಮಡಿಕೆಯೊಂದಿಗೆ ಹಾಗೆಯೇ ಇದ್ದು ಗಾಳಿ ಬೀಸಿದ ಮೇಲೆ ಆ ಸೀರೆಯು ಚೆದರಿ ಭಿನ್ನಾಭಿನ್ನವಾಗಿ ಹೇಗೆ ಹಾರಿಹೋಗುವುದೋ ಅದೇ ರೀತಿ ಭಾಗವತಾಪರಾಧವನ್ನು ಮಾಡಿದವನೂ ಕೂಡ ಅಪರಾಧವೆಸಗುವಾಗ ಚೆನ್ನಾಗಿಯೇ ಇದ್ದು ಕೊನೆಯಲ್ಲಿ ನಶಿಸಿಹೋಗುವನು.

ಸೂತ್ರಂ - 'ಈಶ್ವರನವತರಿತ್ತು ಪಣ್ಣಿನ ಅನ್ಯೆತ್ತೊಳಿಲ್ಲೊಳಿಲ್ಲಾಂ ಭಾಗವತಾಪಚಾರಂ
ಪೊರಾವೈ' ಎನ್ನುಜೀಯರರುಳಿಚ್ಚೆಯ್ವರ್ ॥ ೧೯೨ ॥

ಶ್ಲೋಕಃ – ❋ ಹಿರಣ್ಯಕಶಿಪುಂ ತಥಾ ದಶಮುಖಿಂ ಚ ನಾರಾಯಣಃ
ತದಾಚರಿತಮಂತುಮಾಶ್ರಿತ ಜನೇಷು ಭಕ್ತೇಷ್ವಪಿ ।
ವಿಲೋಕ್ಯ ಧರಣೌ ಕೃತಾವತರಣೋ ವಿಚಿತ್ರಾ ಕೃತಿಃ
ತ್ವಹನ್ನಿತಿ ಜಗಾದ ಮಂದ್ಯತಿರಯಂ ಸ್ವಕೀಯಾಶಯಂ ॥ ॥ ೨೩೯ ॥

ತಾತ್ಪರ್ಯ – ಭಾಗವತಾಪಚಾರವನ್ನು ಮಾಡಿದ ಪಕ್ಷದಲ್ಲಿ ಭಗವಂತನು ಅದನ್ನು ಸಹಿಸದೆ ಅದಕ್ಕೆ ತಕ್ಕ ಶಿಕ್ಷೆಯನ್ನು ಮಾಡುವನು ಎಂಬುವುದನ್ನು ಆಪ್ತ ವಚನದಿಂದ ತಿಳಿಸುತ್ತಾರೆ. ಸಂಕಲ್ಪ ಮಾತ್ರದಿಂದ ಎಲ್ಲವನ್ನೂ

ನಿರ್ವಹಿಸತಕ್ಕ ಶಕ್ತಿಯುಳ್ಳ ಸರ್ವೇಶ್ವರನು ಇತರ ಸಜಾತೀಯನಾಗಿ ಈ ಭೂಲೋಕದಲ್ಲಿ ಅವತರಿಸಿ ಹಿರಣ್ಯಶಿಕಪು, ರಾವಣ ಇವರೇ ಮೊದಲಾದವರನ್ನು ನಿರಸನಮಾಡಿ ಅತಿಮಾನುಷ ಚೇಷ್ಟೆಗಳನ್ನು ತೋರಿಸಿದ್ದು ಪ್ರಹ್ಲಾದ ಮಹರ್ಷಿಗಳು ಇವರೇ ಮೊದಲಾದ ಭಾಗವತರಲ್ಲಿ ಮಾಡಿದ ಅಪರಾಧವನ್ನು ಸಹಿಸದೇ ಇದ್ದದ್ದರಿಂದಲೇ ಎಂದು ಆಪ್ತರಾದ ನಂಜೀಯರು ಅಪ್ಪಣೆಕೊಡಿಸಿರುವರು.

ಸೂತ್ರಂ - ಅವಮಾನಕ್ರಿಯಾ ॥ ೧೯೩ ॥

ಶ್ಲೋಕಃ – ❋ ಯಾಪ್ರೀತಿರ್ಮಯಿ ಸಂವೃತ್ತಾ ಮದ್ಭಕ್ತೇಷು ಸದಾಸ್ತುತೇ ।
ಅವಮಾನಕ್ರಿಯಾ ತೇಷಾಂ ಸಂಹರತ್ಯಖಿಲಂಜಗತ್ ॥ ॥ ೨೪೦ ॥

ತಾತ್ಪರ್ಯ – ಈ ಭಾಗವತಾಪಚಾರದ ಕೌರ್ಯದ ವಿಷಯದಲ್ಲಿ ಭಗವದುಕ್ತಿಯನ್ನು ತೋರಿಸುತ್ತಾರೆ; ನನ್ನಲ್ಲಿ ಯಾವ ಪ್ರೀತಿಯುಂಟೋ ಆ ಪ್ರೀತಿಯು ನನ್ನ ಭಕ್ತರಾದ ಭಾಗವತರಲ್ಲಿ ಇರಲಿ, ನನ್ನ ಭಕ್ತರಿಗೆ ಅವಮಾನವಾದ ಪಕ್ಷದಲ್ಲಿ ಆ ಅವಮಾನದ ಕೆಲಸವು ಜಗತ್ತನ್ನೇ ನಾಶಮಾಡುವುದು ಎಂದು ಭಗವಂತನು ಹೇಳಿರುವನು.

ಸೂತ್ರಂ - ಭಾಗವತಾಪಚಾರಂತಾನನೇಕವಿಧಂ ॥ ೧೯೪ ॥

ಶ್ಲೋಕಃ – ❋ ಜನ್ಮಜ್ಞಾನೈಕ ವೃತ್ತಾದಿ ಬಂಧ್ವಾಕೃತಿ ನಿರೂಪಣೈಃ ।
ಭಕ್ತಾಪಚಾರ ವೈವಿಧ್ಯಂ ಸಮ್ಯಗತ್ರನಿರೂಪ್ಯತೇ ॥ ॥ ೨೪೧ ॥

ತಾತ್ಪರ್ಯ – ಭಾಗವತಾಪಚಾರದ ಅನೇಕ ವಿಧತ್ವವನ್ನು ಹೇಳುತ್ತಾರೆ. ಜನ್ಮನಿರೂಪಣ, ಜ್ಞಾನನಿರೂಪಣ, ವೃತ್ತ ನಿರೂಪಣ, ಆಕಾರನಿರೂಪಣ, ಬಂಧುನಿರೂಪಣ, ವಾಸನಿರೂಪಣ – ಈ ರೀತಿ ಅನೇಕ ವಿಧಗಳು.

ಸೂತ್ರಂ - ಅತಿಲೇಯೊನ್ನು ಅವರ್ಹಳ್‌ಪಕ್ಕಲ್‌ಜನ್ಮ ನಿರೂಪಣಂ ॥ ೧೯೫ ॥

ಶ್ಲೋಕಃ – ❋ ನಿಹೀನ ಕುಲ ಜಾತಸ್ಯ ವಿಷ್ಣು ಭಕ್ತಸ್ಯ ಜನ್ಮನಃ ।
ನಿರೂಪಣಂ ಭವತ್ಯೇಕೋಹ್ಯಪರಾಧೋ ಮಹಾನ್ಭುವಿ ॥ ॥ ೨೪೨ ॥

ತಾತ್ಪರ್ಯ – ಅವುಗಳಲ್ಲಿ ಒಂದಾದ ಜನ್ಮ ನಿರೂಪಣದ ಕೌರ್ಯವನ್ನು ಹೇಳುತ್ತಾರೆ. ಅದೇನೆಂದರೆ ನಿಕೃಷ್ಟವಾದ ಕುಲದಲ್ಲಿ ಜನಿಸಿರುವ ಭಾಗವತರುಗಳ ಭಗವತ್ಸಂಬಂಧ ಪ್ರಯುಕ್ತವಾದ ಮಾಹಾತ್ಮ್ಯವನ್ನು ಲಕ್ಷಿಸದೆ ಅಲ್ಪ ಬುದ್ಧಿಯಿಂದ ಅವರುಗಳ ಜನ್ಮವನ್ನು ನಿರೂಪಿಸುವುದು.

ಸೂತ್ರಂ - ಇದು ತಾನ್ ಅರ್ಚಾವತಾರತ್ತಿಲುಪಾದಾನಸ್ಮೃತಿಯಿಲುಂ ಕಾಟ್ಟಿಲ್‌ಕ್ರೂರಂ ॥ ೧೯೬ ॥

ಶ್ಲೋಕಃ – ❋ ಭಕ್ತೇಚ್ಛಾನುಗುಣಂ ಕೃತೇತು ವಿಧಿವಲ್ಲೋಹಾದಿಭಿರ್ವಿಗ್ರಹೇ
ತತ್ಸಾನ್ನಿಧ್ಯ ವಿಶೇಷತಸ್ಸುಮಜಲೈರರ್ಚಾನುಯೋಗ್ಯೇ ನೃಣಾಂ ।
ಲೋಹಾದಿ ಸ್ಮರಣಂ ಯಥಾತಿದುರಿತೈಕಾಪಾದನಂ ಸಾಧಯೇ
ತ್ತಸ್ಮಾಜ್ಜನ್ಮನಿರೂಪಣಂ ಶ್ರಿತಜನಸ್ಯಾಹುಃ ಕಠೋರಂ ತ್ವಘಂ ॥ ॥ ೨೪೩ ॥

ತಾತ್ಪರ್ಯ – ಈ ಜನ್ಮ ನಿರೂಪಣದ ಕ್ರೌರ್ಯವನ್ನು ಹೇಳುತ್ತಾರೆ. ಅದೇನೆಂದರೆ ಭಾಗವತರ ಜನ್ಮನಿರೂಪಣವು, ಭಕ್ತರು ಭೋಗ್ಯವಾಗಿ ಯಾವುದಾದರೂ ಒಂದು ದ್ರವ್ಯದಿಂದ ವಿಗ್ರಹವನ್ನು ಮಾಡಿಸಿ ಅದರಲ್ಲಿ ಭಗವಂತನ ಸಾನ್ನಿಧ್ಯವನ್ನುಂಟುಮಾಡಿ ಆರಾಧಿಸುವರಷ್ಟೇ. ಆ ಭಗವದ್ವಿಗ್ರಹವನ್ನು ನೋಡಿ ನಿಕೃಷ್ಟಬುದ್ಧಿಯಿಂದ ಇದನ್ನು ಇಂಥಾ ಲೋಹದಿಂದ ಮಾಡಿಲ್ಲವೇ ಎಂದು ಚಿಂತಿಸಿದರೆ ಎಷ್ಟುಪಾಪವೋ ಅದಕ್ಕಿಂತಲೂ ಕಠೋರವಾದ ಪಾಪವನ್ನುಂಟುಮಾಡುವುದು.

ಸೂತ್ರಂ - ಅತ್ರೈ ಮಾತೃಯೋನಿ ಪರೀಕ್ಷೆಯೋಡೊಕ್ಕುವೆನ್ನು
ಶಾಸ್ತ್ರಂ ಶೊಲ್ಲುಂ ॥ ೧೯೭ ॥

ಶ್ಲೋಕಃ – ❋ ಭಕ್ತೋದ್ಭವಸ್ಯ ಯತ್ಕುರ್ಮಾದ್ಧೀನತ್ವಾದಿ ನಿರೂಪಣಂ ।
ಮಾತೃಯೋನಿ ಪರೀಕ್ಷಾವದ್ದುರಿತಾಪಾದನಂ ಹಿ ತತ್ ॥ ೨೪೪ ॥

ತಾತ್ಪರ್ಯ – ಭಾಗವತರ ಜನ್ಮನಿರೂಪಣದ ಕ್ರೌರ್ಯವು ಎಷ್ಟೆಂದರೆ ಅದನ್ನು ಹೇಳುತ್ತಾರೆ. "ಅರ್ಚಾವತಾರೋ ಪಾದಾನ ವೈಷ್ಣವೋತ್ಪತ್ತಿ ಚಿಂತನಂ। ಮಾತೃಯೋನಿ ಪರೀಕ್ಷಾಯಾಸ್ತುಲ್ಯಮಾಹುರ್ಮನೀಷಿಣಃ" ಎಂದು ಹೇಳಿರುವುದರಿಂದ ಮಾತೃಯೋನಿ ಪರೀಕ್ಷೆಮಾಡಿದರೆ ಎಷ್ಟು ಪಾಪವೋ ಅದಕ್ಕಿಂತಲೂ ಅರ್ಚಾವತಾರದ ವಿಗ್ರಹದಲ್ಲಿ ಉಪಾದಾನ ಸ್ಮರಣವೂ, ಭಾಗವತರ ಜನ್ಮನಿರೂಪಣವೂ ಅಧಿಕವಾದ ಪಾಪವನ್ನುಂಟುಮಾಡುವುವು ಎಂದು ಶಾಸ್ತ್ರವು ಹೇಳುವುದು.

ಸೂತ್ರಂ - ತ್ರಿಶಂಕುವೈಪ್ಪೋಲೇಕರ್ಮಚಂಡಾಲನಾಯ್ ಮಾರ್ಕಲಿಟ್ಟ
ಯಜ್ಞೋಪವೀತಂ ತಾನೇ ವಾರಾಯ್ ವಿಡುಂ ॥ ೧೯೮ ॥

ಶ್ಲೋಕಃ – ❋ ಯೋ ಭಕ್ತ ಜನ್ಮಕಥಯತ್ಯಪಕೃಷ್ಟಬುದ್ಧಾ
ಚಂಡಾಲತಾಂ ವ್ರಜತಿ ಕರ್ಮಸಮುದ್ಭವಾಂಸಃ ।
ಶಪ್ತಸ್ಸ್ವಕೀಯ ಗುರುಣೈವ ತಿರಸ್ಕೃತೇನ
ರಾಜಾ ತ್ರಿಶಂಕುರಿವ ಹಂತ ಭುವಿ ದ್ವಿಜನ್ಮಾ ॥ ೨೪೫ ॥

ತಾತ್ಪರ್ಯ – ಈ ಭಾಗವತಾಪಚಾರಕ್ಕೆ ಫಲವು ಸುಟ್ಟ ಮಡಿಸಿದ ಒಟ್ಟೆಯಂತೆ ನಷ್ಟಪ್ರಾಯನಾಗಿದ್ದು ದೇಹಾವಸಾನ ಕಾಲದಲ್ಲಿ ನಶಿಸಿ ಹೋಗುವುದಲ್ಲದೇ, ಕರ್ಮಚಂಡಾಲನನ್ನಾಗಿಯೂ ಆಗಿಸುವುದು ಎಂದು ಹೇಳುತ್ತಾರೆ. ಅದೇನೆಂದರೆ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ತ್ರಿಶಂಕುವೆಂಬ ರಾಜನು ತನ್ನ ಕುಲಗುರುವಾದ ವಸಿಷ್ಠ ಮಹರ್ಷಿಯ ಹತ್ತಿರ ಹೋಗಿ ಈ ಶರೀರದೊಡನೇ ಸ್ವರ್ಗಕ್ಕೆ ಹೋಗುವಂತೆ ನನ್ನ ಕೈಯಲ್ಲಿ ಯಾಗ ಮಾಡಿಸಬೇಕೆಂದು ಕೇಳುತ್ತಲು ವಸಿಷ್ಠರು, "ನನ್ನ ಕೈಯಲ್ಲಿ ಸಾಧ್ಯವಾಗಲಾರದು" ಎಂದು ಹೇಳಿದರು. ಆಗ ಆ ತ್ರಿಶಂಕುವು, ವಸಿಷ್ಠ ಪುತ್ರರು ತಪಸ್ಸು ಮಾಡುವ ಸ್ಥಳಕ್ಕೆ ಹೋಗಿ, ನಾನು ಈ "ಶರೀರದೊಡನೇ ಸ್ವರ್ಗಕ್ಕೆ ಹೋಗುವಂತೆ ನನ್ನ ಕೈಯಲ್ಲಿ ಯಾಗ ಮಾಡಿಸಿ" ಎಂದು ಪ್ರಾರ್ಥಿಸಿದನು. ಅದಕ್ಕೆ ವಸಿಷ್ಠ ಪುತ್ರರು "ನಿನಗೆ ಬುದ್ಧಿಯಿಲ್ಲವೆಂದು ತೋರುತ್ತದೆ, ನಮ್ಮ ತಂದೆಯ ಕೈಯಲ್ಲಿ ಸಾಧ್ಯವಾಗದ ಕೆಲಸವನ್ನು ನಾವು ಮಾಡಲು ಸಾಧ್ಯವೇ ? ಅದೆಂದಿಗೂ ಆಗದು" ಎಂದು ಹೇಳುತ್ತಲು ರಾಜನು ಕುಪಿತನಾಗಿ "ನೀವುಗಳು ನನ್ನನ್ನು ತಿರಸ್ಕರಿಸಿದಿರಿ. ಆದಕಾರಣ ನಾನು ಬೇರೇ ಗುರುವನ್ನು ಸೇರುತ್ತೇನೆ" ಎಂದು ಹೇಳಿದನು. ಆ ಮಾತನ್ನು ಕೇಳಿ ಗುರುಪುತ್ರರು ಕೋಪಗೊಂಡವರಾಗಿ "ನೀನು ಚಂಡಾಲನಾಗು" ಎಂದು ಶಪಿಸಿದರು. ಒಡನೆಯೇ ಆ ರಾಜನು ಚಂಡಾಲನಾದನು. ಆದ್ದರಿಂದ ಭಾಗವತಾಪಚಾರ ಮಾಡಿದೊಡನೆಯೇ ಚಂಡಾಲನಾಗುವನು.

ಸೂತ್ರಂ - ಜಾತಿಚಂಡಾಲನುಕ್ಕುಕ್ಕಾಲಾಂತರತ್ತಿಲೇ ಭಾಗವತನಾಹೈಕ್ಕು ಯೋಗ್ಯತೆಯುಂಡು. ಅತುವುಮಿಲ್ಲೈಯಿವನುಕ್ಕು ॥ ೧೯೯ ॥

ಶ್ಲೋಕಃ - ❋ ಜಾತಿಮಾತಂಗ ಏವ ಸ್ಯಾತ್ಕದಾಚಿದ್ವಿಷ್ಣುಭಕ್ತಿಭಾಕ್ ।
ಚಂಡಾಲಃ ಕರ್ಮಣಾ ಯಸ್ತು ತಸ್ಯಭಾಗ್ಯಂ ನ ತಾದೃಶಂ ॥ ॥ ೨೪೬ ॥

ತಾತ್ಪರ್ಯ - ಇವನು ಚಂಡಾಲನಂತೆ ಆದರೂ ಕೂಡ ಒಂದಾನೊಂದು ಕಾಲದಲ್ಲಿ ಉಜ್ಜೀವಿಸಲು ಅವಕಾಶವಿಲ್ಲ ವೆಂದು ಹೇಳುತ್ತಾರೆ. ಅದೇನೆಂದರೆ ಜಾತಿ ಚಂಡಾಲನಾದವನು ಅದೇ ಜನ್ಮದಲ್ಲಿಯಾಗಲಿ ಅಥವಾ ಜನ್ಮಾಂತರದಲ್ಲೇ ಆಗಲಿ ಭಗವತ್ಕಟಾಕ್ಷಕ್ಕೆ ಪಾತ್ರನಾಗಿ ನಾಮರೂಪಗಳನ್ನು ಹೊಂದಿ ಭಾಗವತನಾಗಲು ಯೋಗ್ಯನಾಗುವನು. ಭಾಗವತಾಪಚಾರಮಾಡಿದ ಕರ್ಮಚಂಡಾಲನಿಗೋ ಅಂದರೆ ಆ ಯೋಗ್ಯತೆಯೂ ಕೂಡಾ ಇಲ್ಲ.

ಸೂತ್ರಂ - ಆರೂಢಪತಿತನಾಹೈಯಾಲೇ ॥ ೨೦೦ ॥

ಶ್ಲೋಕಃ - ❋ ಭಗವದ್ಭಕ್ತತ್ವಶಿಖರಮಾರೂಢೋ ವೈಷ್ಣವೋ ಯಂತಃ ।
ಪತಿತಃ ಕರ್ಮಣ್ಯೈವಾಧಃ ತಸ್ಮಾದುಜ್ಜೀವನಂ ನ ಹಿ ॥ ॥ ೨೪೭ ॥

ತಾತ್ಪರ್ಯ - ಇದರಲ್ಲಿ ಆರೂಢಪತಿತತ್ವವನ್ನು ಹೇಳುತ್ತಾರೆ. ಭಾಗವತತ್ವವೆಂಬ ಶ್ರೇಷ್ಠವಾದ ಉಚ್ಚಶಿಖರವನ್ನು ಹತ್ತಿ ಶ್ರೀವೈಷ್ಣವನು ಭಾಗವತಾಪಚಾರವನ್ನೆಸಗಿ ಕೆಳಗೆ ಅಂದರೆ ಅಧಃಪತಿತನಾದ್ದರಿಂದ ಉಜ್ಜೀವನಕ್ಕೆ ಅವಕಾಶವಿಲ್ಲ.

ಸೂತ್ರಂ - ಇದುತನಕ್ಕು ಅಧಿಕಾರಿನಿಯಮಮಿಲ್ಲೈ ॥ ೨೦೧ ॥

ಶ್ಲೋಕಃ - ❋ ಜ್ಞಾನೇನ ಜನ್ಮನಾ ನೀಚೈರುತ್ಕೃಷ್ಟೇಷು ತಥೋತ್ತಮೈಃ ।
ನೀಚೇಷು ರಚಿತೋ ಮಂತುಸ್ತಥೇತಿ ನಿಯಮೋ ನ ಹಿ ॥ ॥ ೨೪೮ ॥

ತಾತ್ಪರ್ಯ - ಇದು ಜನ್ಮದಿಂದಲೂ ಜ್ಞಾನದಿಂದಲೂ ಅಪಕೃಷ್ಟರಾದವರು, ಉತ್ಕೃಷ್ಟರುಗಳ ವಿಷಯದಲ್ಲಿ ಮಾಡಿದರೇನೋ ಅಥವಾ ಜನ್ಮಜ್ಞಾನಗಳಿಂದ ಉತ್ಕೃಷ್ಟರಾದವರು ಅಪಕೃಷ್ಟರ ವಿಷಯದಲ್ಲಿ ಮಾಡಿದರೂ ಉಂಟಾಗುವುದೋ ಅಂದರೆ ಹೇಳುತ್ತಾರೆ. ಅದೇನೆಂದರೆ ಭಾಗವತಾಪಚಾರದ ವಿಷಯದಲ್ಲಿ ಅಂಥಾ ಅಧಿಕಾರಿನಿಯಮವೇನೂ ಇಲ್ಲ.

ಸೂತ್ರಂ - ತಮುಹ್ಮಳಿಲ್‌ತಲೈವರಾಯು ಶಾದಿಯಂದಣಹ್ಮಳೀಲುಂ ಎನ್ಗೈಯಾಲೇ ॥ ೨೦೨ ॥

ಶ್ಲೋಕಃ - ❋ ತ್ವತ್ಪಾದ ಸಂಬಂಧ ನಿರೂಪಕಸ್ಯ
ಶ್ರೀವೈಷ್ಣವಸ್ಯೋದ್ಭವನಿಂದಕೋಯಃ ।
ಸ ಶ್ರೇಷ್ಠ ಜನ್ಮಾಪಿವಿಚಕ್ಷಣೋಽಪಿ
ಚಂಡಾಲತಾಂ ಯಾತಿ ತದೈವ ಸತ್ಯಂ ॥ ॥ ೨೪೯ ॥

ತಾತ್ಪರ್ಯ – ಇದಕ್ಕೆ ಪ್ರಮಾಣವುಂಟೋ ಎಂದರೆ ಪ್ರಮಾಣವನ್ನು ತೋರಿಸುತ್ತಾರೆ. ಅದೇನೆಂದರೆ ಸಾಂಗವಾಗಿ ವೇದಾಧ್ಯಯನ ಮಾಡಿ ಭಗವದ್ಭಕ್ತರಲ್ಲಿ ಶ್ರೇಷ್ಠರಾಗಿಯೂ ಉತ್ಕೃಷ್ಟಜನ್ಮದಲ್ಲಿ ಜನಿಸಿದ್ದರೂ ಶ್ರೀವೈಷ್ಣವರಾದ ಭಾಗವತರ ಜನ್ಮಾದಿಗಳನ್ನು ನಿಂದಿಸುವುದಾದರೆ ಕಾಲಾಂತರದಲ್ಲೂ, ದೇಶಾಂತರದಲ್ಲೂ ಅಲ್ಲದೇ ಆ ಕ್ಷಣವೇ ಅದೇ ಸ್ಥಳದಲ್ಲಿ ಅವರುಗಳು ಚಂಡಾಲರಾಗುವರು ಎಂದು ತತ್ವಯಾಥಾತ್ಮ್ಯದರ್ಶಿಗಳಾದ ತೊಂಡರಡಿಪ್ಪೊಡಿಯಾಳ್ವಾರ್ರು ಹೇಳಿರುವರು.

ಸೂತ್ರಂ - ಇವ್ವಿಡತ್ತಿಲೇ ವೈನತೇಯವೃತ್ತಾಂತತ್ತ್ರೆಯುಂ ಪಿಳ್ಳೈಪ್ಪಿಳ್ಳೈಯಾಳ್ವಾನುಕ್ಕು ಆಳ್ವಾನ್ಪಣಿತ್ತವಾತ್ತ್ರ್ಯಯ್ಯೆಯುಂ ಸ್ಮರಿಪ್ಪದು ॥ ೨೦೩ ॥

ಶ್ಲೋಕಃ – ✱ ಋಷಭಗಿರಿ ಮುಪೇತ್ಯ ತತ್ರತಾಕ್ಷ್ಯಃ
ಸುವಿದಿತ ಶಾಂಡಿಲಿಸತ್ಕೃತಸ್ತ್ವಪನ್ನನ್ ।
ಯದಿ ನಿವಸತಿ ದಿವ್ಯದೇಶ ಏಷಾ
ಭವತಿ ಶುಭಂ ಹಿ ತದೇತ್ಯಚಿಂತಯಚ್ಚ ॥ ೨೫೦ ॥

ತತ್ಕ್ಷಣಂ ಪತಿತ ಪಕ್ಷತಿಃ ಖಿಗಃ
ಚಿಂತಯನ್ದಯನಮಾಸ್ಥಿತೋಗಿತಾ ।
ಗಾಲವೇನ ಪರಿಪೃಷ್ಟ ಏಷತ
ದ್ಭಕ್ತ ಮಂತುರಪಿ ಚಿಂತಿತಸ್ತ್ವತಿ ॥ ೨೫೧ ॥

ವಿವಮಿತ್ಯಭಿಧಾಯಾಥಶಾಂಡಿಲೀಂ ಶರಣಂ ಗತಃ ।
ಕ್ಷಂತವ್ಯೋ ಮಂತುರಿತ್ಯೇವಂ ಸಾನ್ವಗೃಹ್ಣಾತ್ತಪಾದರಾತ್ ॥ ೨೫೨ ॥

ಪ್ರರೂಢ ಪಕ್ಷತಿಶ್ಶ್ರೀಮಾನ್ಗರುಡೋಽಥ ನಭೋಗತಿಃ ।
ಬಭೌ ತದನ್ಯಥಾ ಭಾವೋ ಭಕ್ತೇಽಸ್ಯಭಯಕಾರಣಂ ॥ ೨೫೩ ॥

ಅಭಿಜಾತ್ಯಾನುರೂಪೇಣ ಪಿಳ್ಳೈಪಿಳ್ಳೈಭಿಧೋ ದ್ವಿಜಃ ।
ಸದಾ ಭಾಗವತಾನ್ನಿಂದನ್ನಾಸೀತ್ಕೂರೇಶ್ವರಸ್ತದಾ ॥ ೨೫೪ ॥

ಅಬ್ರವೀದ್ಭವತಾ ಮಹ್ಯಂ ದಾತವ್ಯಂ ಕಿಂಚಿದಿತ್ಯಸೌ ।
ತದಾ ಪೃಚ್ಛನ್ಮಯಾ ತಾವತ್ಕಿಂ ದಾತವ್ಯಮಿತಿ ದ್ವಿಜಃ ॥ ೨೫೫ ॥

ನಾಹಂ ಭಾಗವತೇ ಮಂತುಂ ಕುರ್ಯಾಂ ಶ್ರೀಕರಣೈರಪಿ ।
ಇತಿ ಪ್ರತಿಜ್ಞಾಂದೇಹ್ಯದ್ಯ ಸ್ನಾತ್ವಾ ಸಲಿಲಧಾರಯಾ ॥ ೨೫೬ ॥

ತಥೇತ್ಯುದೀರ್ಯ ದತ್ತ್ವಾ ಚ ಕದಾಚಿಚ್ಚಿಂತಯನ್ದ್ವಿಜಃ ।
ಮಂತುಂ ಭಾಗವತೇ ಪಶ್ಚಾತ್ತಾಪಾತ್ಸಪ್ತಾಪ ಮಂದಿರೇ ॥ ೨೫೭ ॥

ತದಾಸಾದ್ಯ ಸ ಕೂರೇಶಃ ಕಿಮರ್ಥಂ ಸ್ವಪಿಷೀತಿತಂ ।
ಅಪೃಚ್ಛತ್ಸೋಬ್ರವೀತ್ಸ್ವೀಯಂ ಮಾನಸಂ ಕರ್ಮದುಃಖಿತಃ ॥ ೨೫೮ ॥

ಶ್ಲೋಕಃ – ತದಾಕರ್ಣ್ಯ ಗುರುಶ್ರೇಷ್ಠಃ ಪಶ್ಚಾತ್ತಾಪೇನ ನಾಶಿತಂ ।
ತತ್ಕರ್ಮೇತ್ಯಭಿಧಾಯಾಥಪುನರ್ಯಾಕುರ್ವಿತಿದ್ವಿಜಂ ॥ ॥ ೨೫೯ ॥

ತಾತ್ಪರ್ಯ – ಈ ವಿಷಯದಲ್ಲಿ ಎರಡು ಐತಿಹ್ಯವನ್ನು ಹೇಳುತ್ತಾರೆ. ಅದೇನೆಂದರೆ ವಿಶ್ವಾಮಿತ್ರನ ಹತ್ತಿರ ಗಾಲವನು ಸಮಸ್ತ ವಿದ್ಯೆಗಳನ್ನು ಕಲಿತ ಮೇಲೆ ಗುರುದಕ್ಷಿಣೆಯನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತಲು, ವಿಶ್ವಾಮಿತ್ರನು "ಗುರುದಕ್ಷಿಣೆ ಬೇಕಾಗಿಲ್ಲ ನಿನ್ನ ಶುಶ್ರೂಷೆಯಿಂದಲೇ ನಾನು ಪ್ರೀತನಾಗಿದೇನೆ" ಎಂದು ಹೇಳಿದನು. ಆದರೂ ಪದೇಪದೇ ಗಾಲವನು ಗುರುದಕ್ಷಿಣೆಯನ್ನು ಸ್ವೀಕರಿಸಲೇಬೇಕೆಂದು ನಿರ್ಬಂಧಿಸಲು ಕೋಪಗೊಂಡವನಾಗಿ ವಿಶ್ವಾಮಿತ್ರನು "ಮೈಯೆಲ್ಲಾ ಚಂದ್ರನಂತೆ ಬೆಳ್ಳಗೂ, ಒಂದೂ ಕಿವಿ ಮಾತ್ರ ಕಪ್ಪಗೂ ಇರುವ ಎಂಟು ನೂರು ಕುದುರೆಗಳನ್ನು ತಂದುಕೊಡು" ಎಂದು ಆಜ್ಞೆ ಮಾಡಿದನು. ಆಗ ಗಾಲವನು ಚಿಂತಾಕ್ರಾಂತನಾಗಿ ಭಗವಂತನನ್ನು ಕುರಿತು ತಪಸ್ಸು ಮಾಡಲು ಗರುಡನು ಪ್ರತ್ಯಕ್ಷನಾಗಿ "ಎಲೈ ಗಾಲವನೆ, ನಾನು ನಿನ್ನನ್ನು ಹೊತ್ತು ಪ್ರಪಂಚವೆಲ್ಲವನ್ನೂ ಸುತ್ತುವೆನು, ನೀನು ಆ ಕುದುರೆಗಳನ್ನು ಹುಡುಕುವುದಕ್ಕೆ ಅನುಕೂಲವಾಗುವುದು" ಎಂದು ಹೇಳಿ ಗಾಲವನನ್ನು ತನ್ನ ಬೆನ್ನಿನ ಮೇಲೆ ಕೂರಿಸಿಕೊಂಡು ತಿರುಗಲು ಪ್ರಾರಂಭಿಸಿದನು. ಹಾಗೆಯೇ ಹೋಗುತ್ತಿರುವಾಗ ಬಳಲಿಕೆ ಉಂಟಾದ್ದರಿಂದ ಸಮುದ್ರ ಮಧ್ಯದಲ್ಲಿರುವ ಋಷಭವೆಂಬ ಪರ್ವತದ ಶಿಖರದಲ್ಲಿ ಶ್ರಮ ಪರಿಹಾರಕ್ಕಾಗಿ ಇಳಿದನು. ಆಗ ಅಲ್ಲಿ ವಾಸಮಾಡುತ್ತಲಿರುವ ಜ್ಞಾನಿಯಾದ ಶಾಂಡಿಲಿಯು ಇವರಿಗೆ ಅತಿಥಿಸತ್ಕಾರವನ್ನು ಮಾಡಿದಳು. ಅದನ್ನು ಸ್ವೀಕರಿಸಿದ ಮೇಲೆ ಆ ರಾತ್ರಿ ಅಲ್ಲೇ ಮಲಗಿದರು. ಮಲಗಿರುವಾಗ ಗರುಡನು ಇಂಥಾ ಭಾಗವತೋತ್ತಮೆಯು ಎಲ್ಲಾದರೂ ಒಂದು ದಿವ್ಯದೇಶದಲ್ಲಿ ವಾಸವಾಗಿದ್ದರೆ ಎಷ್ಟು ಚೆನ್ನಾಗಿತ್ತು, ಇಲ್ಲಿ ವಾಸಮಾಡುತ್ತಿರುವಳಲ್ಲಾ, ಹೇಗಾದರೂ ಮಾಡಿ ಇವಳನ್ನು ದಿವ್ಯದೇಶಕ್ಕೆ ಕರೆದೊಯ್ಯಬೇಕೆಂದು ಯೋಚಿಸಿದನು. ಬೆಳಗಾಗುತ್ತಲು ತನ್ನ ರೆಕ್ಕೆ ಪುಕ್ಕಗಳೆಲ್ಲಾ ಉದುರಿ ಹೋಗಿರುವುದನ್ನು ನೋಡಿ ಗಾಬರಿಪಟ್ಟನು. ಆಗ ಗಾಲವನು "ಎಲೈ ಗರುಡನೇ ನೀನೇನಾದರೂ ಮನಸ್ಸಿನಲ್ಲಿ ಯೋಚಿಸಿ ಭಾಗವತಾಪಚಾರವೆಸಗಿದೆಯಾ" ಎಂದು ಕೇಳುತ್ತಲು ಗರುಡನು 'ಹೌದು' ಎಂದು ತಾನು ಯೋಚಿಸಿದ್ದನ್ನು ಹೇಳಿದನು. ಅದನ್ನು ಕೇಳಿ ಗಾಲವನು "ಭಾಗವತರು ಇರುವ ದೇಶವೇ ದಿವ್ಯ ದೇಶವಲ್ಲವೇ. ನೀನು ಹಾಗೆ ಯೋಚಿಸಬಾರದಾಗಿತ್ತು. ಈಗಲೂ ಆ ಶಾಂಡಿಲಿಯನ್ನು ಶರಣು ಹೊಂದು" ಎಂದು ಹೇಳಿದನು. ಗರುಡನು ಅದೇ ರೀತಿ ಶರಣು ಹೊಂದಲು ಆ ಶಾಂಡಿಲಿಯ ಅನುಗ್ರಹದಿಂದ ಗರುಡನಿಗೆ ರೆಕ್ಕೆಯುಂಟಾಗಿ ಹಾರಿಹೋದನು. ಅದ್ದರಿಂದ ಭಾಗವತರ ವಿಷಯದಲ್ಲಿ ಮನಸ್ಸಿನಿಂದಲೂ ಅನ್ಯಥಾ ಚಿಂತಿಸಬಾರದು. ಕೂರತ್ತಾಳ್ವಾರ್ರು ಪಿಳ್ಳೈಪಿಳ್ಳೈಯಾಳ್ವಾನ್ ಎಂಬುವರನ್ನು ಶಿಷ್ಯರನ್ನಾಗಿ ಅಂಗೀಕರಿಸಿದರಷ್ಟೆ. ಆ ಪಿಳ್ಳೈಪಿಳ್ಳೈಯಾಳ್ವಾರ್ರು ಸತ್ಕುಲಪ್ರಸೂತರಾದ್ದರಿಂದ ತನಗೆ ಸಮಾನರಿಲ್ಲವೆಂದು ಅಹಂಕಾರದಿಂದ ಭಾಗವತಾಪಚಾರವನ್ನು ಮಾಡುತ್ತಿದ್ದರು. ಇದನ್ನು ನೋಡಿ ಕೂರತ್ತಾಳ್ವಾರ್ರು ಇವರ ಜ್ಞಾನಾದಿಗಳನ್ನು ನಾಶಮಾಡಿ ಕೊನೆಗೆ ಆತ್ಮವನ್ನೂ ನಾಶಮಾಡುವಂಥಾ ಈ ಭಾಗವತಾಪಚಾರವನ್ನು ಹೇಗಾದರೂ ಮಾಡಿ ಬಿಡಿಸಬೇಕೆಂದು ಯೋಚಿಸಿ, ಒಂದು ಪುಣ್ಯಕಾಲದಲ್ಲಿ ನದಿಯಲ್ಲಿ ಸ್ನಾನಮಾಡುತ್ತಿರುವಾಗ "ಎಲೈ ಪಿಳ್ಳೈಪಿಳ್ಳೈಯಾಳ್ವಾನೇ, ಈ ಪುಣ್ಯದಿನದಲ್ಲಿ ಎಲ್ಲರೂ ದಾನಮಾಡುವರಲ್ಲಾ, ನೀನೂ ನನಗೊಂದು ದಾನ ಕೊಡಬೇಕು" ಎಂದು ಕೇಳಿದರು. ಅದಕ್ಕೆ ಪಿಳ್ಳೈಪಿಳ್ಳೈಯಾಳ್ವಾರ್ರು "ನೀವು ಯಾವುದನ್ನು ಕೇಳುವಿರಿ" ಎಂದು ಕೇಳುತ್ತಲು, "ತ್ರಿಕರಣಗಳಿಂದಲೂ ಭಾಗವತಾಪಚಾರ ಮಾಡುವುದಿಲ್ಲವೆಂದು ಧಾರಾಪೂರ್ವಕವಾಗಿ ಪ್ರತಿಜ್ಞೆಮಾಡಿ ಕೊಡಿ" ಎಂದು ಕೇಳಿದರು. ಅದೇ ರೀತಿ ಪಿಳ್ಳೈಪಿಳ್ಳೈಯಾಳ್ವಾರ್ರು ಧಾರಾಪೂರ್ವಕವಾಗಿ ಪ್ರತಿಜ್ಞೆ ಮಾಡಿಕೊಟ್ಟರು. ಹಾಗೆ ಕೊಟ್ಟದ್ದಾಗ್ಯೂ ಒಂದುದಿನ ಮನಸ್ಸಿನಲ್ಲಿ ಭಾಗವತಾಪಚಾರವನ್ನು ಚಿಂತಿಸಿ "ಅಯ್ಯೋ ನಾನು ಕೆಟ್ಟೆನು, ನನ್ನ ಗುರುಂಗಳಿಗೆ ದಾನಕೊಟ್ಟಮೇಲೆಯೂ, ಹೀಗೆ ಮಾಡಿದೆನಲ್ಲಾ" ಎಂದು ಪಶ್ಚಾತ್ತಾಪದಿಂದ ಮನೆಯಲ್ಲೇ ಮಲಗಿಬಿಟ್ಟರು. ಕೂರತ್ತಾಳ್ವಾರ್ರು ಶಿಷ್ಯನನ್ನು ಕಾಣದೆ ಅವರ

ಮನೆಗೆ ಹೋಗಿ ಇದೇನು ಹೀಗೆ ಮಲಗಿರುವಿರಿ" ಎಂದು ಕೇಳುತ್ತಲು ಪಿಳ್ಳೈಪಿಳ್ಳೈಯಾಳ್ವಾರ್ರು ತಾನು ನೆನೆಸಿದ್ದನ್ನು ತಿಳಿಸಿದರು. ಅದಕ್ಕೆ ಕೂರತ್ತಾಳ್ವಾರ್ರು "ಪಶ್ಚಾತ್ತಾಪದಿಂದ ಆ ದೋಷವು ಹೋಯಿತು. ಇನ್ನುಮೇಲೆ ಹಾಗೆ ಮಾಡಬೇಡ" ಎಂದು ಹೇಳಿದರಂತೆ. ಆದ್ದರಿಂದ ಮನಸ್ಸಿನಿಂದಲೂ ಭಾಗವತರ ದೋಷವನ್ನು ಎಣಿಸಬಾರದು.

ಸೂತ್ರಂ - ಜ್ಞಾನಾನುಷ್ಠಾನಂಗಳೈಯೊಳಿಂದಾಲುಂಪೇತ್ತುಕ್ಕು ಅವರ್ಹಳ್‌ಪಕ್ಕಲ್ ಸಂಬಂಧಮೇ ಅಮೈಹಿರಾಪೋಲೇ ಅವೈಯುಂಡಾನಾಲುಂ ಇಳುವುಕ್ಕು ಅವರ್ಹಳ್‌ಪಕ್ಕಲ್ ಅಪಚಾರಮೇಪೋರುಂ ॥ ೨೦೪ ॥

ಶ್ಲೋಕಃ – ❋ ಜ್ಞಾನಾನುಷ್ಠಾನಯುಗ್ಮೇನ ಯದಿ ಲಭ್ಯೇತ ಮಾಧವಃ ।
ತದ್ಭಕ್ತೇಷ್ವಪಚಾರಸ್ತು ನಾಶಹೇತುರ್ಭವೇತ್ಕ್ಷಮು ॥ ೨೬೦ ॥

ಇತಿ ಚೇದುಚ್ಯತೇ ತಾಭ್ಯಾಂ ಹೀನೋಪ್ಯತ್ರ ತು ಚೇತನಃ ।
ಭಗವದ್ಭಕ್ತ ಸಂಬಂಧೀ ಸಮುಜ್ಜೀವನ ಭಾಗ್ಭವೇತ್ ॥ ೨೬೧ ॥

ತದ್ಭಕೇಷ್ವಪಚಾರಸ್ತು ನಾಶಕಾರಣಮಸ್ಯಹಿ ।
ತಸ್ಮಾದ್ಭಾಗವತೇ ಮಂತುರ್ನಕಾರ್ಯೋಧೀಮತಾ ಸದಾ ॥ ೨೬೨ ॥

ತಾತ್ಪರ್ಯ – ಭಗವಲ್ಲಾಭಕ್ಕೆ ಕಾರಣವಾದ ಜ್ಞಾನಾನುಷ್ಠಾನಗಳೆರಡೂ ಪೂರ್ಣವಾಗಿರುವ ಒಬ್ಬನಿಗೆ ಭಾಗವತಾಪಚಾರವು ಉಂಟಾದ್ದೇ ಆದರೆ ಭಗವಂತನು ಆ ಅಪಚಾರಕ್ಕೆ ಸ್ವಲ್ಪ ಶಿಕ್ಷೆ ಮಾಡಿ ತನ್ನಲ್ಲಿ ಸೇರಿಸಿ ಕೊಳ್ಳುವುದಿಲ್ಲವೋ ಆ ಜ್ಞಾನಾನುಷ್ಠಾನಗಳೆರಡೂ ಅಸತ್ಕಲ್ಪವಾಗಿ ಭಾಗವತಾಪಚಾರವೇ ಪ್ರಬಲವಾಗಿ ತಾನು ನಶಿಸಿ ಹೋಗುವನೆಂದು ಹೇಳಬಹುದೇ ಅಂದರೆ ಹೇಳುತ್ತಾರೆ. ಅದೇನೆಂದರೆ ಭಗವಲ್ಲಾಭಕ್ಕೆ ಕಾರಣವಾದ ತತ್ವಜ್ಞಾನವೂ ತದನುಗುಣವಾದ ಅನುಷ್ಠಾನವೂ ಇವೆರಡೂ ಇಲ್ಲದೇ ಇದ್ದರೂ ಪರವಾಗಿಲ್ಲ ಭಗವಲ್ಲಾಭಕ್ಕೆ ಮುಖ್ಯ ಕಾರಣ ಯಾವುದೆಂದರೆ ಭಾಗವತಾಪಚಾರ ಮಾಡದಿರುವುದೇ. ಅದನ್ನೇ ಹೇಳಿದೆ. "ಪಶುರ್ಮನುಷ್ಯಃ ಪಕ್ಷೀ ವಾ ಯೇ ಚ ವೈಷ್ಣವಸಂಶ್ರಯಾಃ ತೇನೈವ ತೇ ಪ್ರಯಾಸ್ಯಂತಿ ತದ್ವಿಷ್ಣೋಃ ಪರಮಂ ಪದಂ" ಎಂಬುದಾಗಿಯೂ "ಯಂ ಯಂ ಸ್ಪೃಶತಿ ಪಾಣಿಭ್ಯಾಂ ಯಂ ಯಂ ಪಶ್ಯತಿ ಚಕ್ಷುಷಾ । ಸ್ಥಾವರಾಣ್ಯಪಿ ಮುಚ್ಯಂತೇ ಕಿಂ ಪುನರ್ಬಾಂಧವಾ ಜನಾಃ" ಈ ರೀತಿ ಹೇಳಿರುವುದರಿಂದ ಭಾಗವತ ಸಂಬಂಧವೇ ನಿರಪೇಕ್ಷಸಾಧನವಾಗಿರುವುದರಿಂದ ಆ ಜ್ಞಾನಾನುಷ್ಠಾನಗಳಲ್ಲಿ ಸ್ವಲ್ಪ ನ್ಯೂನತೆ ಬಂದರೂ ಭಗವಲ್ಲಾಭಕ್ಕೆ ಯಾವ ಅಡ್ಡಿಯೂ ಇಲ್ಲ.

ಸೂತ್ರಂ - ಇತಿಲ್ ಜನ್ಮವೃತ್ತಾದಿನಿಯಮಮಿಲ್ಲೈ ॥ ೨೦೫ ॥

ಶ್ಲೋಕಃ – ❋ ಭಗವದ್ಭಕ್ತ ಸಂಬಂಧೇ ಜನ್ಮ ವೃತ್ತ ವಿಚಾರಣಾ ।
ನ ಕಾರ್ಯಾ ಸರ್ವಥೋತ್ಕೃಷ್ಟ ನಿಕೃಷ್ಟ ನಿಯಮೋ ನ ಹಿ ॥ ೨೬೩ ॥

ತಾತ್ಪರ್ಯ – ಇದರಲ್ಲಿ ಜನ್ಮ ವೃತ್ತಾದಿ ನಿಯಮವುಂಟೋ ಅಂದರೆ ಹೇಳುತ್ತಾರೆ. ಉತ್ಕೃಷ್ಟ ಜನ್ಮವನ್ನು ಹೊಂದಿರುವ ಬ್ರಾಹ್ಮಣರ ಸಂಬಂಧವು ಉಜ್ಜೀವನಕ್ಕೆ ಕಾರಣವು. ಅಪಕೃಷ್ಟ ಜನ್ಮವನ್ನು ಹೊಂದಿರುವ ಭಗವದ್ಭಕ್ತರ ಸಂಬಂಧವು ನಾಶಕ್ಕೆ ಕಾರಣವೆಂಬ ನಿಯಮವಿಲ್ಲ. ಭಾಗವತರೆಲ್ಲರೂ ಒಂದೇ ವಿಧ.

ಸೂತ್ರಂ - ಇವ್ವರ್ಥಂ ಕೈಶಿಕ ವೃತ್ತಾಂತತ್ತಿಲುಂ, ಉಪರಿಚರ ವಸುವೃತಾಂತತ್ತಿಲುಂ ಕಾಣಲಾಂ ॥ ೨೦೬ ॥

ಶ್ಲೋಕಃ - ✱ ಯಥಾಕ್ರಮಮಕೃತ್ವೈವ ಕೃತುಂ ರಾಕ್ಷಸತಾಂ ಗತಃ ।
ಸೋಮಶರ್ಮಾಚರನ್ವಿಪ್ರೋ ವಿಷ್ಣುಗಾನೈಕತತ್ಪರಂ ॥ ೨೬೪ ॥

ವೀಣಾಪಾಣಿಂ ಸಮಾಯಾಂತಂ ಚಂಡಾಲಂ ಸನ್ನಿರುದ್ಧ್ಯ ಸಃ ।
ಅಶ್ನಾಮಿ ತ್ವಾಂ ಕ್ಷುಧಾರ್ತೋಽಹಮಿತ್ಯುವಾಚ ತದಾ ತು ಸಃ ॥ ೨೬೫ ॥

ಸ್ತುತ್ವಾಗಾನೇನ ಗೋವಿಂದಮಾಗಮಿಷ್ಯಾಮ್ಯಹಂ ಪ್ರಿತಿ ।
ಅಸಕೃತ್ಪ್ರಾರ್ಥಿತಂ ರಕ್ಷಸ್ತಂ ಮುಮೋಚ ತಥಾಸ್ತ್ವಿತಿ ॥ ೨೬೬ ॥

ಸ್ತುತ್ವಾ ಚ ಪುನರಾಗತ್ಯ ಮಾಮಶಾನೇತಿ ಚಾಬ್ರವೀತ್ ।
ತಚ್ಛ್ರುತ್ವಾ ರಾಕ್ಷಸೋ ನತ್ವಾ ದೇಹಿ ಗಾನಫಲಂ ತವ ॥ ೨೬೭ ॥

ಇತಿ ಬದ್ಧಾಂಜಲಿರ್ಭೂತ್ವಾ ಪ್ರಾರ್ಥಯಾಮಾಸ ತಂ ಪ್ಲವಂ ।
ತದೈಕರಾತ್ರಿಗಾನೈಕಫಲಂ ದತ್ವಾ ಸ ತು ಪ್ಲವಃ ॥ ೨೬೮ ॥

ತಮೇನಂ ಸೋಮಶರ್ಮಾಣಂ ರಾಕ್ಷಸತ್ವಾದ್ವ್ಯಮೋಚಯತ್ ।
ಭವದ್ಭಕ್ತ ಸಂಬಂಧೀ ಸಮುಜ್ಜೀವನ ಭಾಗ್ಭವೇತ್ ॥ ೨೬೯ ॥

ಉಪರಿಚರವಸುರ್ಯದ್ವಾ ಬ್ರಹ್ಮಣಾನಾಂ ಸುರಾಣಾಂ
ಕಲಹಶಮನಕ್ಲಪ್ತಃ ಪಕ್ಷಪಾತಾತ್ಸುರೇಷು ।
ಪಶುವಿಶಸನಮೇವ ಶ್ಲಾಘ್ಯಮನ್ಯನ್ನಧಾನ್ಯಂ
ಸವ ಇತಿ ನಿಗದನ್ಸನ್ವಿಪ್ರಶಪ್ತಃ ಪಪಾತ ॥ ೨೭೦ ॥

ತಾತ್ಪರ್ಯ - ಕೈಶಿಕ ವೃತ್ತಾಂತವನ್ನೂ ಉಪರಿಚರ ವಸುವೃತ್ತಾಂತವನ್ನೂ ಹೇಳುತ್ತಾರೆ. ಅದೇನೆಂದರೆ ಚರಕ ವಂಶದಲ್ಲಿ ಹುಟ್ಟಿದ ಸೋಮಶರ್ಮಾ ಎಂಬ ಬ್ರಾಹ್ಮಣನು ಯಾಗವನ್ನು ಮಾಡಲು ಉಪಕ್ರಮಿಸಿ ಕ್ರಮದಂತೆ ಅದನ್ನು ಮುಗಿಸದೆ ಬ್ರಹ್ಮರಾಕ್ಷಸನಾಗಿ ಹುಟ್ಟಿದನು. ಇವನು ಅರಣ್ಯದಲ್ಲಿ ಅಲೆದಾಡುತ್ತಿರುವಾಗ 'ಮದ್ಭಕ್ತಂ ಶ್ವಪಚಂ ವಾಪಿ' ಎಂಬಂತೆ ನೀಚ ಜನ್ಮಸಿದ್ಧವಾದ ನೈಚ್ಯದೊಡನೆ ಕೂಡಿರುವ ಭಗವದ್ಭಕ್ತಿಯೇ ನಿರೂಪಕವಾಗುವಂತೆ ಇರುವ ಭಾಗವತರು ಉತ್ಥಾನೈಕಾದಶಿಯಂದು ರಾತ್ರಿ ಸಿದ್ಧಾಶ್ರಮವಾದ ತಿರುಕ್ಕುರುಂಗುಡಿಯಲ್ಲಿ ಭಗವಂತನನ್ನು ಹಾಡಿ ವೀಣಾಪಾಣಿಯಾಗಿ ಬರುತ್ತಿರುವಾಗ ಆ ಭಾಗವತರನ್ನು ತಡೆದು ಭಕ್ಷಿಸುವುದಾಗಿ ಆ ರಾಕ್ಷಸನು ಹೇಳುತ್ತಲು "ನಾನು ಪುನಃ ಭಗವಂತನನ್ನು ಸ್ತೋತ್ರಮಾಡಿ ನಿನ್ನಲ್ಲಿಗೆ ಬರುವೆನು" ಎಂದು ಅನೇಕ ಶಪಥಗಳನ್ನು ಮಾಡಿ ಹೇಳುತ್ತಲು ಅದರಂತೆಯೇ ರಾಕ್ಷಸನು ಆ ಚಂಡಾಲನನ್ನು ಬಿಟ್ಟುಕೊಟ್ಟನು. ಆ ಭಾಗವತೋತ್ತಮನಾದ ಚಂಡಾಲನು ಪುನಃ ದೇವಸ್ಥಾನಕ್ಕೆ ಹೋಗಿ ಭಗವಂತನನ್ನು ಸ್ತೋತ್ರಮಾಡಿ ಹಿಂತಿರುಗಿ ಬಂದು "ಎಲೈ ರಾಕ್ಷಸನೇ ನೀನು ನನ್ನನ್ನು ತಿನ್ನಬಹುದು" ಎಂದೂ ಹೇಳುತ್ತಲು ಆ ರಾಕ್ಷಸನು ಇವನ ಸತ್ಯಸಂಧತೆಯನ್ನು ನೋಡಿ "ನಿನ್ನನ್ನು ನಾನು ತಿನ್ನುವುದಿಲ್ಲ. ನೀನು ಹಾಡಿದ ಹಾಡಿನ ಫಲವನ್ನು ನನಗೆ ಕೊಡು" ಎಂದು ಕೇಳಿದನು. ಅದಕ್ಕೆ ಚಂಡಾಲನು ಒಪ್ಪದಿರಲು ಏಕ ಯಾಮದ ಫಲವನ್ನಾದರೂ

ಕೊಡು ಎಂದು ಯಾಚಿಸಿದನು. ಆಗ ಆ ಚಂಡಾಲನು ಕೈಶಿಕವೆಂಬ ಗಾನದ ಫಲವನ್ನು ಆ ರಾಕ್ಷಸನಿಗೆ ಕೊಟ್ಟು ಅವನನ್ನು ರಾಕ್ಷಸ ಜನ್ಮದಿಂದ ಬಿಡಿಸಿದನು. ಆದ್ದರಿಂದ ಜನ್ಮಗಳಲ್ಲಿ ಉತ್ಕೃಷ್ಟಾಪಕೃಷ್ಟಗಳಿಲ್ಲ. ಉಪರಿಚರವಸು ವೃತ್ತಾಂತವೇನೆಂದರೆ ಅದನ್ನು ಹೇಳುತ್ತಾರೆ. ಋಷಿಗಳಿಗೂ, ದೇವತೆಗಳಿಗೂ ಧರ್ಮ ಸಂದೇಹವುಂಟಾಯಿತು. ಅದೇನೆಂದರೆ ಯಾಗದಲ್ಲಿ ಜೀವಂತ ಪಶುವನ್ನು ವಿಶಸನ ಮಾಡಬೇಕೇ ಅಥವಾ ಅಕ್ಕಿಹಿಟ್ಟಿನಿಂದ ಮಾಡಿದ ಪಶುವನ್ನು ವಿಶಸನ ಮಾಡಬೇಕೇ ಎಂದು. ಆವಾಗ ಅವರಿಬ್ಬರೂ ಸೇರಿ ಈ ಸಂದೇಹ ಪರಿಹಾರವನ್ನು ಉಪರಿಚರವಸುವಿನ ಹತ್ತಿರ ಹೋಗಿ ಮಾಡಿಕೊಳ್ಳೋಣವೆಂದು ನಿಶ್ಚೈಸಿ ಅವನ ಹತ್ತಿರ ಹೋಗಿ ಹೇಳಿದರು. ಆಗ ಉಪರಿಚರವಸುವು ದೇವತೆಗಳಲ್ಲಿ ಪಕ್ಷಪಾತದಿಂದ ಜೀವಂತ ಪಶುವನ್ನೇ ವಿಶಸನ ಮಾಡಬೇಕೆಂದು ಹೇಳುತ್ತಲು ಋಷಿಗಳಿಗೆ ಕೋಪ ಬಂದು "ನೀನು ಅಧಃಪತಿತನಾಗು" ಎಂದು ಶಪಿಸಿದರು. ಅದೇ ರೀತಿ ಆ ಉಪರಿಚರವಸುವೂ ಪಾತಾಳದಲ್ಲಿ ಬಿದ್ದನು. ಆದ್ದರಿಂದ ಭಾಗವತಾಪಚಾರವು ಕೂಡದು.

ಸೂತ್ರಂ - ಬ್ರಾಹ್ಮಣ್ಯಂ ವಿಲ್ಲೈ ಶೆಲ್ಲುಂಹಿರತು ವೇದಾಧ್ಯಯನಾದಿಮುಖತ್ತಾಲೇ ಭಗವಲ್ಲಾಭಹೇತುವೆನ್ನು; ಅತು ತಾನೇ ಇಳವುಕ್ಕುರುಪ್ಪಾಹಿಲ್ ತ್ಯಾಜ್ಯಮಾಮಿರೇ ॥ ೨೦೬ ॥

ಶ್ಲೋಕಃ - ❋ ಬ್ರಾಹ್ಮಣ್ಯಂ ನಿಗಮ ತದಂಗ ಪಾಠತಸ್ಸ್ಯಾ
ದ್ಬೀಜಂ ಸತ್ಪಥ ಗಮನಸ್ಯ ಯದ್ಯಪೀಡ್ಯಂ ।
ತತ್ತಾದೃಗ್ಯದಿ ಭವತೀಹ ನಾಶಬೀಜಂ
ಭಕ್ತ್ಯಾಗಸ್ಕರಣವಶಾತ್ತದೇವ ಹೇಯಂ ॥ ೨೭೧ ॥

ತಾತ್ಪರ್ಯ - ಶಾಸ್ತ್ರಗಳೆಲ್ಲವೂ ಬ್ರಾಹ್ಮಣ್ಯವನ್ನು ಉತ್ಕೃಷ್ಟ ಜನ್ಮವೆಂದೂ ಉಜ್ಜೀವನಕ್ಕೆ ಹೇತುವೆಂದೂ ಹೇಳಿರುವಾಗ ಆ ಬ್ರಾಹ್ಮಣ್ಯದಿಂದ ಏನೂ ಪ್ರಯೋಜನವಿಲ್ಲವೆಂದು ಹೇಳಬಹುದೇ ಅಂದರೆ ಹೇಳುತ್ತಾರೆ. "ಸರ್ವೇ ವೇದಾ ಯತ್ಪದಮಾಮನಂತಿ" "ವೇದೈಶ್ಚ ಸರ್ವೈರಹಮೇವ ವೇದ್ಯಃ" ಎಂದು ಹೇಳಿರುವುದರಿಂದ ಆರಾಧನ ಸ್ವರೂಪವನ್ನೂ, ಆರಾಧ್ಯ ಸ್ವರೂಪವನ್ನೂ ಪೂರ್ವೋತ್ತರ ಭಾಗಗಳಲ್ಲಿ ಪ್ರತಿಪಾದಿಸುವುದಾದ್ದರಿಂದ ಭಗವದೇಕ ಪರವಾಗಿರುವ ವೇದವನ್ನು "ಸ್ವಾಧ್ಯಾಯೋಽಧ್ಯೇತವ್ಯಃ" ಎಂಬ ವಿಧಿಗೆ ಅಧೀನನಾಗಿ ಅಧ್ಯಯನವನ್ನು ಮಾಡಿ ಮೀಮಾಂಸಾದಿಗಳಿಂದ ಆ ವೇದಗಳ ಅರ್ಥವನ್ನು ನಿರ್ಣಯಿಸಿ ಭಗವದುಪಾಸನೆ ಮಾಡಿ ಭಗವಂತನನ್ನು ಹೊಂದಲು ಸಾಧ್ಯವಾಗುವುದು ಬ್ರಾಹ್ಮಣ್ಯದಿಂದಲೇ. ಅದೇ ಬ್ರಾಹ್ಮಣ್ಯವು. ಅಹಂಕಾರದಿಂದ ಶ್ರೋತ್ರಿಯನಾಗಿದಾ ಗ್ಯೂ ಭಗವದ್ಭಕ್ತರನ್ನು ನಿಂದಿಸಿದ ಪಕ್ಷದಲ್ಲಿ ತನ್ನ ನಾಶಕ್ಕೆ ಕಾರಣವಾದ್ದರಿಂದ ತ್ಯಾಜ್ಯವು.

ಸೂತ್ರಂ - ಜನ್ಮವೃತ್ತಂಗಳಿನುಡೈಯ ಉತ್ಕರ್ಷಮುಮಪಕರ್ಷಮುಂ ಪೇತ್ತುಕ್ಕುವಿಳವುಕ್ಕುಮಪ್ರಯೋಜಕಂ ॥ ೨೦೮ ॥

ಶ್ಲೋಕಃ - ❋ ಜನ್ಮ ವೃತ್ತ ಸಮುತ್ಕರ್ಷ ನಿಕರ್ಷೌ ಭಕ್ತಸಂತತೇಃ ।
ಭವೇತಾಂ ನೈವ ಹೇತೂ ಹಿ ಸಮುಜ್ಜೀವನ ನಾಶಯೋಃ ॥ ೨೭೨ ॥

ಕೇಷಾಂ ಚಿದ್ಭಗವಲ್ಲಾಭೋ ನೈವೇಹೋತ್ಕೃಷ್ಟಜನ್ಮನಾಂ ।
ಭಗವತ್ಪ್ರಿಯರಾಸೀಚ್ಚ ಹೀನ ಜನ್ಮವತಾಂ ಯತಃ ॥ ೨೭೩ ॥

ತಾತ್ಪರ್ಯ – ಹೀಗೆ ಉತ್ಕೃಷ್ಟ ಜನ್ಮಗಳು ನಾಶಕ್ಕೆ ಹೇತುವಾದ ಪಕ್ಷದಲ್ಲಿ ಅಪಕೃಷ್ಟ ಜನ್ಮಗಳು ಉಜ್ಜೀವನಕ್ಕೆ ಹೇತುವಾಗುವುವೋ ಎಂದರೆ ಹೇಳುತ್ತಾರೆ. ಜನ್ಮ ವೃತ್ತಗಳ ಉತ್ಕರ್ಷಾಪಕರ್ಷಗಳು ಉಜ್ಜೀವನಕ್ಕೂ ನಾಶಕ್ಕೂ ಪ್ರಯೋಜಕವಾಗುವುದಿಲ್ಲ. ಯಾತಕ್ಕೆಂದರೆ ಉತ್ಕೃಷ್ಟಜನ್ಮದವರಿಗೂ ಕೆಲವರಿಗೆ ಭಗವಲ್ಲಾಭವಿಲ್ಲ. ಅಪಕೃಷ್ಟಜನ್ಮದಲ್ಲಿ ಕೆಲವರಿಗೆ ಭಗವಲ್ಲಾಭವಾಗಿದೆ. ಆದ್ದರಿಂದ ಜನ್ಮವೃತ್ತಗಳ ಉತ್ಕರ್ಷಾಪಕರ್ಷಗಳು ಉಜ್ಜೀವನ ನಾಶಗಳಿಗೆ ಪ್ರಯೋಜಕವಾಗುವುದಿಲ್ಲ.

ಸೂತ್ರಂ - ಪ್ರಯೋಜಕಂ ಭಗವತ್ಸಂಬಂಧಮುಂ ತದಸಂಬಂಧಮುಂ ॥ ೨೦೯ ॥

ಶ್ಲೋಕಃ – ❋ ಪ್ರಯೋಜಕೋ ಭವೇದ್ವಿಷ್ಣೋರನನ್ಯಾರ್ಹಸ್ಯ ದಾಸ್ಯತಃ ।
ಉಜ್ಜೀವನೇ ತು ಸಂಬಂಧಸ್ತದಭಾವೋ ವಿನಾಶನೇ ॥ ॥ ೨೭೪ ॥

ತಾತ್ಪರ್ಯ – ಹಾಗಾದ ಪಕ್ಷದಲ್ಲಿ ಉಜ್ಜೀವನಕ್ಕೂ, ನಾಶಕ್ಕೂ ಪ್ರಯೋಜಕವು ಯಾವುದೆಂದರೆ ಹೇಳುತ್ತಾರೆ. ಉಜ್ಜೀವನಕ್ಕೆ ಪ್ರಯೋಜಕವು ಯಾವುದೆಂದರೆ ಭಗವದನನ್ಯಾರ್ಹ ಶೇಷ ಭೂತರೆಂದಿರುವ ಭಗವತ್ಸಂಬಂಧವೇ. ನಾಶಕ್ಕೆ ಪ್ರಯೋಜಕವು ಭಗವದನನ್ಯಾರ್ಹಶೇಷಭೂತರೆಂಬ ಜ್ಞಾನವಿಲ್ಲದ ಕಾರಣ ತದಸಂಬಂಧವೇ. ಆದ್ದರಿಂದ ಭಗವತ್ಸಂಬಂಧಾಸಂಬಂಧಗಳೇ ಉಜ್ಜೀವನಕ್ಕೂ ನಾಶಕ್ಕೂ ಪ್ರಯೋಜಕವು.

ಸೂತ್ರಂ - ಭಗವತ್ಸಂಬಂಧಮುಂಡಾನಾಲಿರಂಡುವೊಕ್ಕುವೋ ವೆನ್ನಿಲ್ ॥ ೨೧೦ ॥

ಶ್ಲೋಕಃ – ❋ ಸಿದ್ಧೇ ಭಾಗವತತ್ವೇ ತು ವಿಷ್ಣುಸಂಬಂಧತೋ ದ್ವಯೋಃ ।
ವೈಶಿಷ್ಟ್ಯಮುಚ್ಚವಂಶ್ಯಸ್ಯ ಭವೇನ್ನೀಚಾದಪೀತಿ ಚೇತ್ ॥ ॥ ೨೭೫ ॥

ತಾತ್ಪರ್ಯ – ಉತ್ಕೃಷ್ಟಾಪಕೃಷ್ಟಜನ್ಮಗಳುಳ್ಳ ಇಬ್ಬರಿಗೂ ಭಗವತ್ಸಂಬಂಧದಿಂದ ಭಾಗವತತ್ವ ಸಾಮ್ಯವು ಉಂಟಾಯಿತಷ್ಟೇ ಅದರಲ್ಲಿ ಜನ್ಮೋತ್ಕರ್ಷವುಳ್ಳವನು ಜನ್ಮಾಪಕರ್ಷವುಳ್ಳವನಿಗಿಂತಲೂ ಶ್ರೇಷ್ಠನಲ್ಲವೇ ? ಎಂಬ ಪ್ರಶ್ನೆಯನ್ನು ತಾವೇ ಮಾಡಿಕೊಂಡು ಉತ್ತರವನ್ನು ಹೇಳುತ್ತಾರೆ.

ಸೂತ್ರಂ - ಓವ್ವಾತು ॥ ೨೧೧ ॥

ಶ್ಲೋಕಃ – ❋ ಉತ್ತಮಾನುತ್ತಮತ್ವಂ ತು ವ್ಯತ್ಯಯೇನ ವಿಭಾವಯನ್ ।
ದದಾತ್ಯುತ್ತರಮಾರ್ಯೋಯಂ ಸಮಂಕೋ ಭವತೀತಿ ಹಿ ॥ ॥ ೨೭೬ ॥

ತಾತ್ಪರ್ಯ – ಪ್ರಶ್ನೆ ಮಾಡುವವನು ಉತ್ಕೃಷ್ಟವನ್ನಾಗಿ ಚಿಂತಿಸಿದ್ದನ್ನು ಅಪಕೃಷ್ಟವನ್ನಾಗಿಯೂ, ಅಪಕೃಷ್ಟವನ್ನಾಗಿ ನೆನೆಸಿದ್ದನ್ನು ಉತ್ಕೃಷ್ಟವನ್ನಾಗಿಯೂ, ಮನಸ್ಸಿನಲ್ಲಿ ಮಾಡಿಕೊಂಡು ಉತ್ತರವನ್ನು ಹೇಳುತ್ತಾರೆ, ಸೇರುವುದಿಲ್ಲವೆಂದು.

ಸೂತ್ರಂ - ಉತ್ಕೃಷ್ಟಮಾಹ ಭ್ರಮಿತ್ತ ಜನ್ಮಂ ಭ್ರಂಶಸಂಭಾವನೈಯಾಲೇ 'ಶರೀರೇಚ' ಎನ್ಗಿರಪಡಿಯೇ ಭಯಜನಕಂ ॥ ೨೧೨ ॥

ಶ್ಲೋಕಃ – ❋ ಆಭಿಜಾತ್ಯಾದಿನಾ ಯಸ್ತು ತದಹಂಕೃತಿತೋ ಭ್ರಮಾತ್ ।
ಉತ್ತಮತ್ವೇನ ನೀಚಂ ಚ ಭಾವಯನ್ಭ್ರಂಶಮಾಪ್ನುಯಾತ್ ॥ ॥ ೨೭೭ ॥

ತಾತ್ಪರ್ಯ – ಅದನ್ನೇ ಉಪಪಾದಿಸುತ್ತಾರೆ. ಅದೇನೆಂದರೆ ಅಭಿಜಾತ್ಯಾದಿಗಳಿಂದ ಅಹಂಕಾರವನ್ನು ಹೊಂದಿ ನಶಿಸಿ ಹೋಗುವ ಅಪಕೃಷ್ಟವಾದ ಜನ್ಮವನ್ನು ಉತ್ಕೃಷ್ಟವನ್ನಾಗಿ ಯೋಚಿಸಿ ಬೇರೆ ಉಪಾಯಗಳಲ್ಲಿ ಅನ್ವಯಿಸಿದ ಕಾರಣ ಅನನ್ಯೋಪಾಯತ್ವವೆಂಬ ಅಧಿಕಾರದಿಂದ ಜಾರುವ ಸಂಭಾವನೆಯುಂಟು. ಆದ್ದರಿಂದ "ಶರೀರೇ ಚ ವರ್ತತೇ ಮೇ ಮಹದ್ಭಯಂ" ಎಂಬಂತೆ ಸ್ವರೂಪ ಯಾಥಾತ್ಮ್ಯ ಜ್ಞಾನವುಳ್ಳ ಉಪಾಯಾಂತರಗಂಧವನ್ನೂ ಸಹಿಸದೇ ಇರುವ ಅಧಿಕಾರಿಗಳಿಗೂ ಕೂಡ ಭಯವನ್ನು ಉಂಟುಮಾಡುವಂತಿದೆ.

ಸೂತ್ರಂ - ಅದಕ್ಕು ಸ್ವರೂಪಪ್ರಾಪ್ತಮಾನ ನೈಚ್ಯಂ ಭಾವಿಕ್ಕ ವೇಣುಂ ॥ ೨೧೩ ॥

ಶ್ಲೋಕಃ – ❋ ವಿಷ್ಣು ಭಕ್ತಾನುವರ್ತೀಯ ಸ್ಸ್ವರೂಪಾನುಗುಣೇನ ಸಃ ।
ಭಾವಯೇತ್ಸತತಂ ನೈಚ್ಯಂ ಜನ್ಮನಸ್ಸರ್ವಥಾ ನರಃ ॥ ॥ ೨೭೮ ॥

ತಾತ್ಪರ್ಯ – ಇನ್ನೂ ಒಂದು ದೋಷವನ್ನು ಹೇಳುತ್ತಾರೆ. ಅದೇನೆಂದರೆ ಹಿಂದೆ ಹೇಳಿದ ಜನ್ಮಕ್ಕೆ ಭಾಗವತರ ಅನುವರ್ತನಾದಿಗಳಿಂದ ಉಂಟಾಗುವ ಶೇಷತ್ವವೆಂಬ ಸ್ವರೂಪಕ್ಕೆ ಅನುಗುಣವಾದ ನೈಚ್ಯವನ್ನು ಇತರರು ಮಾಡುವುದನ್ನು ನೋಡಿ ಕಲಿತುಕೊಳ್ಳಬೇಕು.

ಸೂತ್ರಂ - ಅಪಕೃಷ್ಟಮಾಹಭ್ರಮಿತ್ತ ಉತ್ಕೃಷ್ಟ ಜನ್ಮತ್ತುಕ್ಕು
ಇರಂಡು ದೋಷವುಮಿಲ್ಲೈ ॥ ೨೧೪ ॥

ಶ್ಲೋಕಃ – ❋ ಅಪಕೃಷ್ಟತಯಾ ಭ್ರಾಂತ ಸಮುತ್ಕೃಷ್ಟ ಜನೇರ್ದ್ವಯಂ ।
ಭಯಹೇತುತ್ವ ನೈಚ್ಯಾನುಸಂಧಾನಾತ್ಮಕಮೇವ ನ ॥ ॥ ೨೭೯ ॥

ತಾತ್ಪರ್ಯ – ಹಿಂದೆ ಹೇಳಿದ್ದಕ್ಕೆ ಪ್ರತಿಯಾದ ಜನ್ಮದ ದೋಷಾಭಾವವನ್ನು ಹೇಳುತ್ತಾರೆ. ಅಭಿಜಾತ್ಯಾದಿಗಳಿಂದ ಉಂಟಾಗುವ ಅಹಂಕಾರ ಯೋಗ್ಯತೆಯಿಲ್ಲದೆ ಶೇಷತ್ವಾನುಕೂಲವಾದ್ದರಿಂದ ಉತ್ಕೃಷ್ಟವಾದ ಜನ್ಮವನ್ನು ಅಪಕೃಷ್ಟವನ್ನಾಗಿ ಚಿಂತಿಸಿ ಭ್ರಮಿಸಿದ ಪಕ್ಷದಲ್ಲಿ ಭ್ರಂಶ ಸಂಭಾವನೆಯಿಂದುಂಟಾಗುವ ಭಯ ಜನಕತ್ವವೂ ಸ್ವರೂಪ ಪ್ರಾಪ್ತವಾದ ನೈಚ್ಯವನ್ನು ಭಾವಿಸಬೇಕೆಂಬ ಎರಡು ದೋಷಗಳೂ ಇಲ್ಲ.

ಸೂತ್ರಂ - ನೈಚ್ಯಂ ಜನ್ಮಸಿದ್ಧಂ ॥ ೨೧೫ ॥

ಶ್ಲೋಕಃ – ❋ ಭಗವದ್ಭಕ್ತಾನುವರ್ತಿತ್ವ ಸೂಚನಾಚ್ಚೇತನಸ್ಯ ತು ।
ಸಿದ್ಧತ್ವಾಜ್ಜನ್ಮತೋ ನೈಚ್ಯ ಭಾವನಾಪೇಕ್ಷಿತಾ ನ ಹಿ ॥ ॥ ೨೮೦ ॥

ತಾತ್ಪರ್ಯ – ಇದರಿಂದ ಭ್ರಂಶ ಸಂಭಾವನೆ ಇಲ್ಲವೆಂದು ಹೇಳಿದಂತಾಯಿತು. ನೈಚ್ಯ ಸಂಭಾವನೆಯಿರಬಹುದಷ್ಟೆ. ಎಂದರೆ ಹೇಳುತ್ತಾರೆ. ಅದೇನೆಂದರೆ ಭಾಗವತಾನುವರ್ತನಕ್ಕನುಗುಣವಾದ ನೈಚ್ಯವು ಜನ್ಮದಲ್ಲೇ ಸ್ವತಸ್ಸಿದ್ಧವಾದ್ದರಿಂದ ಅದನ್ನು ಭಾವಿಸಬೇಕಾಗಿಲ್ಲ.

ಸೂತ್ರಂ - ಆಹ್ಯೆಯಾಲುತ್ಕೃಷ್ಟ ಜನ್ಮಮೇ ಶ್ರೇಷ್ಠಂ ॥ ೨೧೬ ॥

ಶ್ಲೋಕಃ – ❋ ಶೇಷತ್ವಸ್ಯೋಚಿತತ್ವಾಚ್ಚ ಸಮುತ್ಕೃಷ್ಟತ್ವಮುಚ್ಯತೇ ।
ಜನ್ಮನಸ್ತ್ವತ ಏವೋಕ್ತಂ ಶ್ರೇಷ್ಠ ಜನ್ಮೇತಿ ಕೋವಿದೈಃ ॥ ॥ ೨೮೧ ॥

ತಾತ್ಪರ್ಯ – ಶೇಷತ್ವ ಪ್ರಯುಕ್ತವಾದ ಉತ್ಕೃಷ್ಟ ಜನ್ಮವೇ ಶ್ರೇಷ್ಠವು

ಸೂತ್ರಂ - ಶ್ವಪಚೋಽಮಹೀಪಾಲ ॥ ೨೧೭ ॥

ಶ್ಲೋಕಃ – ❋ ಶ್ವಪಚೋಽಮಿ ಮಹೀಪಾಲ ವಿಷ್ಣು ಭಕ್ತೋ ದ್ವಿಜಾಧಿಕಃ ।
ವಿಷ್ಣು ಭಕ್ತಿ ವಿಹೀನಸ್ತು ಯತಿಶ್ಚ ಶ್ವಪಚಾಧಮಃ ॥ ॥ ೨೮೨ ॥

ತಾತ್ಪರ್ಯ – ಇದಕ್ಕೆ ಪ್ರಮಾಣವನ್ನು ತೋರಿಸುತ್ತಾರೆ. ಎಷ್ಟೇ ನಿಕೃಷ್ಟ ಜನ್ಮದವನಾಗಿದ್ದಾಗ್ಯೂ ಭಗವದ್ಭಕ್ತನಾದ ಪಕ್ಷದಲ್ಲಿ ಅವನು ಬ್ರಾಹ್ಮಣನಿಗಿಂತಲೂ ಅಧಿಕನು. ಎಷ್ಟೇ ಉತ್ಕೃಷ್ಟ ಜನ್ಮದಲ್ಲಿ ಹುಟ್ಟಿ ಸನ್ಯಾಸಿಯಾಗಿದ್ದರೂ ಭಗವದ್ಭಕ್ತಿಯಿಲ್ಲದವನು ಚಂಡಾಲನಿಗಿಂತಲೂ ಅಧಮನು. ಆದ್ದರಿಂದ ಉತ್ಕೃಷ್ಟ ಜನ್ಮದಲ್ಲಿ ಜನಿಸಿ ಭಗವದ್ಭಕ್ತಿಯಿಲ್ಲದವನಿಗಿಂತಲೂ ನೀಚನಾಗಿದ್ದಾಗ್ಯೂ ಭಗವದ್ಭಕ್ತಿಯುಳ್ಳ ಜನ್ಮವೇ ಶ್ರೇಷ್ಠವು.

ಸೂತ್ರಂ - ನಿಕೃಷ್ಟ ಜನ್ಮತ್ತಾಲ್ ವಂದ ದೋಷಂ ಶಮಿಪ್ಪದು
ವಿಲಕ್ಷಣ ಸಂಬಂಧತ್ತಾಲೇ ॥ ೨೧೮ ॥

ಶ್ಲೋಕಃ – ❋ ಅಹಂಕಾರೇಣ ನೀಚಸ್ಯ ಜನ್ಮನೋ ನೈಚ್ಯ ಭಾವನಾ ।
ಯಾ ವಿನಾ ತಾದೃಶಂ ದೋಷಂ ಜನ್ಮಸಿದ್ಧಸ್ಯನೈಚ್ಯತಃ ॥ ॥ ೨೮೩ ॥

ಉಪಾಯಾಂತರ ಸಂಬಂಧಯೋಗ್ಯತಾ ರಹಿತೈಸ್ಸದಾ ।
ವಿಲಕ್ಷಣೈಶ್ಚ ಸಂಬಂಧಶ್ಶೇಷತ್ವೇನಾಧಿಕಾರಿಭಿಃ ॥ ॥ ೨೮೪ ॥

ತದ್ದೋಷ ಪರಿಹಾರಾಯ ಭವತೀಹ ನ ಸಂಶಯಃ ।
ತಸ್ಮಾದ್ಭಾಗವತಾನಾಂ ತು ಸಂಬಂಧಸ್ಸಾಧ್ವಪೇಕ್ಷಿತಃ ॥ ॥ ೨೮೫ ॥

ತಾತ್ಪರ್ಯ – ಹೀಗೆ ಹೇಳಿದ್ದರಿಂದ ನಿಕೃಷ್ಟೋತ್ಕೃಷ್ಟ ಜನ್ಮಗಳು ನಿಶ್ಚೈಸಲ್ಪಟ್ಟವು. ಅದರಲ್ಲಿ ನಿಕೃಷ್ಟ ಜನ್ಮದಿಂದ ಬಂದ ದೋಷವು ಯಾವುದೆಂದರೆ ಅಹಂಕಾರದಿಂದ ನಿಕೃಷ್ಟವಾದ ಜನ್ಮದ ನೈಚ್ಯ ಭಾವನೆಯು ಅದು ಸ್ವತಸ್ಸಿದ್ಧವಾದ ನೈಚ್ಯವುಳ್ಳ ಉಪಾಯಾಂತರಾನ್ವಯಯೋಗ್ಯತಾಗಂಧರಹಿತರಾದ ವಿಲಕ್ಷಣಾಧಿಕಾರಿಗಳೊಂದಿಗೆ ಉಂಟಾದ ಶೇಷತ್ವ ರೂಪವಾದ ಸಂಬಂಧದಿಂದ ಹೋಗುವುದು.

ಸೂತ್ರಂ - ಸಂಬಂಧತ್ತುಕ್ಕು ಯೋಗ್ಯತೈಯುಂಡಾಂಪೋದು
ಜನ್ಮಕ್ಕೊತ್ತೈ ಪೋಹ ವೇಣುಂ ॥ ೨೧೯ ॥

ಶ್ಲೋಕಃ – ❋ ಭಗವದ್ಭಕ್ತ ಸಂಬಂಧ ಯೋಗ್ಯತಾ ಜಾಯತೇ ಯದಾ ।
ಅಭಿಜಾತ್ಯಾದಿ ಗರ್ವಸ್ಯ ಪರಿಹಾರೋ ಭವೇತ್ತದಾ ॥ ॥ ೨೮೬ ॥

ತಾತ್ಪರ್ಯ – ವಿಲಕ್ಷಣರಾದ ಭಗವದ್ಭಕ್ತರ ಸಂಬಂಧವುಂಟಾಗುವಾಗ ತನ್ನ ಅಭಿಜಾತ್ಯಾದಿ ಗರ್ವವು ಹೋಗಬೇಕು.

ಸೂತ್ರಂ - ಜನ್ಮತ್ತುಕ್ಕು ಕೊತ್ತೈಯುಂ ಅತುಕ್ಕು ಪರಿಹಾರವುಂ
'ಪಳುದಿಲಾವೊಳುಹಲ್' ಎನ್ಗಿರ ಪಾಟ್ಟಿಲೇ ಅರುಳಿಚ್ಚೆಯ್ದಾರ್ ॥ ೨೨೦ ॥

ಶ್ಲೋಕಃ – ❋ ಅಭಿಜಾತ್ಯಾದಿ ಗರ್ವಸ್ತತ್ಪರಿಹಾರೋ ನಿಗದ್ಯತೇ ।
ವಿಷ್ಣೋರನುಗ್ರಹಪಾತ್ರೇ ಸ್ಯಾದನುವೃತ್ತಿಸ್ಸ್ವನೈಚ್ಯತಃ ॥ ॥ ೨೮೭ ॥

ನಿದರ್ಶನಂ ತು ಭಗವಾನ್ಲೋಕಸಾರಂಗವಾಹನಂ ।
ಪಾಣಂ ಸ್ವಾಂತಿಕಮಾನಾಯ್ಯ ಪ್ರಾದರ್ಶಯದಿಹಾನಘಂ ॥ ॥ ೨೮೮ ॥

ತಾತ್ಪರ್ಯ – ಬ್ರಹ್ಮಾ ಮೊದಲುಗೊಂಡು ತನ್ನವರಿವಿಗೂ ಮಧ್ಯದಲ್ಲಿ ಉಂಟಾಗುವ ವಂಶ ಪ್ರವಾಹದಲ್ಲಿ ಒಂದು ದೋಷವೂ ಇಲ್ಲದಿರುವ ಕೆಲವು ಚತುರ್ವೇದಿಗಳೇ ಇದಕ್ಕಿಂತಲೂ ನಿಹೀನಕುಲವಿಲ್ಲವೆಂಬಂತಿರುವ ನಿಹೀನಕುಲದಲ್ಲಿ ಹುಟ್ಟಿದ್ದಾಗ್ಯೂ ಭಗವಂತನ ಅಸಾಧಾರಣವಾದ ಸಂಬಂಧವನ್ನು ತಿಳಿದು ಆ ಜ್ಞಾನಕ್ಕೆ ಅನುರೂಪವಾದ ಆಚಾರವುಳ್ಳವರಾಗಿದ್ದ ಪಕ್ಷದಲ್ಲಿ ನೀವುಗಳು ಅವರಿಗೆ ನಮಸ್ಕರಿಸಿ ಅವರುಗಳನ್ನು ಆರಾಧಿಸಿರಿ. ಅವರುಗಳು ನಿಮ್ಮಗಳಿಂದ ಜ್ಞಾನಾರ್ಜನೆ ಮಾಡಿದ ಪಕ್ಷದಲ್ಲಿ ನೀವುಗಳು ಅವರಿಗೆ ಉಪದೇಶ ಮಾಡಿರಿ. ಅವರುಗಳು ಭಗವದ್ವಿಜ್ಞಾನವನ್ನು ನಿಮ್ಮಗಳಿಗೆ ಉಪದೇಶ ಮಾಡುವುದಾದರೆ, ಅದನ್ನು ಭಕ್ತಿಯಿಂದ ಕೇಳಿ ಕೃತಾರ್ಥರಾಗಿರಿ. ಅವರುಗಳನ್ನು ಆರಾಧಿಸಿ ಒಳ್ಳೇ ಮಾರ್ಗದಲ್ಲಿ ನಡೆಯಿರಿ. ಈ ಪರಮ ರಹಸ್ಯವನ್ನು "ಭಕ್ತಿರಷ್ಟವಿಧಾಹ್ಯೇಷಾ ಯಸ್ಮಿನ್ಮ್ಲೇಚ್ಛೇಽಪಿ ವರ್ತತೇ । ತಸ್ಮೈ ದೇಯಂ ತತೋ ಗ್ರಾಹ್ಯಂ ಸ ಚ ಪೂಜ್ಯೋ ಯಥಾಹ್ಯಹಂ" ಎಂದು ಪರಮಾಪ್ತನಾದ ಭಗವಂತನೇ ಹೇಳಿರುವಾಗ ಇದರಲ್ಲಿ ಸಂದೇಹವುಂಟೇ. ಈ ರೀತಿ ಉಪದೇಶಮಾತ್ರವಲ್ಲದೆ ಲೋಕಸಾರಂಗಮುನಿಗಳ ತಲೆಯ ಮೇಲೆ ತಿರುಪ್ಪಾಣಿಯಾಳ್ವಾರನ್ನು ಕೂರಿಸಿ ತನ್ನಲ್ಲಿಗೆ ಕರೆದುಕೊಂಡು ಲೋಕಕ್ಕೆಲ್ಲಾ ಹಿಂದೆ ಹೇಳಿದ ಅರ್ಥವನ್ನು ಭಗವಂತನು ತಿಳಿಸಿದನು. ಆದ್ದರಿಂದ ಅಭಿಜಾತ್ಯಾದಿ ಗರ್ವವನ್ನು ಬಿಟ್ಟುಬಿಡಬೇಕು.

ಸೂತ್ರಂ - ವೇದಹವ್ಪೊಸ್ಪೋಲೇ ಇವರ್ಹಳೋಟ್ಟೈ ಸಂಬಂಧಂ ॥ ೨೨೧ ॥

ಶ್ಲೋಕಃ – ❋ ರಸವಾದೀಘುಟಿಕಯಾ ಯಥಾಯಸ್ಸ್ವರ್ಣತಾಂ ನಯೇತ್ ।
ತಥಾ ನೀಚಜದೋಷಂ ತು ವ್ಯಪೋಹತಿ ಸದಾಶ್ರಯಃ ॥ ॥ ೨೮೯ ॥

ತಾತ್ಪರ್ಯ – ಈ ರೀತಿ ಜನ್ಮಗರ್ವವನ್ನು ಹೋಗಲಾಡಿಸಿಕೊಂಡು ವಿಲಕ್ಷಣರೊಡನೆ ಸಂಬಂಧವುಂಟಾದರೆ ಇವನೂ ಕೂಡ ವಿಲಕ್ಷಣನಾಗಿ ಆಗುವನು. ಅದು ಹೇಗೆಂದರೆ ಸಿದ್ಧೌಷಧಗಳನ್ನು ಸೇರಿಸಿ ಪಾದರಸವನ್ನು ಪುಟಹಾಕಿ ಘುಟಿಕೆಯನ್ನಾಗಿ ಮಾಡಿ ರಸವಾದಿಗಳು ಕರಗಿಸಿದ ಕಬ್ಬಿಣಕ್ಕೆ ಅದರ ಸ್ಪರ್ಶಮಾಡಿಸಿ ಅದನ್ನು ಚಿನ್ನವನ್ನಾಗಿ ಮಾಡುವಂತೆ ವಿಲಕ್ಷಣರ ಸಂಬಂಧದಿಂದಲೇ ಇವನೂ ವಿಲಕ್ಷಣನಾಗುವನು.

ಸೂತ್ರಂ - ಇವರ್ಹಳ್ ಪಕ್ಕಲ್ ಸಾಮ್ಯಬುದ್ಧಿಯುಮಾಧಿಕ್ಯಬುದ್ಧಿಯುಂ ನಡಕ್ಕವೇಣುಂ ॥ ೨೨೨ ॥

ಶ್ಲೋಕಃ – ❋ ಏತಾದೃಶ ಪ್ರಪನ್ನೇಷು ಸದಾ ಸಾಮ್ಯಮತಿಸ್ತಥಾ ।
ಆಧಿಕ್ಯಬುದ್ಧಿರಪ್ಯೇಷು ಕರ್ತವ್ಯೇ ಭಕ್ತಿಭಾಜನೈಃ ॥ ॥ ೨೯೦ ॥

ತಾತ್ಪರ್ಯ – ಈ ರೀತಿ ತಮ್ಮ ಸಂಬಂಧದಿಂದ ಇದೇ ಜನ್ಮದಲ್ಲಿ ದೋಷಗಳನ್ನು ಹೋಗಲಾಡಿಸಿ ತನ್ನ ಸಾಮ್ಯವನ್ನು ಉಂಟುಮಾಡುವ ವಿಲಕ್ಷಣರುಗಳನ್ನು ಯಾವ ರೀತಿ ಕಾಣಬೇಕೆಂದರೆ ಸದೃಶರನ್ನಾಗಿಯೂ ತನಗಿಂತಲೂ ಅಧಿಕರನ್ನಾಗಿಯೂ ಕಾಣಬೇಕು.

ಸೂತ್ರಂ - ಅತಾವತು - ಆಚಾರ್ಯತುಲ್ಯರೆನ್ನುಂ ಸಂಸಾರಿಹಳಿಲುಂ
ತನ್ನಿಲುಂ ಈಶ್ವರನಿಲುಂ ಅಧಿಕರೆನ್ನುಂ ನಿನೈಕ್ಕ ॥ ೨೨೩ ॥

ಶ್ಲೋಕಃ – ❋ ಗುರುರೇವ ಪರಂಬ್ರಹ್ಮೇತ್ಯಾದಿ ವಾಕ್ಯಾದಿಹೋಚ್ಯತೇ ।
ಆಚಾರ್ಯ ತುಲ್ಯತಾ ಬುದ್ಧಿಃ ಕರ್ತವ್ಯಾ ತೇಷು ಧೀಮತಾ ॥ ೨೯೧ ॥

ಜಾತ್ಯಾದಿ ನೀಚ ಬುದ್ಧ್ಯೈವ ಸಂಸಾರಿ ಸಮತಾಂ ತ್ಯಜನ್ ।
ಜ್ಞಾನೇನಾಧಿಕತಾ ಬುದ್ಧಿಂ ತೇಷು ಕುರ್ಯಾದ್ವಿಚಕ್ಷಣಃ ॥ ೨೯೨ ॥

ಸಂಸಾರ್ಯಪೇಕ್ಷಯಾಧಿಕ್ಯಾತ್ಸ್ವಾತ್ಮಸಾಮ್ಯೈಕ ಭಾವನಾಂ ।
ತ್ಯಕ್ತ್ವಾ ಸ್ವಾಪೇಕ್ಷಯಾಧಿಕ್ಯಂಶೇಷಿತ್ವಾದ್ಭಾವಯೇದ್ಬುಧಃ ॥ ೨೯೩ ॥

ಅಮ್ಮಾಹಾರಾರ್ಚ್ಯರೂಪಂ ತಮಾಶ್ರಿತ್ಯೋಪದಿಶಂತಿ ಯತ್ ।
ವಿಷ್ಣೋರಾಧಿಕ್ಯಬುದ್ಧಿಂ ತತ್ತೇಷು ಕುರ್ಯಾದ್ವಿಚಕ್ಷಣಃ ॥ ೨೯೪ ॥

ತಾತ್ಪರ್ಯ – "ಗುರುರೇವಪರಂಬ್ರಹ್ಮ" ಎಂಬಂತೆ ಉಪಾದೇಯತಮರಾದ ಆಚಾರ್ಯರಿಗೆ ಸರಿಸಮರನ್ನಾಗಿ ಇವರಲ್ಲಿ ಪ್ರತಿಪತ್ತಿ ಮಾಡಬೇಕು. ಜಾತ್ಯಾದಿಗಳಿಂದ ಸಂಸಾರಿಗಳೊಡನೆ ಸಮಬುದ್ಧಿ ಮಾಡದೇ ಜ್ಞಾನಾದಿಗಳಿಂದ ಸಂಸಾರಿಗಳಿಗಿಂತಲೂ ಅಧಿಕರೆಂದು ತಿಳಿಯಬೇಕು. ಸಂಸಾರಿಗಳಿಗೂ ತನಗೂ ಇರುವ ವ್ಯತ್ಯಾಸದಿಂದ ತನ್ನ ಹಾಗೆಂದು ಸಮಬುದ್ಧಿ ಮಾಡದೆ ತನಗೆ ಶೇಷಿ ಎಂಬ ಭಾವನೆಯಿಂದ ತನಗಿಂತಲೂ ಅಧಿಕರೆಂದೂ ತಿಳಿಯಬೇಕು. ಶೇಷಿತ್ವದಿಂದ ಸರ್ವೇಶ್ವರನೂ ಇವರೂ ಸರಿ ಸಮಾನರೆಂದು ಭಾವಿಸದೆ ಲೀಲಾವಿಭೂತಿಯಲ್ಲಿ ತನ್ನನ್ನು ಆಶ್ರಯಿಸಲು ಅನುಕೂಲವಾಗುವಂತೆ ದಿವ್ಯದೇಶಗಳಲ್ಲಿ ಅರ್ಚಾವಿಗ್ರಹವಾಗಿ ಇರುವ ಕಾರಣ ಬಾಯಿ ಬಿಟ್ಟು ಒಂದು ಮಾತನ್ನು ಹೇಳದೇ ಇರುವ ಕಾರಣ ಅವನಂತೆ ಇಲ್ಲದೇ ಸ್ವಾಶ್ರಯಣಕ್ಕೆ ನಿರಪೇಕ್ಷರಾಗಿ ಬಾಯಿಬಿಟ್ಟು ತ್ಯಾಜ್ಯೋಪಾದೇಯಗಳನ್ನು ಉಪದೇಶಿಸುವರಾದ್ದರಿಂದ ಸರ್ವೇಶ್ವರನಿಗಿಂತಲೂ ಅಧಿಕರೆಂದು ಭಾವಿಸಬೇಕು.

ಸೂತ್ರಂ - ಆಚಾರ್ಯಸಾಮ್ಯತ್ತುಕ್ಕಡಿಆಚಾರ್ಯವಚನಂ ॥ ೨೨೪ ॥

ಶ್ಲೋಕಃ – ❋ ಆಚಾರ್ಯ ವಚನಂ ಪ್ರಾಹ ಸದ್ಯಪ್ಯಾಂ ತಂ ಮುನೀಷಿಣಾ ।
ವೈಷ್ಣವಾ ವೀಕ್ಷಣೀಯಾಹಿ ಸ್ವಾಚಾರ್ಯವದಿತೀರಿತಂ ॥ ೨೯೫ ॥

ತಾತ್ಪರ್ಯ – ಆಚಾರ್ಯರಿಗೆ ಸಮರನ್ನಾಗಿ ನೋಡಬೇಕೆಂದು ಹೇಳಿರುವವರು ಯಾರೆಂದರೆ ಆಚಾರ್ಯರು ಹೇಳಿರುವರು ಶ್ರೀವೈಷ್ಣವರುಗಳನ್ನು ಆಚಾರ್ಯರಂತೆ ನೋಡಬೇಕೆಂದು.

ಸೂತ್ರಂ - ಇಪ್ಪಡಿನಿನೈಯಾದೊಳಿಹೈಯುಮುಪಚಾರಂ ॥ ೨೨೫ ॥

ಶ್ಲೋಕಃ – ❋ ಜನ್ಮಾದಿಷು ನಿಕೃಷ್ಟೈಕಬುದ್ಧ್ಯಾ ಮಂತುಸ್ತು ಯಾದೃಶಃ ।
ಭವತ್ಯಾಚಾರ್ಯಸಾದೃಶ್ಯಾ ಚಿಂತನೇನಾಪಿ ತಾದೃಶಃ ॥ ೨೯೬ ॥

ತಾತ್ಪರ್ಯ – ಜನ್ಮಾದಿಗಳಲ್ಲಿ ನಿಕೃಷ್ಟ ಬುದ್ಧಿ ಮಾಡಿದರೆ ಯಾವ ವಿಧವಾದ ಅಪಚಾರವೋ ಅದೇ ರೀತಿಯಾದ ಅಪಚಾರವು ಹಿಂದೆ ಹೇಳಿದಂತೆ ನೆನೆಸದೇ ಇದ್ದರೂ ಉಂಟಾಗುವುದು.

ಸೂತ್ರಂ - ಇವ್ವರ್ಥಂ ಇತಿಹಾಸ ಪುರಾಣಂಗಳಿಲುಂ, ಪಯಿಲುಂ ಶುಡರೊಳಿ,
ನೆಡುಮಾರ್ಕಡಿವೆಯ್ಯಿಲುಂ ಕಣ್ ಶೋರವೆಂಗುರಿತಿಯಿಲುಂ
ನಣ್ಣಾದವಾಳವುಣರಿಲುಂ ತೇಟ್ಟರುಂ ತಿರತ್ತೇನಿಲುಂ
ವೇಂಬೊರುಳುಂಕ್ಕುವೇಲಿಲ್ ಪಾಟುಕ್ಕಳಿಲುಂ
ವಿಶದವಾಹಕ್ಕಾಣಲಾಂ ॥ ೨೨೬ ॥

ಶ್ಲೋಕಃ ❋ ಮದ್ಭಕ್ತಂ ಶೂದ್ರ ಸಾಮಾನ್ಯಾದವಮನ್ಯಂತಿ ಯೇ ನರಾಃ ।
ನರಕೇಷ್ವವತಿಷ್ಠಂತಿ ವರ್ಷ ಕೋಟೀರ್ನರಾಧಮಾಃ ॥ ॥ ೨೯೮ ॥

ತಾತ್ಪರ್ಯ – ಪುರಾಣದಲ್ಲಿ ಭಗವಂತನು ಹೇಳಿರುವುದನ್ನು ತಿಳಿಸುತ್ತಾರೆ. ನನ್ನ ಭಕ್ತನನ್ನು ಶೂದ್ರನಿಗೆ ಸಮಾನನೆಂದು ಯಾರು ಅವಮಾನ ಮಾಡುವರೋ ಅವರು ನರಾಧಮರಾಗಿ ಎಷ್ಟೋ ಕೋಟಿ ವರ್ಷಗಳವರಿವಿಗೂ ನರಕದಲ್ಲಿ ಬಿದ್ದು ಒದ್ದಾಡುವರು.

ಶ್ಲೋಕಃ – ❋ ಚಂಡಾಲಮಪಿ ಮದ್ಭಕ್ತಂ ನಾವಮನ್ಯೇತ ಬುದ್ಧಿಮಾನ್ ।
ಅವಮಾನಾತ್ಪತತ್ಯೇವ ರೌರವೇ ನರಕೇ ಚ ಸಃ ॥ ॥ ೨೯೯ ॥

ತಾತ್ಪರ್ಯ – ಮದ್ಭಕ್ತನು ಚಂಡಾಲನಾಗಿದ್ದಾಗ್ಯೂ ಅವನನ್ನು ಬುದ್ಧಿವಂತನಾದವನು ಅವಮಾನ ಮಾಡಕೂಡದು. ಹಾಗೆ ಅವಮಾನ ಮಾಡಿದ ಪಕ್ಷದಲ್ಲಿ ರೌರವಾದಿ ನರಕಗಳಲ್ಲಿ ಬೀಳುತ್ತಾನೆ.

ಶ್ಲೋಕಃ – ❋ ನ ಶೂದ್ರಾ ಭಗವದ್ಭಕ್ತಾ ವಿಪ್ರಾ ಭಾಗವತಾಸ್ಸ್ಮೃತಾಃ ।
ಸರ್ವವರ್ಣೇಷು ತೇ ಶೂದ್ರಾ ಯೇಽಭಕ್ತಾ ಜನಾರ್ದನೇ ॥ ॥ ೩೯೯ ॥

ತಾತ್ಪರ್ಯ – ನನಗೆ ಭಕ್ತರಾದವರು ಶೂದ್ರ ಜಾತಿಯಲ್ಲಿ ಹುಟ್ಟಿದ್ದಾಗ್ಯೂ ಅವರು ಶೂದ್ರರಲ್ಲ. ಬ್ರಾಹ್ಮಣರು ಭಾಗವತೋತ್ತಮರು ನಾಲ್ಕು ವರ್ಣಗಳಲ್ಲಿ ಯಾರೇ ಆಗಲಿ ನನ್ನ ಭಕ್ತರಲ್ಲದ ಪಕ್ಷದಲ್ಲಿ ಅವರು ಶೂದ್ರರೇ.

ಶ್ಲೋಕಃ – ❋ ಮದ್ಭಕ್ತಜನ ವಾತ್ಸಲ್ಯಂ ಪೂಜಾಯಾಂ ಚಾನುಮೋದನಂ ।
ಸ್ವಯಮಭ್ಯರ್ಚನಂ ಚೈವ ಮದರ್ಥೇ ದಂಭವರ್ಜಿತಂ ॥ ॥ ೩೦೦ ॥

ಮತ್ಕಥಾ ಶ್ರವಣೇಭಕ್ತಿಸ್ಸ್ವರ ನೇತ್ರಾಂಗವಿಕ್ರಿಯಾ ।
ಮಮಾನುಸ್ಮರಣಂ ನಿತ್ಯಂ ಯಚ್ಚ ವಾಂ ನೋಪಜೀವತಿ ॥ ॥ ೩೦೧ ॥

ಭಕ್ತಿರಷ್ಟವಿಧಾ ಹ್ಯೇಷಾ ಯಸ್ಮಿನ್ಮ್ಲೇಚ್ಛೇಪಿ ವರ್ತತೇ ।
ಸ ವಿಪ್ರೇಂದ್ರೋ ಮುನಿಶ್ರೇಷ್ಠಾಸ್ಸಯತಿಸ್ಸಚ ಪಂಡಿತಃ ॥ ॥ ೩೦೨ ॥

ನ ಮೇಪೂಜ್ಯಶ್ಚತುರ್ವೇದೀ ಪೂಜಯನ್ಭಕ್ತಿವರ್ಜಿತಃ ।
ಸ ಮೇ ಪೂಜ್ಯಸ್ಸದಾಚಾಸೌ ಮದ್ಭಕ್ತಶ್ವಪಚೋಪಿ ಯಃ ॥ ॥ ೩೦೩ ॥

ತಾತ್ಪರ್ಯ – ನನ್ನ ಭಕ್ತರಲ್ಲಿ ವಾತ್ಸಲ್ಯವನ್ನು ತೋರಿಸುವುದೂ ಅವರುಗಳ ಆರಾಧನೆಯನ್ನು ಅನುಮೋದಿಸುವುದೂ ತಾನು ಕೂಡಾ ನನಗೋಸ್ಕರ ದಂಭವಿಲ್ಲದೇ ಆರಾಧಿಸುವುದೂ ಗದ್ಗದಸ್ವರದಿಂದ ಪುಲಕಿತಾಂಗನಾಗಿ ಕಣ್ಣಲ್ಲಿ ನೀರು ಸುರಿಸುತ್ತಾ ನನ್ನ ಕಥೆಗಳನ್ನು ಕೇಳುವಾಗ ಭಕ್ತಿಯಿಂದ ಕೇಳುತ್ತಾ ನನ್ನನ್ನೇ ಯಾವಾಗಲೂ ಸ್ಮರಿಸುತ್ತಾ ಈ ರೀತಿಯಾಗಿ ಎಂಟು ವಿಧ ಭಕ್ತಿಯಂನ್ನು ನನ್ನಲ್ಲಿ ಯಾವನು ಮಾಡುವನೋ ಅವನು ತುರುಷ್ಕನಾಗಿದ್ದರೂ ಅವನೇ ಬ್ರಾಹ್ಮಣ ಶ್ರೇಷ್ಠನು. ಅವನೇ ಮುನಿಯ ಶೀಲನು. ಶ್ರೀಮಂತನೂ ಅವನೇ. ಅವನೇ ಯತಿಯು. ಅವನೇ ಜ್ಞಾನಿಯು. ಚತುರ್ವೇದಿಯಾಗಿದ್ದರೂ, ಯಾವನು ನನ್ನಲ್ಲಿ ಭಕ್ತಿಯಿಲ್ಲದೆ ದಂಭಕ್ಕಾಗಿ ಪೂಜಿಸುವನೋ ಅವನು ನನಗೂ ಬೇಕಾಗುವುದಿಲ್ಲ. ಚಂಡಾಲನಾಗಿದ್ದಾಗ್ಯೂ ಯಾವನು ನನ್ನನ್ನು ಭಕ್ತಿಯಿಂದ ಆರಾಧಿಸುವನೋ ಅವನು ನನಗೂ ಪೂಜ್ಯನು. ಈ ರೀತಿ ಭಗವಂತನೇ ಹೇಳಿರುವನು. ಆಳ್ವಾರ್ರುಗಳೂ ಕೂಡ ಇದೇ ಅರ್ಥಗಳನ್ನು ತಮ್ಮ ಪಾಶುರಗಳಲ್ಲಿ ಹೇಳಿರುವರು.

ಸೂತ್ರಂ - ಕ್ಷತ್ರಿಯನಾನ ವಿಶ್ವಾಮಿತ್ರನ್ ಬ್ರಹ್ಮರ್ಷಿಯಾನಾನ್ ॥ ೨೨೬ ॥

ಶ್ಲೋಕಃ – ❋ ನ ಶೂದ್ರಾ ಭಗವದ್ಭಕ್ತಾ ವಿಪ್ರಾ ಭಾಗವತಾಸ್ತ್ವಯಾ ।
ಇತ್ಯುಕ್ತಸ್ತೋತ್ತರಂ ಕಿನ್ನು ಬ್ರೂಹೀತಿ ಯದಿಚೋಚ್ಯತೇ ॥ ೩೦೪ ॥

ಉತ್ಪನ್ನಃ ಕ್ಷತ್ರಿಯಕುಲೇ ವಿಶ್ವಾಮಿತ್ರಸ್ತಪೋಬಲಾತ್ ।
ಬ್ರಾಹ್ಮಣೋಽಭೂದ್ವಸಿಷ್ಠೋಕ್ತಾ ಕಿಂ ಪುನರ್ಹರಿಸೇವಕೇ ॥ ೩೦೫ ॥

ತಾತ್ಪರ್ಯ – ಶೂದ್ರರು ಭಗವದ್ಭಕ್ತರಲ್ಲ. ಬ್ರಾಹ್ಮಣರನ್ನು ಭಾಗವತರೆಂದು ಕರೆಯಬೇಕು ಎಂದು ಹೇಳಿದೆಯಷ್ಟೆ. ಹೀಗಿರುವಾಗ ಹಿಂದೆ ಹೇಳಿದ್ದು ಸರಿಯೇ ಅಂದರೆ ಕ್ಷತ್ರಿಯ ವಂಶದಲ್ಲಿ ಹುಟ್ಟಿದ ವಿಶ್ವಾಮಿತ್ರನು ತಪಸ್ಸು ಮಾಡಿ ವಸಿಷ್ಠನ ಮಾತಿನಿಂದ ಬ್ರಹ್ಮರ್ಷಿಯಾದ ಪಕ್ಷದಲ್ಲಿ ಭಗವದ್ಭಕ್ತನಾದ ಶೂದ್ರನು ಭಾಗವತನಾಗಕೂಡದೇನು ? ಖಂಡಿತವಾಗಿಯೂ ಭಾಗವತನಾಗಬಹುದು.

ಸೂತ್ರಂ - ವಿಭೀಷಣನೈ ರಾವಣನ್ ಕುಲಪಾಂಸನ್ ಎನ್ರಾನ್ ಪೆರುಮಾಳ್ ಇಕ್ಷ್ವಾಕುವಂಶ್ಯನಾಹ ನಿನೈತ್ತು ವಾರ್ತ್ತೈಯರುಳಿಚ್ಚೆಯ್ದಾರ್ ॥ ೨೨೭ ॥

ಶ್ಲೋಕಃ – ❋ ರಾವಣೇನ ಕುಲಪಾಂಸನೇತಿಯೋ
ಧಿಕ್ಕೃತಸ್ತತು ವಿಭೀಷಣೋ ಮಹಾನ್ ।
ರಾಘವೇಣ ಬಹುಮಾನಿತಸ್ತತೋ
ಭಾಷಿತಶ್ಚ ರಘುವಂಶ ಜಾತವತ್ ॥ ೩೦೬ ॥

ತಾತ್ಪರ್ಯ – ರಾವಣನು ತನ್ನ ತಮ್ಮನಾದ ವಿಭೀಷಣನನ್ನು ಕುಲಪಾಂಸನ ಎಂದು ಧಿಕ್ಕರಿಸಿದನು. ಆದೇ ವಿಭೀಷಣನನ್ನು ಶ್ರೀರಾಮಚಂದ್ರನು ತನ್ನ ಒಡಹುಟ್ಟಿದವನಂತೆ ಕಂಡು ಮಾತನಾಡಿಸಿ ತನ್ನಲ್ಲಿ ಸೇರಿಸಿಕೊಂಡನು. ಆದ್ದರಿಂದ ನಿಕೃಷ್ಟಜಾತಿಯಲ್ಲಿ ಹುಟ್ಟಿದ್ದಾಗ್ಯೂ ಭಗವದ್ಭಕ್ತನಾದ ಪಕ್ಷದಲ್ಲಿ ಅವನು ಶ್ರೇಷ್ಠನು.

ಸೂತ್ರಂ – ಪೆರಿಯವುಡೈಯಾಕ್ಕ್ಕ್ ಪ್ಪೆರುಮಾಳ್ ಬ್ರಹ್ಮಮೇಧ ಸಂಸ್ಕಾರಂ ಪಣ್ಣಿಯರುಳಿನಾರ್ ॥ ೨೨೪ ॥

ಶ್ಲೋಕಃ – ❋ ಪಿತುರ್ವಚನಪಾಲನಾದನುಸರಂಶ್ಚ ಸಾಧಾರಣಂ
ಸ್ವಧರ್ಮಮಥಕಾನನೇ ವಿರಹತಃ ಪ್ರಿಯಾಯಾ ವ್ರಜನ್ ।
ತೃಣೇಕೃತನಿಜಾಸವೇ ಶ್ರಿತಜಟಾಯುಷೇ ರಾಘವಃ
ಚಕಾರ ಪಿತೃಸಂಸ್ಕ್ರಿಯಾಮವರವಂಶಜಾತಾಯ ಚ ॥ ೩೦೭ ॥

ತಾತ್ಪರ್ಯ – ಶ್ರೀರಾಮಚಂದ್ರನು ಸಾಧಾರಣ ಧರ್ಮವಾದ ತನ್ನ ತಂದೆಯ ಮಾತನ್ನು ನಿರ್ವಹಿಸುವುದಕ್ಕಾಗಿ ಕಾಡಿಗೆ ಹೋದನಷ್ಟೆ. ಅಲ್ಲಿರುವಾಗ ರಾವಣನಿಂದ ಅಪಹರಿಸಲ್ಪಟ್ಟ ಸೀತೆಯ ವಿರಹದಿಂದ ಕಾಡಿನಲ್ಲಿ ಅಲೆದಾಡುತ್ತಾ ನೆಲದ ಮೇಲೆ ಬಿದ್ದಿರುವ ಜಟಾಯುವಿನನ್ನು ನೋಡುತ್ತಲು, ಆ ಜಟಾಯುವು ಪ್ರಾಣೋತ್ಕ್ರಮಣದಿಂದ ಸಂಕಟಪಡುತ್ತಾ ಸೀತೆಯ ವೃತ್ತಾಂತವನ್ನು ಸ್ವಲ್ಪವೇ ತಿಳಿಸಿ ಪ್ರಾಣ ಬಿಟ್ಟನು. ಆಗ ಶ್ರೀರಾಮನು ತನ್ನ ತಮ್ಮ ಲಕ್ಷ್ಮಣನಿದ್ದಾಗ್ಯೂ ತಾನೇ ಆ ಜಟಾಯುವಿಗೆ ಬ್ರಹ್ಮಮೇಧಸಂಸ್ಕಾರದಿಂದ ಔರ್ಧ್ವದೈಹಿಕಕ್ರಿಯೆಯನ್ನು ನೆರವೇರಿಸಿದನು. ಅವನು ಹೀನಜಾತಿ ಎಂದು ನೋಡದೆ ತನ್ನನ್ನು ಆಶ್ರಯಿಸಿದ ಕಾರಣ ಈ ರೀತಿ ಸಂಸ್ಕರಿಸಿ ವಿಶೇಷ ಧರ್ಮವನ್ನು ತೋರಿಸಿ ಕೊಟ್ಟನು. ಆದ್ದರಿಂದ ಹೀನಜಾತಿಯಾದರೂ ಭಗವದ್ಭಕ್ತನಾದ ಪಕ್ಷದಲ್ಲಿ ಶ್ರೇಷ್ಠನೇ.

ಸೂತ್ರಂ - ಧರ್ಮಪುತ್ರರ್ ಅಶರೀರವಾಕ್ಯತ್ರೈಯುಂ ಜ್ಞಾನಾಧಿಕ್ಯತ್ರೈಯುಂ ಕೊಂಡು ಶ್ರೀವಿದುರರೈ ಬ್ರಹ್ಮಮೇಧತ್ತಾಲೇ ಸಂಸ್ಕರಿತ್ತಾರ್ ॥ ೩೧೦ ॥

ಶ್ಲೋಕಃ – ❋ ಧರ್ಮೈಕಸಕ್ತ ಹೃದಯೋ ನನು ಧರ್ಮರಾಜೋ
ಜ್ಞಾನಾಧಿಕತ್ವ ಗಗನೋಕ್ತವಚೋಬಲಾಚ್ಚ ।
ಸ ಬ್ರಹ್ಮಮೇಧವಿಧಿನಾ ವಿದುರಸ್ಯ ಚಕ್ರೇ
ಕರ್ಮೌರ್ಧ್ವದೈಹಿಕಮಪಾಕೃತಸಂಶಯಸ್ಸನ್ ॥ ೩೦೮ ॥

ತಾತ್ಪರ್ಯ – ಧರ್ಮನಿರತನಾದ ಧರ್ಮರಾಜನು ವಿದುರನ ಸಂಸ್ಕಾರದಲ್ಲಿ ಸಂದೇಹಪಡುತ್ತಿರಲು "ಎಲೈ ಧರ್ಮರಾಜನೆ, ಈ ವಿದುರನ ಶರೀರವನ್ನು ಶೂದ್ರ ಶರೀರವನ್ನಾಗಿ ಯೋಚಿಸಬೇಡ. ಜ್ಞಾನಾಧಿಕ್ಯದಿಂದ ಪವಿತ್ರವಾದದ್ದು. ಆದಕಾರಣ ಬ್ರಹ್ಮಮೇಧ ಸಂಸ್ಕಾರದಿಂದ ಉತ್ತರಕ್ರಿಯೆಯನ್ನು ಮಾಡು ಎಂದು ಅಶರೀರವಾಕ್ಯ ಹೇಳಿತು. ಆ ಮಾತನ್ನು ಕೇಳಿ ಸಂದೇಹವಿಲ್ಲದೆ ಧರ್ಮರಾಜನು ಬ್ರಹ್ಮಮೇಧ ಸಂಸ್ಕಾರದಿಂದ ವಿದುರನಿಗೆ ಉತ್ತರಕ್ರಿಯೆಯನ್ನು ನಡೆಸಿದನು. ಜಾತಿಯಲ್ಲಿ ಉತ್ಕೃಷ್ಟಾಪಕೃಷ್ಟಗಳನ್ನು ಯೋಚಿಸಕೂಡದು, ಜ್ಞಾನಕ್ಕೇ ಪ್ರಾಧಾನ್ಯವು.

ಸೂತ್ರಂ - ಋಷಿಹಳ್ ಧರ್ಮವ್ಯಾಧನ್ ವಾಶಲಿಲೇ ತುವಂಡು ಧರ್ಮಸಂದೇಹಂಗಳೈ ಶವಿಸ್ತರಿತ್ತು ಕೊಂಡಾರ್ಹಳ್ ॥ ೩೧೧ ॥

ಶ್ಲೋಕಃ – ❋ ತಪೋಧನಾ ವೇದವಿದಾಂ ವರಾಶ್ಚ
ಧರ್ಮಾತ್ಮಕ ವ್ಯಾಧ ಗೃಹಪ್ರದೇಶೇ ।
ನಿರೀಕ್ಷಮಾಣಾಸ್ಸಮಯಂತ್ವಶಾವ್ಯ –
ನ್ಸ್ವಧರ್ಮಸಂದೇಹಮಹೋ ತದುಕ್ತ್ಯಾ ॥ ೩೦೯ ॥

ತಾತ್ಪರ್ಯ – ಸಾಂಗ ವೇದಾಧ್ಯಯನ ಮಾಡಿರುವ ಬ್ರಾಹ್ಮಣ ಶ್ರೇಷ್ಠರಾದ ಮಹರ್ಷಿಗಳೂ ಕೂಡ ಕಟುಕನಾದ ಧರ್ಮವ್ಯಾಧನ ಮನೇ ಬಾಗಿಲಲ್ಲಿ ಕಾದಿದ್ದು ಆ ಧರ್ಮವ್ಯಾಧನು ಕುರುಡರಾದ ತನ್ನ ತಂದೆ ತಾಯಿಗಳಿಗೆ

ಶುಶ್ರೂಷೆ ಮಾಡಿ ಮುಗಿಸಿ ಹೊರಗಡೆ ಬಂದ ಮೇಲೆ ತಮಗುಂಟಾದ ಧರ್ಮ ಸಂದೇಹಗಳನ್ನು ಕೇಳಿ ಅವನಿಂದ ಪರಿಹಾರ ಮಾಡಿಕೊಂಡರು. ಆದಕಾರಣ ಜಾತಿಯಲ್ಲಿ ಉತ್ಕೃಷ್ಟಾಪಕೃಷ್ಟಗಳನ್ನು ನೋಡ ಕೂಡದು. ಜ್ಞಾನಕ್ಕೇ ಪ್ರಾಧಾನ್ಯವು.

ಸೂತ್ರಂ - ಕೃಷ್ಣನ್ ಭೀಷ್ಮದ್ರೋಣಾದಿ ಗೃಹಂಗಳ್ವಿಟ್ಟು ಶ್ರೀವಿದುರರ್ ತಿರುಮಾಳಿಹೈಯಿಲೇ ಆವುಡುಶಿಯ್ದಾನ್ ॥ ೨೩೨ ॥

ಶ್ಲೋಕಃ – ✱ ಭೀಷ್ಮದ್ರೋಣಗೃಹಾನ್ವಿಹಾಯ ಭಗವಾನ್ಶ್ರೀವಾಸುದೇವಸ್ತದಾ
ಶೂದ್ರಸ್ಯಾವಸಥಂ ಸಮೇತ್ಯ ವಿದುರಸ್ಯಾನಮ್ರಮೌಳೇಸ್ತ್ವಯಂ ।
ಶುದ್ಧಸ್ವಾಂತತಯಾ ವಿಸೃಷ್ಟಮಮತಾಬುದ್ಧೇಸ್ಸದನ್ನಂ ಮುದಾ
ಭುಕ್ತ್ವಾ ತೃಪ್ತಿಮಗಾದ್ವಿಮೃಷ್ಟಮಮುನಾ ನೈವಾಸ್ಯ ನೀಚಂ ಕುಲಂ ॥ ॥ ೩೧೮ ॥

ತಾತ್ಪರ್ಯ – ಶ್ರೀಕೃಷ್ಣನು ಸಂಧಿಗಾಗಿ ಹಸ್ತಿನಾವತಿಗೆ ಹೋಗಿರುವಾಗ ಭೀಷ್ಮ ದ್ರೋಣ ಇವರೆಲ್ಲರೂ ಊಟಕ್ಕೆ ಕರೆಯಲು ಅಹಂಕಾರಿಗಳಾದ ಅವರುಗಳ ಮನೆಗಳಿಗೆ ಹೋಗದೆ ಅಹಂಕಾರವನ್ನು ದೂರ ಮಾಡಿರುವ ಶುದ್ಧವಾದ ಮನಸ್ಸುಳ್ಳ ಜ್ಞಾನಿಯಾದ ವಿದುರನ ಮನೆಗೆ ಅವನು ಶೂದ್ರನೆಂದು ಯೋಚಿಸದೇ ಕರೆಯದೇ ಇದ್ದರೂ ತಾನಾಗಿಯೇ ಹೋಗಿ ಅವನ ಕೈಯಿಂದ ಬಡಿಸಲ್ಪಟ್ಟ ಅನ್ನವನ್ನು ಊಟ ಮಾಡಿ ತೃಪ್ತನಾದನು. ಆದ್ದರಿಂದ ಜಾತಿಯಲ್ಲಿ ಉತ್ಕೃಷ್ಟಾಪಕೃಷ್ಟಗಳನ್ನು ನೋಡಕೂಡದು. ಜ್ಞಾನಕ್ಕೇ ಪ್ರಾಧಾನ್ಯವು.

ಸೂತ್ರಂ - ವೆರುಮಾಳ್ ಶ್ರೀ ಶಬರಿಕ್ಕೆಯಾಲೇ ಅವುಡುಶಿಯ್ದರುಳಿನಾರ್ ॥ ೨೩೩ ॥

ಶ್ಲೋಕಃ – ✱ ಆಚಾರ್ಯಶುಶ್ರೂಷಣ ತತ್ಪರಾಯಾಃ
ಹಸ್ತಾಚ್ಛಬರ್ಯಾ ವಿಘಸೀಕೃತಾನಿ ।
ಆದಾಯ ಪಕ್ವಾನಿ ಫಲಾನಿ ಭುಕ್ತ್ವಾ
ಶ್ರೀರಾಮಚಂದ್ರಸ್ಸುಹಿತೋ ಬಭೂವ ॥ ॥ ೩೧೯ ॥

ತಾತ್ಪರ್ಯ – ಶ್ರೀರಾಮಚಂದ್ರನು ಯಾವಾಗ ನನ್ನ ಆಶ್ರಮಕ್ಕೆ ದಯಮಾಡಿಸುವನೋ ಎಂದು ಎದುರು ನೋಡುತ್ತಾ ಅವನಿಗೋಸ್ಕರ ಒಳ್ಳೆ ಪಕ್ವವಾದ ಹಣ್ಣುಗಳನ್ನು ಆರಿಸಿ ತಂದು ಅವು ರಾಮನಿಗೆ ಭೋಗ್ಯವಾಗಿದೆಯೋ ಇಲ್ಲವೋ ಎಂದು ಪರೀಕ್ಷಿಸುವುದಕ್ಕಾಗಿ ಅವುಗಳನ್ನು ಸ್ವಲ್ಪ ಕಚ್ಚಿ ತಿಂದೂ ಇಟ್ಟಿದ್ದನ್ನು ಶ್ರೀರಾಮನು ಅಲ್ಲಿಗೆ ದಯಮಾಡಿಸಿ ಎಡಗೈ ಬಲಗೈ ತಿಳಿಯದ ಆ ಶಬರಿಯ ಕೈಯಿಂದ ತೆಗೆದು ತಿಂದನಲ್ಲವೇ ? ಆದ್ದರಿಂದ ಜ್ಞಾನಕ್ಕೇ ಪ್ರಾಧಾನ್ಯವು.

ಸೂತ್ರಂ - ಮಾರನೇರಿ ನಂಬಿ ವಿಷಯವಾಹ ಪೆರಿಯನಂಬಿ ಉಡೈಯವಕ್ಕರುಳಿಚ್ಚೆಯ್ದವಾತ್ತ್ಸಲ್ಯಮೈಸ್ಮರಿಪ್ಪದು ॥ ೨೩೪ ॥

ಶೋಕಃ – ✱ ಮಾರನೇರಿ ಪ್ರಪೂರ್ಣಸ್ಯ ಕೃತ್ವಾ ಕರ್ಮೋರ್ಧ್ವದೈಹಿಕಂ ।
ಲಕ್ಷ್ಮಣೇನ ಮಹಾಪೂರ್ಣಃ ಪೃಷ್ಟಃ ಕಿಂ ಕೃತವಾನಿತಿ ॥ ॥ ೩೨೨ ॥

ಯಾವುನಾರ್ಕೃಪಾಪಾತ್ರಮವರಃ ಕಿಂ ಜಟಾಯುಷಃ ।
ಆಚಾರ್ಯವಚನಾದೇವಂ ಕೃತವಾನಿತ್ಯುವಾಚ ಸಃ ॥ ॥ ೩೨೩ ॥

ಶ್ಲೋಕಃ – ❋ ಸ್ಮೃತ್ವಾ ವಾರ್ತಾಮಿಮಾಂ ಧೀಮಾನ್ಜಾತ್ಯಾದಿಷ್ವಪಕೃಷ್ಟತಾಂ ।
ಅವಿಚಿಂತ್ಯೈವ ಶೂದ್ರಾದೀನ್ವಿಷ್ಣುಭಕ್ತಾನ್ಪ್ರಪೂಜಯೇತ್ ॥ ॥ ೩೧೪ ॥

ತಾತ್ಪರ್ಯ – ಈ ರೀತಿ ಮಹಾಭಾರತ ಶ್ರೀ ರಾಮಾಯಣಗಳಲ್ಲಿ ಶಿಷ್ಟಾಚಾರದಿಂದ ಭಾಗವತ ವೈಭವವನ್ನು ಪ್ರಕಾಶ ಪಡಿಸಿದರು. ಇನ್ನೂ ಈ ಅರ್ಥವಿಷಯಕವಾದ ಪೂರ್ವಾಚಾರ್ಯರ ವಚನವನ್ನೂ ಸ್ಮರಿಸುತ್ತಾರೆ. ಅಭಿಮಾನ ಹೇತುವಾದ ಜನ್ಮ ವೃತ್ತಾದಿಗಳನ್ನು ಬಿಟ್ಟು ಆಳವಂದಾರ್ರು ಶ್ರೀಪಾದವಳ್ಳ ಆಧ್ಯಾತ್ಮಜ್ಞಾನಪರಿಪೂರ್ಣರಾದ ಮಾರನೇರಿನಂಬಿಯ ಅಂತಿಮದಶೆಯಲ್ಲಿ ಅಭಿಮಾನಿಸಿದ ಅವರ ದೇಹವನ್ನು ಪ್ರಕೃತಿ ಸಂಬಂಧದಿಂದ ಉಂಟಾದ ಬಂಧುಗಳು ಮುಟ್ಟಿದಂತೆ ಮಾಡಬೇಕೆಂದು ಯೋಚಿಸಿ ಪೆರಿಯನಂಬಿಯನ್ನು ನೋಡಿ ಪುರೋಡಾಶವನ್ನು ನಾಯಿಗೆ ಕೊಡಬೇಡಿ ಎಂದು ಹೇಳಿ ಅವರೂ ಪರಮಪದಕ್ಕೆ ತೆರಳಿದರು. ಪೆರಿಯನಂಬಿಯು ಅದೇ ರೀತಿ ಮಾರನೇರಿನಂಬಿಗೆ ಉತ್ತರಕ್ರಿಯೆಯನ್ನು ಮಾಡಿದರು. ಈ ವಿಷಯ ರಾಮಾನುಜಾಚಾರ್ಯರಿಗೆ ತಿಳಿಯುತ್ತಲು ರಾಮಾನುಜಾಚಾರ್ಯರು ಪೆರಿಯನಂಬಿ ಹತ್ತಿರ ಬಂದು "ಆಚಾರ್ಯರೇ ತಾವು ಹಿಂದಿನಿಂದ ಬಂದಿರುವ ಮರ್ಯಾದೆಯನ್ನು ಕೆಡಿಸಲು ಈ ಕೆಲಸ ಮಾಡಿದಿರೇನು ?" ಎಂದು ಕೇಳುತ್ತಲು ಪೆರಿಯನಂಬಿಯು "ನಾನೇನು ಭಗವಂತನಿಗಿಂತಲೂ ಉತ್ಕೃಷ್ಟನೇ ಈ ಮಾರನೇರಿನಂಬಿಯು ಜಟಾಯುವಿಗಿಂತಲೂ ಅಪಕೃಷ್ಟನೇ 'ಪಯಲುಂಶುಡರೊಳಿ ನೆಡುಮಾಲ್ಕಡಿಮೈ' ಈ ಉಕ್ತಿಗಳು ಸಮುದ್ರಘೋಷದಂತೆಯೋ ಆಳ್ವಾರ್ರ ಮಾತುಗಳನ್ನು ನಡೆಸಬೇಕಾದ್ದು ನಮ್ಮ ಕರ್ತವ್ಯವಲ್ಲವೇ ?" ಎಂದು ಹೇಳಿದರು. ಆದ್ದರಿಂದ ಜ್ಞಾನಕ್ಕೇ ಪ್ರಾಧಾನ್ಯವು.

ಸೂತ್ರಂ - ಪ್ರಾದುರ್ಭಾವೈಃ ಇತ್ಯಾದಿ ॥ ೨೩೫ ॥

ಶ್ಲೋಕಃ – ❋ ಪ್ರಾದುರ್ಭಾವೈಸ್ಸುರನರಸಮೋ ದೇವದೇವಸ್ತಥೈವಾ
ಜಾತ್ಯಾವೃತ್ತೈರಪಿ ಚ ಗುಣತಸ್ತಾದೃಶೋ ನಾತ್ರಗರ್ಹ್ಯಾ ।
ಕಿಂ ತು ಶ್ರೀಮದ್ಭುವನಭವನತ್ರಾಣತೋಽನ್ಯೇಷು ವಿದ್ಯಾ
ವೃತ್ತಪ್ರಾಯೋ ಭವತಿ ವಿಧವಾಕಲ್ಪಕಲ್ಪಃ ಪ್ರಕರ್ಷಃ ॥ ॥ ೩೧೫ ॥

ತಾತ್ಪರ್ಯ – ಭಗವಂತನು ಸುರನರತಿರ್ಯಕ್ ಜನ್ಮಗಳನ್ನು ಎತ್ತಿ ಪ್ರಪಂಚದ ರಕ್ಷಣೆಯನ್ನು ಯಾವ ರೀತಿ ಮಾಡುವನೋ ಅದೇ ರೀತಿ ಆ ಭಗವಂತನ ಭಕ್ತರುಗಳು ಕೂಡಾ ಲೋಕೋಜ್ಜೀವನಕ್ಕಾಗಿ ನಾನಾ ಜನ್ಮಗಳನ್ನೆತ್ತುವರು. ಭಗವದ್ಭಕ್ತರಲ್ಲದೇ ಇರುವವರ ಜನ್ಮದ ಉತ್ಕೃಷ್ಟತೆಯೂ, ನಡತೆಯ ಉತ್ಕೃಷ್ಟತೆಯೂ ವಿದ್ಯೆಯ ಉತ್ಕೃಷ್ಟತೆಯೂ ಕೂಡ ವಿಧವೆಯರಿಗೆ ಅಲಂಕಾರ ಮಾಡಿದಂತೆ ಆಗುವುದು.

**ಸೂತ್ರಂ - ಭಾಗವತ ನನ್ನಿಕ್ಕೇ ವೇದಾರ್ಥಜ್ಞಾನಾದಿಹಳ್ಳಿಯುಡ್ಯೆಯವನ್
ಕುಂಕುಮುಂಶುಮುಂದಕಳುದ್ಯೆಯೋಪಾದಿ ಎನ್ನು ಶೊಲ್ಲಾನಿನ್ನದಿರೇ ॥ ೩೩೬ ॥**

ಶ್ಲೋಕಃ – ❋ ವೇದಾರ್ಥಜ್ಞಾನವಾನ್ವಿಪ್ರೋ ಯದಿ ಭಾಗವತೋ ನ ಹಿ ।
ಬಾಹ್ಲೀಕ ಭಾರವಾಹೀವ ಗರ್ದಭೋ ಭವತಿ ಧ್ರುವಂ ॥ ॥ ೩೧೬ ॥

ತಾತ್ಪರ್ಯ – ಭಗವದ್ಭಕ್ತಿಯಿಲ್ಲದೆ ವೇದಾರ್ಥಜ್ಞಾನವುಳ್ಳ ಬ್ರಾಹ್ಮಣನು ಕೇಸರಿಯ ಮೂಟೆ ಹೊತ್ತ ಕತ್ತೆಯಂತೆಯೇ ಸರಿ. ಕತ್ತೆಗೆ ಕೇಸರಿಯ ಪರಿಮಳಾನುಭವವು ಯಾವ ರೀತಿ ಇಲ್ಲವೋ ಅದೇ ರೀತಿ ವೇದಾರ್ಥಗಳ

ಭಾರವನ್ನು ಹೊತ್ತಿರುವ ವಿಪ್ರನೂ ಕೂಡ ಆ ವೇದಾರ್ಥಗಳ ಸಾರಭೂತವಾದ ಭಗವದ್ಭಕ್ತಿಯನ್ನು ಅರಿಯನು.

ಸೂತ್ರಂ - **രാജാവാന കുലശേഖര പ്പെരുമാള് തിരുക്
സ്ഥാവരജന്മങ്ങളൈ യാശൈപ്പട്ടാര്** ॥ ೨೩೭ ॥

ಶ್ಲೋಕಃ – ✱ രാജാ ശ്രീകുലശേഖരോഽപി ഭഗവത്സംബംധവാംഛാകുലഃ
തിർക്കാഷ്ഠാവരജന്മശൈഷഗിരിരാട്സാനുപ്രദേശേഷ്വപി ।
വാംഛംശ്ചംപകവൃക്ഷതാം സരസി ച സ്രീതോദകേ മീനതാം
ഭക്ത്യാ പ്രാർഥയതാംബുജാക്ഷ സവിധേ നാനാപ്രകാരൈസ്ത്വയൈഃ ॥ ॥ ೩೧೭ ॥

ತಾತ್ಪರ್ಯ – ರಾಜರಾಗಿದ್ದಾಗ್ಯೂ ಕೂಡ ಕುಲಶೇಖರರು "വേംഗടത്തുക്കോനേരിവാഴുംകുരുഹായ്പ്പിരപ്പേനേ" "മീനായ്പിറക്കും വിതിയുൾയേനാവേനേ""ശണ്പഹമായ്നിർകുംതിരുമൾയൈനാവേനേ" ಎಂಬುದಾಗಿ ತಿರುಕ್ಕಾಷ್ಠವರ ಜನ್ಮಗಳನ್ನು ಆಶೆಯಿಂದ ಕೇಳಿಕೊಂಡರು.

ಸೂತ್ರಂ - **ബ്രാഹ്മണോത്തമരാന പെരിയാള്വാരും തിരുമകളാരും
ഗോപജന്മത്തൈ യാസ്ഥാനം പണ്ണിനാർഹള്** ॥ ೨೩೮ ॥

ಶ್ಲೋಕಃ – ✱ വേദാംതജ്ഞോ ദ്വിജകുലതിലകോ വിഷ്ണുചിത്തോ മഹാത്മാ
തത്പുത്രീ സാ മുരരിപുവിഹൃതിസ്ഥാനഭൂതേ വ്രജേച ।
ആസ്ഥായാത്മന്വരജനിമതാം ജന്മഗോപാലകാനാം
കൃഷ്ണക്രീഡാം വിവിധരസഭവാം താവുഭാവന്വഭൂതാം ॥ ॥ ೩೧೮ ॥

ತಾತ್ಪರ್ಯ – ವೇದಾಂತವನ್ನು ಚೆನ್ನಾಗಿ ಅರಿತು ಶ್ರೇಷ್ಠವಾದ ಬ್ರಾಹ್ಮಣವಂಶದಲ್ಲಿ ಜನಿಸಿದ ಪೆರಿಯಾಳ್ವಾರ್ರೂ ಅವರ ಮಗಳಾದ ಜ್ಞಾನಿಗಳಲ್ಲಿ ಅಗ್ರೇಸರಳಾದ ಗೋದಾದೇವಿಯೂ ಇವರಿಬ್ಬರೂ ಭಗವಂತನಾದ ಶ್ರೀಕೃಷ್ಣನು ವಿಹರಿಸಿದ ಗೋಕುಲದಲ್ಲಿರುವ ಗೋಪಾಲರ ಜನ್ಮವನ್ನು ತಮ್ಮಲ್ಲಿ ಆಶೆಯಿಂದ ಆರೋಪ ಮಾಡಿಕೊಂಡು ಶ್ರೀಕೃಷ್ಣನ ಲೀಲೆಗಳನ್ನು ಅನುಭವಿಸಲಿಲ್ಲವೇ ? ಆದ್ದರಿಂದ ಜನ್ಮದ ಉತ್ಕೃಷ್ಟಾಪಕೃಷ್ಟಗಳನ್ನು ನೋಡಕೂಡದು.

ಸೂತ್ರಂ - **കംദല് കളിംദാല് സർവക്കും നാരീനാമുത്തമ്യൈയുൾയൈ
അവസ്ഥൈ വരക്കടവതായിരുക്കും** ॥ ೨೩೯ ॥

ಶ್ಲೋಕಃ – ✱ അനാദ്യവിദ്യാപിഹിതസ്വരൂപാ
ദ്യദാത്മനോനിസ്സരതിഹ്യവിദ്യാ ।
നാരുത്തമായാഃഭവതിഹ്യവസ്ഥാ
ലക്ഷ്യാ കസ്യാപി ച താദൃഗേവ ॥ ॥ ೩೧೯ ॥

ತಾತ್ಪರ್ಯ – ಆತ್ಮಸ್ವರೂಪವನ್ನು ಇದ್ದಂತೆಯೇ ಪ್ರಕಾಶಪಡಿಸದೇ ಇರುವ ಅನಾದಿಕಾಲದಿಂದಲೂ ಮರೆಸಿರುವ ಆರೋಪಿತವಾದ ಅವಿದ್ಯಾ ದೋಷವು ಭಗವದನುಗ್ರಹದಿಂದ ವಾಸನೆಯೊಡನೇ ಹೋದ ಪಕ್ಷದಲ್ಲಿ

ಎಲ್ಲಾ ಆತ್ಮಗಳಿಗೂ ಸ್ವೀಯ ಎಲ್ಲಾ ಲಕ್ಷಣಗಳಿಂದ ಕೂಡಿರುವ ಸ್ವೀಯರಲ್ಲೆಲ್ಲಾ ಉತ್ತಮೆಯಾದ ಮಹಾಲಕ್ಷ್ಮಿಯಂತೆ ತನಗೆ ತಾನೇ ಉಂಟಾಗುವುದು ಸ್ವಾನವು.

ಸೂತ್ರಂ - ಆರು ಪ್ರಕಾರತ್ತಾಲೇ ಪರಿಶುದ್ಧಾತ್ಮಸ್ವರೂಪತ್ತುಕ್ಕು ತತ್ವಾಮ್ಯಮುಂಡಾಯಿರುಕ್ಕುಂ ॥ ೨೪೦ ॥

ಶ್ಲೋಕಃ - ✱ ಅನನ್ಯಾರ್ಹಸುಶೇಷತ್ವಮನನ್ಯಗತಿತಾ ತಥಾ ।
ಅನನ್ಯಭೋಗ್ಯತಾ ಚೈವ ಸಂಶ್ಲೇಷೇ ಜೀವಧಾರಣಂ ॥ ॥ ೩೨೦ ॥

ವಿಶ್ಲೇಷೇ ತದಭಾವಸ್ತದೇಕನಿರ್ವಾಹ್ಯತಾ ತಥಾ ।
ತದೇವಂ ಷಟ್ಪ್ರಕಾರೈಸ್ತು ಸುಶುದ್ಧಾತ್ಮಸ್ವರೂಪಿಣಾಂ ॥ ॥ ೩೨೧ ॥

ಜೀವಾತ್ಮನಾಂ ಭವೇತ್ಸತ್ಯಂ ಲಕ್ಷ್ಮೀಸಾಮ್ಯಂ ನ ಸಂಶಯಃ ।
ಷಟ್ಪ್ರಕಾರೈಸ್ತು ಶುದ್ಧತ್ವಂ ಸಂಪಾದ್ಯಂ ಚೇತನೈಸ್ತತಃ ॥ ॥ ೩೨೨ ॥

ತಾತ್ಪರ್ಯ - ಆ ಆರು ಪ್ರಕಾರಗಳು ಯಾವುವೆಂದರೆ ಅನನ್ಯಾರ್ಹಶೇಷತ್ವವೂ, ಅನನ್ಯಶರಣತ್ವವೂ, ಅನನ್ಯಭೋಗ್ಯತ್ವವೂ, ಸಶ್ಲೇಷದಲ್ಲಿ ಜೀವಿಸಿರುವಿಕೆಯೂ, ವಿಶ್ಲೇಷದಲ್ಲಿ ಜೀವಿಸದೇ ಇರುವಿಕೆಯೂ, ತದೇಕ ನಿರ್ವಾಹ್ಯತ್ವವೂ, ಈ ಆರು ಪ್ರಕಾರಗಳಿದ್ದ ಪಕ್ಷದಲ್ಲಿ ಲಕ್ಷ್ಮೀಸಾಮ್ಯವುಂಟಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಸೂತ್ರಂ - ದೃಷ್ಟತ್ತಿಲುತ್ಕರ್ಷಮುಹಂಕಾರತ್ತಾಲೇ ಅದೃಷ್ಟತ್ತಿಲುತ್ಕರ್ಷಮುಹಂಕಾರರಾಹಿತ್ಯತ್ತಾಲೇ ॥ ೨೪೧ ॥

ಶ್ಲೋಕಃ - ✱ ಜಗತ್ಯಸ್ಮಿನ್ನಹಂಕಾರಾದುತ್ಕರ್ಷೋ ಭವತಿ ಧ್ರುವಂ ।
ಅದೃಷ್ಟೇ ತದಭಾವಾತ್ತು ಸಮುತ್ಕರ್ಷೋ ಭವೇನ್ನೃಣಾಂ ॥ ॥ ೩೨೩ ॥

ತಾತ್ಪರ್ಯ - ಉತ್ಕೃಷ್ಟವಾದ ಜನ್ಮವನ್ನು ಅಪೇಕ್ಷಿಸದೆ ನಿಕೃಷ್ಟವಾದ ಜನ್ಮವನ್ನು ಅಪೇಕ್ಷಿಸಲು ಕಾರಣವೇನೆಂದರೆ ಸತ್ಕುಲಪ್ರಸೂತತೆಯೂ, ಐಶ್ವರ್ಯವೂ ಈ ಜಗತ್ತಿನಲ್ಲಿ ಅಹಂಕಾರವನ್ನುಂಟುಮಾಡಿ ವಿಶ್ವಾಮಿತ್ರನಂತೆ ತನಗಿಂತಲೂ ಮೇಲಾಗಬೇಕೆಂಬ ಉತ್ಕರ್ಷವನ್ನು ಆಶಿಪಡುವನು. ಶೇಷತ್ವಾದಿಗಳೂ, ಕೈಂಕರ್ಯವೂ, ಅದೃಷ್ಟ ಪುರುಷಾರ್ಥವಾದ್ದರಿಂದ ಅಹಂಕಾರವಿಲ್ಲದೇ ಇದ್ದ ಪಕ್ಷದಲ್ಲಿ ನೈಚ್ಯದಿಂದ ಉತ್ಕರ್ಷವು ಉಂಟಾಗುವುದು.

ಸೂತ್ರಂ - ಬ್ರಹ್ಮಾವಾಯಿಳಂದುಂ ಪೋದಲ್ ಇಡೈಚ್ಚಿಯಾಯ್ ಪೆತ್ತು ವಿಡುತಲ್ ಶೆಯ್ಯುಂ ಪಡಿಯಾಯಿರುಕ್ಕುಂ ॥ ೨೪೨ ॥

ಶ್ಲೋಕಃ - ✱ ಅಹಂಕಾರಮಿಶ್ರಾಬ್ಜಯೋನೇಸ್ತದೀಯಾ
ಧಿಕಾರಾವಸಾನೇಪವರ್ಗಾಭಿಯಾನಂ ।
ಅಹೋ ಚಿಂತಯಂತ್ಯಾಸ್ತದೈವಾಪವರ್ಗ
ಪ್ರಯಾಣಂ ತ್ವಹಂ ಕೃತ್ಯಭಾವಾನ್ಮಭೂವ ॥ ॥ ೩೨೪ ॥

ಇತಿ ಸದ್ಯೋಪಾಯನಿಷ್ಕೃಷ್ಟಭಾವನಿರೂಪಣಂ ಸಂಪೂರ್ಣಂ

ತಾತ್ಪರ್ಯ – ಈ ಅಹಂಕಾರ ತದಭಾವಗಳು ನಾಶಕ್ಕೂ, ಉಜ್ಜೀವನಕ್ಕೂ ಕಾರಣವಾಗಿರುವುವು ಎಂದು ಹೇಳುವರು. ದೃಷ್ಟೋತ್ಕರ್ಷಕ್ಕೆ ಯೋಗ್ಯವಾದ ಅಹಂಕಾರದೊಡನೇ ಕೂಡಿರುವ ಚತುರ್ಮುಖನಿಗೆ "ದ್ವಿಪರಾರ್ಧಾವಸಾನೇ ವಾಂ ಪ್ರಾಪ್ತುಮರ್ಹಸಿ ಪದ್ಮಜ" ಎಂದು ಭಗವಂತನು ಹೇಳಿರುವಂತೆ ಅಧಿಕಾರ ಕಳೆದ ಮೇಲೆ ಭಗವತ್ಪ್ರಾಪ್ತಿಯುಂಟಾಗುವುದು. ಅಹಂಕಾರಕ್ಕೆ ಕಾರಣಗಳು ಯಾವುದೂ ಇಲ್ಲದೇ ಇರುವುದರಿಂದ ಎಡಗೈ ಬಲಗೈ ತಿಳಿಯದೇ ಇರುವ ಚಿಂತಯಂತಿಗೆ "ಮುಕ್ತಿಂಗತಾನ್ಯಾ ಗೋಪಕನ್ಯಕಾ" ಎಂಬಂತೆ ಆಕ್ಷಣವೇ ಭಗವತ್ಪ್ರಾಪ್ತಿಯುಂಟಾಯಿತು. ಆದ್ದರಿಂದಲೇ ಅಹಂಕಾರಕ್ಕೆ ಕಾರಣವಾದ ಜನ್ಮವನ್ನು ಅನಾದರಿಸಿ ಶ್ರೀ ಕುಲಶೇಖರರು ಅಹಂಕಾರವಿಲ್ಲದೇ ಇರುವ ಜನ್ಮವನ್ನು ಅಪೇಕ್ಷಿಸಿದರು.

ಇತಿ ಸಿದ್ಧೋಪಾಯನಿಷ್ಠಪ್ರಭಾವನಿರೂಪಣಂ ಸಂಪೂರ್ಣಂ

ಅಥಪ್ರಪನ್ನದಿನಚರ್ಯಾ ನಿರೂಪಣಂ

ಸೂತ್ರಂ - **ಇಪ್ಪಡಿ ಸರ್ವಪ್ರಕಾರತ್ತಾಲುಂ ನಾಶ ಹೇತುವಾನ ಅಹಂಕಾರತ್ತುಕ್ಕುಂ ಅತಿನುಡೈಯ ಕಾರ್ಯಮಾನ ವಿಷಯ ಪ್ರಾವಣ್ಯತ್ತುಕ್ಕುಂ ವಿಳೈನಿಲಂ ತಾನಾಹೈಯಾಲೇ ತನ್ನೈ ಶತ್ರುವೈಕ್ಕಂಡಾಲ್ ಶತ್ರುವೈಕ್ಕಂಡಾಪ್ಪೋಲೇಯುಂ** ॥ ೨೪೩ ॥

ದ್ವಿತೀಯಪ್ರಕರಣಂ

ಶ್ಲೋಕಃ – ❋ ಏವಂ ಸರ್ವಪ್ರಕಾರೇಣ ನಾಶಹೇತುರಹಂಕೃತಿಃ ।
ತಸ್ಯಾಃ ಕಾರ್ಯಂ ತು ವಿಷಯಪ್ರಾವಣ್ಯಂ ಚ ತದುದ್ಭವೇ ॥ ೩೨೫ ॥

ಕಾರಣಂ ಸ್ವಯಮಿತ್ಯೇವಂ ವಿಚಿಂತ್ಯಾತ್ಮನಿ ಸರ್ವದಾ ।
ಆತ್ಮಾನಂ ಶತ್ರುವತ್ಪಶ್ಯೇತ್ತತ್ಪೋಷಣರತಾನಪಿ ॥ ೩೨೬ ॥

ತಾತ್ಪರ್ಯ – ಈ ರೀತಿ ಸರ್ವಪ್ರಕಾರದಿಂದಲೂ ನಾಶಕ್ಕೆ ಕಾರಣವಾದ ಅಹಂಕಾರಕ್ಕೂ ಅದರ ಕಾರ್ಯವಾದ ವಿಷಯಂಗಳಲ್ಲಿ ಆಶೆಯುಂಟಾಗುವುದಕ್ಕೂ ಕಾರಣನಾದ್ದರಿಂದ ತನ್ನನ್ನು ಶತ್ರುವಿನಂತೆ ಕಾಣಬೇಕು.

ಸೂತ್ರಂ - **ಅವತ್ತುಕ್ಕು ವರ್ಧಕರಾನ ಸಂಸಾರಿಹಳೈಕ್ಕಂಡಾಲ್ ಸರ್ವತ್ತೈಕ್ಕಂಡಾಪ್ಪೋಲೇಯುಂ ಅವತ್ತುಕ್ಕು ನಿವರ್ತಕರಾನ ಶ್ರೀವೈಷ್ಣವರ್ಹಳೈಕ್ಕಂಡಾಲ್ ಬಂಧುಕ್ಕಳೈಕ್ಕಂಡಾಪ್ಪೋಲೇಯುಂ** ॥ ೨೪೪ ॥

ಶ್ಲೋಕಃ – ❋ ಪಶ್ಯೇತ್ಸಂಸಾರಿಣಃ ಸರ್ವಸದೃಶಾನ್ಕ್ರೂರರೂಪಿಣಃ ।
ತನ್ನಾಶಹೇತೂನ್ಪಶ್ಯೇದ್ವಿವೈಷ್ಣವಾನ್ಬಂಧುವತ್ಸದಾ ॥ ೩೨೭ ॥

ತಾತ್ಪರ್ಯ – ಅಹಂಕಾರ ಮತ್ತು ಅದರ ಕಾರ್ಯವಾದ ವಿಷಯಪ್ರಾವಣ್ಯ ಇವುಗಳಿಗೆ ವರ್ಧಕರಾದ ಸಂಸಾರಿಗಳನ್ನು ಕಂಡರೆ ಹಾವನ್ನು ಕಂಡಂತೆಯೂ ಅದರ ನಾಶಕ್ಕೆ ಕಾರಣರಾದ ಶ್ರೀವೈಷ್ಣವರನ್ನು ಕಂಡರೆ ಬಂಧುಗಳಂತೆಯೂ ಕಾಣಬೇಕು.

ಸೂತ್ರಂ - ಈಶ್ವರನೈಕ್ಕಂಡಾಲ್ ಪಿತಾವೈಕ್ಕಂಡಾಪ್ಪೋಲೇಯುಂ ॥ ೨೪೫ ॥

ಶ್ಲೋಕಃ – ✱ ದತ್ವೇಂದ್ರಿಯಾಣಿ ದೇಹಂ ಚ ಸನ್ಮಾರ್ಗೈಕ ಪ್ರದರ್ಶಿನಂ ।
ಸರ್ವೇಶ್ವರಂ ಪ್ರಪಶ್ಯೇದ್ಧಿ ಪಿತೃತುಲ್ಯಂ ಹಿತೈಷಿಣಂ ॥ ॥ ೩೨೮ ॥

ತಾತ್ಪರ್ಯ – ನಮಗೆ ಕರಣ ಕಳೇಬರಗಳನ್ನು ಕೊಟ್ಟು ಸನ್ಮಾರ್ಗವನ್ನು ತೋರಿಸಿಕೊಡುವ ಭಗವಂತನನ್ನು ಕಂಡರೆ ಹಿತವನ್ನು ಕೋರುವ ತಂದೆಯಂತೆ ಕಾಣಬೇಕು.

ಸೂತ್ರಂ - ಆಚಾರ್ಯನೈಕ್ಕಂಡಾಲ್ ಪಶಿಯನ್ ಶೋತ್ತ್ರೈಕ್ಕಂಡಾಪ್ಪೋಲೇಯುಂ ॥ ೨೪೬ ॥

ಶ್ಲೋಕಃ – ✱ ಆಚಾರ್ಯಂತು ಪ್ರಪಶ್ಯೇದ್ಧಿ ಕ್ಷುಧಾ ಸಂಪೀಡಿತೋ ಜನಃ ।
ಸ್ವಭೋಗ್ಯಂ ಧಾರಕಂ ಚೈವ ಯಥಾನ್ನಂ ಸ್ವಾದು ಸಾದರಂ ॥ ॥ ೩೨೯ ॥

ತಾತ್ಪರ್ಯ – ತನಗೆ ಜ್ಞಾನೋಪದೇಶ ಮಾಡುವ ಆಚಾರ್ಯನನ್ನು ನೋಡಿದರೆ ಹಸಿವಿನಿಂದ ಬಳಲಿರುವವನು ತನಗೆ ಭೋಗ್ಯವಾಗಿಯೂ, ಧಾರಕವಾಗಿಯೂ ರುಚಿಯಾದ ಅನ್ನವನ್ನು ಕಂಡಂತೆ ಕಾಣಬೇಕು.

ಸೂತ್ರಂ - ಶಿಷ್ಯನೈಕ್ಕಂಡಾಲ್ ಅಭಿಮತವಿಷಯತ್ತೈಕ್ಕಂಡಾಪ್ಪೋಲೇಯುಂ ॥ ೨೪೭ ॥

ಶ್ಲೋಕಃ – ✱ ಸಾಧ್ಯಾಂತರನಿವೃತ್ತ್ಯಾದಿ ಸ್ವಭಾವಂ ಶಿಷ್ಯಮಾದರಾತ್ ।
ಪಶ್ಯೇತ್ತ್ವಾಭಿಮತಾನಂದವಿಷಯಂ ತು ಯಥಾ ಗುರುಃ ॥ ॥ ೩೩೦ ॥

ತಾತ್ಪರ್ಯ – ಆಚಾರ್ಯನು ಸಾಧ್ಯಾಂತರಕ್ಕೆ ಹೋಗದೇ ಇರುವ ಸ್ವಭಾವವುಳ್ಳ ಸಚ್ಛಿಷ್ಯನನ್ನು ಕಂಡರೆ ತನಗೆ ಇಷ್ಟವಾದ ಆನಂದದಾಯಕವಾದ ವಿಷಯವನ್ನು ಕಂಡಂತೆ ಕಾಣಬೇಕು.

ಸೂತ್ರಂ - നിನೈತ್ತು അഹംകಾರಾರ್ಥಕಾವುಂಗಳ್ವುಂನ್ನುಂ ಅನುಕೂಲರ್ಪಕ್ಕಲ್ ಅನಾದರತ್ತೈಯುಂ ಪ್ರತಿಕೂಲರ್ಪಕ್ಕಲ್ ಪ್ರಾವಣ್ಯತ್ತೈಯುಂ ಉಪೇಕ್ಷಿಕ್ಕುಮವರ್ಹಳ್ ಪಕ್ಕಲ್ ಅಪೇಕ್ಷೆಯ್ಯೈಯುಂ ಪಿರಪ್ಪಿಕ್ಕುಂ ಎನ್ನುಂಜೆ ॥ ೨೪೮ ॥

ಶ್ಲೋಕಃ – ✱ ಅಹಂಕಾರೋಽನುಕೂಲೇಷು ವೈಷ್ಣವೇಷ್ವಾದರಂ ವಿನಾ ।
ಸ್ವಾಪೇಕ್ಷಯಾಧಮತ್ವಂವಾ ಸಾಮ್ಯಬುದ್ಧಿಂ ತನೋತಿಹಿ ॥ ॥ ೩೩೧ ॥

ಅರ್ಥಸ್ತು ಪ್ರತಿಕೂಲೇಷು ಪ್ರಾವಣ್ಯಂ ಜನಯೇನ್ನೃಣಾಂ ।
ದ್ರವ್ಯಾಶಯಾ ಸ್ತುತಿಮತಾಂ ಸದಾ ತದನುವರ್ತಿನಾಂ ॥ ॥ ೩೩೨ ॥

ಉಪೇಕ್ಷಯಾ ಪ್ರಣುನ್ನಾನಾಂ ಕಾಮೋ ಭೋಗಪರೀಪ್ಸಯಾ ।
ನಾರೀಷ್ವಪೇಕ್ಷಾಂ ಜನಯೇತ್ಕಾಮುಕಾನಾಂ ಮುಹುರ್ಮುಹುಃ ॥ ॥ ೩೩೩ ॥

ತಾತ್ಪರ್ಯ – ಅಹಂಕಾರವು ತನಗೆ ಅನುಕೂಲರಾಗಿರುವ ಶ್ರೀವೈಷ್ಣವರನ್ನು ಕಂಡರೆ ತನಗಿಂತಲೂ ಅಧಮರು ಅಥವಾ ತಮಗೆ ಸಮಾನರು ಎಂಬ ಬುದ್ಧಿಯನ್ನುಂಟುಮಾಡುವುದು. ಅರ್ಥವೋ ಅಂದರೆ ದ್ರವ್ಯಾಶೆಯಿಂದ

ಧನಿಕರನ್ನು ಸ್ತೋತ್ರ ಮಾಡುತ್ತಾ ಸದಾ ಅವರನ್ನೇ ಅನುಸರಿಸುತ್ತಾ ತನಗೆ ಪ್ರತಿಕೂಲರಾಗಿದ್ದಾಗ್ಯೂ ಕೂಡ ಅವರಲ್ಲಿ ಪ್ರಾವಣ್ಯವನ್ನುಂಟುಮಾಡುವರು ಎಂದು ನೆನೆಸಬೇಕು. ಕಾಮವೋ ಅಂದರೆ ದ್ರವ್ಯ ವಿಲ್ಲದ ಕಾರಣ ಉಪೇಕ್ಷೆಯಿಂದ ತಳ್ಳಿದರೂ ಕೂಡಾ ಕಾಮುಕರಿಗೆ ಭೋಗಾನುಭವದ ಇಚ್ಛೆಯಿಂದ ಸ್ತ್ರೀಯರಲ್ಲಿ ಅಪೇಕ್ಷೆಯು ಪದೇ ಪದೇ ಉಂಟಾಗುವುದು ಎಂದು ನೆನೆಯಬೇಕು. ಆ ವಿಷಯಗಳಲ್ಲಿ ಹೆದರಿಕೆಯುಂಟಾಗಬೇಕು.

ಸೂತ್ರಂ - **ಆತ್ಮಗುಣಂಗಳ್ ನಮ್ಮಾಲುಂ ಪಿರರಾಲುಂ ಪಿರಪ್ಪಿತ್ತಕೊಳ್ಳವೊಣ್ಣಾತು ಸದಾಚಾರ್ಯಪ್ರಸಾದಮುಡಿಯಾಹ ವರುಹಿರ ಭಗವತ್ಪ್ರಸಾದತ್ತಾಲೇ ಪಿರಕ್ಕುಮುತ್ತನೈ ಯೆನ್ನು ತುಣಿಂದು ದೇಹಯಾತ್ರೈಯಿಲುಮ್ಪೇಕ್ಷೆಯುಂ ಆತ್ಮಯಾತ್ರೈಯಿಲಪೇಕ್ಷೆಯುಂ ಪ್ರಾಕೃತ ವಸ್ತುಕ್ಕಳಿಲ್ ಭೋಗ್ಯತಾ ಬುದ್ಧಿ ನಿವೃತ್ತಿಯುಂ ದೇಹ ಧಾರಣಂ ಪರಮಾತ್ಮ ಸಮಾರಾಧನ ಸಮಾಪ್ತಿ ಪ್ರಸಾದಪ್ರತಿಪತ್ತಿಯೆನ್ಗಿರಬುದ್ಧಿ ವಿಶೇಷಮುಂ ತನಕ್ಕೊರು ಕ್ಲೇಶಮುಂಡಾನಾಲ್ ಕರ್ಮಫಲಮೆನ್ಗಾದಲ್ ಕೃಪಾ ಫಲಮೆನ್ಗಾದಲ್ ಪಿರಕ್ಕುಂ ಪ್ರೀತಿಯುಂ ಸ್ವಾನುಷ್ಠಾನತ್ತಿಲ್ ಸಾಧನತ್ವಬುದ್ಧಿನಿವೃತ್ತಿಯುಂ ವಿಲಕ್ಷಣರುಡೈಯ ಜ್ಞಾನಾನುಷ್ಠಾನಂಗಳಿಲ್ ವಾಂಛೈಯುಂ ಉಹಂದರುಳಿನ ನಿಲಂಗಳಿಲ್ ಆದರಾತಿಶಯಮುಂ ಮಂಗಳಾಶಾಸನಮುಂ ಇತರ ವಿಷಯಂಗಳಿಲರುಚಿಯುಂ ಆರ್ತಿಯುಂ ಅನುವರ್ತನನಿಯತಿಯುಂ ಆಹಾರನಿಯತಿಯುಂ ಅನುಕೂಲಸಹವಾಸಮುಂ ಪ್ರತಿಕೂಲಸಹವಾಸ ನಿವೃತ್ತಿಯುಂ ಸದಾಚಾರ್ಯಪ್ರಸಾದತ್ತಾಲೇ ವರ್ಧಿಕ್ಕುಂಪಡಿ ಪಣ್ಣಿಕ್ಕೊಂಡುಪೋರಕ್ಕಡವನ್** ॥ ೨೪೯ ॥

ಶ್ಲೋಕಃ - ❋ ಆಚಾರ್ಯಮುಖಿತಶ್ಶ್ರೀಮದ್ವಿಷ್ಣ್ವನುಗ್ರಹತೋನೃಣಾಂ ।
ಶಮಾದ್ಯಾತ್ಮಗುಣಾಸ್ಸರ್ವೇ ಭವೇಯುರ್ನೈವಯತ್ನತಃ ॥೩೩೪॥

ಸ್ವದೇಹ ರಕ್ಷಣಾರ್ಥಂ ತು ಜಗದ್ವ್ಯಾಪಾರ, ನಿಷ್ಕೃತಾ ।
ತ್ಯಕ್ತೈವ ಧೈರ್ಯತೋಧೀಮಾನ್ದತ್ತೇತತೋಪೇಕ್ಷಯಾ ಸದಾ ॥ ೩೩೫ ॥

ಶೇಷತ್ವ ರೂಪ ದೇಹಾನಾಂ ಧಾರಕಾಯಾಂ ಸದಾತ್ಮನಾಂ ।
ಗುಣಾನುಭವ ಕೈಂಕರ್ಯಪ್ರವೃತ್ತೌ ಚ ತ್ವರಾಧಿಕಾ ॥ ೩೩೬ ॥

ವಸ್ತುಷು ಪ್ರಾಕೃತೇಷೂಚ್ಚಭೋಗ್ಯತಾ ಧಿಷಣಾ ಚ ಯಾ ।
ಆದರೇಚ್ಛೈಕಜನನೀಂ ತಾಂ ತ್ಯಜೇತ್ಪಂಡಿತೋತ್ತಮಃ ॥ ೩೩೭ ॥

ಧಾರಣಂ ತು ಶರೀರಸ್ಯ ಕಥಂ ತರ್ಹೀತಿ ಚೇದಿಹ ।
ವಿಷ್ಣೋರ್ನಿವೇದಿತಾನ್ನಸ್ಯ ಭೋಜನೇನ ಭವೇತ್ಪಲು ॥ ೩೩೮ ॥

ಸಂಪ್ರಾಪ್ತೇ ಬಹುದುಃಖೇಸ್ಮಿ ಕರ್ಮಣಃ ಫಲಮಿತ್ಯಪಿ ।
ಕೃಪಾಫಲಂ ಭಗವತಶ್ಚೇತಿ ಧೀಮಾನ್ವಿಚಿಂತಯೇತ್ ॥ ೩೩೯ ॥

ಸ್ವಾಧಿಕಾರಾನುಗುಣ್ಯೇನ ಪ್ರಪನ್ನೋ ಯತ್ಕರೋತಿ ಚ ।
ಸತ್ಕರ್ಮ ನೈವತತ್ಕುರ್ಯಾತ್ಸಾಧನತ್ವಮನೀಷಯಾ ॥ ॥ ೩೪೦ ॥

ವಿಲಕ್ಷಣಾನಾಂ ಯದ್ಜ್ಞಾನಮನುಷ್ಠಾನಂ ಚ ವರ್ತತೇ ।
ತತ್ರ ಕುರ್ವೀತ ಕಾಂಕ್ಷಾಂ ತು ಭವೇದಸ್ಮಾಕಮಿತ್ಯಯಂ ॥ ॥ ೩೪೧ ॥

ಭೋಗ್ಯತ್ವೇನ ಸ ಭಗವಾನ್ಯೇಷು ವಾಸಂ ತನೋತಿ ಚ ।
ದಿವ್ಯದೇಶೇಷು ತೇಷು ಸ್ಯಾದಾದರಾತಿಶಯೋ ನೃಣಾಂ ॥ ॥ ೩೪೨ ॥

ದಿವ್ಯದೇಶೇಷು ವಸತಾಮರ್ಚ್ಯರೂಪೇಣ ಚಕ್ರಿಣಾಂ ।
ಸೌಂದರ್ಯಾದಿ ಗುಣಾನ್ವೀಕ್ಷ್ಯ ಮಂಗಳಾಶಾಸನಂ ಪಠೇತ್ ॥ ॥ ೩೪೩ ॥

ಭಗವದ್ವ್ಯತಿರಿಕ್ತೇಷು ವಿಷಯೇಷು ಸದಾ ನೃಣಾಂ ।
ದೋಷದರ್ಶನತಃ ಪ್ರಾಯಃ ಪ್ರಾದುರ್ಭೂಯಾಜ್ಜಿಹಾಸುತಾ ॥ ॥ ೩೪೪ ॥

ವಿಷಯೇಷ್ವಿತರೇಷ್ವತ್ರ ಪ್ರಾವಣ್ಯೋತ್ಪತ್ತಿಕಾರಣಂ ।
ದೀಪಂ ವಿಲೋಕ್ಯ ತತ್ಪ್ರಾಪ್ತೌ ವಿಲಂಬಾತ್ಕ್ಲೇಶಮಾಪ್ನುಯಾತ್ ॥ ॥ ೩೪೫ ॥

ವಿಷ್ಣುತದ್ಭಕ್ತವಿಷಯೇ ಯಸ್ಯೈಚ್ಛಾದನುವರ್ತನಂ ।
ತತ್ತು ನೈವಾಚರೇದ್ದೀಮಾನ್ಪ್ರಕೃತೇ ವಿಷಯೇ ಮುಧಾ ॥ ॥ ೩೪೬ ॥

ವೈಷ್ಣವೇತರ ದುಷ್ಟಾನ್ನ ನಿರಾಕರಣತೋ ಬುಧಃ ।
ಅಶ್ನಾತ್ಯಮೃತಮನ್ನಂ ಯೋ ನಿಯತಾಹಾರ ಏವ ಸಃ ॥ ॥ ೩೪೭ ॥

ಜ್ಞಾನಾಭಿವರ್ಧನಂ ನಿತ್ಯಂ ಯಃ ಕರೋತಿ ಪ್ರಸಾದತಃ ।
ತೇನ ಸ್ನೇಹಂ ಸದಾ ಕುರ್ಯಾದಿಹಧೀಮಾನತಂದ್ರಿತಃ ॥ ॥ ೩೪೮ ॥

ಯಸ್ಸಂಸರ್ಗಾನ್ನಿಜಜ್ಞಾನಂ ನಾಶಯತ್ಯಪಥವ್ರಜೇ ।
ಸಹವಾಸಂ ತು ತಸ್ಯಾತ್ರ ನೈವ ಕುರ್ಯಾದ್ವಿಚಕ್ಷಣಃ ॥ ॥ ೩೪೯ ॥

ಏತತ್ಸರ್ವಂ ಸದಾಚಾರ್ಯ ಪ್ರಸಾದೇನ ಭವೇದಿತಿ ।
ಸದಾ ತದನುವರ್ತೀ ಸ್ಯಾತ್ತತ್ಪ್ರಸಾದೋ ಯಥಾ ಭವೇತ್ ॥ ॥ ೩೫೦ ॥

ಇತಿ ಪ್ರಪನ್ನದಿನಚರ್ಯಾ ಪ್ರಕರಣಂ ಸಂಪೂರ್ಣಂ

ಇತಿ ದ್ವಿತೀಯಃ ಪ್ರಕರಣಂ ಸಂಪೂರ್ಣಂ

ತಾತ್ಪರ್ಯ – ಆಚಾರ್ಯಮುಖೇನ ಭಗವಂತನ ಅನುಗ್ರಹದಿಂದ ಶಮದಮಾದ್ಯಾತ್ಮಗುಣಗಳು ಉಂಟಾಗಬೇಕೇ ಹೊರತು ತನ್ನ ಪ್ರಯತ್ನದಿಂದ ಸಂಪಾದಿಸಲು ಸಾಧ್ಯವಾಗಲಾರದು. ತನ್ನ ದೇಹದ ರಕ್ಷಣಕ್ಕಾಗಿ ಲೋಕದ ವ್ಯವಹಾರವನ್ನು ತ್ಯಜಿಸಿ ಧೈರ್ಯಮಾಡಿ ಉಪೇಕ್ಷೆಯಿಂದಿರಬೇಕು. ಶೇಷತ್ವವೇ ಸ್ವರೂಪವಾದ ಆತ್ಮಗಳಿಗೆ ದೇಹಧಾರಕವಾದ ಭಗವದ್ಗುಣಾನುಭವಕೈಂಕರ್ಯಗಳಲ್ಲಿ ಅಧಿಕವಾದ ತ್ವರೆಯಿರಬೇಕು. ಪ್ರಾಕೃತ ವಸ್ತುಗಳಲ್ಲಿ ಭೋಗ್ಯತಾಬುದ್ಧಿಯಿಂದ ಆದರಾತಿಶಯವನ್ನು ತ್ಯಜಿಸಬೇಕು. ಹೀಗಾದ ಪಕ್ಷದಲ್ಲಿ ಶರೀರ ಧಾರಣವು ಹೇಗೆಂದರೆ ಭಗವನ್ನಿವೇದಿತವಾದ ಅನ್ನವನ್ನು ಭುಜಿಸಿ ಶರೀರ

ಧಾರಣವನ್ನು ಮಾಡಿಕೊಳ್ಳಬೇಕು. ಇವನಿಗೆ ಕ್ಲೇಶವುಂಟಾದ ಪಕ್ಷದಲ್ಲಿ ಅದನ್ನು ಕರ್ಮಫಲವನ್ನಾಗಿಯೂ, ಭಗವಂತನ ಕೃಪಾಫಲವನ್ನಾಗಿಯೂ ನೆನೆಸಬೇಕು. ಪ್ರಪನ್ನನು ಮಾಡುವ ಸತ್ಕರ್ಮವನ್ನು ಸಾಧನತ್ವ ಬುದ್ಧಿಯಿಂದ ಮಾಡಕೂಡದು. ವಿಲಕ್ಷಣರಾದವರ ಯಾವ ಜ್ಞಾನವುಂಟೋ, ಯಾವ ಅನುಷ್ಠಾನವುಂಟೋ, ಅವುಗಳು ನಮಗೂ ಉಂಟಾಗಲೆಂದು ಆಶೆಪಡಬೇಕು. ಭಗವಂತನು ಭೋಗ್ಯತೆಯಿಂದ ಯಾವ ಯಾವ ದೇಶಗಳಲ್ಲಿ ವಾಸಮಾಡುತ್ತಾನೋ ಆಯಾಯಾ ದಿವ್ಯದೇಶಗಳಲ್ಲಿ ಆದರಾತಿಶಯವು ಉಂಟಾಗಬೇಕು. ದಿವ್ಯದೇಶಗಳಲ್ಲಿ ವಾಸಮಾಡುತ್ತಿರುವ ಅರ್ಚಾವಿಗ್ರಹಗಳ ಸೌಂದರ್ಯಾದಿ ಕಲ್ಯಾಣ ಗುಣಗಳನ್ನು ಕಂಡು ಮಂಗಳಾಶಾಸನ ಮಾಡಬೇಕು. ಭಗದ್ವ್ಯತಿರಿಕ್ತವಾದ ವಿಷಯಗಳಲ್ಲಿರುವ ದೋಷಗಳನ್ನು ಕಂಡು ಅವುಗಳನ್ನು ತ್ಯಜಿಸಬೇಕು. ವಿಷಯಗಳಲ್ಲಿ ಪ್ರಾವಣ್ಯವನ್ನು ಉಂಟುಮಾಡುವ ಈ ದೇಹವನ್ನು ನೋಡಿ "ಇನ್ನೆಷ್ಟು ದಿನ ಈ ದೇಹವಿದೆಯೋ, ಈ ದೇಹವಿರುವ ವರಿವಿಗೂ ಭಗವತ್ಪ್ರಾಪ್ತಿಯುಂಟಾಗುವುದಿಲ್ಲವಲ್ಲಾ" ಎಂದು ಕ್ಲೇಶಪಡಬೇಕು. ಭಗವಂತನೇನು, ಭಾಗವತರೇನು, ಇವರುಗಳಲ್ಲಿ ನೈಚ್ಯದಿಂದ ಅನುವರ್ತಿಸಬೇಕೇ ಹೊರತು ಪ್ರಾಕೃತವಿಷಯಗಳಲ್ಲಿ ಅನುವರ್ತಿಸಕೂಡದು. ಯಾವನು ವೈಷ್ಣವರಿಗಿಂತಲೂ ಬೇರೇ ಜನಗಳ ಅನ್ನವನ್ನು ನಿರಾಕರಿಸಿ, ಭಗವನ್ನಿವೇದಿತವಾದ ಅನ್ನವನ್ನು ಭುಜಿಸುವನೋ ಅವನೇ ನಿಯತಾಹಾರಿಯು. ಯಾವನು ಅನುಗ್ರಹಪೂರ್ವಕವಾಗಿ ಜ್ಞಾನಾಭಿವೃದ್ಧಿ ಮಾಡುವನೋ, ಅವನ ಸಹವಾಸವನ್ನೇ ಮಾಡಬೇಕು. ಯಾವನ ಸಂಬಂಧದಿಂದ ನಮ್ಮ ಜ್ಞಾನವು ನಾಶವಾಗುವುದೋ ಅಂಥವನ ಸಹವಾಸವನ್ನು ಬಿಡಬೇಕು. ಹಿಂದೆ ಇದುವರಿವಿಗೂ ಹೇಳಿದ್ದೆಲ್ಲವೂ ಸದಾಚಾರ್ಯನ ಅನುಗ್ರಹದಿಂದ ಉಂಟಾಗಬೇಕೆಂದು ಭಾವಿಸಿ ಅವನ ಅನುಗ್ರಹ ಬರುವವರಿವಿಗೂ ಸದಾಚಾರ್ಯನನ್ನು ಅನುವರ್ತಿಸುತ್ತಲೇ ಇರಬೇಕು. ಇದಿಷ್ಟೂ ಪ್ರಪನ್ನ ದಿನಚರ್ಯೆಗಳು.

ಇತಿ ಪ್ರಪನ್ನದಿನಚರ್ಯಾಪ್ರಕರಣವು ಪೂರ್ತಿಯಾಯಿತು

ಇತಿ ದ್ವಿತೀಯ ಪ್ರಕರಣಂ

– ಶ್ರೀಃ –

ಶುಭಮಸ್ತು

ಶ್ರೀ ವಚನಭೂಷಣಂ

ಅಥ ತೃತೀಯ ಪ್ರಕರಣಂ

ಮಂಗಳಾಶಾಸನ ವಿವರಣಂ

ಸೂತ್ರಂ - ಮಂಗಳಾಶಾಸನಮ್ ಸ್ವರೂಪ ವಿರುದ್ಧಮನ್ನೋವೆನ್ನಿಲ್ ಜ್ಞಾನದಶೈಯಿಲ್ ರಕ್ಷ್ಯರಕ್ಷಕಭಾವಂ ತನ್ಕಪ್ಪಿಲೇ ಕಿಡಕ್ಕುಂ ಪ್ರೇಮದಶೈಯಿಲ್ ತಟ್ಟುಮಾರಿಕ್ಕಿಡಕ್ಕುಂ ॥ ೨೫೦ ॥

ಶ್ಲೋಕಃ – ✱ ಮಂಗಳಾಶಾಸನಂ ಹಿ ಸ್ಯಾತ್ಸ್ವಸ್ವರೂಪವಿರೋಧಭಾಕ್ ।
ಇತಿ ಚೇದುಚ್ಯತೇ ಸ್ವೀಯ ಭಾವತಸ್ಸಾಧು ತತ್ತ್ವತಿ ॥ ೩೫೧ ॥

ರಕ್ಷ್ಯ ರಕ್ಷಕ ಭಾವಸ್ತು ಭವೇದ್ಜ್ಞಾನದಶಾ ಯದಾ ।
ಪ್ರೇಮ್ಣಿ ತದ್ವ್ಯತಿರಿಕ್ತಂ ಸ್ಯಾನ್ಮಂಗಳಾಶಾಸನಂ ತದಾ ॥ ೩೫೨ ॥

ತಾತ್ಪರ್ಯ – ಪ್ರಪನ್ನನ ದಿನಚರ್ಯೆಯನ್ನು ಹೇಳಿದ ಮೇಲೆ ಮಂಗಳಾಶಾಸನವನ್ನು ವಿವರಿಸುತ್ತಾರೆ. ಹೇಯಪ್ರತ್ಯನೀಕನಾಗಿಯೂ, ಕಲ್ಯಾಣೈಕತಾನನಾಗಿಯೂ, ತನಗಿಂತಲೂ ಬೇರೆಯಾದ ಸಮಸ್ತರನ್ನೂ ರಕ್ಷಿಸುವವನಾಗಿಯೂ ಇರುವ ಭಗವಂತನನ್ನು ಶರಣು ಹೊಂದಿ ನಮ್ಮಗಳ ಅಮಂಗಳಗಳನ್ನು ಹೋಗಲಾಡಿಸಿಕೊಂಡು ನಮಗೆ ಮಂಗಳವನ್ನು ಕೋರಬೇಕಾಗಿರುವಾಗ ರಕ್ಷ್ಯನಾದ ಇವನು ರಕ್ಷಕನಾದ ಭಗವಂತನಿಗೆ ಮಂಗಳವನ್ನು ಕೋರುವುದು ಸ್ವರೂಪ ವಿರುದ್ಧವಲ್ಲವೇ ಅಂದರೆ ಈ ಚೇತನನಿಗೆ ಎರಡು ದಶೆಗಳುಂಟು. ಜ್ಞಾನದಶೆ, ಪ್ರೇಮದಶೆ ಎಂದು. ಜ್ಞಾನದಶೆಯಲ್ಲಿ ಭಗವಂತನು ರಕ್ಷಕನು, ನಾವು ಅವನಿಂದ ರಕ್ಷಿಸಲ್ಪಡುವವರು ಎಂದು ತೋರುವುದು. ಪ್ರೇಮದಶೆಯಲ್ಲಿ ಭಗವಂತನು ಸೌಂದರ್ಯ, ಸೌಕುಮಾರ್ಯ ಇವುಗಳನ್ನು ನೋಡಿ ಇದಕ್ಕೆ ಎಲ್ಲಿ ಅಪಾಯವುಂಟಾಗುವುದೋ ಎಂಬ ಭಯದಿಂದ ತಾನೇ ರಕ್ಷಕನು. ಭಗವಂತನೇ ರಕ್ಷ್ಯನು ಎಂದು ತೋರಿ ಮಂಗಳಾಶಾಸನವನ್ನು ಮಾಡುತ್ತಾನೆ. ಇದನ್ನೇ ಮುಂದಿನ ಸೂತ್ರದಲ್ಲಿ ವಿವರಿಸುತ್ತಾರೆ.

ಸೂತ್ರಂ - ಅವನ್ ಸ್ವರೂಪತ್ತೈಯನುಸಂಧಿತ್താಲ್ ಅವನ್ಕೈಕ್ಕಡಕಾಕಕ್ಕೊಂಡುತನ್ನೈ ನೋಕ್ಕುಂ ಸೌಕುಮಾರ್ಯತ್ತೈಯನುಸಂಧಿತ್താಲ್ ತನ್ನೈಕ್ಕಡಕಾಕಕ್ಕೊಂಡು ಅವನೈ ನೋಕ್ಕುಂ ॥ ೨೫೧ ॥

ಶ್ಲೋಕಃ – ✱ ಸರ್ವಜ್ಞತ್ವ ವಿಶೇಷ ಶಕ್ತಿಯುತತಾ ಸರ್ವಾಭಿರಕ್ಷಾಗುಣಾನ್
ವಿಷ್ಣೋಶ್ಚೇದನುಸಂದಧಾತಿ ಸ ತದಾ ರಕ್ಷ್ಯತ್ವಮುಸ್ಮಿನ್ಭವೇತ್ ।
ಸೌಂದರ್ಯಂ ಸುಕುಮಾರತಾ ಭಗವತೋ ಯಶ್ಚಿಂತಯೇತ್ಸ್ವಾತ್ಮನಿ
ಸ್ವಸ್ಮಿನ್ನ್ರಕ್ಷಕತಾ ಧಿಯಾ ಸ ತು ತದಾ ಕುರ್ಯಾಚ್ಛುಭಾಶಂಸನಂ ॥ ೩೫೩ ॥

ತಾತ್ಪರ್ಯ – ಹಿಂದೆ ಹೇಳಿದ ಅರ್ಥವನ್ನೇ ವಿಶದ ಮಾಡುತ್ತಾರೆ. ಸರ್ವಜ್ಞನಾಗಿಯೂ, ಸರ್ವಶಕ್ತನಾಗಿಯೂ, ಸರ್ವರಕ್ಷಕನಾಗಿಯೂ, ಇರುವ ಭಗವಂತನ ಸ್ವರೂಪವನ್ನು ಅನುಸಂಧಾನ ಮಾಡಿದ ಪಕ್ಷದಲ್ಲಿ ಅವನು ತನ್ನ ಅನಿಷ್ಟಗಳನ್ನು ನಿವಾರಿಸಿ ಅಜ್ಞನಾದ ತನಗೆ ರಕ್ಷಕನನ್ನಾಗಿ ಜ್ಞಾನದಶೆಯಲ್ಲಿ ಭಾವಿಸುವನು ಭಗವಂತನ ಸೌಂದರ್ಯ ಸೌಕುಮಾರ್ಯಗಳನ್ನು ಅನುಸಂಧಾನ ಮಾಡಿದ ಪಕ್ಷದಲ್ಲಿ ಪ್ರೇಮದಿಂದ ಭಗವಂತನಿಗೆ ಎಲ್ಲಿ ಅಪಾಯ ಸಂಭವಿಸುವುದೋ ಎಂಬ ಭಯದಿಂದ ಅವನ ಸರ್ವಜ್ಞತ್ವಾದಿಗುಣಗಳನ್ನು ಮರೆತು ತನ್ನನ್ನೇ ರಕ್ಷಕನನ್ನಾಗಿಸಿಕೊಂಡು ಭಗವಂತನಿಗೆ ಮಂಗಳಾಸನ ಮಾಡುವನು.

ಸೂತ್ರಂ – ಇವ್ವರ್ಥಂ ಚಕ್ರವರ್ತಿ ಶ್ರೀ ಜನಕರಾಜನ್, ತಿರುಮಹಳ್, ವಿಶ್ವಾಮಿತ್ರನ್, ಶ್ರೀದಂಡಕಾರಣ್ಯವಾಸಿಹಳಾನ ಋಷಿಹಳ್, ತಿರುವಡಿ ಮಹಾರಾಜರ್, ಶ್ರೀನಂದಗೋಪರ್, ಶ್ರೀವಿದುರರ್, ಪಿಳ್ಳೈಯುರಂಗಾವಿಲ್ಲಿದಾಸರ್ ತೊಡಕ್ಕವಾನವರ್ಹಳ್ ಪೆಕ್ಕಲಿಲೇ ಕಾಣಲಾಂ ॥ ೨೨೨ ॥

ಶ್ಲೋಕಃ – ✱ ವಿರಚಿತ ವಿವಾಹೈಃ ಪುತ್ರೈಸ್ಸಾಕಂ ಗಚ್ಛನ್ಮಹೀಪತಿಃ
ಧುರಿ ಪರಶುರಾಮಂ ದೃಷ್ಟ್ವಾಕ್ರೂರಾರಾತಿಂ ಸ ಸಾಧ್ವಸಃ ।
ವಿದಿತಸುತಶಕ್ತಿಶ್ಚಾಪಿ ಪ್ರೀತ್ಯಾ ರಾಮಾಯ ಮಂಗಳಂ
ಮನಸಿ ಸಮಭಿಧ್ಯಾಯನ್ಯಾತೇ ಶತ್ರೌ ದ್ರಾಗ್ಯಯೌಪುರೀಂ ॥ ೩೫೪ ॥

ಪಟ್ಟಾಭಿಷೇಕಾಯ ಪರಿಷ್ಕೃತಂ ತಂ
ರಾಮಂ ಪಿತುಸ್ಸದ್ಮ ಮುದಾ ವ್ರಜಂತಂ ।
ನೃದೃಷ್ಟಿದೋಷೈಕಭಿಯಾನುಯಾತಾ
ಸೀತಾ ತದಾ ಮಂಗಳಮಾತನೋದ್ಧಿ ॥ ೩೫೬ ॥

ಶ್ರೀ ರಾಮಶಕ್ತಿಂ ಧನುಷೋ ವಿಭಂಗೇ
ದೃಷ್ಟ್ವಾಪಿ ಧೀಮಾನ್ಜನಕೋ ವಿವಾಹೇ ।
ಸೀತಾ ಪ್ರದಾನಾವಸರೇ ಜಗಾದ
ಭದ್ರಂ ಸ್ವಯಂ ಪಂಕ್ತಿರಥಾತ್ಮಜಾಯ ॥ ೩೫೭ ॥

ಅಹಂವೇದ್ಮೀತ್ಯೇವಂ ಪ್ರಥಿತ ಯಶಸೋ ರಾಘವಮಣೇಃ
ವಿದನ್ವಿಶ್ವಾಮಿತ್ರೋ ಬಲಮತುಲಮಪ್ಯಧ್ವರಕೃತೇ ।
ವ್ರಜನ್ಮಧ್ಯೇ ಮಾರ್ಗಂ ರಘುಪತಿ ಕರಾನ್ಮಾರಣವಿಧೌ
ಸುಕೇತೋಃ ಪುತ್ರ್ಯಾಯತ್ಸುಶುಭಮವದದ್ರಾಘವಕೃತೇ ॥ ೩೫೮ ॥

ವನವಾಸಿನೋಪಿ ಮುನಯಸ್ಸ್ವಸಿದ್ಧಯೇ
ಯಮುಪಾಸತೇ ಚ ತಮವೇಕ್ಷ್ಯ ರಾಘವಂ ।
ಸುಕುಮಾರತಾದಿ ಗುಣವೀಕ್ಷಣಾತ್ತದಾ
ನನು ಮಂಗಳಾನಿ ಜಗದುರ್ವನಾಂತರೇ ॥ ೩೫೯ ॥

ರಾಘವಸ್ಯ ಪೃಥುಲಾಯತಾನ್ಭುಜಾ
ನ್ಮಾರುತಿಸ್ಸಮವಲೋಕ್ಯ ವರ್ತುಲಾನ್ ।
ಭೂಷಣೈರ್ನ ಹಿ ವಿಭೂಷಿತಾಃ ಕಿಮಿ
ತ್ಯಾಹ ದೃಷ್ಟಿಭವ ದೋಷ ಶಂಕಯಾ ॥ ೩೬೦ ॥

ಚತುರ್ಭಿರ್ಮಂತ್ರಿಭಿಸ್ಸಾಕಮಾಗತಸ್ಯ ವಿಭೀಷಣಃ ।
ರಾಮಸ್ಯ ಶಕ್ತಿ ಮೇತ್ಯಾಪಿ ತದ್ರಕ್ಷಣಪರೋಽಭವತ್ ॥ ೩೬೧ ॥

ಸೀತಾಯಾ ವಿರಹೇಣ ಕಾನನತಟೇ ಕ್ಲಿಷ್ಟಂ ರಘೂಣಾಂ ಪತಿಂ
ದೃಷ್ಟ್ವಾ ಜ್ಞಾತ ಚತುರ್ದಶಾಸ್ರಪಸಹಸ್ರೋಚ್ಛೇದ ಶಕ್ತಸ್ತದಾ ।
ಆಯುಷ್ಮನ್ನಿತಿ ತಂ ಜಟಾಯುರವದತ್ರಸ್ತೌಸ್ಸುಮಾರ್ಕೇಕ್ಷಣಾ
ನ್ಮತ್ಪ್ರಾಣೈಸ್ಸಹ ಜಾನಕೀಂ ದಶಮುಖೋ ಕ್ರೂರೋಹರತ್ವಾಮಿತಿ ॥ ೩೬೨ ॥

ಪೂತನಾ ಹನನ ದೃಷ್ಟಶಕ್ತಿರ
ಪ್ಯಾತ್ಮಜಸ್ಯ ಸುಕುಮಾರತೇಕ್ಷಣಾತ್ ।
ನಂದ ಏಷ ನಿಜಗಾದ ಶೌರಯೇ
ಮಂಗಳಂ ಚ ಶಿಶುಭಾವದರ್ಶನಾತ್ ॥ ೩೬೩ ॥

ಭಕ್ತಾಗ್ರ್ಯಸ್ಯತು ವಿದುರೋ ದರಾತಿ ದೀರ್ಣ
ಶತ್ರುಭ್ಯೋ ಹರಿ ತನು ರಕ್ಷಣೈಕತಾನಃ ।
ಪೀಠಂ ತನ್ಮೃದುಲತರೋಪಧಾನಭವ್ಯಂ
ಪಸ್ಪರ್ಶ ಪ್ರಥಮಮುಪಾಯಶಂಕಯೈವ ॥ ೩೬೪ ॥

ಏವಂ ಪಿಳ್ಳೈಯರಂಗಾಖ್ಯದಾಸೋಪಿವ್ರಜತೋಹರೇಃ ।
ಆಪತೇದಾಪದಿತ್ಯೇವಂ ವಾಹಕೈಸ್ಸಹ ತೈರ್ಯಯೌ ॥ ೩೬೫ ॥

ಅಯೋಧ್ಯಾವಾಸಿನಸ್ಸರ್ವೇಽಪ್ಯೇವಂರಾಮಾಯ ನಿತ್ಯಶಃ ।
ಮಂಗಳಾಶಾಸನಂ ಚಕ್ರುಃ ಪ್ರೇಮಾತಿಶಯತೋ ಮುದಾ ॥ ೩೬೬ ॥

ತಾತ್ಪರ್ಯ – ಈ ರೀತಿ ಸೌಕುಮಾರ್ಯಾದಿಗಳನ್ನು ನೋಡಿ ಭಗವಂತನ ಶಕ್ತಿ ವೈಭವಗಳನ್ನು ಮರೆತು ಭಗವಂತನಿಗೆ ಮಂಗಳಾಶಾಸನ ಎಸಗಿದ ಶಿಷ್ಟಾಚಾರವನ್ನು ತೋರಿಸುತ್ತಾರೆ. ದಶರಥ ಚಕ್ರವರ್ತಿಯು ತನ್ನ ನಾಲ್ಕು ಜನ ಮಕ್ಕಳಿಗೂ ವಿವಾಹ ಬೆಳೆಸಿ ಅಯೋಧ್ಯೆಗೆ ಹಿಂತಿರುಗುತ್ತಿರುವಾಗ ಮಧ್ಯ ಮಾರ್ಗದಲ್ಲಿ ಪರಶುರಾಮನನ್ನು ನೋಡಿ ಭಯಪಟ್ಟು ಶ್ರೀರಾಮನು ತಾಟಕಾ ತಾಟಕೇಯರ ವಧವನ್ನು ಬಾಲ್ಯದಲ್ಲೇ ಮಾಡಿ ತನ್ನ ಶಕ್ತ್ಯತಿಶಯವನ್ನು ತೋರಿಸಿದ್ದಾಗ್ಯೂ ಕೂಡ ಅವನ ಸೌಂದರ್ಯ ಸೌಕುಮಾರ್ಯಾದಿಗಳಿಗೆ ಮನಸೋತು ಪ್ರೇಮಾತಿಶಯದಿಂದ ಮಕ್ಕಳಿಗೆ ಇವನಿಂದ ಏನು ಕೆಡಕು ಉಂಟಾಗುವುದೋ ಎಂಬ ಶಂಕೆಯಿಂದ ತಾನು ಮುಂದೆ ನುಗ್ಗಿ "ಎಲೈ ಪರಶುರಾಮನೇ, ನೀನು ಬ್ರಾಹ್ಮಣನಲ್ಲವೇ, ಕ್ಷತ್ರಿಯರ ಮೇಲುಂಟಾದ ದ್ವೇಷವನ್ನು ಬಿಟ್ಟು ಪ್ರಶಾಂತನಾಗಬೇಕು. ನನ್ನ ಮಕ್ಕಳನ್ನು ಕಾಪಾಡು. ಅವರುಗಳಿಗೆ ಅಭಯಪ್ರದಾನಮಾಡು" ಎಂದು ಕೇಳಿಕೊಂಡನು. ರಾಮನಿಂದ

ಸೋತು ಪರಶುರಾಮನು ಹೊರಟು ಹೋದ ಮೇಲೆ ಸಂತೋಷದಿಂದ ಮಕ್ಕಳೊಡನೆ ಅಯೋಧ್ಯೆಯನ್ನು ಸೇರಿದನು. ಈ ರೀತಿ ಪ್ರೇಮಾತಿಶಯದಿಂದ ದಶರಥನು ರಾಮನಿಗೆ ಮಂಗಳಾಶಾಸನ ಮಾಡಿದನು.

ಸೀತೆಗೆ ಶ್ರೀರಾಮಚಂದ್ರನ ಶಕ್ತಿ ಸಾಮರ್ಥ್ಯಗಳು ಗೊತ್ತುಂಟು. ಆದರೂ ಕೂಡ ಶ್ರೀರಾಮಚಂದ್ರನು ಪಟ್ಟಾಭಿಷೇಕಕ್ಕಾಗಿ ದಿವ್ಯಾಭರಣಗಳಿಂದ ಅಲಂಕೃತವಾದ ದಿವ್ಯಶರೀರವುಳ್ಳವನಾಗಿ ತನ್ನ ತಂದೆಯಾದ ಚಕ್ರವರ್ತಿ ದಶರಥನ ಮನೆಗೆ ಹೊರಟನು. ಆ ಸಮಯದಲ್ಲಿ ಸೀತೆಯು ಶ್ರೀರಾಮಚಂದ್ರನನ್ನು ದರ್ಶಿಸಿ ಅವನ ಸೌಂದರ್ಯಕ್ಕೆ ಸೋತವಳಾಗಿ ಅವನ ಜೊತೆಯಲ್ಲೇ ಮನೆ ಬಾಗಿಲವರಿವಿಗೂ ಬಂದು ಎಲ್ಲಿ ದೃಷ್ಟಿದೋಷವುಂಟಾಗುವುದೋ ಎಂಬ ಭಯದಿಂದ ಅಷ್ಟ ದಿಕ್ಪಾಲಕರುಗಳನ್ನು ರಾಮನ ಮಂಗಳಕ್ಕಾಗಿ ಪ್ರಾರ್ಥಿಸಿದಳು.

ಶ್ರೀ ಜನಕಚಕ್ರವರ್ತಿಯು ಈಶ್ವರಧನುರ್ಭಂಗದಿಂದ ಶ್ರೀರಾಮನ ಶಕ್ತಿಯನ್ನು ಅರಿತಿದ್ದಾಗ್ಯೂ ವಿವಾಹ ಕಾಲದಲ್ಲಿ ಶ್ರೀರಾಮನು ಸೀತೆಯ ಕೈಹಿಡಿಯುವಾಗ ನಿನಗೆ ಮಂಗಳವಾಗಲೆಂದು ಇವನ ಸೌಂದರ್ಯವನ್ನೂ ಸೌಕುಮಾರ್ಯವನ್ನೂ ನೋಡಿ ಆಶಿಸುತ್ತಾನೆ.

ವಿಶ್ವಾಮಿತ್ರನು ತನ್ನ ಯಾಗದ ರಕ್ಷಣೆಗಾಗಿ ಶ್ರೀರಾಮನನ್ನು ಕಳುಹಿಸಿ ಕೊಡುವಂತೆ ದಶರಥನನ್ನು ಕೇಳುತ್ತಲು ದಶರಥನು ಶ್ರೀರಾಮನ ಸೌಂದರ್ಯ ಸೌಕುಮಾರ್ಯ ಬಾಲ್ಯ ಇವುಗಳಿಗೆ ಮನಸೋತು ರಾಮನನ್ನು ಕಳುಹಿಸಲು ಒಪ್ಪಲಿಲ್ಲ. ಆಗ ವಿಶ್ವಾಮಿತ್ರನು "ಅಹಂ ವೇದ್ಮಿ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಂ । ವಸಿಷ್ಠೋಪಿ" ಎಂದು ಹೇಳಿ ದಶರಥನನ್ನು ಒಪ್ಪಿಸಿ ರಾಮನನ್ನು ಕರೆದುಕೊಂಡು ಬರುತ್ತಿರುವಾಗ ಮಧ್ಯಮಾರ್ಗದಲ್ಲಿ ಮೇಲೆ ಬೀಳಲು ಬಂದ ತಾಟಕೆಯೆಂಬ ರಾಕ್ಷಸಿಯನ್ನು ಸಂಹರಿಸುವಂತೆ ಹೇಳಿದನಷ್ಟೆ. ಆ ಸಮಯದಲ್ಲಿ ರಾಮನ ಪರಾಕ್ರಮವನ್ನರಿತಿದ್ದರೂ ಅವನ ಸೌಂದರ್ಯ ಸೌಕುಮಾರ್ಯಗಳಿಗೆ ಬೆರಗಾಗಿ ನಿನಗೆ ಮಂಗಳವಾಗಲೆಂದು ಆಶಿಸುವನು.

ದಂಡಕಾರಣ್ಯಕ್ಕೆ ತೆರಳಿದಾಗ ದಂಡಕಾರಣ್ಯವಾಸಿಗಳಾದ ಋಷಿಗಳು ಎದುರುಗೊಳ್ಳುತ್ತಾ ಅವನ ಸೌಂದರ್ಯ ಸೌಂಕುಮಾರ್ಯಗಳಿಗೆ ಮನಸೋತು ಮಂಗಳಾಶಾಸನ ಮಾಡಿದರು.

ಶ್ರೀ ಆಂಜನೇಯನು ಶ್ರೀರಾಮನನ್ನು ದರ್ಶನ ಮಾಡಿದಾಗ ದೀರ್ಘವಾಗಿಯೂ, ವರ್ತುಲವಾಗಿಯೂ ಪರಿಘದಂತಿರುವ ಆಭರಣಗಳಿಗೆ ಯೋಗ್ಯವಾದ ತೋಳುಗಳಿಗೆ ಯಾತಕ್ಕಾಗಿ ಆಭರಣಗಳನ್ನು ತೊಡಿಸಿಲ್ಲ ಎಂದು ಆ ತೋಳುಗಳ ಸೌಂದರ್ಯ ಸೌಕುಮಾರ್ಯಗಳನ್ನು ನೋಡಿ ಎಲ್ಲಿ ದೃಷ್ಟಿದೋಷ ಉಂಟಾಗುವುದೋ ಎಂಬ ಭಯದಿಂದ ಕೇಳುತ್ತಾನೆ. ಅವನಿಗೆ ಆಭರಣಗಳನ್ನು ಧರಿಸಿದ್ದ ಪಕ್ಷದಲ್ಲಿ ಈ ತೋಳುಗಳ ಸೌಂದರ್ಯ ಸೌಕುಮಾರ್ಯಗಳನ್ನು ಮರೆಸಿದಂತಾಗುತ್ತಿತ್ತು ಎಂಬ ಭಾವನೆ.

ಸುಗ್ರೀವ ಮಹಾರಾಜನು ನಾಲ್ಕು ಜನ ಮಂತ್ರಿಗಳೊಡನೆ ಆಕಾಶ ಮಾರ್ಗದಲ್ಲಿ ನಿಂತು "ನೀವೆಲ್ಲರೂ ಶ್ರೀರಾಮಚಂದ್ರನಿಗೆ ತಿಳಿಸಿ ವಿಭೀಷಣನು ಬಂದಿದ್ದಾನೆ" ಎಂದು ವಿಭೀಷಣನು ಹೇಳುತ್ತಲು "ಅವನನ್ನು ನಮ್ಮ ಗುಂಪಿಗೆ ಸೇರಿಸಕೂಡದು. ರಾವಣನ ತಮ್ಮನಿವನು, ನಮ್ಮನ್ನು ಕೊಲ್ಲಲು ಬಂದಿರುವನು. ಆದಕಾರಣ ಖಂಡಿತ ಸೇರಿಸಕೊಡದು" ಎಂದು ವಾಲಿಯನ್ನು ವಧಿಸಿ ತನ್ನ ಪರಾಕ್ರಮವನ್ನು ತೋರಿಸಿದ್ದಾಗ್ಯೂ ಕೂಡ ರಾಮನೊಡನೆ ಹೇಳಿದನು. ಈ ರೀತಿ ಸುಗ್ರೀವನು ಹೇಳಲು ಕಾರಣ ವೇನೆಂದರೆ ಶ್ರೀರಾಮನ ಸೌಂದರ್ಯ ಸೌಕುಮಾರ್ಯದಿಗಳನ್ನು ನೋಡಿ ಇದಕ್ಕೆ ಎಲ್ಲಿ ಅಪಾಯ ಸಂಭವಿಸುವುದೋ ಎಂಬ ಪ್ರೇಮದಿಂದುಂಟಾದ ಭಯವೇ ಕಾರಣವು.

ಸೀತೆಯನ್ನು ಅಪಹರಿಸಿಕೊಂಡು ಹೋಗುವಾಗ ಜಟಾಯುವು ರಾವಣನೊಡನೆ ಯುದ್ಧ ಮಾಡಿ ರಾವಣನಿಂದ ಕತ್ತರಿಸಲ್ಪಟ್ಟ ರೆಕ್ಕೆಯುಳ್ಳವನಾಗಿ ನೆಲದ ಮೇಲೆ ಬಿದ್ದಿರುವಾಗ ಸೀತೆಯನ್ನು ಹುಡುಕುತ್ತಾ ಬಂದ ರಾಮನನ್ನು ಕುರಿತು, 'ಆಯುಷ್ಮನ್' ಎಂದು ಸಂಬೋಧಿಸಿ ಹೇಳುವನು. ಹದಿನಾಲ್ಕು ಸಾವಿರ ರಾಕ್ಷಸರನ್ನು ಒಬ್ಬನೇ ಕೊಂದು ತನ್ನ ಪರಾಕ್ರಮವನ್ನು ಹೊರಪಡಿಸಿರುವುದನ್ನು ಜಟಾಯುವು ಅನುಭವಿಸಿದ್ದಾಗ್ಯೂ ಕೂಡ, 'ಆಯುಷ್ಮನ್' ಎಂದು ಕರೆಯಬೇಕಾದರೆ ಅವನ ಸೌಂದರ್ಯ ಸೌಕುಮಾರ್ಯಾದಿಗಳನ್ನು ನೋಡಿ ನೀನು ಪಲ್ಲಾಂಡ್ ಪಲ್ಲಾಂಡಾಗಿರಬೇಕೆಂಬ ಭಾವನೆಯಿಂದಲ್ಲವೇ 'ಆಯುಷ್ಮನ್' ಎಂದು ಸಂಬೋಧಿಸಿದ್ದು. ಈ ರೀತಿ ಸಂಬೋಧಿಸಿ ನನ್ನ ಪ್ರಾಣಗಳೊಡನೆ ರಾವಣನು ಸೀತೆಯನ್ನೂ ಅಪಹರಿಸಿಕೊಂಡು ಹೋದನೆಂದು ತಿಳಿಸಿದನು.

ಶ್ರೀ ನಂದಗೋಪನು ಶೈಶವದಲ್ಲೇ ಪೂತನಿಯನ್ನು ಸಂಹರಿಸಿದ ಕೃಷ್ಣನ ಶಕ್ತಿಯನ್ನು ನೋಡಿದ್ದಾಗ್ಯೂ ಕೂಡ ಅವನ ಸೌಕುಮಾರ್ಯ ಸೌಂದರ್ಯಾದಿಗಳನ್ನು ನೋಡಿ ಇದಕ್ಕೆ ಎಲ್ಲಿ ಅಪಾಯವು ಸಂಭವಿಸುವುದೋ ಎಂಬ ಶಂಕೆಯಿಂದ "ರಕ್ಷತು ತ್ವಾಮಶೇಷಾಣಾಂ ಭೂತಾನಾಂ ಪ್ರಭವೋ ಹರಿಃ" ಎಂದು ಮಂಗಳಾಶಾಸನ ಮಾಡಿದನು.

ವಿದುರನು ಶ್ರೀಕೃಷ್ಣನ ಸರ್ವಜ್ಞತ್ವ ಸರ್ವಶಕ್ತತ್ವಾದಿಗಳನ್ನು ಚೆನ್ನಾಗಿ ಅರಿತಿದ್ದಾಗ್ಯೂ ಕೂಡ ಶ್ರೀ ಕೃಷ್ಣನು ದೂತನಾಗಿ ಹಸ್ತಿನಾವತಿಗೆ ಬಂದು ಧೃತರಾಷ್ಟ್ರನ ಅರಮನೆಗೆ ಪ್ರವೇಶಿಸಿ ಪೀಠದಲ್ಲಿ ಕುಳಿತುಕೊಳ್ಳುವುದಕ್ಕೆ ಮೊದಲು ಪೀಠದಲ್ಲಿ ಏನು ವಂಚನಾ ವ್ಯಾಪಾರಗಳಿವೆಯೋ ಶ್ರೀಕೃಷ್ಣನ ದಿವ್ಯ ಮಂಗಳ ವಿಗ್ರಹಕ್ಕೆ ಏನು ಅಪಾಯ ಸಂಭವಿಸುವುದೋ ಎಂಬ ಶಂಕೆಯಿಂದ ಆ ಪೀಠವನ್ನು ಕೈಲಿ ಮುಟ್ಟಿನೋಡಿದನು. ಇದು ಪ್ರೇಮದ ಕೆಲಸವಲ್ಲವೇ ?

ಪಿಳ್ಳೈಯುರಂಗಾವಿಲ್ಲಿದಾಸರು ಭಗವಂತನ ಜ್ಞಾನಶಕ್ತ್ಯಾದಿಗಳನ್ನು ಅರಿತಿದ್ದರೂ ಅವನ ಉತ್ಸವ ಕಾಲದಲ್ಲಿ ಬಿಜಮಾಡಿಸುವವರು ಎಲ್ಲಿ ಅಪಾಯವನ್ನುಂಟುಮಾಡುವರೋ ಎಂಬ ಭಯದಿಂದ ಬಿಜ ಮಾಡಿಸುವರನ್ನು ಬಿಟ್ಟು ಒಂದು ಕ್ಷಣವೂ ಇರುತ್ತಿರಲಿಲ್ಲ.

ಇದೇ ರೀತಿ ಅಯೋಧ್ಯೆಯಲ್ಲಿ ವಾಸಮಾಡುವ ಹೆಂಗಸರುಗಳೇನು, ವೃದ್ಧರೇನು, ತರುಣರೇನು ಎಲ್ಲರೂ ಕೂಡ ಪ್ರತಿದಿನವೂ ರಾತ್ರಿ ಹಗಲು ಕೂಡ ಶ್ರೀರಾಮಚಂದ್ರನಿಗೆ ಮಂಗಳಾಶಾಸನ ಮಾಡುತ್ತಿದ್ದರು.

ಸೂತ್ರಂ - ಇಳೈಯ ಪೆರುಮಾಳೈ ಶ್ರೀಗುಹಪ್ಪೆರುಮಾಳ್ ಅತಿಶಂಕೈ ಪಣ್ಣ,
ಇರುವರೈಯುಮತಿಶಂಕೈ ಪಣ್ಣಿ ಶ್ರೀ ಗುಹಪ್ಪೆರುಮಾಳ್
ಪರಿಕರಂ ಪೆರುಮಾಳೈ ನೋಕ್ಕಿತ್ತಿರೇ ॥ ೨೫೩ ॥

ಶ್ಲೋಕಃ - ✱ ರಾಮೇ ಪಲ್ಲವ ಶಯ್ಯಾಯಾಂ ಶಯಾನೇ ಸೀತಯಾ ಸಹ ।
ಲಕ್ಷ್ಮಣಸ್ತು ಧನುಷ್ಪಾಣಿಸ್ತದ್ರಕ್ಷಣ ಪರೋಽ ಭವತ್ ॥ ೩೬೮ ॥

ಭ್ರಾತೃತ್ವಾದ್ದ್ರೋಹಬುದ್ಧಿಸ್ಯಾದಿತಿ ಶಂಕಾಕುಲೋಗುಹಃ ।
ಸೌಮಿತ್ರಿಮಭಿತಃ ಪಶ್ಯನ್ಧನುಷ್ಪಾಣಿಸ್ತದಾ ಭವತ್ ॥ ೩೬೯ ॥

ಗುಹಾನುಯಾಯಿನಸ್ತತ್ರ ಗುಹ ದೌರ್ಜನ್ಯ ಶಂಕಯಾ ।
ಸಾಯುಧಾ ದತ್ತನೇತ್ರಾಶ್ಚ ರಾಮರಕ್ಷಣಪರಾ ಸ್ಥಿತಾಃ ॥ ೩೭೦ ॥

ತಾತ್ಪರ್ಯ – ಶೃಂಗಿಬೇರಪುರದ ಸಮೀಪದಲ್ಲಿರುವ ಗಂಗಾ ತೀರದ ಸಮೀಪದಲ್ಲಿ ಲಕ್ಷ್ಮಣನಿಂದ ಹಾಸಲ್ಪಟ್ಟ ತಳಿರು ಹಾಸಿಗೆಯಲ್ಲಿ ಸೀತೆಯೊಡನೆ ಶ್ರೀರಾಮಚಂದ್ರನು ರಾತ್ರಿ ಮಲಗಿರುವಾಗ ಲಕ್ಷ್ಮಣನು ಧನುರ್ಧಾರಿಯಾಗಿ ಶ್ರೀರಾಮಚಂದ್ರನಿಗೆ ಯಾವ ಅಪಾಯವೂ ಉಂಟಾಗದಂತೆ ಜಾಗರೂಕತೆಯಿಂದ ಸುತ್ತಲೂ ಪಹರೆ ಸುತ್ತುತ್ತಾ ನೋಡಿಕೊಳ್ಳುತ್ತಿದ್ದನು. ಈ ಲಕ್ಷ್ಮಣನು ಧನುಷ್ಪಾಣಿಯಾಗಿರುವದನ್ನು ನೋಡಿ ಗುಹನು ಒಬ್ಬ ತಮ್ಮನು ರಾಜ್ಯದಿಂದ ಶ್ರೀರಾಮನನ್ನು ಓಡಿಸಿದನು. ಈ ಲಕ್ಷ್ಮಣನೂ ಕೂಡ ತಮ್ಮನಾದ್ದರಿಂದ ಸಮಯ ನೋಡಿ ರಾಮನನ್ನು ಕೊಂದು ರಾಜ್ಯವನ್ನು ಅಪಹರಿಸುವುದಕ್ಕಾಗಿ ಈ ರೀತಿ ಸುತ್ತುತ್ತಿರುವನೆಂದು ಯೋಚಿಸಿ ಶಂಕೆಯಿಂದ ತಾನೂ ಧನುರ್ಧಾರಿಯಾಗಿ ರಾಮನನ್ನು ರಕ್ಷಿಸಲು ಲಕ್ಷ್ಮಣನ ಸುತ್ತಲೂ ಪಹರೆ ಸುತ್ತುತ್ತಿದ್ದನು. ಆ ಗುಹನ ಪರಿಚಾರಕರುಗಳೋ ಅಂದರೆ ಈ ಗುಹನ ದೌರ್ಜನ್ಯವನ್ನು ಶಂಕಿಸಿ ರಾಮನಿಗೆ ಎಲ್ಲ ಅಪಾಯ ಸಂಭವಿಸುವುದೋ ಎಂಬ ಭಯದಿಂದ ರಾಮನನ್ನು ರಕ್ಷಿಸಲು ಆಯುಧಪಾಣಿಗಳಾಗಿ ಗುಹನ ಸುತ್ತಲೂ ಪಹರೆ ಸುತ್ತುತ್ತಿದ್ದರು. ಈ ರೀತಿ ಪ್ರತಿಯೊಬ್ಬರಿಗೂ ರಾಮನ ಸೌಂದರ್ಯ ಸೌಕುಮಾರ್ಯಾದಿಗಳನ್ನು ನೋಡಿ ಪ್ರೇಮಾತಿಶಯದಿಂದ ತಾವುಗಳು ರಕ್ಷಕರೆಂಬ ಬುದ್ಧಿಯೂ, ರಾಮನು ರಕ್ಷ್ಯನೆಂಬ ಬುದ್ಧಿಯೂ ಉಂಟಾದವು.

ಸೂತ್ರಂ - ಒರುನಾಳ್ ಮುಹತ್ತಿಲೇ ವಿಳಿತ್ತವರ್ಹಳೈ
ವಡಿವಳಹುಪಡುತ್ತುಂಪಾಡಾಯಿತ್ತಿದು ॥ ೨೫೪ ॥

ಶ್ಲೋಕಃ – ✱ ನನ್ವೈಕದೈವ ಗುಹ ತತ್ಪರಿವಾರಯೋಶ್ಚ
ರಾಮಾನನಾಂಬುಜ ವಿಲೋಕನ ಭಾಗ್ಯಮಾಸೀತ್ ।
ಏವಂ ಸ್ಥಿತೇಪಿ ಭಗವತ್ತನುಸುಂದರತ್ವಂ
ಪ್ರೇಮಾಧಿಕಂ ಜನಯತಿ ಪ್ರವಿನಾಶಭೀತ್ಯಾ ॥ ॥ ೩೭೧ ॥

ತಾತ್ಪರ್ಯ – ಗುಹನೂ ಅವನ ಪರಿಚಾರಕರೂ ಇದೇ ಮೊದಲು ಶ್ರೀರಾಮಚಂದ್ರನ ಮುಖ ಕಮಲವನ್ನು ದರ್ಶನ ಮಾಡಿದ್ದು. ಹೀಗಿರುವಾಗ ಅವರಿಗೆ ಶ್ರೀರಾಮನ ಮೇಲೆ ಅಷ್ಟು ಪ್ರೇಮ ಬರಲು ಕಾರಣವೇನೆಂದರೆ ಒಂದು ಸಲ ದರ್ಶನ ಮಾಡಿದರೂ ಸಾಕು, ಶ್ರೀರಾಮಚಂದ್ರನ ದಿವ್ಯ ಮಂಗಳವಿಗ್ರಹ ಸೌಂದರ್ಯವು 'ಸದಾ ಪಶ್ಯಂತಿ ಸೂರಯಃ' ಎಂಬಂತೆ ಪ್ರೇಮಾತಿಶಯವನ್ನು ಆ ದಿವ್ಯಮಂಗಳ ವಿಗ್ರಹಕ್ಕೆ ಎಲ್ಲಿ ಲೋಪ ಬರುವುದೋ ಎಂಬ ಭಯದಿಂದ ಉಂಟುಮಾಡುವುದು.

ಸೂತ್ರಂ - ಇವರ್ಹಳ್ ನಮ್ಮುಡೈಯ ಕೋಟಿಯಿಲೇ ಎನ್ನುಂ
ಪಡಿಯಾಯಿತ್ತು ಆಳ್ವಾರ್ಹಳ್ ನಿಲೈ ॥ ೨೫೫ ॥

ಶ್ಲೋಕಃ – ✱ ಶಠಜಿದ್ವಿಷ್ಣುಚಿತ್ರಾದಿ ಭಕ್ತಾಗ್ರ್ಯಾಪೇಕ್ಷಯಾತ್ವಿಹ ।
ಅಸ್ಮತ್ಕೋಟಿ ಪ್ರವಿಷ್ಟಾಸ್ಯುಃ ಪೂರ್ವೋಕ್ತಾಃ ಪ್ರೇಮವಾನಸಾಃ ॥ ॥ ೩೭೨ ॥

ತಾತ್ಪರ್ಯ – ಶಠಾರಿ ವಿಷ್ಣುಚಿತ್ತ ಇವರೇ ಮೊದಲಾದ ಆಳ್ವಾರ್ಯರುಗಳ ಪ್ರೇಮಾತಿಶಯವನ್ನು ನೋಡಿದ ಪಕ್ಷದಲ್ಲಿ ಹಿಂದೆ ಹೇಳಿದ ದಶರಥನೇ ಮೊದಲಾದವರು ಸ್ವಲ್ಪವೂ ಪ್ರೇಮವಿಲ್ಲದ ನಮ್ಮಗಳ ಗುಂಪಿನಲ್ಲಿ ಸೇರಿದಂತಾಗುವುದು. ಅಂದರೆ ಆಳ್ವಾರ್ಯರುಗಳಿಗೆ ಭಗವಂತನ ವಿಷಯದಲ್ಲಿ ಅಷ್ಟು ಪ್ರೇಮಾತಿಶಯವು.

ಸೂತ್ರಂ - ಆಳ್ವಾರ್ಹಳೆಲ್ಲಾರೈಯುಂ ಪೋಲಲ್ಲರ್ ಪೆರಿಯಾಳ್ವಾರ್ ॥ ೨೫೬ ॥

ಶ್ಲೋಕಃ – ❋ ಶಠಾರ್ಯಾದಿ ಮಹಾಭಕ್ತವರ್ಗಾಣಾಂ ಚ ಮಹಾತ್ಮನಃ ।
ತತ್ರಾಪಿ ವಿಷ್ಣುಚಿತ್ತಸ್ಯ ವರ್ತತೇ ಮಹದಂತರಂ ॥ ॥ ೩೭೩ ॥

ತಾತ್ಪರ್ಯ – ನಮ್ಮಾಳ್ವಾರ್ರೇ ಮೊದಲಾದ ಆಳ್ವಾರ್ರುಗಳಿಗೂ, ಪೆರಿಯಾಳ್ವಾರ್ರಿಗೂ ಬಹಳ ವ್ಯತ್ಯಾಸವುಂಟು. ಇತರ ಆಳ್ವಾರ್ರುಗಳ ಹಾಗಲ್ಲ ಪೆರಿಯಾಳ್ವಾರ್ರು.

ಸೂತ್ರಂ - ಅವರ್ಹಳುಕ್ಕು ಇತು ಕಾದಾಚಿತ್ಕಂ ಇವರ್ಕ್ಕು ಇತು ನಿತ್ಯಂ ॥ ೨೫೭ ॥

ಶ್ಲೋಕಃ – ❋ ಇತರೇಷಾಂ ಚ ಭಕ್ತಾನಾಂ ಕಾದಾಚಿತ್ಕಂ ಭವೇದಿಹ ।
ವಿಷ್ಣುಚಿತ್ತಸ್ಯ ನಿತ್ಯಂ ಹಿ ಮಂಗಳಾಶಾಸನಂಪತಾ ॥ ॥ ೩೭೩ ॥

ತಾತ್ಪರ್ಯ – ಅಜ್ಞಾನವಿಲ್ಲದೆಯೇ ಸ್ವಭಾವದಿಂದಲೇ ಜ್ಞಾನಿಯಾದ ನಮ್ಮಾಳ್ವಾರ್ರು ಭಗವಂತನನ್ನು ಅನುಭವಿಸಿ ಇನ್ನೂ ಅನುಭವಿಸಬೇಕೆಂದು ಆಶೆಪಡುತ್ತಾ ಯಾವಾಗಲಾದರೂ ಒಂದಾವರ್ತಿ ಭಗವಂತನಿಗೆ ಮಂಗಳಾಶಾಸನ ಮಾಡುವರು. ಇದೇ ರೀತಿ ಇತರ ಆಳ್ವಾರ್ರುಗಳೂ ಮಾಡುವರು. ಪೆರಿಯಾಳ್ವಾರ್ರೋ ಅಂದರೆ ಅನವರತವೂ ಮಂಗಳಾಶಾಸನ ಮಾಡುವರು.

ಸೂತ್ರಂ - ಅವರ್ಹಳುಡೈಯ ಆಳಂಗಾಲ್ ತಾನೇ
ಇವರ್ಕ್ಕು ಮೇಡಾಯಿರುಕ್ಕುಂ ॥ ೨೫೮ ॥

ಶ್ಲೋಕಃ – ❋ ಸೌಂದರ್ಯ ದರ್ಶನಾದ್ಭಕ್ತಾ ವಿಷ್ಣೋರ್ಮಂಗಳಮಾಜಗುಃ ।
ತದಪಾಯಭಯೋನಾಯಂ ವಿಷ್ಣುಚಿತ್ತೋ ಜಗೌಶುಭಂ ॥ ॥ ೩೭೪ ॥

ತಾತ್ಪರ್ಯ – ಇತರ ಆಳ್ವಾರ್ರುಗಳು ಭಗವಂತನ ಸೌಂದರ್ಯವನ್ನು ಅನುಭವಿಸಿ ಅದರಲ್ಲೇ ಮುಳುಗಿ ಮಂಗಳಾಶಾಸನ ಮಾಡಿದರು. ಪೆರಿಯಾಳ್ವಾರ್ರೋ ಅಂದರೆ ಆ ಸೌಂದರ್ಯಕ್ಕೆ ಎಲ್ಲಿ ಅಪಾಯ ಸಂಭವಿಸುವುದೋ ಎಂಬ ಭಯದಿಂದ ಮಂಗಳಾಶಾಸನ ಮಾಡಿದರು.

ಸೂತ್ರಂ - ಅವರ್ಹಳುಕ್ಕುಂ ಉಭಯಶೇಷತ್ವತ್ತೈಯುಂ ಮುಳಿತ್ತು ಸ್ವರೂಪತ್ತೈಕ್ಕು
ಮಿಳ್ನೀರುಂಡ್ಡಪ್ಪಣ್ಣುವತು ಇವರ್ಕ್ಕುಂ ಉಭಯವೃದ್ಧಿಕ್ಕುಂ
ಹೇತುವಾಯ್ ಸ್ವರೂಪತ್ತೈಕ್ಕರೈಯೇತ್ತುಂ ॥ ೨೫೯ ॥

ಶ್ಲೋಕಃ – ❋ ಸೌಂದರ್ಯಾದಿವಿಲೋಕನೇನಭಗವಚ್ಛೇಷತ್ವಮಗ್ನಾಸ್ಯಥಾ
ತದ್ಭಕ್ತೇಷ್ವಪಿಶೇಷತೈಕರಸಸಂಮಗ್ನಾಹಿ ಭಕ್ತಾಃಪರೇ ।
ಭಕ್ತಾಗ್ರ್ಯಸ್ತುಸವಿಷ್ಣುಚಿತ್ತವಿಬುಧೋಮಗ್ನೋನತತ್ರಸ್ವಯಂ
ತಸ್ಮೈತತ್ಪರಿವಾರಸಂಹತಿಕೃತೇಪ್ರೋಪಾಚಸನ್ಮಂಗಳಂ ॥ ॥ ೩೭೫ ॥

ತಾತ್ಪರ್ಯ – ಇತರ ಆಳ್ವಾರ್ರಿಗೂ ಪೆರಿಯಾಳ್ವಾರ್ರಿಗೂ ಇರುವ ತಾರತಮ್ಯವನ್ನು ಹೇಳುತ್ತಾರೆ. ಇತರ ಆಳ್ವಾರ್ರುಗಳು ಭಗವದನುಭವನ್ನೇ ಮಾಡುತ್ತಾ ಇದು ಇಲ್ಲದೇ ಹೋದರೆ ದೇಹಧಾರಣವೇ ಕಷ್ಟವಾಗಿ ನೆನೆಸುವವರಾಗಿ ಪ್ರಥಮ ಮಧ್ಯಮ ಪದಸಿದ್ಧವಾದ ಶೇಷತ್ವವನ್ನೂ ಅದರ ಕಾಷ್ಠಾ ರೂಪವಾದ ಭಾಗವತಶೇಷತ್ವವನ್ನೂ ಉಂಟುಮಾಡಿ ಪರಾತಿಶಯವೇ ಶರೀರವಾಗಿ ಉಳ್ಳವರಾಗಿ ಮಂಗಳಾಶಾಸನ

ಮಾಡಲು ತೀಯದೇ ಆ ಶೇಷತ್ವದಲ್ಲೇ ಮಗ್ನರಾದರು. ಈ ಪೆರಿಯಾಳ್ವಾರ್ರೋ ಅಂದರೆ ಭಗವದನುಭವದಲ್ಲಿ ಮನಸ್ಸಿಡದೆ ಭಗವಂತನಿಗೆ, ಎಲ್ಲಿ ಅಪಾಯ ಸಂಭವಿಸುವುದೋ ಎಂಬ ಶಂಕೆಯಿಂದ ಮಂಗಳಾಶಾಸನ ಮಾಡಿದರು.

ಸೂತ್ರಂ - ಭಯನಿವರ್ತಕಂಗಳುಕ್ಕು ಭಯಪ್ಪಡುವುದು ಪ್ರತಿಕೂಲರ್ಕೈಯುಂ ಅನುಕೂಲರಾಕ್ಕಿಕ್ಕೊಳ್ಳುವದು ಅತೀತಕಾಲಂಗಳಿಲ್ ಅಪದಾನಂಗಳುಕ್ಕು ಉತ್ತರಕಾಲತ್ತಿಲೇ ವಯಿರೆರಿವತು. ಪ್ರಾಪ್ತಿಫಲಮುಮಿದುವೇ ಯೆನ್ಬತು. ಅನಿವಿಷರೈಪ್ಪಾರ್ತ್ತು 'ಉರಹಲುರಹಲ್' ಎನ್ಬತಾಯ್ಕೊಂಡು ಇತುತಾನೇ ಯಾತ್ರೈಯಾಯ್ನಡಕ್ಕುಂ ॥ ೩೬೦ ॥

ಶ್ಲೋಕಃ – ❋ ವಿಷ್ಣುಚಿತ್ತಸ್ಯ ಮಲ್ಲಾನಾಂ ಧ್ವಂಸೇನಾಭಯದರ್ಶಿನಾಂ ।
ಬಾಹೂನಾಂ ಭಯಶಂಕಾತೋ ವಿಷ್ಣೋರ್ಮಂಗಳಮಾಜಗೌ ॥ ॥ ೩೭೬ ॥

ಲೋಕಮಂಗಳದಾಯಿನ್ಯೈ ಸದಾ ಹರಿಯುಜೇಶ್ರಿಯೈ ।
ಮಾಭೂದ್ವಿಯೋಗ ಇತ್ಯೇವಂ ವಿಷ್ಣುಚಿತ್ತಶ್ಚುಗಂಜಗೌ ॥ ॥ ೩೭೭ ॥

ಏತದ್ದ್ವಂದ್ವ ವಿಪನ್ನುತ್ಯೈ ಭ್ರಮತೇ ತತ್ಕರೇ ಸದಾ ।
ಚಕ್ರಾಯುಧಾಯ ತಸ್ಮೈ ಚ ಪ್ರಾಹ ಶ್ರೀಮಾನ್ಸುಮಂಗಳಂ ॥ ॥ ೩೭೮ ॥

ದೈತ್ಯಾನಾಂ ದಾರಯತೇ ಸ್ವಘೋಷೇಣ ಹೃದಯಾನ್ಯಪಿ ।
ಪಾಂಚಜನ್ಯಾಯ ತಸ್ಮೈ ಚ ಪ್ರಾಹ ಶ್ರೀಮಾನ್ಸುಮಂಗಳಂ ॥ ॥ ೩೭೯ ॥

ಅನುಕೂಲಾನಿವೈಶ್ವರ್ಯ ಕೈವಲ್ಯಾಪೇಕ್ಷಿಣೋಜನಾನ್ ।
ಸ್ವೀಯಾನ್ಕೃತ್ವಾಹ್ವಯಾಮಾಸ ಮಂಗಳಾಯ ಹರೇಸ್ಸ್ವಯಂ ॥ ॥ ೩೮೦ ॥

ಅಪದಾನಂ ಹರೇರ್ವೃತ್ತಮಿದಾನೀಂತನವನ್ಮುಹುಃ ।
ಭಾವಯನ್ವಿಷ್ಣುಚಿತ್ತೋ ಯಂ ತಸ್ಮೈ ಮಂಗಳಮಾತನೋತ್ ॥ ॥ ೩೮೧ ॥

ಬೋಧಯನ್ಭಾಗರೂಕತ್ವಂ ಸೂರೀಣಾಮಪಿ ಮಾಧವೇ ।
ಮಂಗಳಾಶಾಸನಂ ಚಕ್ರೇ ವಿಷ್ಣುಚಿತ್ತಸ್ಸ್ವಜೀವನಂ ॥ ॥ ೩೮೨ ॥

ತಾತ್ಪರ್ಯ – ಭಗವಂತನು ಮಲ್ಲರನ್ನು ಧ್ವಂಸಮಾಡಿ ತನ್ನ ತೋಳುಬಲವನ್ನು ತೋರಿಸಿದ್ದಾಗ್ಗೂ ಆ ತೋಳುಗಳಿಗೆ ಎಲ್ಲಿ ಅಪಾಯ ಸಂಭವಿಸುವುದೋ ಎಂಬ ಭಯದಿಂದ ವಿಷ್ಣುಚಿತ್ತರು ಆ ತೋಳುಗಳಿಗೆ ಪಲ್ಲಾಂಡನ್ನು ಪಾಡಿದರು. ಲೋಕಕ್ಕೆಲ್ಲಾ ಮಂಗಳವನ್ನುಂಟುಮಾಡುವ ಭಗವಂತನನ್ನು ಯಾವಾಗಲೂ ಅಗಲದೇ ಇರುವ ಲಕ್ಷ್ಮಿಗೆ ಎಲ್ಲಿ ಅಗಲಿಕೆಯುಂಟಾಗುವುದೋ ಎಂಬ ಶಂಕೆಯಿಂದ ಪಲ್ಲಾಂಡನ್ನು ಪಾಡಿದರು. ದಿವ್ಯದಂಪತಿಗಳಾದ ಲಕ್ಷ್ಮೀನಾರಾಯಣರಿಗೆ ಯಾವ ಅಪಾಯವೂ ಸಂಭವಿಸದಂತೆ ಭಗವಂತನ ಕೈಯಲ್ಲಿ ಯಾವಾಗಲೂ ಸುತ್ತುತ್ತಿರುವ ಸುದರ್ಶನಾಳ್ವಾರ್ರಿಗೆ ಮಂಗಳವನ್ನು ಪಾಡಿದರು. ತನ್ನ ಧ್ವನಿಯಿಂದಲೇ ಯುದ್ಧದಲ್ಲಿ ದಾನವರ ಎದೆಯನ್ನು ಸೀಳುವ ಪಾಂಚಜನ್ಯವೆಂಬ ಶಂಖಕ್ಕೆ ಮಂಗಳಾಶಾಸನ ಮಾಡಿದರು. ತನಗೆ ಅನುಕೂಲರಾಗಿರುವಂತೆಯೇ ಪ್ರತಿಕೂಲರಾದ ಐಶ್ವರ್ಯ ಕೈವಲ್ಯಗಳನ್ನು

ಅಪೇಕ್ಷಿಸುವ ಜನಗಳನ್ನು ಕೂಡ ಅನುಕೂಲರನ್ನಾಗಿ ಮಾಡಿಕೊಂಡು ಭಗವಂತನ ಮಂಗಳಾಶಾಸನಕ್ಕಾಗಿ ಕರೆದರು. ಹಿಂದೆ ನಡೆದ ರಾವಣಾದಿ ಯುದ್ಧದ ಚರಿತ್ರವನ್ನು ಈಗ ನಡೆಯುತ್ತಿರುವಂತೆ ಭಾವಿಸಿ ಅದಕ್ಕೆ ಪಲ್ಲಾಂಡು ಪಾಡಿದರು. ಭಗವಂತನ ಕೈಂಕರ್ಯದಲ್ಲೇ ಮಗ್ನರಾಗಿರುವ ದಿವ್ಯಸೂರಿಗಳಿಗೂ ಕೂಡ ನೀವು ಎಚ್ಚರವಾಗಿ ಭಗವಂತನನ್ನು ನೋಡಿಕೊಳ್ಳಿ ಎಂದು ಬೋಧಿಸಿದರು. ಈ ರೀತಿ ಭಗವಂತನಿಗೆ ಮಂಗಳಾಶಾಸನ ಮಾಡುವುದೇ ವಿಷ್ಣುಚಿತ್ತರಿಗೆ ಜೀವಿಕೆಯಾಯಿತು.

ಸೂತ್ರಂ - ಅಲ್ಲಾದವರ್ಹಳ್ಪೈಪ್ಪೋಲೇ ಕೇಳ್ಕಿರವರ್ಹಳುಡೈಯವುಂ
ಶೊಲ್ಲುಹಿರವರ್ಹಳುಡೈಯವುಂ ತನಿವ್ಮೆಯ್ಯೆ ತವಿಕ್ಕೈಯನ್ನಿಕ್ಕೇ
'ಆಳುಮಾಳಾರ್' ಎನ್ನಿರವನುಡೈಯು ತನಿವ್ಮೆಯ್ಯೆ
ತವಿಕ್ಕೈಕ್ಕಾಹವಾಯಿತ್ತು ಭಾಷ್ಯಕಾರರು
ಮಿವರುಮುಪದೇಶಿಪ್ಪತು ॥ ೨೬೧ ॥

ಶ್ಲೋಕಃ – * ಮಂಗಳಾಶಾಸನಾಯೈವ ಪ್ರತಿಕೂಲಾನುಪಾದಿಶತ್ ।
ಅನುಕೂಲಾನ್ವಿಧಾತುಂ ಯಚ್ಛ್ರೋತೃದೌರ್ಲಭ್ಯತಶ್ಚ ಸಃ ॥ ೩೮೩ ॥

ಭಾಷ್ಯಕಾರೋಽಪಿ ಮರ್ತ್ಯಾನಾಂ ಶ್ರೀಭಾಷ್ಯಮುಖತೋ ಗುರುಃ ।
ವೇದಾಂತತತ್ವಸಾರಾರ್ಥಾನ್ವಿಷ್ಣೋರೇವಮುಪಾದಿಶತ್ ॥ ೩೮೪ ॥

ತಾತ್ಪರ್ಯ – ಈ ರೀತಿ ಮಂಗಳಾಶಾಸನಕ್ಕಾಗಿ ಪ್ರತಿಕೂಲರಿಗೆ ಉಪದೇಶಿಸಿ ಅನುಕೂಲರನ್ನಾಗಿ ಮಾಡಿಕೊಳ್ಳುವುದು ಈ ತಿರುಪ್ಪಲ್ಲಾಂಡು ಒಂದರಲ್ಲಿ ಮಾತ್ರವೋ ಆಥವಾ ಇವರು ಉಪದೇಶಿಸಿದ ಸ್ಥಳಗಳಲ್ಲಿ ಮತ್ತಿತರರ ಉಪದೇಶಕ್ಕಿಂತಲೂ ವ್ಯಾವೃತ್ತಿಯುಂಟೇ ಅಂದರೆ ಪರೋಪದೇಶದಲ್ಲಿ ಇತರ ಆಳ್ವಾರ್ರುಗಳಂತೆಯೂ ಆಚಾರ್ಯರುಗಳಂತೆಯೂ, ಉಪದೇಶಾರ್ಥವನ್ನು ಕೇಳುವ ಸಂಸಾರಿಗಳ ಅನಾದ್ಯಜ್ಞಾನದಿಂದ ಆದರದೊಡನೆ ಕೇಳದೇ ಬೇರೆಯಾಗಿರುವಿಕೆಯನ್ನೂ, ಉಪದೇಶ ಮಾಡುವವರಿಗೆ ಭಗವದ್ಗುಣಾನುಭವ ಮಾಡುವ ದೆಶೆಯಲ್ಲಿ ಸರಿಯಾದ ಜೊತೆಯಿಲ್ಲದ ಕಾರಣ ಬೇರೆಯಾಗಿರುವಿಕೆಯನ್ನೂ ತಪ್ಪಿಸುವುದಕ್ಕಾಗಿ ಪ್ರತಿಕೂಲರನ್ನು ಅನುಕೂಲರನ್ನಾಗಿಸುವುದು ಭಗವಂತನ ಮಂಗಳಾಶಾಸನಕ್ಕಾಗಿಯೇ ಆಳಾಗಿ ಮಾಡಿಕೊಳ್ಳುವುದೇ ಪ್ರಯೋಜನವು. ಶ್ರೀಭಾಷ್ಯಕಾರರಿಗೂ ಕೂಡ ಇದೇ ಪ್ರಯೋಜನವು.

ಸೂತ್ರಂ - ಅಲ್ಲಾದಾಕ್ಕ್ಕೆ ಸತ್ತಾಸಮ್ಯದ್ಧಿಹಳ್ ದರ್ಶನಾನುಭವಕ್ಕೈಂಕರ್ಯಂಗಳಾಲೇ
ಇವಕ್ಕ್ಕೆಮಂಗಳಾಶಾಸನತ್ತಾಲೇ ॥ ೨೬೨ ॥

ಶ್ಲೋಕಃ – * ಭಕ್ತಾನಾಂ ಕಮಲಾನೇತುರ್ವೀಕ್ಷಾನುಭವದಾಸ್ಯತಃ ।
ಸತ್ತಾ ಸಮ್ಯದ್ವಿಧೇತೇಹ್ಯಸ್ಯಮಂಗಳಶಂಸನಾತ್ ॥ ೩೮೫ ॥

ತಾತ್ಪರ್ಯ – ಭಗವಂತನ ನಿರ್ಹೇತುಕ ಕೃಪೆಯಿಂದ ಅಜ್ಞಾನದ ಸಂಪರ್ಕವಿಲ್ಲದೆಯೇ ಜ್ಞಾನ ಸ್ವರೂಪಿಗಳಾದ ನಮ್ಮಾಳ್ವಾರ್ರೇ ಮೊದಲಾದ ಆಳ್ವಾರ್ರುಗಳಿಗೆ ಸತ್ತಾಸಮ್ಯದ್ಧಿಗಳು ಭಗವಂತನ ದರ್ಶನಾನುಭವ ಕೈಂಕರ್ಯಗಳಿಂದ ಉಂಟಾಗುವುವು. ಅವನನ್ನು ಕಾಣದೇ ಇದ್ದಾಗ ಆತ್ಮಧಾರಣ ಶ್ರಮಸಾಧ್ಯ ವಾದ್ದರಿಂದ 'ಕಾಣವಾರಾಯ್' ಎಂದು ಕೂಗಿಕೊಂಡಿರುವರು. ಈ ಪೆರಿಯಾಳ್ವಾರ್ರಿಗೋ ಅಂದರೆ ಆ ಸತ್ತಾಸಮ್ಯದ್ಧಿಗಳು ಭಗವಂತನ ಮಂಗಳಾಶಾಸನದಿಂದಲೇ ಉಂಟಾಗುವುವು.

ಸೂತ್ರಂ - ಉಹಂದರುಳಿನ ನಿಲಂಗಳೈಯನುಸಂಧಿತ್ತಾಲ್ ಊಣುಮುರಕ್ಕವುವಿನ್ನಿಕ್ಕೇ ಇವರುಡೈಯ ಯಾತ್ರೈಯೇ ನಮಕ್ಕೆಲ್ಲಾರ್ಕ್ಕುಂ ಯಾತ್ರೈ ಯಾಹವೇಣುಂ ॥ ೨೬೩ ॥

ಶ್ಲೋಕಃ – ✱ ದೇಹಯಾತ್ರಾ ಯಥಾ ನಿತ್ಯಂ ವಿಷ್ಣುಚಿತ್ತಸ್ಯ ಸಂಭವೇತ್ ।
ಮಂಗಳಾಶಾಸನಾದ್ವಿಷ್ಣೋಶ್ಶೇಷಾಣಾಮಪಿಸಾತಥಾ ॥ ೩೮೬ ॥

ತಾತ್ಪರ್ಯ – ಭಗವಂತನು ಭಕ್ತರುಗಳಿಗಾಗಿ ಅರ್ಚಾರೂಪದಿಂದ ಶ್ರೀರಂಗ, ತಿರುಪತಿ, ಯಾದವಾದ್ರಿ ಮೊದಲಾದ ದಿವ್ಯದೇಶಗಳಲ್ಲಿ ವಾಸಮಾಡುತ್ತಿರುವನಷ್ಟೇ. ಅವನ ದಿವ್ಯಮಂಗಳ ವಿಗ್ರಹವನ್ನೂ ಸೌಕುಮಾರ್ಯವನ್ನೂ ಕಂಡು ಅಪಾಯಬಹುಳವಿಷ್ಟವಾದ ಈ ದೇಶಗಳಲ್ಲಿ ಭಗವಂತನಿಗೆ ಎಲ್ಲಿ ಅಪಾಯ ಸಂಭವಿಸುವುದೋ ಎಂಬ ಶಂಕೆಯಿಂದ ಪೆರಿಯಾಳ್ವಾರ್ರಿಗೆ ಭಗವಂತನ ಮಂಗಳಾಶಾಸನವೇ ಯಾವ ರೀತಿ ದೇಹಯಾತ್ರೆಯಾಯಿತೋ ಅದೇ ರೀತಿ ನಮಗೆಲ್ಲರಿಗೂ ಆಗಬೇಕು.

ಸೂತ್ರಂ - ಆಹ್ಯೆಯಾಲೇ ಮಂಗಳಾಶಾಸನಂ ಸ್ವರೂಪಾನುಗುಣಂ ॥ ೨೬೪ ॥

ಶ್ಲೋಕಃ – ✱ ತಸ್ಮಾಚ್ಛೇಷ್ಯತಿಶಯೈಕದತ್ತದೃಷ್ಟಿತಯಾ ಸದಾ ।
ಶೇಷಾಣಾಮುಚಿತಂ ವಿಷ್ಣೋರ್ಮಂಗಳಾಶಾಸನಂ ಖಲು ॥ ೩೮೭ ॥

ತಾತ್ಪರ್ಯ – ಆದ್ದರಿಂದ ಶೇಷಿಯಾದ ಭಗವಂತನ ಅತಿಶಯವನ್ನು ಬಯಸುವುದು ಶೇಷನಾದವರಿಗೆ ಅವಶ್ಯಕರ್ತವ್ಯವಾದ್ದರಿಂದ ಮಂಗಳಾಶಾಸನವು ಸ್ವರೂಪಾನುಗುಣವೇ ಹೊರತು ಸ್ವರೂಪ ವಿರುದ್ಧವಲ್ಲ.

ಸೂತ್ರಂ - ಅನುಕೂಲರಾಹಿರಾರ್ ಜ್ಞಾನಭಕ್ತಿವೈರಾಗ್ಯಂಗಳ್ ಇಟ್ಟುವಾರಿನಾಪ್ಪೋಲೇ ವಡಿವಿಲೇತೊಡೈಕೊಳ್ಳಲಾಂಪಡಿ ಯಿರುಕ್ಕುಂ ಪರಮಾರ್ತರ್ ॥ ೨೬೫ ॥

ಶ್ಲೋಕಃ – ✱ ಜ್ಞಾನಭಕ್ತಿ ವಿರಕ್ತಿಷ್ವಪ್ಯೇಕೈಕಂಪ್ರಚುರತ್ವತಃ ।
ಅನುಕೂಲತನೌ ತತ್ತತ್ಪ್ರಧಾನಮಿವ ಭಾಸತೇ ॥ ೩೮೮ ॥

ಯಥಾಪ್ರಾಜ್ಞಹಿತಂಪಾತ್ರೇ ವಸ್ತೂತ್ಸಾರ್ಯಾನ್ಯದಾಹಿತಂ ।
ತದೇವೇತಿ ವಿಜಾನಾತಿ ಮನುಜಸ್ತದ್ವದತ್ರಚ ॥ ೩೮೯ ॥

ತಾತ್ಪರ್ಯ – ಈ ರೀತಿ ಮಂಗಳಾಶಾಸನವು ಸ್ವರೂಪಾನುಗುಣವೆಂದು ತಿಳಿಸಿದ ಮೇಲೆ ಸಹವಾಸಯೋಗ್ಯರಾದ ಅನುಕೂಲರು ಯಾರೆಂಬುದನ್ನು ತಿಳಿಸುತ್ತಾರೆ. ತತ್ವಯಾಥಾತ್ಮ್ಯಜ್ಞಾನವೂ ಭಗವದೇಕವಿಷಯಕವಾದ ಭಕ್ತಿಯೂ, ಭಗವದ್ವ್ಯತಿರಿಕ್ತವಾದ ವಿಷಯಗಳಲ್ಲಿ ವೈರಾಗ್ಯವೂ ಇವುಗಳೇಗ ಶ್ರೀವೈಷ್ಣವರಿಗೆ ಆಲಂಕಾರವು. ಈ ಮೂರನ್ನೂ ಮುಂದಿಟ್ಟು ಶ್ರೀವೈಷ್ಣವರಿಗೆ ಅತಿಶಯವನ್ನು ಹೇಳುವುದು. ಆದ್ದರಿಂದಲೇ ಯಾಮುನಾಚಾರ್ಯರು ನಾಥಮುನಿಗಳನ್ನು ಸ್ತೋತ್ರ ಮಾಡುವಾಗ "ಅಚಿಂತ್ಯಾದ್ಭುತಾಕ್ಲಿಷ್ಟಜ್ಞಾನವೈರಾಗ್ಯರಾಶಯೇ । ಅಗಾಧಭಗವದ್ಭಕ್ತಿಸಿಂಧವೇ" ಎಂದು ಕೊಂಡಾಡಿದರು. ಇವರ ಜ್ಞಾನಭಕ್ತಿ ವೈರಾಗ್ಯಗಳು ಅಹಮಹಮಿಕಯಾ ನಾನು ಮುಂದೇ ತಾನು ಮುಂದೇ ಎಂಬುದಾಗಿ ಒಂದೊಂದೂ ಪ್ರಧಾನವಾಗಿ ತೋರೋಣದರಿಂದ ಒಂದು ಪಾತ್ರೆಯಲ್ಲಿ ಇಟ್ಟಿದ್ದ ಪದಾರ್ಥವನ್ನು ತೆಗೆದು ಅದೇ ಪಾತ್ರೆಯಲ್ಲಿ ಮತ್ತೊಂದು ಪದಾರ್ಥವನ್ನು ಇಟ್ಟ ಪಕ್ಷದಲ್ಲಿ ಮೊದಲಿಂದಲೂ ಅದೇ

ಪದಾರ್ಥವಿತ್ತೆಂದು ಮೊದಲು ನೋಡುವವನು ಯಾವ ರೀತಿ ತಿಳಿದುಕೊಳ್ಳುವನೋ ಅದೇ ರೀತಿ ಇವರ ಜ್ಞಾನ ಭಕ್ತಿ ವೈರಾಗ್ಯಗಳೂ ಕೂಡ ಒಂದೊಂದೂ ಇವರ ಶರೀರದಲ್ಲಿ ಪ್ರಧಾನವಾಗಿ ಕಾಣುವುವು. ಈ ರೀತಿ ಜ್ಞಾನ ಭಕ್ತಿ ವೈರಾಗ್ಯವುಳ್ಳವರೇ ಅನುಕೂಲರು. ಪರಮಾರ್ತಿಯುಳ್ಳವರು, ಪರಮಾರ್ತಿಯೆಂದರೆ ಈ ಸಂಸಾರದಲ್ಲಿ ಭಗವದ್ವಿಷಯವನ್ನು ಹೊಂದದೇ ಇರೋಣದರಿಂದ ಈ ಸಂಸಾರಬಂಧನವನ್ನು ಸಹಿಸದೇ ಇರುವಿಕೆಯು ಇಂಥವರೇ ಸಹವಾಸಯೋಗ್ಯರು.

ಸೂತ್ರಂ - ಒರುಶೆಯ್ ನಿರಂಬ ನೀರ್ ನಿನ್ನಾಲ್ ಅಶಲ್‌ಶೆಯ್‌ವೊಶಿಂದು
ಕಾಟ್ಟುವಾಪೋಲೇಇವೈಯಿಲ್ಲಾದಾಕ್ಕುಂ ಇವರ್ಹಳೋಟ್ಟೈ ಸಂಬಂಧತ್ತಾಲೇ ಉರಾವುತಲ್ ತೀರಕ್ಕಡವತಾಯಿರುಕ್ಕುಂ ॥ ೨೬೬ ॥

ಶ್ಲೋಕಃ – ❋ ಜ್ಞಾನಾದ್ಯಭಾವೇಪಿ ನೃಣಾಮಮೀಷಾಂ
ಸಂಬಂಧತಸ್ತದ್ಗುಣಲೇಶಲಾಭಃ ।
ನಿರಾಡ್ಯಕೇದಾರ ಸಮೀಪವರ್ತಿ
ಕ್ಷೇತ್ರಂ ಭವೇಚ್ಛುಷ್ಯತರಂ ಯಥಾರ್ದ್ರಂ ॥ ೩೯೦ ॥

ತಾತ್ಪರ್ಯ – ಈ ಅನುಕೂಲರ ಸಹವಾಸದಿಂದ ಏನಾದರೂ ಪ್ರಯೋಜನವುಂಟೋ ಅಂದರೆ ಉಂಟು. ಅದೇನೆಂದರೆ ಈ ಜ್ಞಾನ ಭಕ್ತಿ ವೈರಾಗ್ಯಗಳಿಲ್ಲದಿದ್ದವರಿಗೂ ಇವರುಗಳ ಸಂಬಂಧದಿಂದ ಸ್ವಲ್ಪವಾದರೂ ಜ್ಞಾನಭಕ್ತಿ ವೈರಾಗ್ಯಗಳು ತಲೆದೋರುವವು. ಅದು ಹೇಗೆಂದರೆ ನೀರು ತುಂಬಿದ ಗದ್ದೆಯ ಪಕ್ಕದಲ್ಲಿರುವ ಒಣಗಿ ಹೋದ ಗದ್ದೆಯಲ್ಲಿ ಅದರ ಸಂಬಂಧದಿಂದ ಯಾವ ರೀತಿ ನೀರಿನ ಪಶಿಮೆಯು ಉಂಟಾಗುವುದೋ ಅದೇ ರೀತಿ ಉಂಟಾಗುವುವು.

ಸೂತ್ರಂ - ಆರುನೀರ್‌ವರವಣಿತ್ತಾನಾಲ್ ಅದುಕ್ಕೀಡಾನ
ಅಡೈಯಾಳಂಗಳುಂಡಾವಾಪೋಲೇ ಪ್ರಾಪ್ತಿಯಣಿತ್ತಾನವಾರೇ ಇಂದ
ಸ್ವಭಾವವಿಶೇಷಂಗಳ್ ತನ್ನಡಿಯೇ ವಿಳೈಯಕ್ಕಡವತಾಯಿರುಕ್ಕುಂ ॥ ೨೬೭ ॥

ಶ್ಲೋಕಃ – ❋ ಆಗಾಮಿ ಪೂರಾತ್ಪ್ರಥಮಂ ವಿಶುಷ್ಕ
ಸ್ರೋತಸ್ವಿನೀ ಸೈಕತವಾರ್ದ್ರಭಾವಂ ।
ಯಥಾ ವ್ರಜೇನ್ಮತ್ಯಮಯೆಂಸ್ವಭಾವಃ
ಪ್ರಾಪ್ತ್ಯರ್ಯದಾ ಸನ್ನಿಹಿತಾ ತದೈವ ॥ ೩೯೧ ॥

ತಾತ್ಪರ್ಯ – ಇವರುಗಳ ಸಹವಾಸದಿಂದ ಈ ಸ್ವಭಾವಗಳುಂಟಾಗುವುವೋ ಅಂದರೆ ನದಿಯಲ್ಲಿ ಪ್ರವಾಹವು ಬರುವುದಕ್ಕೆ ಮೊದಲು ಸೂಚಕವಾಗಿ ಯಾವ ರೀತಿ ಒಣಗಿಹೋದ ಆ ನದಿಯ ಮರಳುಗಳು ಕುಸಿದು ತೇವವಾಗುವುದೋ ಅದೇ ರೀತಿ ಭಗವತ್ಪ್ರಾಪ್ತಿಯು ಸನ್ನಿಹಿತವಾದಾಗ ಹಿಂದೆ ಹೇಳಿದ ಸ್ವಭಾವಗಳು ತಾನಾಗಿಯೇ ಉಂಟಾಗುವುವು.

ಸೂತ್ರಂ - ಇವತ್ತೈಕ್ಕೊಂಡು ಚರಮಶರೀರವೆನ್ನು ತನಕ್ಕೇ
ಅರುತಿಯಿಡಲಾಯಿರುಕ್ಕುಂ ॥ ೨೬೮ ॥

ಶ್ಲೋಕಃ – ✱ ಅಹಂಪೂರ್ವಿಕಯಾ ತಾವದ್ಜ್ಞಾನಪ್ರೀತಿವಿರಕ್ತಯಃ ।
ಆವಿರ್ಭವೇಯುರ್ಯಸ್ಮಿಂಸ್ತು ತಸ್ಯೋತ್ಪತ್ತಿಃ ಪುನರ್ನಹಿ ॥ ॥ ೩೯೨ ॥

ತಾತ್ಪರ್ಯ – ಈ ರೀತಿ ಅಹಮಹಮಿಕಯಾ ಬರುವ ಜ್ಞಾನ ಭಕ್ತಿ ವೈರಾಗ್ಯಗಳನ್ನು ನೋಡಿದರೆ ತನಗೆ ಇದೇ ಕೊನೆಯ ಶರೀರವು. ಮುಂದೆ ಜನ್ಮವಿಲ್ಲವೆಂದು ತನಗೇ ತಿಳಿಯುವುದು.

ಸೂತ್ರಂ – ಪ್ರತಿಕೂಲರಾಹಿರಾರ್ ದೇಹಾತ್ಮಾಭಿಮಾನಿಹಳುಂ ಸ್ವತಂತ್ರರುಂ
ಅನ್ಯಶೇಷಭೂತರುಂ ಉಪಾಯಾಂತರನಿಷ್ಠರುಂ
ಸ್ವಪ್ರಯೋಜನಪರರುಂ ॥ ೩೬೯ ॥

ಶ್ಲೋಕಃ – ✱ ಜ್ಞಾನಾದಿನಾಶಕತ್ವಾಚ್ಚ ಸಹವಾಸಬಹಿಷ್ಕೃತಾಃ ।
ಪ್ರತಿಕೂಲಾ ಇತೀರ್ಯಂತೇ ತೇಷಾಂ ಲಕ್ಷಣಮೀದೃಶಂ ॥ ॥ ೩೯೩ ॥

ದೇಹಮೇವ ವಿಜಾನಂತ ಆತ್ಮಾನಂ ತತ್ರ ಯೇ ಸದಾ ।
ಅಹಂಬುದ್ಧಿಂ ವಿತನ್ವಂತಿ ತೇ ಗತಾಃ ಪ್ರತಿಕೂಲತಾಂ ॥ ॥ ೩೯೪ ॥

ದೇಹಾತಿರಿಕ್ತ ಆತ್ಮೇತಿ ಜ್ಞಾತ್ವಾ ಕಸ್ಯಾಪಿ ಶೇಷತಾಂ ।
ಸಂಮನ್ವತೇ ನ ಯೇ ತೇಽಪಿ ಸ್ವತಂತ್ರಾಸ್ತಾದೃಶಾಃ ಖಲು ॥ ॥ ೩೯೫ ॥

ಸಿದ್ಧೇಽಪಿ ಭಗವದ್ಯಾಸ್ಯೇಹ್ಯಪ್ರಾಪ್ತ ವಿಷಯೇಷು ಯೇ ।
ದಾಸಭಾವಂ ಪ್ರಕುರ್ವಂತಿ ತೇನ್ಯಶೇಷಾಸ್ತಥಾವಿಧಾಃ ॥ ॥ ೩೯೬ ॥

ಭಗವತ್ಯಾಪ್ತಿಕಾಮೇನ ಭಜಂತೇ ಯೇ ಚ ಸರ್ವದಾ ।
ಉಪಾಯತ್ವೇನ ಕರ್ಮಾದೀನುಪಾಯಾಂತರಗಾಶ್ಚತೇ ॥ ॥ ೩೯೭ ॥

ಭಗವದಂಘ್ರಿಮುಪಾಯತಯಾ ವ್ರಜನ್
ತದಭಿಕಿಂಕರತಾಮನಿಶಂ ಸ್ವಯಂ ।
ನಿಜಸುಭೋಗ್ಯತಯಾ ಮನಸಿ ಸ್ಮರನ್
ಭವತಿ ಯಸ್ಸಪರೋ ನಿಜಲಾಭಭಾಕ್ ॥ ॥ ೩೯೮ ॥

ತಾತ್ಪರ್ಯ – ಜ್ಞಾನಾದಿ ನಾಶಕರಾದ್ದರಿಂದ ಸಹವಾಸ ಯೋಗ್ಯರಲ್ಲದವರು ಪ್ರತಿಕೂಲರು, ದೇಹಕ್ಕಿಂತಲೂ ಬೇರೆಯಾದ ಆತ್ಮವು ಇದೆಯೆಂದರಿಯದೆ ಕಣ್ಣಿಗೆ ಕಾಣುವ ದೇಹದಲ್ಲಿ ಅಹಂ ಬುದ್ಧಿಯಿಂದ ಅದನ್ನೇ ಆತ್ಮವೆಂದು ಅಭಿಮಾನಿಸಿರುವವರೂ ಪ್ರತಿಕೂಲರು.

ದೇಹಕ್ಕಿಂತಲೂ ಅತಿರಿಕ್ತವಾದ ಆತ್ಮವಿದೆಯೆಂದರಿತೂ ಮತ್ತೊಬ್ಬರಿಗೆ ಅಡಿಯಾಳಾಗುವುದಿಲ್ಲ ನಾನೇ ಸ್ವತಂತ್ರನು ಎಂದಿರುವವನೂ ಪ್ರತಿಕೂಲನು.

ಭಗವಂತನಿಗೇ ಶೇಷಭೂತನಾದ ತನ್ನನ್ನು ಅಪ್ರಾಪ್ತವಿಷಯವಾದ ಮತ್ತೊಬ್ಬರಿಗೆ ಶೇಷನಾಗಿರುವವನೂ ಪ್ರತಿಕೂಲನು.

ಪ್ರಾಪ್ತವಾದ ಭಗವಂತನಿಗೇ ಶೇಷನಾಗಿ ಅವನ ಚರಣಾರವಿಂದಗಳನ್ನೇ ಶರಣು ಹೊಂದದೆ ಕರ್ಮಾದಿಗಳನ್ನು ಉಪಾಯವನ್ನಾಗಿ ಹೊಂದಿರುವವರೂ ಪ್ರತಿಕೂಲರೇ.

ಭಗವಂತನ ಚರಣಕಮಲಗಳನ್ನೇ ಉಪಾಯವನ್ನಾಗಿ ಹೊಂದಿಯೂ ಉಪೇಯವಾದ ಭಗವತ್ಕೈಂಕರ್ಯವನ್ನು ಸ್ವಭೋಗ್ಯವನ್ನಾಗಿ ತಿಳಿದಿರುವವರೂ ಪ್ರತಿಕೂಲರೇ.

ಸೂತ್ರಂ - ಇವರ್ಹಳುಕ್ಕು ಉದ್ದೇಶ್ಯರುಂ ಉಪಾಯೋಪೇಯುಂಗಳುಂ ಭೇದತ್ತಿರುಕ್ಕುಂ ॥ ೨೭೦ ॥

ಶ್ಲೋಕಃ – ✱ ಏತೇಷಾಂ ಪ್ರತಿಕೂಲಾನಾಂ ಸ್ವಾಭಿಪ್ರಾಯ ವಿಶೇಷತಃ ।
ಆದರಾರ್ಹಾ ಉಪಾಯಾ ಅಪ್ಯುಪೇಯಾ ವಿವಿಧಾಸ್ಸ್ಮೃತಾಃ ॥ ॥ ೩೯೯ ॥

ತಾತ್ಪರ್ಯ – ತಮ್ಮ ಇಷ್ಟಾನುಸಾರವಾಗಿ ಫಲಕೊಡುವವರು ಆದರಿಸಲು ಯೋಗ್ಯರು ತಮಗೆ ಇಷ್ಟವಾದ ಪುರುಷಾರ್ಥಗಳನ್ನುಂಟುಮಾಡಿಕೊಡುವ ಸಾಧನಗಳು ಉಪಾಯಂಗಳು. ತಮಗೆ ಇಷ್ಟವಾದ ಪುರುಷಾರ್ಥಗಳು ಉಪೇಯಗಳು, ಈ ರೀತಿ ನಾನಾವಿಧವಾಗಿರುವುವು.

ಸೂತ್ರಂ - ದೇಹಾತ್ಮಾಭಿಮಾನಿಹಳಕ್ಕುದ್ದೇಶ್ಯರ್ ದೇಹವರ್ಧಕರಾನ ಮನುಷ್ಯರ್ಹಳ್ ಉಪಾಯಮರ್ಥಂ ಉಪೇಯಮೈಹಿಕಭೋಗಂ ಸ್ವತಂತ್ರಕ್ಕುದ್ದೇಶ್ಯರ್ ಸ್ವರ್ಗಾದಿಭೋಗಪ್ರದರ್ ಉಪಾಯಂ ಕರ್ಮಾನುಷ್ಠಾನಂ ಉಪೇಯಂ ಸ್ವರ್ಗಾದಿಭೋಗಂ ಅನ್ಯಶೇಷಭೂತಕ್ಕುದ್ದೇಶ್ಯರ್ ಬ್ರಹ್ಮರುದ್ರಾದಿಗಳ್. ಉಪಾಯಂ ತತ್ಪಾದಾಶ್ರಯಣಂ ಉಪೇಯಂ ತದಾನ್ಯಯಜ್ಯಂ ಉಪಾಯಾಂತರನಿಷ್ಠಕ್ಕುದ್ದೇಶ್ಯನ್ ದೇವತಾಂತರ್ಯಾಮಿಯಾನ ಸರ್ವೇಶ್ವರನ್ ಉಪಾಯಂ ಕರ್ಮಜ್ಞಾನಭಕ್ತಿಹಳ್ ಉಪೇಯಂ ಭಗವದನುಭವಂ ಸ್ವಪ್ರಯೋಜನಪರಕ್ಕುದ್ದೇಶ್ಯನ್ "ನೆಂಜಿನಾಲ್ ನಿನೈಪ್ಪಾನ್ ಯವನ್" ಎನ್ಗಿರವನ್ ಉಪಾಯಂ ಸ್ವಕೀಯಸ್ವೀಕಾರಂ ಉಪೇಯಂ ಸ್ವಾರ್ಥಕೈಂಕರ್ಯಂ ॥ ೨೭೧ ॥

ಶ್ಲೋಕಃ – ✱ ಉದ್ದೇಶ್ಯಾ ಮನುಜಾ ನ್ಯಾಣಾಂ ದೇಹಾತ್ಮೈಕಾಭಿಮಾನಿನಾಂ ।
ಉಪಾಯೋ ಧನಹೇಮಾದೀನ್ಯುಪೇಯೋ ಭೋಗಐಹಿಕಃ ॥ ॥ ೪೦೦ ॥

ಸ್ವತಂತ್ರಾಣಾಂ ಸಮುದ್ದೇಶ್ಯಾಸ್ಸ್ವರ್ಗಾದಿ ಸುಖದಾಯಿನಃ ।
ಉಪಾಯೋಹ್ಯಧ್ವರೋ ನ್ಯಾಣಾಮುಪೇಯಸ್ಸ್ವರ್ಗಗಂ ಸುಖಂ ॥ ॥ ೪೦೧ ॥

ಅನ್ಯದಾಸ್ಯೈಕನಿಷ್ಠಾನಾಮುದ್ದೇಶ್ಯಾಃ ಪದ್ಮಜಾದಯಃ ।
ತದಾಶ್ರಯ ಉಪಾಯಸ್ಸ್ಯಾದುಪೇಯಸ್ತದಭಿಷ್ಟುತಿಃ ॥ ॥ ೪೦೨ ॥

ಉಪಾಯೋಂತರ ನಿಷ್ಠಾನಾಮುದ್ದೇಶ್ಯೋ ದೇವಗೋ ಹರಿಃ ।
ಉಪಾಯೋಜ್ಞಾನಕರ್ಮಾದಿ ಹ್ಯುಪೇಯಸ್ತತ್ಸುಭೋಕ್ತೃತಾ ॥ ॥ ೪೦೩ ॥

ಸ್ವಪ್ರಯೋಜನನಿಷ್ಠಾನಾಮುದ್ದೇಶ್ಯೋಽರ್ಚಾಕೃತಿರ್ಹರಿಃ ।
ಸ್ವಸ್ವೀಕಾರ ಉಪಾಯಸ್ಸ್ಯಾದುಪೇಯಸ್ಸ್ವಾರ್ಥದಾಸತಾ ॥ ॥ ೪೦೪ ॥

ತಾತ್ಪರ್ಯ – ದೇಹವನ್ನೇ ಆತ್ಮವೆಂದು ಭಾವಿಸಿರುವವರಿಗೆ ಉದ್ದೇಶ್ಯರು ಧಾರಕ ಪೋಷಕ ಪದಾರ್ಥಗಳಿಂದ ಈ ದೇಹವನ್ನು ಚೆನ್ನಾಗಿ ಪೋಷಿಸುವ ಮನುಷ್ಯರು ಅಭಿಮತ ಸಿದ್ಧಿಗೆ ಉಪಾಯವು ಸುವರ್ಣಾದಿ ಧನವು. ಅಭಿಮತವಾದ ಉಪೇಯವು. ಹೆಂಗಸು, ಅನ್ನಪಾನ ಇವುಗಳ ಅನುಭವವು.

ದೇಹಕ್ಕಿಂತಲೂ ಅತಿರಿಕ್ತವಾದ ಆತ್ಮವುಂಟು, ಅವನಿಗೇ ಜ್ಞಾತೃತ್ವ, ಕರ್ತೃತ್ವ, ಭೋಕ್ತೃತ್ವ ಇವುಗಳು ಎಂದೂ ಶಾಸ್ತ್ರದಿಂದ ತಿಳಿದು ತಾವೇ ಸ್ವತಂತ್ರರೆಂದು ಇರುವವರಿಗೆ ಉದ್ದೇಶ್ಯರು ತಮ್ಮ ಇಷ್ಟಾರ್ಥವನ್ನು ಕೊಡುವ ಅಗ್ನಿ, ಇಂದ್ರ ಇವರೇ ಮೊದಲಾದ ದೇವತೆಗಳು ಉಪಾಯವು, ಜ್ಯೋತಿಷ್ಟೋಮಾದಿ ಕರ್ಮಾನುಷ್ಠಾನವು ಉಪೇಯವು. ಸ್ವರ್ಗಾದಿ ಸುಖಾನುಭವವು.

ಅನ್ಯಶೇಷಭೂತರಿಗೆ ಉದ್ದೇಶ್ಯರು ಬ್ರಹ್ಮರುದ್ರಾದಿಗಳು. ಉಪಾಯವು ದುರಾರಾಧ್ಯರಾದದೇವತೆಗಳ ಹತ್ತಿರ ದುಷ್ಕರ ಸಮಾಶ್ರಯಣವು. ಉಪೇಯವು, ಅವರುಗಳೊಡನೇ ಸಮಾನ ಭೋಗವುಳ್ಳ ಸಾಯುಜ್ಯವು.

ಆತ್ಮಸ್ವರೂಪವು ಭಗವದನನ್ಯಾರ್ಹಶೇಷವು ಎಂದು ವೇದಾಂತದಿಂದ ತಿಳಿದಿದ್ದರೂ ತನ್ನ ಇಷ್ಟಾರ್ಥ ಸಿದ್ಧಿಗಾಗಿ ಬೇರೆ ಉಪಾಯ ನಿಷ್ಠರಿಗೆ ಉದ್ದೇಶ್ಯನು ಅಗ್ನೀಂದ್ರಾದಿ ದೇವತೆಗಳಿಗೆ ಅಂತರ್ಯಾಮಿಯಾದ ಈಶ್ವರನು. ಉಪಾಯವು ಮೋಕ್ಷ ಸಾಧನವಾಗಿ ಶಾಸ್ತ್ರಸಿದ್ಧವಾದ ಕರ್ಮಜ್ಞಾನ ಭಕ್ತಿ ಯೋಗಗಳು. ಉಪೇಯವು ನಿರತಿಶಯಾನಂದರೂಪವಾದ ಭಗವದನುಭವವು.

ಕರ್ಮಾದ್ಯುಪಾಯಗಳಲ್ಲಿ ದುಷ್ಕರತ್ವ ಬುದ್ಧಿಯಿಂದ ಸುಕರವಾದ ಪ್ರಪತ್ತಿಯಲ್ಲಿಳಿದ ಸ್ವಪ್ರಯೋಜನ ಪರರಿಗೆ ಉದ್ದೇಶ್ಯನು ಅರ್ಚಾರೂಪಿಯಾದ ಭಗವಂತನು. ಉಪಾಯವು ಅನಿಷ್ಟನಿವೃತ್ತಿಪೂರ್ವಕವಾದ ಇಷ್ಟಪ್ರಾಪ್ತಿಗಾಗಿ ಅವನನ್ನೇ ಆಶ್ರಯಿಸುವಿಕೆ. ಉಪೇಯವು ಭಗವತ್ಕೈಂಕರ್ಯವು.

ಸೂತ್ರಂ - ಮುದಲ್ ಶೊನ್ನ ಮೂವರುಂ ನಿಗ್ರಹತ್ತುಕ್ಕಿಲಕ್ಕು
ಮತ್ತೈ ಯಿರುವರುಂ ಅನುಗ್ರಹತ್ತುಕ್ಕಿಲಕ್ಕು ॥ ೨೭೨ ॥

ಶ್ಲೋಕಃ – ❋ ಪ್ರಥಮಂ ಪ್ರತಿಪಾದಿತಾಸ್ಯಯಸ್ತೇ
ಭಗವನ್ನಿಗ್ರಹಪಾತ್ರತಾಂ ವ್ರಜೇಯುಃ ।
ಇತರೇಭಗವತ್ಪ್ರಸಾದಪಾತ್ರಂ
ಭಗವತ್ಪ್ರೀತಿಕರಾಃ ಪ್ರಯಾಂತಿ ತೇತು ॥ ॥ ೪೦೫ ॥

ತಾತ್ಪರ್ಯ – ದೇಹಾತ್ಮಾಭಿಮಾನಿಗಳೂ ಸ್ವಸ್ವಾತಂತ್ರ್ಯವುಳ್ಳವರೂ ಅನ್ಯಶೇಷರುಗಳೂ ಈ ಮೂವರೂ ಕ್ಷಿಪಾಮಿ ಎಂಬಂತೆ ಭಗವಂತನ ನಿಗ್ರಹಕ್ಕೆ ಪಾತ್ರರಾದವರು. ಭಗವದನನ್ಯಾರ್ಹಶೇಷವಾದ ಸ್ವರೂಪವನ್ನು ತಿಳಿದು ಭಗವದನುಭವಕೈಂಕರ್ಯಗಳನ್ನು ಪುರುಷಾರ್ಥವನ್ನಾಗಿ ತಿಳಿದಿರುವದರಿಂದಲೂ ಅನನ್ಯಪ್ರಯೋಜನರಾಗಿ ಕರ್ಮಜ್ಞಾನಾದಿ ಬೇರೇ ಉಪಾಯಗಳಲ್ಲೂ ಪ್ರಪತ್ತಿಯಲ್ಲೂ ನಿಷ್ಠರಾಗಿರುವುದರಿಂದ ಇತರ ಇಬ್ಬರುಗಳು ಭಗವಂತನ 'ದದಾಮಿ ಮೋಕ್ಷಯಿಷ್ಯಾಮಿ' ಎಂಬಂತೆ ಅನುಗ್ರಹಕ್ಕೆ ಪಾತ್ರರಾದವರು.

ಸೂತ್ರಂ - ಮೂವರುಡೈಯವುಂ ಕರ್ಮವನುಭವಿನಾಶ್ಯಂ
ನಾಲಾವುಧಿಕಾರಿಕ್ಕುಪ್ಪಾಯಶ್ಚಿತ್ತವಿನಾಶ್ಯಂ ಅಂಜಾವುಧಿಕಾರಿಕ್ಕು
ಪುರುಷಕಾರವಿನಾಶ್ಯಂ ॥ ೨೭೩ ॥

ಶ್ಲೋಕಃ – ✱ ತ್ರಯಾಣಾಂ ಪ್ರಥವೋಕ್ತಾನಾಂ ಕರ್ಮಾನುಭವತಃ ಕ್ಷಯಂ ।
ತಥಾ ಯಾತಿ ಚತುರ್ಥಸ್ಯ ಪ್ರಾಯಶ್ಚಿತ್ತೇನ ನಶ್ಯತಿ ॥ ॥ ೪೦೬ ॥

ಲಕ್ಷ್ಮೀಪುರುಷಕಾರೇಣ ಪಂಚಮಸ್ಯಾಧಿಕಾರಿಣಃ ।
ಭಗವತ್ಸ್ವೀಕೃತತ್ವಾಚ್ಚ ಸರ್ವಂ ಕರ್ಮ ವಿನಶ್ಯತಿ ॥ ॥ ೪೦೭ ॥

ತಾತ್ಪರ್ಯ – ಭಗವಂತನ ನಿಗ್ರಹಕ್ಕೆ ಪಾತ್ರರಾದ ಮೂರು ಪ್ರಕಾರರಾದವರ ಕರ್ಮವು "ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ" ಎಂಬಂತೆ ಅನುಭವದಿಂದಲೇ ನಾಶವಾಗುವುದು. ಅನುಗ್ರಹಕ್ಕೆ ಪಾತ್ರರಾದ ಇಬ್ಬರುಗಳಲ್ಲಿ ಉಪಾಯಾಂತರನಿಷ್ಠರಾದ ನಾಲ್ಕನೇ ಅಧಿಕಾರಿಗಳ ಕರ್ಮವು ಕರ್ಮ ಜ್ಞಾನ ಭಕ್ತಿಗಳಲ್ಲಿ ಯಾವುದಾದರೂ ಒಂದನ್ನು ಉಪಾಯವನ್ನಾಗಿ ಅನುಷ್ಠಿಸಿದ ಪಕ್ಷದಲ್ಲಿ ಅದನ್ನೇ ಪ್ರಾಯಶ್ಚಿತ್ತವನ್ನಾಗಿಸಿ ಭಗವಂತನು ನಶಿಸುವಂತೆ ಮಾಡುವನು. ಪ್ರಪತ್ತಿನಿಷ್ಠನಾದ ಐದನೇ ಅಧಿಕಾರಿಯ ಕರ್ಮವು ಲಕ್ಷ್ಮಿಯ ಪುರುಷಕಾರದಿಂದ ಭಗವಂತನು ನಶಿಸುವಂತೇ ಮಾಡುವನು.

**ಸೂತ್ರಂ - ಉಪಾಯಂ ಸ್ವೀಕಾರಕಾಲತ್തില್ പുരുഷസാപേക്ഷമುമായ്
പുരുഷകാരസാപേക്ഷമുമായിരുക്കും
കാര്യകാലത്തിലുഭയനിരപേക്ഷമായിരുക്കും ॥ ೨೭೪ ॥**

ಶ್ಲೋಕಃ – ✱ ಸ್ವೀಕಾರ ಸಮಯೇ ಮರ್ತ್ಯಂ ಸಿದ್ಧೋಪಾಯಸ್ತು ಕಾಂಕ್ಷತೇ ।
ತಥಾ ಪುರುಷಕಾರಂ ಚ ಫಲಕಾಲೇ ನ ಹಿ ದ್ವಯಂ ॥ ॥ ೪೦೮ ॥

ತಾತ್ಪರ್ಯ – ಪುರುಷಕಾರ ಸಾಪೇಕ್ಷವೆಂದು ಹೇಳಿದ ಪಕ್ಷದಲ್ಲಿ ಉಪಾಯದ ನಿರಪೇಕ್ಷತೆಯು ಹಾನಿಯುಂಟಾಗುವುದಿಲ್ಲವೇ ಎಂದರೆ ಸಹಾಯಾಂತರ ಸಂಬಂಧವನ್ನು ಸಹಿಸದೇ ಇರುವ ಸಿದ್ಧೋಪಾಯವು ಶರಣ ವರಣ ರೂಪ ಸ್ವೀಕಾರ ಕಾಲದಲ್ಲಿ ಸ್ವೀಕರಿಸುವ ಪುರುಷನನ್ನೂ, ಸ್ವೀಕರಿಸುವಂತೆ ಮಾಡುವ ಪುರುಷಕಾರವನ್ನೂ ಅಪೇಕ್ಷಿಸುವುದು ಸ್ವೀಕರಿಸಿದಮೇಲೇ ಇವನ ಅನಿಷ್ಟ ನಿವೃತ್ತಿ ಇಷ್ಟಪ್ರಾಪ್ತಿಯನ್ನುಂಟುಮಾಡುವ ಕಾರ್ಯಕಾಲದಲ್ಲಿ ಪುರುಷನನ್ನೂ, ಪುರುಷಕಾರವನ್ನೂ ಅಪೇಕ್ಷಿಸದೇ ತಾನಾಗಿಯೇ ಉಂಟಾಗುವುದು ಕಾರ್ಯಕಾಲದಲ್ಲಿ ಸಹಕಾರಿಯನ್ನಪೇಕ್ಷಿಸಿದ ಪಕ್ಷದಲ್ಲಲ್ಲವೇ ಉಪಾಯದ ನಿರಪೇಕ್ಷತೆಗೆ ಹಾನಿಯುಂಟಾಗುವುದು, ಅದಿಲ್ಲವಾದ್ದರಿಂದ ಹಾನಿಯಿಲ್ಲ.

**ಸೂತ್ರಂ - സ്വപ്രയോജനപരരെല്ലാരെയും പ്രതികൂലരാഹ
നിനൈക്കലാമോവെന്നില് ॥ ೨೭೫ ॥**

ಶ್ಲೋಕಃ – ✱ ಸ್ವಪ್ರಯೋಜನ ನಿಷ್ಠಾಂಸ್ತಾನ್ಪ್ರತಿಕೂಲಾನ್ವಿಚಿಂತಯೇತ್ ।
ಕಿಮುತ ತರ್ಹಿ ಶಠಾರ್ಯಾದಿ ಭಕ್ತಾ ಅಪಿ ತಥಾವಿಧಾಃ ॥ ॥ ೪೦೯ ॥

ತಾತ್ಪರ್ಯ – ಸ್ವಪ್ರಯೋಜನಪರರೆಲ್ಲರನ್ನೂ ಪ್ರತಿಕೂಲರೆಂದು ನೆನೆಸುವುದಾದರೆ ಅನುಕೂಲರಾದ ಆಳ್ವಾರ್ಪ್ರಗಳಲ್ಲಿಯೂ "ನಮಕ್ಕೇನಲಮಾತಲಿಲ್" "ನಾಂಕಂಡುಹಂದುಕೂತ್ತಾಡ ಇಲತ್ತೂಡೇ ನಡವಾಯೇ" ಎಂದೂ, "ಕಂಡು ನಾನುನ್ನೈಯುಂಹಕ್ಕ" ಎಂದೂ ಇತ್ಯಾದಿ ವಚನಗಳಿಂದಲೂ ಮಡಲೆಡುಂಕೈ ಮೊದಲಾದ ಪ್ರವೃತ್ತಿಗಳಿಂದಲೂ ಸ್ವಪ್ರಯೋಜನಪರತೆಯು ತೋರುವುದಾದ್ದರಿಂದ ಅವರನ್ನೂ ಪ್ರತಿಕೂಲರೆಂದು ನೆನೆಸಬೇಕಾಗುವುದಲ್ಲವೇ ಎಂದು ಶಂಕಿಸಿ ಸಮಾಧಾನ ಹೇಳುವರು.

ಸೂತ್ರಂ - ಇಂಗು ಸ್ವಪ್ರಯೋಜನಮೆನ್ನಿರದು
ಆಶ್ರಯದೋಷಜನ್ಯಮಾನತ್ತೈ ॥ ೨೭೬ ॥

ಶ್ಲೋಕಃ – ❋ ಸ್ವಪ್ರಯೋಜನಮತ್ರೋಕ್ತಮಾಶ್ರಯಾಜ್ಞಾನದೋಷಜಂ ।
ಶಠಾರ್ಯಾದೇಸ್ತು ವಿಷಯ ದೋಷಜನ್ಯಂ ಪ್ರಯೋಜನಂ ॥ ॥ ೪೧೦ ॥

ತಾತ್ಪರ್ಯ – ಇಲ್ಲಿ ಸ್ವಪ್ರಯೋಜನವೆಂಬುದು ಅನುಭವಕೈಂಕರ್ಯಗಳಿಗೆ ಆಶ್ರಯವಾದ ಚೇತನನ ಅವಿದ್ಯಾದಿ ದೋಷದಿಂದ ಬಂದ ಸ್ವಪ್ರಯೋಜನವು. ಆಳ್ವಾರ್ರುಗಳ ಸ್ವಪ್ರಯೋಜನವೋ ಅಂದರೆ ವಿಷಯ ದೋಷದಿಂದ ಉಂಟಾದ್ದು, ಆದ್ದರಿಂದ ಅವಿದ್ಯಾದಿ ದೋಷದಿಂದ ಬಂದ ಸ್ವಪ್ರಯೋಜನಪರರನ್ನು ಪ್ರತಿಕೂಲರೆಂದು ಹೇಳಿದರು.

ಸೂತ್ರಂ - ಆಹ್ಯೆಯಾಲೇದೋಷಮಿಲ್ಲೈ ॥ ೨೭೭ ॥

ಶ್ಲೋಕಃ – ❋ ಪ್ರಾತಿಕೂಲ್ಯಾಖ್ಯವಿಷಯೇ ಸ್ವಪ್ರಯೋಜನ ಭೇಜುಷಾಂ ।
ಭೇದಃ ಪ್ರದರ್ಶಿತೋ ಯಸ್ಮಾತ್ತಸ್ಮಾದ್ದೋಷೋ ನ ವಿದ್ಯತೇ ॥ ॥ ೪೧೧ ॥

ತಾತ್ಪರ್ಯ – ಪ್ರಾತಿಕೂಲ್ಯಪೇತವಾಗಿ ಹೇಳಲ್ಪಟ್ಟ ಸ್ವಪ್ರಯೋಜನವು ಆಶ್ರಯ ದೋಷಜನ್ಯವಾದ್ದರಿಂದಲೂ, ಆಳ್ವಾರ್ರುಗಳ ಸ್ವಪ್ರಯೋಜನವು ವಿಷಯದೋಷಜನ್ಯವಾದ್ದರಿಂದಲೂ ಈ ರೀತಿ ಭೇದವಿರುವುದರಿಂದ ದೋಷವಿಲ್ಲ.

ಸೂತ್ರಂ - ವಿಷಯ ದೋಷತ್ತಾಲ್ ವರುಮುವ್ಯೆಯೆಲ್ಲಾಂ
ದುಸ್ತ್ಯಜಮಾಯಿರೇಯಿರುಪ್ಪದು ॥ ೨೭೮ ॥

ಶ್ಲೋಕಃ – ❋ ಭಗವತ್ತನುರೂಪಾದಿ ವಿಷಯೋದ್ಭವ ದೋಷಜಂ ।
ಪ್ರಯೋಜನಂ ತು ಭಕ್ತಾನಾಂ ದುಸ್ತ್ಯಜಂ ಖಲು ಸರ್ವಥಾ ॥ ॥ ೪೧೨ ॥

ತಾತ್ಪರ್ಯ – ಭಗವಂತನ ಸೌಂದರ್ಯಾದಿ ಗುಣಗಳೊಡನೆ ಕೂಡಿರುವ ವಿಗ್ರಹವನ್ನು ನೋಡಿ ನಾವು ಹೆಂಗಸಾಗಿ ಹುಟ್ಟಬೇಕಾಗಿತ್ತು ಎಂಬುದಾಗಿ ಪುರುಷರೆಲ್ಲರೂ ಯೋಚಿಸುವಂತೆ ಮಾಡುವ ವಿಗ್ರಹ ವೈಲಕ್ಷಣ್ಯ ದೋಷದಿಂದುಂಟಾದ ಸ್ವಪ್ರಯೋಜನಪರತೇ ಅದಕ್ಕೆ ಕಾರಣವಾದ ಪ್ರಾವಣ್ಯ. ಅದರ ಸಿದ್ಧ್ಯರ್ಥವಾಗಿ ಮಾಡಬೇಕಾದ ವ್ಯಾಪಾರಗಳು, ಇವೆಲ್ಲವೂ ಸ್ವರೂಪ ವಿರುದ್ಧವೆಂದು ಬಿಡಲು ಯತ್ನಿಸಿದರೂ ಬಿಡುವುದಕ್ಕಾಗುವುದಿಲ್ಲವಷ್ಟೇ.

ಸೂತ್ರಂ - ಊಮೈಯರೋಡು ಶೆವಿಡರ್ವಾತ್ತೈ ಕಥಮನ್ಯದಿಚ್ಛತಿ ॥ ೨೭೯ ॥

ಶ್ಲೋಕಃ – ❋ ಭಗವದ್ವಿರಹಾಸಹಿಷ್ಣು ಗೋದಾ
ವಚನಾಜ್ಞಾತ್ಯ ಸಪೀಜನಾದಿಭಿರ್ಯತ್ ।
ಸಮುದೀರ್ಣಮಹೋ ತಯಾವಚಸ್ತ
ದ್ಬಧಿರೋ ದೀರ್ಣಮಿವಾಭವದ್ಧಿ ಮೂಕೇ ॥ ॥ ೪೧೩ ॥

ಶ್ಲೋಕಃ – ✱ ಭಗವತೋ ಮ್ಮತ ಭಾಜಿ ಪದಾಂಬುಜೇ
ವಿನಿಹಿತಾತ್ಮಭರೋ ನನು ಕಿಂಕರಃ ।
ಕಥಮಿವಾನ್ಯದಭೀಪ್ಸತಿ ಪಂಕಜೇ
ಸ್ಥಿತಿಜುಡಿಕ್ಷುರಕಂ ಕಮಲೇರ್ವ್ಯಜೇತ್ ॥ ೪೧೪ ॥

ತಾತ್ಪರ್ಯ – ವಿಷಯ ದೋಷದಿಂದುಂಟಾದ ಸ್ವಪ್ರಯೋಜನದ ದುಸ್ತ್ಯಜತ್ವವನ್ನು, ಶ್ರೀ ಗೋದಾವಿನ ವಾಕ್ಯ ದಿಂದಲೂ, ಆಳವಂದಾರ್ರ ವಾಕ್ಯದಿಂದಲೂ ತಿಳಿಸುತ್ತಾರೆ. ಶ್ರೀ ಗೋದಾದೇವಿಯು ಆ ಭಗವಂತನ ವಿರಹವನ್ನು ಸಹಿಸಲಾರದೇ ತಾಯಿಮಾರೊಡನೇ ತನ್ನ ವಿರಹತಾಪವನ್ನು ಹೇಳಿಕೊಳ್ಳಲು, ಆ ತಾಯಿಮಾರುಗಳು ಅವನು ಬರುವವರಿಗೂ ನೀನು ಕಾದಿರಬೇಕು, ಈ ಜಾಗವನ್ನು ಬಿಟ್ಟು ಹೋಗ ಕೂಡದು ಎಂದು ಹೇಳುತ್ತಲು ಗೋದೆಯು, ನಿಮಗೆ ನನ್ನ ದೆಶೆಯನ್ನರಿಯಲು ಶಕ್ತಿಯಿಲ್ಲ. ನಿಮ್ಮೊಡನೇ ನನ್ನ ವಿರಹಮಃಖವನ್ನು ಹೇಳಿಕೊಳ್ಳುವದು ಹೇಗಾಯಿತೆಂದರೆ ಮೂಗರೊಡನೆ ಕಿವುಡರು ಮಾತನಾಡಿದಂತಾಯಿತು ಎಂದು ಹೇಳಿದ್ದರಿಂದಲೂ, ಆಳವಂದಾರ್ರೂ ಕೂಡ "ಎಲ್ಲೆ ಭಗವಂತನೇ, ನಿನ್ನ ಅಮೃತವನ್ನು ಸುರಿಯುವ ಪಾದಾರವಿಂದಗಳಲ್ಲಿ ಇಟ್ಟ ಮನಸ್ಸು ಬೇರೆ ಯಾವುದನ್ನು ತಾನೇ ಅಪೇಕ್ಷಿಸುವುದು ? ಮಕರಂದ ಭರಿತವಾದ ಕಮಲದಲ್ಲಿರುವ ದುಂಬಿಯು ಮುಳ್ಳುಗಳ್ಳಿಯನ್ನು ಅಪೇಕ್ಷಿಸಿವುದೇ ? ಅದು ಹೇಗೆ ಅಪೇಕ್ಷಿಸುವದಿಲ್ಲವೋ ಅದರಂತೆಯೇ ನಾನೂ ಕೂಡ ನಿನ್ನ ಪಾದಾರವಿಂದವನ್ನು ಬಿಟ್ಟು ಬೇರೊಂದನ್ನೂ ಅಪೇಕ್ಷಿಸಲಾರೆನು" ಎಂದು ಹೇಳಿರುವರು, ಆದ್ದರಿಂದ ಭಗವಂತನ ವಿಗ್ರಹ ವೈಲಕ್ಷಣ್ಯವನ್ನು ನೋಡಿ ಭಗವದ್ವಿಷಯದಲ್ಲಿ ಪ್ರವಣರಾದವರಿಗೆ ವಿಷಯದೋಷದಿಂದುಂಟಾದ ಸ್ವಪ್ರಯೋಜನವು ದುಸ್ತ್ಯಜವಾಗಿರುವುದು.

ಸೂತ್ರಂ - ಇಪ್ಪಡಿ ಇವೈಯಿತ್ತನೈಯುಂ ಸದಾಚಾರ್ಯ ಪ್ರಸಾದತ್ತಾಲೇ ವರ್ಧಿಕ್ಕುಂ ಪೋತ್ಪೈಕ್ಕು ವಸ್ತವ್ಯಮಾಚಾರ್ಯ ಸನ್ನಿಧಿಯುಂ ಭಗವತ್ಸನ್ನಿಧಿಯುಂ ವಕ್ತವ್ಯಮಾಚಾರ್ಯವೈಭವಮುಂ ಸ್ವನಿಕರ್ಷಮುಂ ಜಪ್ತವ್ಯಂ ಗುರುಪರಂಪರೆಯುಂ ದ್ವಯಮುಂ ಪರಿಗ್ರಾಹ್ಯಂ ಪೂರ್ವಾಚಾರ್ಯರ್ಹಳುಡೈಯ ವಚನಮುಂ ಅನುಷ್ಠಾನಮುಂ ಪರಿತ್ಯಾಜ್ಯಂ ಅವೈಷ್ಣವ ಸಹವಾಸಮುಂ ಅಭಿಮಾನಮುಂ ಕರ್ತವ್ಯಮಾಚಾರ್ಯ ಕೈಂಕರ್ಯಮುಂ ಭಗವತ್ಕೈಂಕರ್ಯಮುಂ ॥ ೨೪೦ ॥

ಶ್ಲೋಕಃ – ✱ ಸದಾಚಾರ್ಯ ಪ್ರಸಾದೇನ ಯದಿ ಸಿದ್ಧ್ಯೇದಿದಂ ತದಾ ।
ತತ್ಸನ್ನಿಧೌ ತು ವಸ್ತವ್ಯಂ ಭಗವತ್ಸನ್ನಿಧಾವಪಿ ॥ ೪೧೫ ॥

ವಕ್ತವ್ಯಂ ವೈಭವಂ ತಸ್ಯ ಸ್ವನಿಕೃಷ್ಟತ್ವಮೇವ ಚ ।
ಪರಂಪರಾಂ ಗುರೂಣಾಂ ಚ ಜಪ್ತವ್ಯಾ ಸತತಂ ದ್ವಯಂ ॥ ೪೧೬ ॥

ಪೂರ್ವಾಚಾರ್ಯವಚೋ ಗ್ರಾಹ್ಯಮನುಷ್ಠಾನಂ ಚ ತತ್ಕೃತಂ ।
ಅವೈಷ್ಣವಸಹಾವಾಸಸ್ತ್ಯಾಜ್ಯಸ್ತದಭಿಮಾನತಃ ॥ ೪೧೭ ॥

ಕರ್ತವ್ಯಂ ತಸ್ಯ ಕೈಂಕರ್ಯಂ ತಥಾ ಭಗವತೋಽಪಿ ತತ್
ಏವಂ ಶಿಷ್ಯೈರನುಷ್ಠೇಯಂ ಸ್ವಾತ್ಮೋಜ್ಜೀವನ ಸಂವಿದಾ ॥ ೪೧೮ ॥

ತಾತ್ಪರ್ಯ – ಇನ್ನುಮುಂದೆ 'ಸದಾಚಾರ್ಯಪ್ರಸಾದತ್ತಾಲೇ ಪರ್ಧಿಕ್ಕುಂ ಪಡಿ ಪಣ್ಣಿಕ್ಕೊಂಡು ಪೋರಕ್ಕಡವನ್' ಎಂಬುದನ್ನು ವಿವರಿಸುತ್ತಾರೆ. ಹಿಂದೆ ಹೇಳಿದ ಇಷ್ಟೂ ಸ್ವಭಾವ ವಿಶೇಷಗಳಿಲ್ಲವೂ ಸದಾಚಾರ್ಯನ ಅನುಗ್ರಹದಿಂದ ಪ್ರಾಪ್ತಿಯಾದರೆ ಇವನ ವಾಸಸ್ಥಲವು ಹಿತೈಷಿಯಾಗಿ ಉಪದೇಶಗಳಿಂದ ಹಿಂದೆ ಹೇಳಿದ ಸ್ವಭಾವಗಳಿಗೆ ಉತ್ಪಾದಕನಾದ ಸದಾಚಾರ್ಯ ಸಾನ್ನಿಧ್ಯವು ಅವನು ತೋರಿಸಿ ಕೊಟ್ಟ, ಅವನಿಗೆ ಭೋಗ್ಯವಾದ ವಿಷಯವಾದ ತನಗೆ ವಿಶೇಷ ಕಟಾಕ್ಷಗಳನ್ನು ಮಾಡುವ ಅರ್ಚಾವತಾರಿಯಾದ ಭಗವತ್ಸಾನ್ನಿಧ್ಯವು.

ತನ್ನನ್ನು ಅಂಗೀಕರಿಸಿ ಅನುಗ್ರಹಿಸಿದ ಸದಾಚಾರ್ಯನ ದಯಾ ಕ್ಷಾಂತ್ಯಾದಿ ವೈಭವವನ್ನೂ ಅನಾತ್ಮ ಗುಣಪೂರ್ಣನಾದ ತನ್ನ ನಿಕರ್ಷವನ್ನೂ ಬಾಯಿಂದ ಹೇಳಬೇಕು.

ತನ್ನ ಗುರುವಿನಿಂದ ಪ್ರಾರಂಭಿಸಿ ಭಗವತ್ಪರ್ಯಂತವಾದ ಗುರುಪರಂಪರೆಯನ್ನೂ ಆ ಗುರುಪರಂಪರೆಯಿಂದ ಉಪದೇಶಿಸಲ್ಪಟ್ಟ ದ್ವಯವನ್ನೂ ಜಪಿಸಬೇಕು. ಆದರೆ ಆ ದ್ವಯವನ್ನು ಅರ್ಥಾನುಸಂಧಾನದೊಡನೇ ಜಪಿಸಬೇಕು.

ನಾಥಮುನಿಗಳೇ ಮೊದಲಾದ ಪೂರ್ವಾಚಾರ್ಯರ ಜ್ಞಾನತಾರ್ಥ್ಯಪ್ರಕಾಶಕವಾದ ದಿವ್ಯವಚನಗಳನ್ನೂ ಆ ವಚನಾನುಸಾರವಾದ ಅನುಷ್ಠಾನಗಳೆನ್ನೂ ಪರಿಗ್ರಹಿಸಬೇಕು. ಜ್ಞಾನಾನುಷ್ಠಾನ ನಾಶಕವಾದ ವೈಷ್ಣವಲಕ್ಷಣವಿಲ್ಲದಿರುವ ಜನರ ಸಹವಾಸವನ್ನೂ ಅಂಥವರಲ್ಲಿ ಇವನು ನಮ್ಮವನೆಂಬ ಅಭಿಮಾನವನ್ನೂ ಬಿಡಬೇಕು.

ಇವನಿಗೆ ಯಾವಾಗಲೂ ಸ್ವರೂಪಾನುಕೂಲವಾಗಿಯೇ ಮಾಡಬೇಕಾದ್ದು ಮಹೋಪಕಾರಕನಾದ ಆಚಾರ್ಯನ ಕೈಂಕರ್ಯವೂ ಅವನ ಆಪ್ಪಣೆಗೆ ಪರತಂತ್ರನಾಗಿ ಮಾಡತಕ್ಕದ್ದು. ಭಗವತ್ಕೈಂಕರ್ಯವೂ ಈ ರೀತಿಯಲ್ಲಿರಬೇಕು.

ಸೂತ್ರಂ – ಕೀೞ್ ಚ್ಞೊನ್ನ ಭಗವತ್ಕೈಂಕರ್ಯಮುರಿವತು ಶಾಸ್ತ್ರಮುಖತ್ತಾಲೇ ಆಚಾರ್ಯಕೈಂಕರ್ಯಮುರಿವತು ಶಾಸ್ತ್ರಮುಖತ್ತಾಲುಮಾಚಾರ್ಯ ವಚನತ್ತಾಲುಂ ॥ ೨೪೧ ॥

ಶ್ಲೋಕಃ – ✱ ವಿಷ್ಣುಕಿಂಕರತಾಂ ಶಾಸ್ತ್ರ ಮುಖಾದ್ಜ್ಞಾತ್ವಾ ಸಮಾಚರೇತ್ ।
ಶಾಸ್ತ್ರತೋ ಗುರುಕೈಂಕರ್ಯಂ ತಸ್ಯೋಕ್ತ್ಯಾ ಚ ಸಮಾಚರೇತ್ ॥ ॥ ೪೧೯ ॥

ತಾತ್ಪರ್ಯ – ಭಗವಂತನು ಬಾಯಿಬಿಟ್ಟು ಒಂದನ್ನೂ ಹೇಳದಿರುವ ಕಾರಣ ಶ್ರುತಿ ಸ್ಮೃತ್ಯಾದಿ ಶಾಸ್ತ್ರಗಳಿಂದ ತಿಳಿದು ಅವನ ಕೈಂಕರ್ಯವನ್ನು ಮಾಡಬೇಕು. ಶುಶ್ರೂಷಾದಿ ಪ್ರಕಾರಗಳನ್ನು ಪ್ರತಿಪಾದಿಸುವ ಶಾಸ್ತ್ರಗಳಿಂದಲೂ ತನಗೆ ಇಷ್ಟಾನಿಷ್ಟಗಳು ಇಂಥಾದ್ದು ಎಂಬುದನ್ನು ಹೇಳುವ ಆಚಾರ್ಯನ ಮಾತುಗಳಿಂದಲೂ ತಿಳಿದು ಆಚಾರ್ಯನ ಕೈಂಕರ್ಯವನ್ನು ಮಾಡಬೇಕು.

ಸೂತ್ರಂ – ಕೈಂಕರ್ಯಂತಾನಿರಂಡು.
ಅದಾವದಿಷ್ಟಂ ಶೆಯ್ಹೈಯುಂ ಅನಿಷ್ಟಂ ತವಿರುಹೈಯುಂ ॥ ೨೪೨ ॥

ಶ್ಲೋಕಃ – ✱ ಕೈಂಕರ್ಯಂ ದ್ವಿವಿಧಂ ಪ್ರೋಕ್ತಮಿಷ್ಟಸ್ಯ ಕರಣಂ ತಥಾ ।
ಅನಿಷ್ಟಪರಿಹಾರಶ್ಚ ಶಾಸ್ತ್ರಜ್ಞೈಃ ಪರಿಕೀರ್ತಿತಂ ॥ ॥ ೪೨೦ ॥

ತಾತ್ಪರ್ಯ – ಹಿಂದೆ ಹೇಳಿದ ಕೈಂಕರ್ಯವು ಎರಡು ವಿಧ. ಅದೇನೆಂದರೆ ಇಷ್ಟವನ್ನು ಮಾಡುವುದು ಅನಿಷ್ಟವನ್ನು ಬಿಡುವುದು ಎಂಬುದಾಗಿ.

ಸೂತ್ರಂ - ಇಷ್ಟಾನಿಷ್ಟಂಗಳ್ ವರ್ಣಾಶ್ರಮಂಗಳ್ಕ್ಕಿಯಂ
ಆತ್ಮಸ್ವರೂಪತ್ತ್ಕ್ಕೆಯುಮುವಲಂಬಿತ್ತಿರುಕ್ಕುಂ ॥ ೨೪೩ ॥

ಶ್ಲೋಕಃ – ✱ ಇಷ್ಟಂ ಚಾ ನಿಷ್ಟಮೇವಾತ್ರ ತತ್ತದ್ವರ್ಣಾಶ್ರಮಾದಿಕಂ ।
ಆತ್ಮ ಸ್ವರೂಪಪಪ್ಕೇಪಮಲಂಬ್ಕೈವ ತಿಷ್ಠತಿ ॥ ॥ ೪೨೧ ॥

ತಾತ್ಪರ್ಯ್ – ತನ್ನ ವರ್ಣ ತನ್ನ ಆಶ್ರಮಕ್ಕೆ ಯೋಗ್ಯವಾದದ್ದನ್ನು ಮಾಡುವುದು ಇಷ್ಟ. ಅದಕ್ಕೆ ವಿರುದ್ಧವಾದದ್ದನ್ನು ಮಾಡುವುದು ಅನಿಷ್ಟ. ಇನ್ನೂ ಒಂದು ವಿಧವಾಗಿ ಹೇಳಬಹುದು, ಆತ್ಮ ಸ್ವರೂಪಕ್ಕೆ ಉಚಿತವಾದದ್ದನ್ನು ಮಾಡುವುದು ಇಷ್ಟ. ತದ್ವಿರುದ್ಧವನ್ನು ಮಾಡುವುದು ಅನಿಷ್ಟವು.

ಸೂತ್ರಂ - ಪುಣ್ಯತ್ತುಕ್ಕು ಅಂಜಿಹಿರವನ್ ಪಾಪತ್ತ್ಕ್ಕೆಪಣ್ಣಾನಿರೇ ॥ ೨೪೪ ॥

ಶ್ಲೋಕಃ – ✱ ಅಪವರ್ಗವಿರೋಧಿತ್ವಾತ್ಪುಣ್ಯಂ ಕರ್ತುಂ ಬಿಭೇತಿ ಯಃ ।
ಸ ತು ಪಾಪಂ ಕಥಂ ಕುರ್ಯಾಜ್ಜನಸಾಮಾನ್ಯ ಗರ್ಹಿತಂ ॥ ॥ ೪೨೨ ॥

ತಾತ್ಪರ್ಯ್ – ಶಾಸ್ತ್ರಸಿದ್ಧವಾಗಿದ್ದರೂ ಮೋಕ್ಷವಿರೋಧಿಯಾದ್ದರಿಂದ ಪುಣ್ಯ ಕೆಲಸ ಮಾಡುವುದಕ್ಕೇ ಹೆದರುವವನು ಸರ್ವಜನಗರ್ಹಿತವಾದ ಪಾಪ ಕೆಲಸವನ್ನು ಮಾಡುವನೇ. ಮಾಡುವುದೇ ಇಲ್ಲ.

ಸೂತ್ರಂ - ಇವನ್ ಪುಣ್ಯತ್ತ್ಕೈ ಪಾಪಮೆನ್ನಿರುಕ್ಕುಂ ಅವನ್
ಪಾಪತ್ತ್ಕೈ ಪುಣ್ಯಮೆನ್ನಿರುಕ್ಕುಂ ಅವನುಕ್ಕು
ಅತುಕಿಡ್ಕೈಯಾತು. ಇವನತುಶ್ಕೈಯ್ಯಾನ್ ॥ ೨೪೫ ॥

ಶ್ಲೋಕಃ – ✱ ಪುಣ್ಯ ಪಾಪ ಯುಗಲಂ ಧುನೋತಿ ಯೋ
ಯಾತಿ ತತ್ಪರಮಸಾಮ್ಯಮೇವ ಸಃ ।
ಏವ ಮುಕ್ತಮುತ ಏವ ಪುಣ್ಯವಾ
ಪ್ಯಂಹ ಏವ ಗಣಯತ್ಯಯಂ ಸುಧೀಃ ॥ ॥ ೪೨೩ ॥

ವತ್ಸಲಸ್ತು ಭಗವಾನ್ಸ್ವಭಕ್ತಜಂ
ಪಾಪಮಾಕಲಯತಿ ಸ್ಮ ಪುಣ್ಯವತ್ ।
ಏವಮಪ್ಯಯಮಕೃತ್ಯಕೃನ್ನ ಹಿ
ಸ್ವಾಶಯಾ ನ ಭಗವಾನ್ಲಭೇತ ತತ್ ॥ ॥ ೪೨೪ ॥

ತಾತ್ಪರ್ಯ್ – 'ತದಾ ವಿದ್ವಾನ್ ಪುಣ್ಯ ಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ' ಎಂದು ಹೇಳಿರುವುದರಿಂದ ಜ್ಞಾನಿಯಾದವನು ಮೋಕ್ಷವಿರೋಧಿಯಾದ ಪುಣ್ಯವನ್ನೂ ಪಾಪವೆಂದೇ ಅರಿತಿರುವನು. ಭಕ್ತವತ್ಸಲನಾದ ಭಗವಂತನೋ ಅಂದರೆ ಆಶ್ರಿತನು ಮಾಡಿದ ಪಾಪವನ್ನು ಪುಣ್ಯವನ್ನಾಗಿಯೇ ಅರಿತಿರುವನು. ಭಗವಂತನು ಆ ರೀತಿಯಿದ್ದರೂ ಕೂಡ ಈ ಜ್ಞಾನಿಯಾದವನು ಪಾಪ ಪ್ರವೃತ್ತಿಯಲ್ಲಿ ಅನ್ವಯಿಸದೇ ಇರುವುದರಿಂದ ಪಾಪವನ್ನು ಪುಣ್ಯವನ್ನಾಗಿ ತಿಳಿಯಲು ಆಶೆಯಿದ್ದಾಗ್ಯೂ ಅದು ಅವನಿಗೆ ಲಭಿಸದು. ಈ ಜ್ಞಾನಿಯೋ ಅಂದರೆ ಪಾಪವನ್ನು ಮಾಡುವುದೇ ಇಲ್ಲ.

ಸೂತ್ರಂ - ಕೈಂಕರ್ಯ್ಯಂ ತಾನ್ ಭಕ್ತಿಮೂಲಮಲ್ಲಾದಪೋದು
ಭೀತಿಮೂಲವಾಯ್ ವರವೇಣುಂ ॥ ೨೪೬ ॥

ಶ್ಲೋಕಃ – ❋ ಭಕ್ತಿಪೂರ್ವಕಮೇವಸ್ಯಾತ್ಕೈಂಕರ್ಯಂ ಕಮಲಾಪತೇಃ ।
ನ ತಥಾ ಯದಿ ಕುರ್ಯಾದ್ವಾ ಚೇತನೋ ಭೀತಿಪೂರ್ವಕಂ ॥ ॥ ೪೨೫ ॥

ತಾತ್ಪರ್ಯ – ಭಗವಂತನ ಕೈಂಕರ್ಯವನ್ನು ಯಾವುದಾದರೂ ಒಂದು ವಿಧದಲ್ಲಿ ಅತ್ಯವಶ್ಯಕವಾಗಿ ಮಾಡಿಯೇ ತೀರಬೇಕೆಂದು ಹೇಳುತ್ತಾರೆ. ಶೇಷಿಯಾದ ಭಗವಂತನ ಮುಖೋಲ್ಲಾಸವುಂಟಾಗುವಂತೆ ತದ್ವಿಷಯಕವಾದ ಪ್ರೇಮದಿಂದ ಮಾಡುವ ಕೈಂಕರ್ಯವು ಭಕ್ತಿಮೂಲಕವಾದ ಕೈಂಕರ್ಯವು. ಆ ಭಕ್ತಿಯಿಲ್ಲದಿದ್ದ ಪಕ್ಷದಲ್ಲಿ ಶೇಷವೃತ್ತಿ ಮಾಡದಿದ್ದರೆ ಶೇಷತ್ವಹಾನಿಯುಂಟಾಗುವುದೆಂಬ ಭಯಮೂಲಕವಾಗಿಯಾದರೂ ಕೈಂಕರ್ಯವನ್ನು ಮಾಡಬೇಕು. ಅಂತೂ ಕೈಂಕರ್ಯವನ್ನು ಮಾಡಲೇಬೇಕು.

ಸೂತ್ರಂ - ಅತುವುമಿಲ್ಲಾದ ಪೋತು ಅಧಿಕಾರತ್ತಿಲುಂ ಉಪಾಯೋಪೇಯಂ ಗಳಿಲುಂ ಅನ್ವಯಮಿನ್ನಿಕ್ಕೇ ಯೊಳಿಯುಂ ॥ ೨೪೭ ॥

ಶ್ಲೋಕಃ – ❋ ಭೀತಿ ಮೂಲಕ ಕೈಂಕರ್ಯಂ ತದಪಿಸ್ಯಾನ್ನಚೇತ್ತದಾ ।
ಶೇಷತ್ವ ತತ್ಯಪೋಪಾಯೋಪೇಯಬಂಧೋ ವಿನಶ್ಯತಿ ॥ ॥ ೪೨೬ ॥

ತಾತ್ಪರ್ಯ – ಅಮುಖ್ಯವಾದ ಭೀತಿ ಮೂಲಕ ಕೈಂಕರ್ಯವೂ ಇಲ್ಲದಿದ್ದ ಪಕ್ಷದಲ್ಲಿ ಶೇಷತ್ವ ರೂಪವಾದ ಅಧಿಕಾರವೂ ನಾಶವಾಗುವುದು. ಶೇಷಿಯಾದ ಭಗವಂತನ ಕೃಪಾ ರೂಪವಾದ ಉಪಾಯದ ಅನ್ವಯವೂ ನಾಶವಾಗುವುದು. ಭಗವಂತನ ಮುಖೋಲ್ಲಾಸವೆಂಬ ಉಪೇಯದ ಸಂಬಂಧವೂ ನಾಶವಾಗುವುದು.

ಸೂತ್ರಂ - ಕೈಂಕರ್ಯಂ ತನ್ನೈ ಫಲ ಸಾಧನಮಾಕ್ಕಾದೇ ಫಲಮಾಕ್ಕವೇಣುಂ ॥ ೨೪೮ ॥

ಶ್ಲೋಕಃ – ❋ ದೃಷ್ಟಾದೃಷ್ಟಫಲಾನಾಂ ತು ಸಾಧನತ್ವೇನ ಚೇತನಃ ।
ನ ಕುರ್ಯಾತ್ಕಿಂಕರತ್ವಂ ತು ಸ್ವಯಂ ಫಲಧಿಯಾಚರೇತ್ ॥ ॥ ೪೨೭ ॥

ತಾತ್ಪರ್ಯ – ಈ ರೀತಿ ಹಿಂದೆ ಹೇಳಿದ ಕೈಂಕರ್ಯವನ್ನು ದೃಷ್ಟಾದೃಷ್ಟಫಲಕ್ಕಾಗಿ ಮಾಡುತ್ತೇನೆ ಎಂಬ ಬುದ್ಧಿಯನ್ನು ಬಿಟ್ಟು ಸ್ವಯಂ ಪ್ರಯೋಜನವಾಗಿ ಮಾಡಬೇಕು.

ಸೂತ್ರಂ - ಅತಾವತು ತಾನ್ ಕೈಯೇಲಾತೇ ಅವನೈಕೈಯೇರ್ಕಪ್ಪಣ್ಣುಹೈ ॥ ೨೪೯ ॥

ಶ್ಲೋಕಃ – ❋ ಕೈಂಕರ್ಯಂ ರಚಯೇದ್ಯಾವನೀ ತತ್ಫಲಾನೀಪ್ಸಯಾ ಸ್ವಯಂ ।
ಅವಾಪ್ತ ಸರ್ವಕಾಮೋಪಿ ಪ್ರತಿಗೃಹ್ಣಾತಿ ತದ್ಯಥಾ ॥ ॥ ೪೨೮ ॥

ತಾತ್ಪರ್ಯ – ಕೈಂಕರ್ಯವನ್ನು ಮಾಡುವವನು ಆ ಕೈಂಕರ್ಯಕ್ಕೆ ಭಗವಂತನ ಹತ್ತಿರ ಫಲವನ್ನು ಕೇಳದೆ ಅವಾಪ್ತ ಸಮಸ್ತ ಕಾಮನಾದ ಆ ಭಗವಂತನು ಆದರದೊಡನೇ ತಾನೇ ಸ್ವೀಕರಿಸುವಂತೆ ಮಾಡಬೇಕು.

ಸೂತ್ರಂ - ಕೊಡುತ್ತು ಕೊಳ್ಳಾತೇ ಕೊಣ್ಡತ್ತುಕ್ಕು ಕ್ಕೈಕೂಲಿ ಕೊಡುಕ್ಕವೇಣುಂ ॥ ೨೪೦ ॥

ಶ್ಲೋಕಃ – ❋ ದತ್ತಂ ತತ್ಸತು ಭಗವಾನ್ಮುದಾ ಮುಕುಂದಃ
ಸ್ವೀಕುರ್ಯಾದ್ಯದಿ ಚ ತದಾಧಿಕಂ ವಿತೀರ್ಯ ।
ತದ್ದಾಸ್ಯಂ ಪ್ರಗುಣತರಂ ಸಮಾಚರೇಚ್ಚ
ಸ್ವಾರ್ಥಂ ನಾಃ ಕಿಮಪಿ ಕದಾಪಿ ತತ್ರ ನೇಚ್ಛೇತ್ ॥ ॥ ೪೨೯ ॥

ತಾತ್ಪರ್ಯ – 'ದೇಹಿಮೇ ದದಾಮಿತೇ' ಎಂಬಂತೆ 'ನೀನು ಕೊಡು' ನಿನಗೆ ನಾನು ಕೊಡುತ್ತೇನೆ, ಎಂದು ಹೇಳದಂತೆ ನಾವು ಕೊಟ್ಟದ್ದನ್ನು ಭಗವಂತನು ಸ್ವೀಕರಿಸಿದ ಪಕ್ಷದಲ್ಲಿ ಅದಕ್ಕಿಂತಲೂ ಅಧಿಕವಾಗಿ ಕೊಡುವುದಲ್ಲದೇ ಅವನ ದಾಸ್ಯವನ್ನೂ ಕೈಕೊಳ್ಳಬೇಕು, ಇದನ್ನೇ ಗೋದಾದೇವಿಯೂ ಅಪ್ಪಣೆ ಕೊಡಿಸಿರುತ್ತಾರೆ. 'ಇನ್ನುವಂದಿತ್ತನೈಯುಮುಮ್ಮುದು ಶೆಯ್ತಿಡಪ್ಪೆರಿಲ್ ನಾನೊನ್ನು ನೂರಾಯಿರಮಾಕ್ಕೊಡುತ್ತು ಪಿನ್ನುಮಾಳುಂ ಶೆಯ್ವನ್' ಎಂದು.

ಸೂತ್ರಂ - ಶ್ರೀವಿದುರರೈಯುಂ ಶ್ರೀಮಾಲಾಕಾರರೈಯುಂ ಕೂನಿಯ್ಯೈಯುಂಪೋಲೇ ಕಿಂಚಿತ್ಕರಿತ್ತಾಲ್ ಸ್ವರೂಪಂ ನಿರುಂಪೆರುವತು ॥ ೨೯೧ ॥

ಶ್ಲೋಕಃ – ✱ ವಿದುರೋ ಮಾಲ್ಯಕೃತ್ಕುಬ್ಜಾ ಶ್ರೀಕೃಷ್ಣಾಯ ತಥಾ ಯಥಾ ।
ಯತ್ಕಿಂಚಿದಾರ್ಪಯನ್ಭಕ್ತ್ಯಾ ತಥಾ ಚೇದುಜ್ವಲಃ ಪುಮಾನ್ ॥ ॥ ೪೩೦ ॥

ತಾತ್ಪರ್ಯ – ವಿದುರನೂ ಮಾಲಾಕಾರನೂ ಕುಬ್ಜೆಯೂ ಯಾವ ರೀತಿ ಅನನ್ಯಪ್ರಯೋಜನರಾಗಿ ಶ್ರೀಕೃಷ್ಣನಿಗೆ ಯತ್ಕಿಂಚಿತ್ಸಮರ್ಪಣೇ ಮಾಡಿದರೋ ಆದೇ ರೀತಿ ಸಮರ್ಪಿಸಿದ ಪಕ್ಷದಲ್ಲಿ ಸ್ವರೂಪವು ಉಜ್ವಲವಾಗಿ ಪ್ರಕಾಶಿಸುವುದು.

ಸೂತ್ರಂ – ಮಂಡಿತಡವಾದ ಶೋರುಂ ಶುರುನಾರಾದಪೂವುಂ ಶುಣ್ಣಾಂಬುಪಡಾದಶಾಂದುವಿರೇ ಇವರ್ಹಳ್ ಕೊಡುತ್ತತು ॥ ೨೯೨ ॥

ಶ್ಲೋಕಃ – ✱ ಸ್ವಾರ್ಥಂ ವಿನಾ ಯಥಾ ಶ್ರೀಮಾನ್ವಿದುರಸ್ಯಾವರಂ ನತಃ ।
ಭಕ್ತ್ಯಾ ಸಮರ್ಪಯಾಮಾಸ ಚಕ್ರೀಣೇ ಪಾಯಸೋದನಂ ॥ ॥ ೪೩೧ ॥

ಆಮ್ಲಾನ ಪುಷ್ಪ ಮೂಲ್ಯಾನಿ ಮಾಲಾಕಾರೋಽತಿ ಭಕ್ತಿತಃ ।
ಸ್ವಾರ್ಥಂ ವಿನಾ ಯಥಾ ಶ್ರೀಮಾನರ್ಪಯಾಮಾಸ ಚಕ್ರಿಣೇ ॥ ॥ ೪೩೨ ॥

ನಿರ್ದುಷ್ಟ ಗಂಧ ರುಚಿರಂ ರಾಜಾರ್ಹಮನುಲೇಪನಂ ।
ಸ್ವಾರ್ಥಂ ವಿನಾ ಯಥಾ ಕುಬ್ಜಾ ಮಾಧವಾಯ ಸಮಾರ್ಪಯತ್ ॥ ॥ ೪೩೩ ॥

ತಾತ್ಪರ್ಯ – ಶ್ರೀ ವಿದುರನು ಅನನ್ಯ ಪ್ರಯೋಜನನಾಗಿ ಶ್ರೀಕೃಷ್ಣನಿಗೆ ಯಾವ ರೀತಿ ಭಕ್ತಿಯಿಂದ ಭೋಗ್ಯವಾದ ಅನ್ನವನ್ನು ಸಮರ್ಪಿಸಿದನೋ, ಮಾಲಾಕಾರನು ಬಾಡದೇ ಇರುವ ಪರಿಮಳ ಭರಿತವಾದ ಪುಷ್ಪಮಾಲೆಗಳನ್ನು ಅನನ್ಯಪ್ರಯೋಜನನಾಗಿ ಯಾವ ರೀತಿ ಭಕ್ತಿಯಿಂದ ಸಮರ್ಪಿಸಿದನೋ, ಕುಬ್ಜೆಯು ಅನನ್ಯ ಪ್ರಯೋಜನಳಾಗಿ ಯಾವ ರೀತಿ ಭಕ್ತಿಯಿಂದ ಸುಗಂಧಭರಿತವಾದ ಚಂದನವನ್ನು ಶ್ರೀಕೃಷ್ಣನಿಗೆ ಸಮರ್ಪಿಸಿದಳೋ ಆದೇ ರೀತಿ ಭಗವಂತನಿಗೆ ಸಮರ್ಪಿಸಬೇಕು.

ಸೂತ್ರಂ - ಕೈಂಕರ್ಯ ದಶೈಪೋಲೇ ಮುನ್ಬುಳ್ಳ ದಶೈಹಳಿಲುಂ ಸ್ವರೂಪತ್ತೈ ಉಜ್ವಲಮಾಕ್ಕವೇಣುಂ ॥ ೨೯೩ ॥

ಶ್ಲೋಕಃ – ✱ ಕೈಂಕರ್ಯಸ್ಯ ದಶಾಯಾಂ ತು ಸ್ವರೂಪಂ ಸಾದ್ಯಥೋಜ್ವಲಂ ।
ಕೈಂಕರ್ಯ ಪ್ರಾಗವಸ್ಥಾಯಾಂ ತಥಾ ಕುರ್ಯಾತ್ಸಮುಜ್ವಲಂ ॥ ॥ ೪೩೪ ॥

ತಾತ್ಪರ್ಯ – ಕೈಂಕರ್ಯದಶೆಯಲ್ಲಿ ಸ್ವರೂಪವು ಯಾವ ರೀತಿ ಉಜ್ವಲವಾಗಿರುವುದೋ ಅದೇ ರೀತಿ ಕೈಂಕರ್ಯಕ್ಕೆ ಪೂರ್ವದಶೆಯಲ್ಲೂ ಸ್ವರೂಪವನ್ನು ಉಜ್ವಲಗೊಳಿಸಬೇಕು.

ಸೂತ್ರಂ - ಮುನ್ಬೇನಾಲುದಶೈಯುಂಡು.
ಅತಾವತು ಜ್ಞಾನದಶೈಯುಂ ವರಣದಶೈಯುಂ ಪ್ರಾಪ್ತಿದಶೈಯುಂ
ಪ್ರಾಪ್ಯಾನುಭವದಶೈಯುಂ ॥ ೨೪೪ ॥

ಶ್ಲೋಕಃ – ❋ ಪ್ರಾಕ್ಕೈಂಕರ್ಯ ದಶಾಯಾಸ್ತು ದಶಾ ಪ್ಯೇಕಾ ಚತುರ್ವಿಧಾ ।
ಜ್ಞಾನ ಸ್ವೀಕಾರ ಸಂಪ್ರಾಪ್ತಿ ಪ್ರಾಪ್ಯಾನುಭವಗಾ ದಶಾಃ ॥ ೪೩೫ ॥

ತಾತ್ಪರ್ಯ – ಹಿಂದೆ ಹೇಳಿದ ಕೈಂಕರ್ಯ ದಶೆಗೆ ಮೊದಲು ನಾಲ್ಕು ದಶೆಗಳುಂಟು. ಅದು ಯಾವುದೆಂದರೆ ಜ್ಞಾನದಶೆ, ವರಣದಶೆ, ಪ್ರಾಪ್ತಿದಶೆ, ಪ್ರಾಪ್ಯಾನುಭವದಶೆ ಎಂಬುದಾಗಿ ನಾಲ್ಕು ವಿಧಗಳು.

ಸೂತ್ರಂ - ಜ್ಞಾನದಶೈಯಿಲ್ ಅಜ್ಞಾನತ್ತೈಮುನ್ನಿಡುಂ
ವರಣದಶೈಯಿಲ್ ಅಪೂರ್ತಿಯೈಮುನ್ನಿಡುಂ
ಪ್ರಾಪ್ತಿದಶೈಯಿಲ್ ಆರ್ತಿಯೈಮುನ್ನಿಡುಂ
ಪ್ರಾಪ್ಯಾನುಭವದಶೈಯಿಲ್ ಅಭಿನಿವೇಶತ್ತೈಮುನ್ನಿಡುಂ ॥ ೨೪೫ ॥

ಶ್ಲೋಕಃ ❋ ಆಚಾರ್ಯ ಸನ್ನಿಧೌ ಜ್ಞಾನದಶಾಯಾಂ ಸ್ವಾಜ್ಞತಾ ವಚಃ ।
ವರಣಸ್ಯ ದಶಾಯಾಂ ತು ಸತ್ಕರ್ಮ ಕೃತವಾನಹಂ ॥ ೪೩೬ ॥

ನಿಷೀತ್ಕಾವೇದ ಯೇತ್ಪ್ರೀಯಮಾಕಿಂಚನ್ಯಂ ಮಾಮುಮರ್ಮುಹುಃ ।
ತಥಾ ಪ್ರಾಪ್ತಿದಶಾಯಾಂ ಚ ಕದಾ ದ್ರಕ್ಷ್ಯಾಮಿ ಮಾಧವಂ ॥ ೪೩೭ ॥

ಇತ್ಥಂ ಕಾಲ ವಿಲಂಬಸ್ಯ ಹ್ಯಸಹಿಷ್ಣುತಯಾ ತ್ವರಾನ್ ।
ಪ್ರಾಪ್ಯಾನು ಭೂತ್ಯವಸ್ಥಾಯಾ ಮಾತ್ಮಪ್ತಿಂತು ಪ್ರಕಾಶಯೇತ್ ॥ ೪೩೮ ॥

ತಾತ್ಪರ್ಯ – ಜ್ಞಾನದಶೆಯಲ್ಲಿ ಆಚಾರ್ಯನು ಅಜ್ಞಾತ ಜ್ಞಾಪನವನ್ನು ಮಾಡುವಂತೆ ತತ್ವ ಹಿತ ಪುರುಷಾರ್ಥಗಳ ವಿಷಯದಲ್ಲಿ ತನ್ನ ಅಜ್ಞಾನವನ್ನು ಹೇಳಿಕೊಳ್ಳಬೇಕು. ವರಣದಶೆಯಲ್ಲಿ ನಾನು ಒಂದು ಸುಕೃತವನ್ನೂ ಮಾಡಿಲ್ಲವೆಂದು ತನ್ನ ಅಕಿಂಚನತ್ವವನ್ನು ಹೇಳಿಕೊಳ್ಳಬೇಕು. ಪ್ರಾಪ್ತಿದಶೆಯಲ್ಲಿ ಭಗವಂತನನ್ನು ಬಿಟ್ಟಿರಲಾರೆ, ಯಾವಾಗ ಅವನನ್ನು ಸೇರುವೆನೋ ಎಂದು ಕಾಲವಿಳಂಬವನ್ನು ಸಹಿಸಲಾರದೆ ತನ್ನ ಕ್ಲೇಶವನ್ನು ತೋರಿಸಬೇಕು. ಪ್ರಾಪ್ಯಾನುಭವದಶೆಯಲ್ಲಿ ಭಗವಂತನ ಅನುಭವದಲ್ಲಿ ತೃಪ್ತಿಯಿಲ್ಲದೇ ಇನ್ನೂ ಅನುಭವಿಸಬೇಕೆಂಬ ಅಭಿನಿವೇಶವನ್ನು ತೋರಿಸಬೇಕು. ಈ ರೀತಿ ನಾಲ್ಕು ದಶೆಯಲ್ಲೂ ಸ್ವರೂಪವನ್ನು ಉಜ್ವಲಗೊಳಿಸುವುದೆಂದರೆ ಹಿಂದೆ ಹೇಳಿದ ಆಯಾಯಾ ಆಕಾರಗಳನ್ನು ತೋರಿಸುವುದು.

ಸೂತ್ರಂ - ಅಜ್ಞಾನತ್ತುಕ್ಕಡಿ ಅಪರಾಧಂ ಅಪೂರ್ತಿಕ್ಕಡಿ ಜ್ಞಾನಪೂರ್ತಿ
ಆರ್ತಿಕ್ಕಡಿ ಅಲಾಭಂ ಅಭಿನಿವೇಶತ್ತುಕ್ಕಡಿ ಅಳಹು ॥ ೨೪೬ ॥

ಶ್ಲೋಕಃ – ❋ ಅನಾದಿಕಾಲಾಕೃತ್ಯಾದಿ ಮಂತುರಜ್ಞಾನಕಾರಣಂ ।
ಉಜ್ಜೀವನನಿದಾನಸ್ಯ ಚಿಂತನಾಜ್ಞಾನ ಪೂರಣಂ ॥ ॥ ೪೩೯ ॥

ಅಪೂರ್ತಿಕಾರಣಂ ಭೂಯಾದಾರ್ತಿಹೇತುಸ್ತು ಚಕ್ರಿಣಃ ।
ಅಲಾಭೋsಭಿನಿವೇಶಸ್ಯ ಹೇತುಸ್ಸುಂದರತಾ ಹರೇಃ ॥ ॥ ೪೪೦ ॥

ತಾತ್ಪರ್ಯ – ಜ್ಞಾನದಶೆಯಲ್ಲುಂಟಾಗುವ ಅಜ್ಞಾನಕ್ಕೆ ಕಾರಣ ಅನಾದಿಕಾಲದಿಂದಲೂ ಮಾಡಲ್ಪಟ್ಟ ಅಕೃತ್ಯಕರಣ, ಕೃತ್ಯಾಕರಣ ರೂಪವಾದ ಅಪರಾಧವು ಮರಣದಶೆಯಲ್ಲುಂಟಾಗುವ ಅಪೂರ್ತಿಗೆ ಕಾರಣವು. ಉಜ್ಜೀವನಕ್ಕೆ ಹೇತುವಾಗಿ ಚಿಂತಿಸುವಿಕೆಯು ತನಗಿಲ್ಲವೆಂಬುದನ್ನು ತೋರಿಸುವ ಜ್ಞಾನಪೂರ್ತಿಯು ಪ್ರಾಪ್ತಿದಶೆಯಲ್ಲಿ ಉಂಟಾಗುವ ಆರ್ತಿಗೆ ಕಾರಣವು. ಭಗವಂತನ ಅಲಾಭವು ಪ್ರಾಪ್ಯಾನುಭವದಶೆಯಲ್ಲಿ ಉಂಟಾಗುವ ಅಭಿನಿವೇಶಕ್ಕೆ ಕಾರಣವು. ಭಗವಂತನ ದಿವ್ಯಮಂಗಳ ವಿಗ್ರಹದ ಸೌಂದರ್ಯವು.

ಸೂತ್ರಂ - ಆರ್ತಿಯುಮಭಿನಿವೇಶಮುಮಿರುಕ್ಕುಂಪಡಿ
ಅರ್ಚಿರಾದಿಗತಿಯಿಲೇಶೊನ್ನೋಂ ॥ ೪೯೭ ॥

ಶ್ಲೋಕಃ – ❋ ಅರ್ಚಿರಾದಿಗತಾವೇವ ಪ್ರಾಗಾರ್ತ್ಯಭಿನಿವೇಶಯೋಃ ।
ಸವಿಸ್ತರಂ ಸ್ಥಿತಿಂ ತತ್ರ ನ್ಯವೇದಯಮಹಂ ಖಲು ॥ ॥ ೪೪೧ ॥

ತಾತ್ಪರ್ಯ – ಪರಮ ಭಕ್ತಿಯಿಂದ ಆರ್ತಿಯುಂಟಾಗುವ ಸ್ಥಿತಿಯನ್ನೂ ಭಗವಂತನ ಸೌಂದರ್ಯಾನುಭವದಿಂದ ಉಂಟಾಗುವ ಅಭಿನಿವೇಶದ ಸ್ಥಿತಿಯನ್ನೂ ಅರ್ಚಿರಾದಿ ಗತಿಯಲ್ಲಿ ಹೇಳಿರುವೆನು.

ಸೂತ್ರಂ - ಇವನ್ತನಕ್ಕುನಾಲು ದಶೈವೋಲೇ ನಾಲು ಗುಣಮುಂಡು ॥ ೪೯೮ ॥

ಶ್ಲೋಕಃ – ❋ ಅಸ್ಯಾಧಿಕಾರಿಣೋ ಭೂಯಾತ್ಸ್ವರೂಪೋಜ್ಜ್ವಲಕಾರಣಂ ।
ಚತುರ್ವಿಧದಶಾವಚ್ಚ ಸದಾ ಗುಣಚತುಷ್ಟಯಂ ॥ ॥ ೪೪೨ ॥

ತಾತ್ಪರ್ಯ – ಈ ಅಧಿಕಾರಿಯ ಸ್ವರೂಪೋಜ್ಜ್ವಲನಕ್ಕೆ ಯಾವ ರೀತಿ ನಾಲ್ಕು ದಶೆಗಳು ಕಾರಣವಾದುವೋ ಅದೇ ರೀತಿ ನಾಲ್ಕು ಗುಣಗಳೂ ಕಾರಣವು.

ಸೂತ್ರಂ - ಅದಾವತು ಜ್ಞಾನಮುಂ ಅಜ್ಞಾನಮುಂ ಶಕ್ತಿಯುಂ, ಅಶಕ್ತಿಯುಂ ॥ ೪೯೯ ॥

ಶ್ಲೋಕಃ – ❋ ತಾನ್ಗುಣಾಂಸ್ತು ಪ್ರವಕ್ಷ್ಯಾಮಿ ಜ್ಞಾನಮಜ್ಞಾನಮೇವ ಚ ।
ಶಕ್ತಶ್ಚಾಪ್ಯಶಕ್ತಶ್ಚೇತಿ ಪ್ರೋಕ್ತಂ ಗುಣಚತುಷ್ಟಯಂ ॥ ॥ ೪೪೩ ॥

ತಾತ್ಪರ್ಯ – ಆ ಗುಣಗಳು ಯಾವುವೆಂದರೆ, ಜ್ಞಾನವೂ, ಅಜ್ಞಾನವೂ, ಶಕ್ತಿಯೂ, ಅಶಕ್ತಿಯೂ.

ಸೂತ್ರಂ - ಇದುತಾನವನುಕ್ಕುಮುಂಡು ॥ ೫೦೦ ॥

ಶ್ಲೋಕಃ – ❋ ಚತುರ್ವಿಧಾಃ ಗುಣಾಸ್ತಸ್ಮಿನ್ಜ್ಞಾನಾಜ್ಞಾನಮುಖಾಹತಾ ।
ಷಾಡ್ಗುಣ್ಯಪರಿಪೂರ್ಣೋsಪಿ ವರ್ತಂತೇ ಕಮಲಾಪತೌ ॥ ॥ ೪೪೪ ॥

ತಾತ್ಪರ್ಯ – ಹಿಂದೆ ಹೇಳಿದ ನಾಲ್ಕು ಗುಣಗಳೂ ಭಗವಂತನಿಗೂ ಉಂಟು.

ಸೂತ್ರಂ - ಅವನುಡೈಯಜ್ಞಾನತ್ತುಕ್ಕಿಲಕ್ಕು ಇವನುಡೈಯಗುಣಂ
ಅಜ್ಞಾನತ್ತುಕ್ಕಿಲಕ್ಕು ಇವನುಡೈಯದೋಷಂ
ಶಕ್ತಿಕ್ಕಿಲಕ್ಕು ಇವನುಡೈಯರಕ್ಷಣಂ ಅಶಕ್ತಿಕ್ಕಿಲಕ್ಕು ಪರಿತ್ಯಾಗಂ ॥ ೩೦೧ ॥

ಶ್ಲೋಕಃ - ✱ ಹರೇಜ್ಞಾನಸ್ಯ ವಿಷಯಶ್ಚೇತನಾತ್ಮಗುಣಃ ಖಲು ।
ದೋಷಾದರ್ಶನರೂಪಸ್ಯ ಹ್ಯಜ್ಞಾನಸ್ಯ ಶ್ರಿಯಃ ಪತೇಃ ॥ ॥ ೪೪೫ ॥

ವಿಷಯಶ್ಚೇತನಾಕೃತ್ಯಪ್ರಮುಖೋ ದೋಷ ಏವ ಹಿ ।
ಸರ್ವಶಕ್ತಸ್ಯ ದೈತ್ಯಾರೇಶ್ಶಕ್ತೇಸ್ತು ವಿಷಯೋ ಭವೇತ್ ॥ ॥ ೪೪೬ ॥

ರಕ್ಷಣಂ ಚೇತನಸ್ಯೇಷ್ಟಪ್ರಾಪ್ತ್ಯನಿಷ್ಟನಿವಾರಕಂ ।
ಅಶಕ್ತೇಸ್ತು ಮುಕುಂದಸ್ಯ ವಿಷಯಶ್ಚೇತನಾಘತಃ ॥ ॥ ೪೪೭ ॥

ಜಾತಾಮರ್ಷಪರಿತ್ಯಾಗೋ ಹ್ಯೇವಂ ಗುಣಚತುಷ್ಟಯಂ ।
ಪ್ರದರ್ಶಿತಂ ಮುಕುಂದೇಪಿ ಚೇತನೇಥಪ್ರವಕ್ಷ್ಯತೇ ॥ ॥ ೪೪೮ ॥

ತಾತ್ಪರ್ಯ - 'ಯಸ್ಸರ್ವಜ್ಞಃ' 'ಸಹಸ್ರಾಂಶುಃ' ಎಂದು ಹೇಳುವಂತೆ ಸರ್ವಜ್ಞನಾದ ಭಗವಂತನ ದಿವ್ಯಜ್ಞಾನಕ್ಕೆ ವಿಷಯವು ಈ ಚೇತನನ ಅದ್ವೇಷಾಭಿಮುಖ್ಯವೆಂಬ ಒಳ್ಳೇ ಗುಣವು. 'ಅವಿಜ್ಞಾತಾ' ಎಂಬಂತೆ, ಸರ್ವಜ್ಞನಾಗಿದ್ದರೂ ಕೂಡ ಅವಿಜ್ಞಾತಾವಾದ ಭಗವಂತನ ಅಜ್ಞಾನಕ್ಕೆ ವಿಷಯವು ಪ್ರಕೃತಿವಶ್ಯನಾದ ಈ ಚೇತನನು ಮಾಡುವ ಅಕೃತ್ಯಕರಣಾದಿ ದೋಷವು. 'ಪರಾಸ್ಯಶಕ್ತಿರ್ವಿವಿಧೈವ ಶ್ರೂಯತೇ' ಎಂಬಂತೆ ಸರ್ವಶಕ್ತನಾದ ಭಗವಂತನ ಅಘಟಿತ ಘಟನಾ ಸಾಮರ್ಥ್ಯವುಳ್ಳ ಶಕ್ತಿಗೆ ವಿಷಯವು. ಈ ಚೇತನನ ಸಮಸ್ತವಾದ ಅನಿಷ್ಟಗಳನ್ನೂ ಹೋಗಲಾಡಿಸಿ ಸ್ವರೂಪಾನುಗುಣವಾದ ಸಕಲೇಷ್ಟ ಗಳನ್ನೂ ಉಂಟುಮಾಡುವ ರಕ್ಷಣವು, ಸರ್ವಶಕ್ತನಾದ ಭಗವಂತನ ಅಶಕ್ತಿಗೆ ವಿಷಯವು. ಈ ಚೇತನನು ಮಾಡುವ ಸಹಿಸಲಸಾಧ್ಯವಾದ ದೋಷದಿಂದುಂಟಾದ ಕೋಪವನ್ನು ಬಿಡುವಿಕೆಯು.

ಸೂತ್ರಂ - ಇವನುಡೈಯ ಜ್ಞಾನತ್ತುಕ್ಕಿಲಕ್ಕು ಆಚಾರ್ಯಗುಣಂ
ಅಜ್ಞಾನತ್ತುಕ್ಕಿಲಕ್ಕು ಆಚಾರ್ಯದೋಷಂ ಶಕ್ತಿಕ್ಕಿಲಕ್ಕು
ಆಚಾರ್ಯಕೈಂಕರ್ಯಂ ಅಶಕ್ತಿಕ್ಕಿಲಕ್ಕು ನಿಷಿದ್ಧಾನುಷ್ಠಾನಂ ॥ ೩೦೨ ॥

ಶ್ಲೋಕಃ - ✱ ಚೇತನಜ್ಞಾನವಿಷಯ ಆಚಾರ್ಯಸ್ಯ ತು ಸದ್ಗುಣಃ ।
ಚೇತನಾಜ್ಞಾನವಿಷಯೋ ದೋಷಸ್ತ್ವಾಚಾರ್ಯಸಂಭವಃ ॥ ॥ ೪೪೯ ॥

ಶಕ್ತೇಸ್ತು ವಿಷಯಸ್ತ್ವಸ್ಯ ಕೈಂಕರ್ಯಂ ಸ್ವಗುರೋಸ್ಸದಾ ।
ಚೇತನಾಶಕ್ತಿ ವಿಷಯೋ ನಿಷಿದ್ಧಾನುಷ್ಠಿತಿರ್ಭವೇತ್ ॥ ॥ ೪೫೦ ॥

ತಾತ್ಪರ್ಯ - ಈ ಚೇತನನ ಜ್ಞಾನಕ್ಕೆ ವಿಷಯವು ಮಹೋಪಕಾರಕನಾದ ಆಚಾರ್ಯನ ಸದ್ಗುಣಗಳು. ಈ ಚೇತನನ ಅಜ್ಞಾನಕ್ಕೆ ವಿಷಯವು ಆಚಾರ್ಯನ ದೇಹಸ್ವಭಾವದಿಂದುಂಟಾದ ಆಗಂತುಕವಾದ ದೋಷವು. ಈ ಚೇತನನ ಪ್ರವೃತ್ತಿ ಶಕ್ತಿಗೆ ವಿಷಯವು ತನ್ನ ಆಚಾರ್ಯನಿಗೆ ಭೋಗ್ಯವಾಗುವಂತೆ ಮಾಡುವ ಕೈಂಕರ್ಯವು. ಈ ಚೇತನನ ಅಶಕ್ತಿಗೆ ವಿಷಯವು ಸ್ವರೂಪೋಪಾಯಪುರುಷಾರ್ಥಗಳಿಗೆ ವಿರೋಧಿಗಳಾದ ಶಾಸ್ತ್ರನಿಷಿದ್ಧವಾದದ್ದನ್ನು ಅನುಷ್ಠಿಸುವುದು.

ಸೂತ್ರಂ - ನಿಷಿದ್ಧಂ ತಾನುಂನಾಲುಪಡಿಯಾಯಿರುಕ್ಕುಂ ॥ ೩೦೩ ॥

ಶ್ಲೋಕಃ – ❋ ಉಪಾದೇಯಗುಣಾಂ ತು ಚಾತುರ್ವಿಧ್ಯಂ ಯಥೇರಿತಂ ।
ತಥೋಚ್ಯತೇ ನಿಷಿದ್ಧಾನಾಂ ಚಾತುರ್ವಿಧ್ಯಂ ಚ ಸಾಂಪ್ರತಂ ॥ ೪೫೧ ॥

ತಾತ್ಪರ್ಯ – ಉಪಾದೇಯವಾದ ಗುಣಗಳು ನಾಲ್ಕು ವಿಧವೆಂದು ಹೇಳಿದಂತೆ ನಿಷಿದ್ಧಗಳೂ ನಾಲ್ಕು ವಿಧವೆಂದು ಹೇಳುತ್ತಾರೆ.

ಸೂತ್ರಂ - ಅತಾವತು ಅಕೃತ್ಯಕರಣಮುಂ ಭಗವದಪಚಾರಮುಂ ಭಾಗವತಾಪಚಾರಮುಂ ಅಸಹ್ಯಾಪಚಾರಮುಂ ॥ ೩೦೪ ॥

ಶ್ಲೋಕಃ – ❋ ಅಕೃತ್ಯಕರಣಂ ಶ್ರೀಶೇಷ್ಯಪಚಾರೋ ಭುಮುಸ್ತಥಾ ।
ತಚ್ಚಕ್ತೇಷ್ವಪಚಾರೋಪಿ ಹ್ಯಸಹ್ಯಾಗಶ್ಚತುರ್ವಿಧಾಃ ॥ ೪೫೨ ॥

ತಾತ್ಪರ್ಯ – ಆ ನಾಲ್ಕು ವಿಧ ನಿಷಿದ್ಧಗಳು ಯಾವುವೆಂದರೆ ಅಕೃತ್ಯಕರಣ ಭಗವದಪಚಾರ ಭಾಗವತಾಪಚಾರ ಅಸಹ್ಯಾಪಚಾರಗಳು.

ಸೂತ್ರಂ - ಅಕೃತ್ಯಕರಣಮಾವತು ಪರಹಿಂಸೈ ಪರಸ್ತೋತ್ರಂ ಪರದಾರಪರಿಗ್ರಹಂ ಪರದ್ರವ್ಯಾಪಹಾರಂ ಅಸತ್ಯಕಥನಂ ಅಭಕ್ಷ್ಯಭಕ್ಷಣಂ ತೊಡಕ್ಕವಾನವೈ ॥ ೩೦೫ ॥

ಶ್ಲೋಕಃ – ❋ ಪರಹಿಂಸಾ ಪರಸ್ತೋತ್ರಂ ಪರದಾರಪರಿಗ್ರಹಃ ।
ಪರದ್ರವ್ಯಾಪಹರಣಮಸತ್ಯಕಥನಂ ತಥಾ ॥ ೪೫೩ ॥

ಅಭಕ್ಷ್ಯಭಕ್ಷಣಂ ಚೈತಾನ್ಯಕೃತ್ಯಕರಣಂ ವಿದುಃ ।
ಕದಾಪಿ ನಾಚರೇದೇತತ್ತ್ವಕೃತ್ಯಕರಣಂ ಜನಃ ॥ ೪೫೪ ॥

ತಾತ್ಪರ್ಯ – 'ನಹಿಂಸ್ಯಾತ್ಸರ್ವಭೂತಾನಿ' ಎಂಬ ವಿಧಿಯನ್ನು ಅತಿಕ್ರಮಿಸಿ ಮಾಡುವ ಪ್ರಾಣಿಹಿಂಸೆ, ಭಗವಂತನನ್ನು ಸ್ತೋತ್ರ ಮಾಡಬೇಕಾದ ಮಾತ್ರಿನಿಂದ ಸಾಮಾನ್ಯ ಮನುಷ್ಯಾದಿಗಳನ್ನು ಸ್ತೋತ್ರಮಾಡುವುದು, ವಿಧಿಪೂರ್ವಕವಾಗಿ ವಿವಾಹವಾದ ಪತಿಗೇ ಅರ್ಪಣವಾದ ಹೆಂಗಸನ್ನು ಮೋಹದಿಂದ ಅನುಭವಿಸುವುದು, ಇನ್ನೊಬ್ಬರ ಸೊತ್ತನ್ನು ಅವರ ಅನುಮತಿಯಿಲ್ಲದೆ ಕಂಡೂಕಾಣದೆಯೂ ತೆಗೆದುಕೊಳ್ಳುವಿಕೆ, ನೋಡಿದ್ದಕ್ಕೆ ವ್ಯತಿರಿಕ್ತವಾಗಿಯೂ, ಪ್ರಾಣಿಗಳಿಗೆ ಅಹಿತವಾಗಿಯೂ ಇರುವ ಮಾತನ್ನು ಹೇಳುವಿಕೆ, ಜಾತಿ ಆಶ್ರಮ ಇವುಗಳಿಂದ ದುಷ್ಟವಾಗಿ ಊಟಮಾಡಬಾರದ ಪದಾರ್ಥಗಳನ್ನು ಊಟಮಾಡುವಿಕೆ ಇವೆಲ್ಲವೂ ಅಕೃತ್ಯಕರಣವು.

ಸೂತ್ರಂ - ಭಗವದಪಚಾರಮಾವತು ದೇವತಾಂತರಂಗಳೊಡೊಕ್ಕ ಈಶ್ವರನ್ಯೆ ನಿನ್ಯೈಕ್ಯೆಯುಂ ರಾಮಕೃಷ್ಣಾದ್ಯವತಾರಂಗಳಿಲ್ ಮನುಷ್ಯಸಜಾತೀಯತಾಬುದ್ಧಿಯುಂ ವರ್ಣಾಶ್ರಮವಿಪರೀತವಾನ ಉಪಚಾರಮುಂ ಅರ್ಚಾವತಾರತ್ತಿಲ್ ಉಪಾದಾನನಿರೂಪಣಮುಂ ಆತ್ಮಾಪಹಾರಮುಂ, ಭಗವದ್ದ್ರವ್ಯಾಪಹಾರಮುಂ ತೊಡಕ್ಕವಾನವೈ ॥ ೩೦೬ ॥

ಶ್ಲೋಕಃ – ✱ ಯಸ್ತು ನಾರಾಯಣಂ ದೇವಂ ಸಾಮಾನ್ಯೇನಾಭಿಮನ್ಯತೇ ।
ಸ ಯಾತಿ ನರಕಂ ಘೋರಂ ಯಾವಚ್ಚಂದ್ರದಿವಾಕರಂ ॥ ೪೫೫ ॥

ಪಂಚೋಪನಿಷದಾತ್ಮೇಷ್ಟ ತನ್ದೋರಾಮಯದೂದ್ಭವೋಃ ।
ಮರ್ತ್ಯಸಾಜಾತ್ಯಬುದ್ಧಿರ್ಹಿ ಮನುಷ್ಯಾಣಾಂ ಭವೇದ್ಯದಿ ॥ ೪೫೬ ॥

ವೇದಮಂತ್ರಾದಿಭಿಶ್ಶೂದ್ರಾ ಯದ್ಯರ್ಚಂತಿ ಹರಿಂ ತದಾ ।
ಉತ್ತಮಾಶ್ರಮಿಣೋಪ್ಯೇವಂ ತಾಂಬೂಲಸ್ಯ ನಿವೇದನೈಃ ॥ ೪೫೭ ॥

ಮಾತ್ಸಯೋನಿಪರೀಕ್ಷಾಪದಚ್ಚಾಕಾರೇ ಶ್ರಿಯಃಪತೌ ।
ತಾಮ್ರಾದಿರೋಪಕೃದ್ರೂಪತದುಪಾದಾನರೂಪಣಂ ॥ ೪೫೮ ॥

ಭಗವಚ್ಛೇಷಭೂತಸ್ಯ ಹ್ಯಾತ್ಮನೋ ಯದಿ ಭಾವಯೇತ್ ।
ಸ್ವತಂತ್ರತ್ವಂ ತದಪ್ಯಾಪುರಾತ್ಮಾಪಹರಣಂತ್ವಿತಿ ॥ ೪೫೯ ॥

ನಿವೇದನಾರ್ಹಂ ವಿಷ್ಣೋರ್ಯದ್ಧಾರಣಾರ್ಹಂ ಚ ವಸ್ತು ಯತ್ ।
ತಸ್ಯಾಪಹರಣಂ ದೇವದ್ರವ್ಯಾಪಹರಣಂ ಭವೇತ್ ॥ ೪೬೦ ॥

ತಾತ್ಪರ್ಯ – ಭಗವದಪಚಾರವು ಯಾವುದೆಂದರೆ "ಯೇ ತು ಸಾಮಾನ್ಯಭಾವೇನ ಮನ್ಯಂತೇ ಪುರುಷೋತ್ತಮಂ ತೇ ವೈ ಪಾಷಂಡಿನೋ ಭ್ರಷ್ಟೋಮಾಸ್ಸರ್ವಕರ್ಮಬಹಿಷ್ಕೃತಾಃ" ಎಂದು ಹೇಳಿರುವಂತೆ ದೇವತಾಂತರಗಳೊಡನೆ ಸಮಾನನನ್ನಾಗಿ ಭಗವಂತನನ್ನು ನೆನೆಸುವಿಕೆಯು, ರಾಮಕೃಷ್ಣಾದ್ಯವತಾರಗಳಲ್ಲಿ ಮನುಷ್ಯರಂತೆ ಇವರೂ ಕೂಡಾ ಎಂದು ಯೋಚಿಸುವುದು ; ಶೂದ್ರಾದಿಗಳು, ವೇದಮಂತ್ರಗಳಿಂದ ಭಗವಂತನನ್ನು ಪೂಜಿಸುವುದು ; ಉತ್ತಮಾಶ್ರಮಿಗಳು ತಾಂಬೂಲವನ್ನು ನಿವೇದನಮಾಡಿ ಪೂಜಿಸುವುದು ; ಅರ್ಚಾವಿಗ್ರಹದಲ್ಲಿ ಇದು ತಾಮ್ರವು, ಇದು ಬೆಳ್ಳಿಯಿಂದ ಮಾಡಿದ್ದು ಎಂದು ಉಪಾದಾನವನ್ನು ನಿರೂಪಿಸುವುದು ; ಭಗವಂತನಿಗೇ ಶೇಷಭೂತನಾದ ಆತ್ಮನನ್ನು ಸ್ವತಂತ್ರನನ್ನಾಗಿ ನೆನೆಸುವುದು ; ಭಗವಂತನ ನಿವೇದನ ಯೋಗ್ಯವಾದ ದ್ರವ್ಯವನ್ನೂ ಅವನಿಗೆ ಧರಿಸಲು ಯೋಗ್ಯವಾದ ದ್ರವ್ಯವನ್ನೂ ತನಗಾಗಿ ಉಪಯೋಗಿಸಿಕೊಳ್ಳುವುದು : ಇವೆಲ್ಲವೂ ಭಗವದಪಚಾರಗಳು.

ಸೂತ್ರಂ – **ಭಗವದ್ದ್ರವ್ಯತ್ತೈತ್ತಾನಪಹರಿಕ್ಕೈಯುಂ ಅಪಹರಿಕ್ಕಿರವರ್ಕಳುಕ್ಕು ಸಹಕರಿಕ್ಕೈಯುಂ ಅವರ್ಕಳೋಪಕ್ಕಲಿಲೇ ಯಾಚಿತವಾಹವುಂ ಅಯಾಚಿತವಾಹವುಂ ಪರಿಗ್ರಹಿಕ್ಕೈಯುಂ ಭಗವಾನುಕ್ಕು ಅನಿಷ್ಟವಾಯಿರುಕ್ಕುಂ** ॥ ೪೦೭ ॥

ಶ್ಲೋಕಃ – ✱ ಯಸ್ಸ್ವಯಂ ಭಗವದ್ದ್ರವ್ಯಂ ಹರೇದುಪಕರೋತಿ ಯಃ ।
ಪರ್ತುರನ್ಯಸ್ಯ ತಸ್ಯಾದ್ಯೋ ಯಾಚಿತಂ ವಾಪ್ಯಯಾಚಿತಂ ॥ ೪೬೧ ॥

ಆದತ್ತೇ ಭಗವದ್ದ್ರವ್ಯಂ ಪರನಿಷ್ಪತಯೌ ಸ್ಖಲತಾಃ ।
ತೇ ಸರ್ವೇನಾಚರೇತ್ತಸ್ಮಾದೇತಾವದ್ಭಕ್ತಿರ್ಯಕೋಽಜಿತ ॥ ೪೬೨ ॥

ತಾತ್ಪರ್ಯ – ಭಗವದ್ದ್ರವ್ಯವನ್ನು ತಾನೇ ಸಾಕ್ಷಾತ್ತಾಗಿ ಅಪಹರಿಸುವುದೇನು, ಅಪಹರಿಸುವವರಿಗೆ ಸಹಾಯ ಮಾಡುವುದೇನು, ಅಪಹರಿಸಿದವರ ಹತ್ತಿರ ಕೇಳಿಯಾಗಲಿ ಕೇಳದಯೇ ಆಗಲಿ ಭಗವದ್ದ್ರವ್ಯವನ್ನು ತೆಗೆದುಕೊಳ್ಳುವುದು ಇವೆಲ್ಲವೂ ಭಗವಂತನಿಗೆ ಅನಿಷ್ಟವಾಗಿರುವವು.

ಸೂತ್ರಂ - ಭಾಗವತಾಪಚಾರಮಾವತು ಅಹಂಕಾರಾರ್ಥಕಾವಂಗಳಡಿಯಾಹ
ಶ್ರೀವೈಷ್ಣವರ್ಹಳುಕ್ಕುಪ್ಪಣ್ಣುಂವಿರೋಧಂ ॥ ೩೦೮ ॥

ಶ್ಲೋಕಃ – ✱ ಪರೋತ್ಕರ್ಷಾಸಹತ್ವೇನ ಸ್ವೋತ್ಕರ್ಷಾರ್ಥಂ ಚ ಕಾಮತಃ ।
ಅರ್ಥತೋ ವೈಷ್ಣವಾನಾಂ ತು ವಿರೋಧಾಚರಣಂ ಹಿ ತತ್ ॥ ೪೬೩ ॥

ತಾತ್ಪರ್ಯ – ಪರೋತ್ಕರ್ಷವನ್ನು ಸಹಿಸಲಾರದೆ ಮಾತ್ಸರ್ಯದಿಂದ ತನ್ನ ಉತ್ಕರ್ಷಕ್ಕಾಗಿ ಅಹಂಕಾರದಿಂದಲೂ, ಕಾಮದಿಂದಲೂ, ಅರ್ಥದಿಂದಲೂ ಶ್ರೀವೈಷ್ಣವರ ವಿಷಯದಲ್ಲಿ ಮಾಡುವ ವಿರೋಧಾಚರಣವು ಭಾಗವತಾಪಚಾರವು.

ಸೂತ್ರಂ - ಅಸಹ್ಯಾಪಚಾರಮಾವತು ನಿರ್ನಿಬಂಧನಮಾಹ ಭಗವದ್ಯಾಗವತ
ವಿಷಯಮೆನ್ನಾಲ್ ಅಸಹಮಾನನಾಯಿರುಕ್ಕೈಯುಂ
ಆಚಾರ್ಯಾಪಚಾರಮುಂ ತದೃಕ್ತಾಪಚಾರಮುಂ ॥ ೩೦೯ ॥

ಶ್ಲೋಕಃ – ✱ ವಿಷ್ಣುತದ್ಭಕ್ತ ವಿಷಯೇನಿರ್ನಿಮಿತ್ತಾಸಹಿಷ್ಣುತಾ ।
ಗುರುತದ್ಭಕ್ತವಿಷಯೇಪ್ಯಪಚಾರೋಪ್ಯಸಹ್ಯಕೃತ್ ॥ ೪೬೪ ॥

ತಾತ್ಪರ್ಯ – ಭಗವಂತನಿಗೆ ಇದು ಹಿಂದೆ ಹೇಳಿದ ಅಪಚಾರಕ್ಕಿಂತಲೂ ಅಸಹ್ಯವಾದ್ದರಿಂದ ಅಸಹ್ಯಾಪಚಾರವೆಂದು ಹೆಸರು. 'ಭವದಸಹನೀಯಾಗಸಿರತಃ' ಎಂದು ಭಟ್ಟರು ಹೇಳಿರುವರು. ನಿಷ್ಕಾರಣವಾಗಿ ಹಿರಣ್ಯಕಶಿಪುವಿನಂತೆ ಭಗವದ್ವಿಷಯ, ಭಾಗವತವಿಷಯ ಎಂದರೆ ಅದನ್ನು ಸಹಿಸದೇ ಇರೋಣವು. ಆಚಾರ್ಯನು ಉಪದೇಶಿಸಿದ ಅರ್ಥದಂತೆ ಅನುಷ್ಠಿಸದೇ ಇರೋಣವು. ಆಚಾರ್ಯನು ಉಪದೇಶಿಸಿದ ಮಂತ್ರತದರ್ಥಗಳನ್ನು ಅಲ್ಪಪ್ರಯೋಜನಕ್ಕಾಗಿ ಅನಧಿಕಾರಿಗಳಿಗೆ ಉಪದೇಶಿಸುವದು ಇವೆಲ್ಲವೂ ಆಚಾರ್ಯಾಪಚಾರವು. ಆಚಾರ್ಯಭಕ್ತರೊಡನೆ ಅನುವರ್ತಿಸಿ ಹೋಗದಂತೆ ಅವರ ವಿಷಯದಲ್ಲಿ ಮಾಡುವ ಅಸೂಯೆಯಂ, ಸಿರಸ್ಕಾರವೂ ಇವೇ ಮೊದಲಾದ್ದು ತದ್ಭಕ್ತಾಪಚಾರವು.

ಸೂತ್ರಂ - ಇವ್ವೈಯೊನ್ನುಕ್ಕೊನ್ನುಕ್ರೂರಂಗಳುಮಾಯ್
ಉಪಾಯವಿರೋಧಿಹಳುಮಾಯ್
ಉಪೇಯವಿರೋಧಿಹಳುಮಾಯಿರುಕ್ಕುಂ ॥ ೩೧೦ ॥

ಶ್ಲೋಕಃ – ✱ ಉತ್ತರೋತ್ತರಮೇಷೋಪಿ ಕ್ರೂರತ್ವಂ ಭಜತೇ ಖಲು ।
ಉಪಾಯಸ್ಯಾಪ್ಯುಪೇಯಸ್ಯ ವಿರೋಧಿತ್ವಂ ವ್ರಜೇದಪಿ ॥ ೪೬೫ ॥

ತಾತ್ಪರ್ಯ – ಅಕೈತ್ಯಕರಣದಲ್ಲಿ ಭಗವದಪಚಾರವು ಕ್ರೂರವು. ಅದಕ್ಕಿಂತಲೂ ಭಾಗವತಾಪಚಾರವು ಕ್ರೂರವು. ಅದಕ್ಕಿಂತಲೂ ಅಸಹ್ಯಾಪಚಾರವು ಕ್ರೂರವು. ಈ ಕ್ರೌರ್ಯವು ಯಾವ ರೀತಿ ಹೆಚ್ಚುವುದೋ ಅದೇ ರೀತಿ ಭಗವನ್ನಿಗ್ರಹವೂ ಹೆಚ್ಚುವುದು. ಅದು ಹೇಗೆಂದರೆ ಅಕೈತ್ಯಕರಣದಲ್ಲಿ ತನ್ನ ಆಜ್ಞೆಯನ್ನು ಉಲ್ಲಂಘಿಸುವುದರಿಂದ ಕೋಪವುಂಟಾಗುವುದು. ಅದೂ ಅಲ್ಲದೇ ಈ ಜೀವಾತ್ಮಾವಿಗೆ ಆತ್ಮಾವಾಗಿದ್ದು

ಅದರ ಸತ್ತೆಗೆ ಕಾರಣನಾಗಿರುವ ತನ್ನಲ್ಲಿ ಮಾಡಿದ ಅಪಚಾರದಿಂದಲೂ ಕೋಪವುಂಟಾಗುವುದು. ಅದೂ ಅಲ್ಲದೇ 'ಜ್ಞಾನೀತ್ವಾತ್ಮೈವಮೇಮತಂ' ಎಂಬಂತೆ ತನಗೆ ಪ್ರಾಣಸ್ಥಾನೀಯರಾದ ಭಗವತರ ವಿಷಯದಲ್ಲಿ ಮಾಡುವ ಅಪಚಾರದಿಂದ ಭಗವಂತನಿಗೆ ಇನ್ನೂ ಕೋಪವುಂಟಾಗುವುದು ಮತ್ತೂ, ಉಭಯವಿಭೂತಿಯನ್ನು ಜ್ಞಾಪಕಪಡಿಸುವ ಆಚಾರ್ಯನಲ್ಲಿಯೂ, ಆಚಾರ್ಯಭಕ್ತರಲ್ಲಿಯೂ ಅಪಚಾರಮಾಡುವದರಿಂದ ಭಗವಂತನಿಗೆ ಅದಕ್ಕಿಂತಲೂ ಹೆಚ್ಚಾಗಿ ಕೋಪವುಂಟಾಗುವುದು. ಉಪಾಯ ವಿರೋಧಿ ಹೇಗೆಂದರೆ ಈ ಜೀವಾತ್ಮನ ಉಜ್ಜೀವನಕ್ಕಾಗಿ ಮಾಡುವ ಕೃಪೆಗೆ ವಿರೋಧಿಯಾಗುವುದು. ಇವನಿಗೆ ಪ್ರಾಪ್ಯವಾದ ಭಗವಂತನ ಮುಖೋಲ್ಲಾಸವೆಂಬ ಉಪೇಯಕ್ಕೂ ವಿರೋಧಿಯಾಗುವುದು.

ಸೂತ್ರಂ - ತ್ಯಾನ್ ಹಿತೋಪದೇಶಂ ಪಣ್ಣುಂವೋದು ತನ್ನೈಯುಂ ಶಿಷ್ಯನೈಯುಂ ಫಲತ್ತೈಯುಂ ಮಾರಾಡಿನಿನೈಕ್ಕೈಕ್ರೂರನಿಷಿದ್ಧಂ ॥ ೩೧೧ ॥

ಶ್ಲೋಕಃ – ✱ ಹಿತೋಪದೇಶಕರ್ತಾ ತು ಸ್ವಾತ್ಮಾನಂ ಶಿಷ್ಯಮೇವ ಚ ।
ಫಲಂ ಚ ವಿಪರೀತಂ ಸಚ್ಚಿಂತಯೇಚ್ಚೇನ್ನಿಷೇಧಕೃತ್ ॥ ॥ ೪೬೬ ॥

ತಾತ್ಪರ್ಯ – ತಾನು ಉಜ್ಜೀವಿಸಬೇಕೆಂದು ಬಂದ ಶಿಷ್ಯನಿಗೆ ಉಜ್ಜೀವನಹೇತುವಾದ ಮಂತ್ರವೆಂಬ ಹಿತವನ್ನು ಉಪದೇಶಮಾಡುವ ಕಾಲದಲ್ಲಿ ಉಪದೇಶಮಾಡುವ ತನ್ನನ್ನೂ ಉಪದೇಶಕ್ಕೆ ಪಾತ್ರನಾದ ಶಿಷ್ಯನನ್ನೂ, ಉಪದೇಶದ ಫಲವನ್ನೂ ವಿಪರೀತವನ್ನಾಗಿ ನೆನೆಸಿದ ಪಕ್ಷದಲ್ಲಿ ಅದು ಕ್ರೂರನಿಷಿದ್ಧವು.

ಸೂತ್ರಂ - ತನ್ನೈಮಾರಾಡಿನಿನೈಕ್ಕೈಯಾವತು ತನ್ನೈಆಚಾರ್ಯನೆನ್ನುನಿನೈಕ್ಕೈ ಶಿಷ್ಯನೈಮಾರಾಡಿನಿನೈಕ್ಕೈಯಾವತು ತನಕ್ಕುಶಿಷ್ಯನೆನ್ನುನಿನೈಕ್ಕೈ ಫಲತ್ತೈಮಾರಾಡಿನಿನೈಕ್ಕೈಯಾವತು ದೃಷ್ಟಪ್ರಯೋಜನತ್ತೈಯುಂ ಶಿಷ್ಯನುಡೈಯಉಜ್ಜೀವನತ್ತೈಯುಂ ಭಗವತ್ಕೈಂಕರ್ಯತ್ತೈಯುಂ ಸಹವಾಸತ್ತೈಫಲಮಾಹನಿನೈಕ್ಕೈ ॥ ೩೧೨ ॥

ಶ್ಲೋಕಃ – ✱ ಆತ್ಮನೋ ವಿಪರೀತತ್ವಂ ಸ್ವಸ್ಮಿನ್ನಾಚಾರ್ಯತಾ ಮತಿಃ ।
ಶಿಷ್ಯೇ ತು ವಿಪರೀತತ್ವಂ ಸ್ವಶಿಷ್ಯೋಯಮಿತೀವಧೀಃ ॥ ॥ ೪೬೭ ॥

ಫಲಸ್ಯ ವಿಪರೀತತ್ವಂ ಶುಶ್ರೂಷಾದಿ ಪ್ರಯೋಜನಂ ।
ಶಿಷ್ಯೋಜ್ಜೀವನಮೇವಾಥ ಭಗವದ್ದಾಸ್ಯಮೇವ ಚ ॥ ॥ ೪೬೮ ॥

ಅಪೃಥಕ್ಸ್ಥಿತಿರೂಪಂ ಚ ಸಹವಾಸಂ ಯದಿ ಸ್ಮರೇತ್ ।
ಉಪದೇಶ ಫಲತ್ವೇನ ನಿಷಿದ್ಧಂ ಕ್ರೂರಮೇವ ತತ್ ॥ ॥ ೪೬೯ ॥

ತಾತ್ಪರ್ಯ – ತನ್ನನ್ನು ವಿಪರೀತವಾಗಿ ತಿಳಿಯುವುದು ಹೇಗೆಂದರೆ ಉಪದೇಶ ಮಾಡುವಾಗ ತನ್ನ ಆಚಾರ್ಯನೇ ಉಪದೇಶ ಮಾಡುವವನು. ತಾನು ಕರಣಭೂತನೆಂದು ತಿಳಿಯದೆ ತಾನೇ ಇವನಿಗೆ ಆಚಾರ್ಯನೆಂದು ತಿಳಿದುಕೊಳ್ಳುವುದು. ಶಿಷ್ಯನನ್ನು ವಿಪರೀತವಾಗಿ ತಿಳಿಯುವುದು ಹೇಗೆಂದರೆ ಇವನು ತನ್ನ ಆಚಾರ್ಯನ ಶಿಷ್ಯನೆಂದು ತಿಳಿಯದೆ ತನಗೆ ಶಿಷ್ಯನೆಂದು ತಿಳಿಯುವುದು. ಉಪದೇಶ ಫಲವನ್ನು ವಿಪರೀತವಾಗಿ ತಿಳಿಯುವುದು ಹೇಗೆಂದರೆ ಉಪದೇಶಮಾಡುವಾಗ ಇವನು ಮಂಗಳಾಶಾಸನಕ್ಕೆ ಆಳಾಗ ಬೇಕೆಂಬ ಅಭಿಪ್ರಾಯವಿಲ್ಲದೆ ಇವನಿಂದ ದ್ರವ್ಯವೂ ಶುಶ್ರೂಷೆ ಮೊದಲಾದ ದೃಷ್ಟಪ್ರಯೋಜನಕ್ಕಾಗಿ

ಎಂಬ ಭಾವನೆಯೂ ಶಿಷ್ಯನಾದ ಇವನು ಸಂಸಾರದಿಂದ ಉತ್ತೀರ್ಣನಾಗಿ ಉಜ್ಜೀವಿಸಲೆಂಬ ಭಾವನೆಯೂ ನಂದನವನವನ್ನು ಮಾಡುವುದಕ್ಕಿಂತಲೂ, ಒಂದು ಆತ್ಮವನ್ನು ಉಪದೇಶದಿಂದ ಒಳ್ಳೇ ಮಾರ್ಗಕ್ಕೆ ತಂದ ಪಕ್ಷದಲ್ಲಿ ಭಗವಂತನಿಗೆ ಭೋಗ್ಯವಾಗುವುದೆಂಬ ಭಗವತ್ಕೈಂಕರ್ಯವನ್ನೇಯಾಗಲಿ ಈ ಸಂಸಾರದಲ್ಲಿರುವವರಿಗೂ ತನ್ನೊಡನೇ ಕೂಡಿ ಅನುವರ್ತಿಸಬೇಕೆಂಬ ಸಹವಾಸವನ್ನೇ ಆಗಲಿ ಉಪದೇಶಕ್ಕೆ ಫಲವನ್ನಾಗಿ ತಿಳಿಯುವುದು.

ಸೂತ್ರಂ - ನಿನ್ಯೈಯಾತಿರುಕ್ಕ ಇನ್ನಾಲುಫಲವುಂ ಸಿದ್ಧಿಕ್ಕಿರ ಪಡಿಯೆನ್ನೆನ್ನಿಲ್ ಶೇಷಭೂತನಾನ ಶಿಷ್ಯನ್ನಿನ್ಯೈವಾಲೇ ದೃಷ್ಟಪಲಂ ಸಿದ್ಧಿಕ್ಕುಂ ಈಶ್ವರನ್ ನಿನ್ಯೈವಾಲೇ ಉಜ್ಜೀವನಂ ಸಿದ್ಧಿಕ್ಕುಂ ಆಚಾರ್ಯನ್ನಿನ್ಯೈವಾಲೇ ಭಗವತ್ಕೈಂಕರ್ಯಂ ಸಿದ್ಧಿಕ್ಕುಂ ಉಪಕಾರಸ್ಮೃತಿಯಾಲೇ ಸಹವಾಸಂ ಸಿದ್ಧಿಕ್ಕುಂ ॥ ೩೧೩ ॥

ಶ್ಲೋಕಃ - ❋ ಶೇಷತ್ವಮೇವ ಸುವಿಚಿಂತ್ಯ ನಿಜಸ್ವರೂಪಂ
ಶಿಷ್ಯೋ ಹಿ ಕಿಂಚಿದಪಿ ಕರ್ತುಮನಾ ಯದಾ ಸ್ಯಾತ್ ।
ಶುಶ್ರೂಷಯಾ ದ್ರವಿಣತೋಪಿ ತದೈವ ದೃಷ್ಟಂ
ಕುರ್ಯಾತ್ಫಲಂ ನಿಜಗುರೋಸ್ಸತು ಸಾಧುಶೀಲಃ ॥ ೪೭೦ ॥

ಉಜ್ಜೀವನಾರ್ಥಮಾಚಾರ್ಯಸನ್ನಿಧಿಂ ಪ್ರಾಪಯಾಮಿ ತಂ ।
ಇತಿ ವಿಷ್ಣೋಃ ಕೃಪಾಕಾರ್ಯಸ್ಮೃತ್ಯಾ ಶಿಷ್ಯಸ್ಯತಾರಣಂ ॥ ೪೭೧ ॥

ಹಿತೋಪದೇಶತೋ ವಿಷ್ಣುಮಂಗಳಾಶಾಸನಾಯ ತು ।
ಏಕೋಹೀತಿ ಗುರೋಸ್ಸ್ಮೃತ್ಯಾ ವಿಷ್ಣುಕೈಂಕರ್ಯಸಂಭವಃ ॥ ೪೭೨ ॥

ಅಹಂಕಾರಾದಿನಾ ನಷ್ಟಪ್ರಾಯಂ ಮಾಂ ಕೃಪಯಾ ಗುರುಃ ।
ಮಂಗಳಾಶಾಂಸಿನಂ ಚಕ್ರೇ ಹೀತಿ ಸ್ಮೃತ್ಯಾ ಸಹಸ್ಥಿತಿಃ ॥ ೪೭೩ ॥

ತಾತ್ಪರ್ಯ - ಆಚಾರ್ಯನು ಹಿಂದೆ ಹೇಳಿದಂತೆ ನೆನೆಸದೇ ಇದ್ದ ಪಕ್ಷದಲ್ಲಿ ಅವುಗಳ ಸಿದ್ಧಿಕ್ರಮವನ್ನು ತಿಳಿಸುತ್ತಾರೆ. ಶಿಷ್ಯ ತಾನು ಶೇಷಭೂತನಾದ್ದರಿಂದ ಆಚಾರ್ಯನಿಗೆ ಯತ್ಕಿಂಚಿತ್ಕೈಂಕರ್ಯವನ್ನು ಮಾಡಬೇಕೆಂದು ಯೋಚಿಸಿದರೆ ಶುಶ್ರೂಷಾದಿ ದೃಷ್ಟಪ್ರಯೋಜನವು ಸಿದ್ಧಿಸುವುದು. ಭಗವಂತನು ತನ್ನ ವಿಶೇಷ ಕಟಾಕ್ಷದಿಂದ ಅದ್ವೇಷಾದಿಗಳನ್ನುಂಟುಮಾಡಿ ಆಚಾರ್ಯಸಮಾಶ್ರಯಣವನ್ನೂ ಉಂಟುಮಾಡಿ ಆಚಾರ್ಯನ ಉಪದೇಶದಿಂದ ಜ್ಞಾನವುಳ್ಳವನನ್ನಾಗಿಸಿ ಈ ಚೇತನನನ್ನು ಈ ಸಂಸಾರದಿಂದ ವಿಮುಕ್ತನಾಗಿಸಬೇಕು ಎಂದು ಯೋಚಿಸಿದ ಪಕ್ಷದಲ್ಲಿ ಅವನ ಕೃಪಾಕಾರ್ಯವಾದ ಸ್ಮರಣೆಯಿಂದ ಉಜ್ಜೀವನವು ಸಿದ್ಧಿಸುವುದು. ಹಿತೋಪದೇಶವನ್ನು ಮಾಡಿ ಮಂಗಳಾಶಾಸನಕ್ಕೆ ಪಾತ್ರರಾಗುವಂತೆ ಚೇತನರನ್ನು ಮಾಡಿದೆ ಪಕ್ಷದಲ್ಲಿ ಭಗವಂತನಿಗೆ ಒಪಳ ಇಷ್ಟವು. ಅದೇ ಭಗವತ್ಕೈಂಕರ್ಯವಲ್ಲವೇ ಎಂದೂ ತನ್ನ ಆಚಾರ್ಯನು ಯೋಚಿಸಿದರೆ ಭಗವತ್ಕೈಂಕರ್ಯವು ಸಿದ್ಧಿಸುವುದು. ಅನಾದಿಕಾಲದಿಂದಲೂ ಅಹಂಕಾರ ಮಮಕಾರಗಳಿಂದ ನಷ್ಟಪ್ರಾಯನಾದ ನನ್ನನ್ನು ಅಂಗೀಕರಿಸಿ ಅಜ್ಞಾತಜ್ಞಾಪನವನ್ನುಂಟುಮಾಡಿ ಮಂಗಳಾಶಾಸನಕ್ಕೆ ಪಾತ್ರನನ್ನಾಗಿಸಿದ ಮಹೋಪಕಾರಿಯಾದ್ದರಿಂದ ಇವನ ಜೊತೆಯಲ್ಲೇ ಇರಬೇಕು ಎಂದು ಶಿಷ್ಯನ ಯೋಚನೆಯಿಂದ ಸಹವಾಸವು ಸಿದ್ಧಿಸುವುದು.

ಸೂತ್ರಂ - ಸಾಕ್ಷಾತ್ಫಲವುಂ ಆಚಾರ್ಯತ್ವವುಂ ಸಿದ್ಧಿಕ್ಕಿರಪಡಿಯೆನ್ನೆನ್ನಿಲ್ ತನ್ ನಿನ್ನೈವಾಲುಂ ಈಶ್ವರನ್ ನಿನ್ನೈವಾಲುಂ ಸಿದ್ಧಿಕ್ಕುಂ ॥ ೫೧೪ ॥

ಶ್ಲೋಕಃ - ❋ ಉಪದೇಶಸ್ಯ ಪಾತ್ರಾಯ ಶಿಷ್ಯಾಯೋಪದಿಶೇದ್ಯದಿ ।
ಗುರುಶ್ಚೈತಶುಭಾಶಂಸೀನ್ನಾದಯಂತ್ಪಿತಿ ಚಿಂತಯೇತ್ ॥ ॥ ೪೭೪ ॥

ಭಗವನ್ಮಂಗಳಾಶಂಸೀ ಏಷೋಽಪಿ ಭವತೀಧ್ರುವಂ ।
ಆಚಾರ್ಯಸ್ಯಾಶಯೇನೈವ ಸಿದ್ಧ್ಯೇತ್ತಾತ್ಸಾಕ್ಷಾತ್ಫಲಂ ಸ್ವಯಂ ॥ ॥ ೪೭೫ ॥

ವಿನಾ ವಿಪ್ರತಿಪತ್ತಿಂ ತು ಸ್ವಸ್ಮಿನ್ನಿಷ್ಟೇ ಫಲೇ ಪಿ ಚ ।
ಉಪದೇಷ್ಟಾ ಗುರುರ್ಭೂಯಾದಿತಿ ಶ್ರೀಶೇಚ್ಛಯಾ ಗುರುಃ ॥ ॥ ೪೭೬ ॥

ತಾತ್ಪರ್ಯ - ಸಾಕ್ಷಾತ್ಫಲವು ಯಾವುದೆಂದರೆ ಉಪದೇಶಕ್ಕೆ ಪಾತ್ರನಾದ ಶಿಷ್ಯನು ಸನ್ಮಾರ್ಗಕ್ಕೆ ತಿರುಗಿ ಮಂಗಳಾಶಾಸನಕ್ಕೆ ಸಿದ್ಧನಾಗುವಿಕೆಯು. ಆ ಫಲವು ಉಪದೇಷ್ಟಾವಾದ ಆಚಾರ್ಯನು ವಿಪ್ರತಿಪತ್ತಿಯಿಲ್ಲದೆ ಇದನ್ನೇ ಫಲವನ್ನಾಗಿ ನೆನೆಸಿ ಉಪದೇಶ ಮಾಡಿದ ಪಕ್ಷದಲ್ಲಿ ಅವನು ಅದೇ ರೀತಿ ಮಂಗಳಾಶಾಸನಕ್ಕೆ ಅಧಿಕಾರಿಯಾಗುವನು. ಆಚಾರ್ಯತ್ವವು ತನ್ನನ್ನು ಆಚಾರ್ಯ ಪರತಂತ್ರನನ್ನಾಗಿಯೇ ಅನುಸಂಧಿಸಿ ತನ್ನಿಂದ ಉಪದೇಶ ಕೇಳುವವನಿಗೆ ಆಚಾರ್ಯನಾಗಿರುವಿಕೆ. ಈ ಆಚಾರ್ಯತ್ವವು ತನ್ನನ್ನೂ ಶಿಷ್ಯನನ್ನೂ ಫಲವನ್ನೂ ವಿಪ್ರತಿಪತ್ತಿಯಿಲ್ಲದೆ ಇದ್ದಂತೆಯೇ ಅನುಸಂಧಿಸಿ ಉಪದೇಶಿಸುವ ಪರಿಪಾಕವುಳ್ಳವನಾಗಿ ಆಚಾರ್ಯನಾಗಿರಲೆಂದು ಸರ್ವೇಶ್ವರನು ನೆನೆಸಿದ್ದೇ ಆದರೆ ಆಚಾರ್ಯತ್ವವು ಸಿದ್ಧಿಸುವುದು.

ಸೂತ್ರಂ - ಇಪ್ಪಡಿಯೊಳಿಯು ಉಪದೇಶಿಕ್ಕಿಲ್ ಇರುವಕ್ಕುಂ ಸ್ವರೂಪಸಿದ್ಧಿಯಿಲ್ಲೈ ॥ ೫೧೫ ॥

ಶ್ಲೋಕಃ - ❋ ಪೂರ್ವೋಕ್ತರೀತ್ಯಾ ಯದಿನೋಪದೇಶಂ ಕುರ್ಯಾದ್ಗುರೋಸ್ಸಿದ್ಧ್ಯತಿ ನ ಸ್ವರೂಪಂ ।
ಸ್ವರೂಪಸಿದ್ಧ್ಯರ್ಥಮತಶ್ಚ ಕುರ್ಯಾದ್ಗುರುಸ್ಸ್ವ ಶಿಷ್ಯಾಯತಥೋಪದೇಶಂ ॥ ॥ ೪೭೭ ॥

ತಾತ್ಪರ್ಯ - ಆಚಾರ್ಯನು ಹಿಂದೆ ಹೇಳಿದಂತೆ ಉಪದೇಶ ಮಾಡದೇ ಇದ್ದರೆ ಭಗವಂತನು ಇವನನ್ನು ಆಚಾರ್ಯನೆಂದು ನೆನೆಸುವುದಿಲ್ಲವಾದ್ದರಿಂದ ಆಚಾರ್ಯತ್ವವೆಂಬ ಸ್ವರೂಪವು ಸಿದ್ಧಿಸುವುದಿಲ್ಲ. ಆಚಾರ್ಯನಲ್ಲಿ ಉಪದೇಶಶುದ್ಧಿಯಿಲ್ಲದ ಕಾರಣ ಉಪದೇಶ ಪಾತ್ರನಾದವನಿಗೆ ಶಿಷ್ಯತ್ವವೆಂಬ ಸ್ವರೂಪವು ಸಿದ್ಧಿಸುವುದಿಲ್ಲ. ಆದ್ದರಿಂದ ನಿಯಮದಂತೆಯೇ ಉಪದೇಶಿಸಬೇಕು.

ಸೂತ್ರಂ - ಆಚಾರ್ಯನುಕ್ಕು ಶಿಷ್ಯನ್ ಪಕ್ಕಲ್ ಕೃಪೈಯುಂ ಸ್ವಾಚಾರ್ಯನ್ ಪಕ್ಕಲ್ ಪಾರತಂತ್ರ್ಯವುಂ ವೇಣುಂ ॥ ೫೧೬ ॥

ಶ್ಲೋಕಃ - ❋ ಕೃಪಾ ಶಿಷ್ಯಸ್ಯ ವಿಷಯೇ ಸ್ವಾಚಾರ್ಯೇ ಪರತಂತ್ರತಾ ।
ಆಚಾರ್ಯಸ್ಯ ಭವೇದೇತತ್ಸರ್ವದಾ ಚ ಗುಣದ್ವಯಂ ॥ ॥ ೪೭೮ ॥

ತಾತ್ಪರ್ಯ - ಉಪದೇಶವನ್ನು ಮಾಡುವ ಆಚಾರ್ಯನಿಗೆ ಉಜ್ಜೀವಿಸಬೇಕೆಂದು ಬಂದ ಶಿಷ್ಯನ ವಿಷಯದಲ್ಲಿ ಹೇಗಾದರೂ ಉಪದೇಶ ಮಾಡಬೇಕೆಂಬ ಕೃಪೆಯೂ ತನ್ನನ್ನು ಉಪದೇಶಕರ್ತಾವನ್ನಾಗಿ ನೆನೆಸದೇ

ನೆಪಮಾತ್ರವೆಂದರಿತು ತನ್ನ ಆಚಾರ್ಯನ ವಿಷಯದಲ್ಲಿ ಪಾರತಂತ್ರ್ಯವೂ ಇವೆರಡು ಗುಣಗಳೂ ಆತ್ಯವಶ್ಯಕವಾಗಿ ಬೇಕು.

ಸೂತ್ರಂ - ಕೃಪೈಯಾಲೇ ಶಿಷ್ಯನ್ ಸ್ವರೂಪಂ ಸಿದ್ಧಿಕ್ಕುಂ ಪಾರತಂತ್ರ್ಯತ್ತಾಲೇ ತನ್ ಸ್ವರೂಪಂ ಸಿದ್ಧಿಕ್ಕುಂ ॥ ೩೧೭ ॥

ಶ್ಲೋಕಃ – ❋ ಅನುಕ್ರೋಶೇನ ಶಿಷ್ಯಸ್ಯ ಸ್ವರೂಪಂ ಸಿದ್ಧ್ಯತಿ ಧ್ರುವಂ ।
ಸ್ವಾಚಾರ್ಯ ಪಾರತಂತ್ರ್ಯೇಣ ಸ್ವಸ್ವರೂಪಂ ಚ ಸಿದ್ಧ್ಯತಿ ॥ ॥ ೪೭೯ ॥

ತಾತ್ಪರ್ಯ – ಆಚಾರ್ಯನ ದಯೆಯಿಂದ ಶಿಷ್ಯನ ಸ್ವರೂಪವು ಸಿದ್ಧಿಸುವುದು ಹೇಗೆಂದರೆ ಶಿಷ್ಯನು ಸನ್ಮಾರ್ಗಕ್ಕೆ ಬರುವವರಿಗೂ ಆಚಾರ್ಯನು ಉಪದೇಶಮಾಡಿ ಮಾಡಿ ಸನ್ಮಾರ್ಗಕ್ಕೆ ಬರುವಂತೆ ದಯೆಯಿಂದ ಮಾಡುವನಾದ್ದರಿಂದ ಶಿಷ್ಯನ ಸ್ವರೂಪವು ಸಿದ್ಧಿಸುವುದು. ಈ ಆಚಾರ್ಯನು ತನ್ನ ಆಚಾರ್ಯನಿಗೆ ಪರತಂತ್ರನಾಗಿ ನೆಪಮಾತ್ರಕ್ಕೆ ಉಪದೇಶ ಮಾಡಿದ ಪಕ್ಷದಲ್ಲಿ ಆಚಾರ್ಯನ ಸ್ವರೂಪವು ಸಿದ್ಧಿಸುವುದು.

ಸೂತ್ರಂ - ನೇರೇ ಆಚಾರ್ಯನೆನ್ಬತು ಸಂಸಾರನಿವರ್ತಕಮಾನ ಪೆರಿಯತಿರುಮಂತ್ರತ್ತೈಯುಪದೇಶಿತ್ತವನ್ಯೆ ॥ ೩೧೮ ॥

ಶ್ಲೋಕಃ – ❋ ಸಾಕ್ಷಾದಷ್ಟಾಕ್ಷರಾಖ್ಯೋ ಯಃ ಮಂತ್ರಃ ಪರಮ ಉಚ್ಯತೇ ।
ತಸ್ಯೋಪದೇಷ್ಟಾ ಯಶ್ಚಸ್ಯಾತ್ತಮಾಚಾರ್ಯಂ ವಿದುರ್ಬುಧಾಃ ॥ ॥ ೪೮೦ ॥

ತಾತ್ಪರ್ಯ – ಐಹಿಕಾಮುಷ್ಮಿಕಫಲಗಳನ್ನು ಕೊಡುವ ಅನೇಕ ಮಂತ್ರಗಳಿದ್ದಾಗ್ಯೂ ಕೂಡ ಸಾಕ್ಷಾತ್ತಾಗಿ ಮೋಕ್ಷಪ್ರದವಾದ ಅಷ್ಟಾಕ್ಷರ ಮಂತ್ರವನ್ನು ಯಾವನು ಉಪದೇಶಮಾಡುವನೋ ಅವನನ್ನೇ ಆಚಾರ್ಯನೆಂದು ಹೇಳುವುದು.

ಸೂತ್ರಂ – ಸಂಸಾರವರ್ಧಕಂಗಳುಮಾಯ್ ಕ್ಷುದ್ರಂಗಳುಮಾನ ಭಗವನ್ಮಂತ್ರಂಗಳ್ಕೈ ಉಪದೇಶಿತ್ತವರ್ಕಳುಕ್ಕು ಆಚಾರ್ಯತ್ವಪೂರ್ತಿಯಿಲ್ಲೈ ॥ ೩೧೯ ॥

ಶ್ಲೋಕಃ – ❋ ಸಂಸಾರವರ್ಧಕಾನಾಂ ಚ ಕ್ಷುದ್ರಾಣಾಂ ಕಮಲಾಪತೇಃ ।
ಮಂತ್ರಾಣಾಮುಪದೇಷ್ಟಾ ಯೋ ನ ತಸ್ಯಾಚಾರ್ಯತಾ ಸ್ಥಿತಿ ॥ ॥ ೪೮೧ ॥

ತಾತ್ಪರ್ಯ – ಸಂಸಾರವನ್ನು ವೃದ್ಧಿಗೊಳಿಸುವ ಕ್ಷುದ್ರಗಳಾದ ಭಗವನ್ಮಂತ್ರಗಳನ್ನು ಉಪದೇಶ ಮಾಡುವವನಿಗೆ ಆಚಾರ್ಯತ್ವಪೂರ್ತಿಯಿಲ್ಲ.

ಸೂತ್ರಂ - ಭಗವನ್ಮಂತ್ರಂಗಳ್ಕೈ ಕ್ಷುದ್ರಮೆನ್ಗಿರದು ಫಲದ್ವಾರಾ ॥ ೩೨೦ ॥

ಶ್ಲೋಕಃ – ❋ ಫಲದ್ವಾರೈವ ಭಗವನ್ಮಂತ್ರಾಣಾಂ ಕ್ಷುದ್ರತಾ ಮತಾ ।
ಪುತ್ರದಾರಗೃಹಕ್ಷೇತ್ರ ಫಲಾನಾಂ ಭವದತ್ವತಃ ॥ ॥ ೪೮೨ ॥

ತಾತ್ಪರ್ಯ – ಭಗವನ್ಮಂತ್ರಗಳನ್ನು ಕ್ಷುದ್ರವೆಂದು ಹೇಳಬಹುದೇ ಅಂದರೆ ಪುತ್ರದಾರಗೃಹಕ್ಷೇತ್ರಗಳನ್ನು ಕೊಟ್ಟು ಸಂಸಾರವನ್ನು ವೃದ್ಧಿಪಡಿಸುವ ಕಾರಣ ಕ್ಷುದ್ರವೆಂದು ಹೇಳುವುದು.

ಸೂತ್ರಂ - ಸಂಸಾರವರ್ಧಕಂಗಳೆನ್ನಿರದುಂ ಅತ್ತಾಲೇ ॥ ೩೦ ॥

ಶ್ಲೋಕಃ – ✱ ಪುತ್ರದಾರಗೃಹಕ್ಷುದ್ರಫಲಾನಾಂ ದಾತೃತಾ ಯತಃ ।
ಮಂತ್ರಾಣಾಂ ತಾದೃಶಾನಾಂ ತು ಭವವರ್ಧಕತಾ ತತಃ ॥ ॥ ೪೮೩ ॥

ತಾತ್ಪರ್ಯ – ಆ ಭಗವನ್ಮಂತ್ರಗಳೆಲ್ಲವೂ ಪುತ್ರದಾರಾದಿ ಫಲಗಳನ್ನು ಕೊಡುವುದರಿಂದ ಸಂಸಾರವರ್ಧಕಗಳೆಂದು ಹೇಳುವುದು.

ಸೂತ್ರಂ - ಇತುತಾನೌಪಾಧಿಕಂ ॥ ೩೨ ॥

ಶ್ಲೋಕ – ✱ ಏತಾದೃಕ್ಷುದ್ರರೂಪಾಣಾಂ ಫಲಾನಾಂ ದಾತೃತೇತಿ ಯತ್ ।
ತದುಪಾಧಿಪ್ರಯುಕ್ತಾಹಿ ಮಂತ್ರಾಣಾಂ ಭವತಿ ಧ್ರುವಂ ॥ ॥ ೪೮೪ ॥

ತಾತ್ಪರ್ಯ – ಈ ರೀತಿಯಾದ ಕ್ಷುದ್ರಫಲಪ್ರದತ್ವವು ಉಪಾಧಿಪ್ರಯುಕ್ತವಾದದ್ದು.

ಸೂತ್ರಂ - ಚೇತನನುಡೈಯ ರುಚಿಯಾಲೇ ವರುಹೈಯಾಲೇ ॥ ೩೩ ॥

ಶ್ಲೋಕಃ – ✱ ತತ್ತಚ್ಚೇತನಕಾಂಕ್ಷಾತಃ ತತ್ತನ್ಮಂತ್ರಾಃ ಫಲಾನ್ಯಪಿ ।
ಪುತ್ರಾದೀನಿ ಪ್ರದದತಿಪ್ರಾಯಸ್ತ್ವೌಪಧಿಕಾನಿಹಿ ॥ ॥ ೪೮೫ ॥

ತಾತ್ಪರ್ಯ – ಭಗವನ್ಮಂತ್ರಗಳಾದ್ದರಿಂದ ಆ ಮಂತ್ರಗಳಿಗೆ ಮೋಕ್ಷಪ್ರದತ್ವಶಕ್ತಿಯಿದ್ದಾಗ್ಯೂ ಪ್ರಕೃತಿವಶ್ಯರಾದ ಚೇತನರುಗಳ ಕ್ಷುದ್ರಫಲಗಳ ಅಪೇಕ್ಷೆಯಿಂದ ಕ್ಷುದ್ರಫಲಗಳನ್ನು ಕೊಡುವುವು. ಅದು ಹೇಗೆಂದರೆ ಐಶ್ವರ್ಯವನ್ನು ಅಪೇಕ್ಷಿಸುವವರಿಗೆ ಗೋಪಾಲ ಮಂತ್ರವೂ, ಪುತ್ರನನ್ನು ಅಪೇಕ್ಷಿಸುವವರಿಗೆ ರಾಮಮಂತ್ರವೂ, ವಿದ್ಯೆಯನ್ನು ಅಪೇಕ್ಷಿಸುವವರಿಗೆ ಹಯಗ್ರೀವ ಮಂತ್ರವೂ, ವಿಜಯವನ್ನು ಅಪೇಕ್ಷಿಸುವವರಿಗೆ ಸುದರ್ಶನನಾರಸಿಂಹಮಂತ್ರಗಳೂ ಈ ರೀತಿ ಕ್ಷುದ್ರಫಲಗಳನ್ನು ಅವರವರ ಅಪೇಕ್ಷೆಯಂತೆ ಆಯಾಯಾ ಮಂತ್ರಗಳು ಕೊಡುವಂತೆ ಭಗವಂತನು ಕಲ್ಪಿಸಿರುವುದರಿಂದ ಸ್ವಾಭಾವಿಕವಲ್ಲ, ಔಪಾಧಿಕವೆನ್ನುವುದು.

ಸೂತ್ರಂ - ಶಿಷ್ಯನೆನ್ಬತು ಸಾಧ್ಯಾಂತರನಿವೃತ್ತಿಯುಂ ಫಲಸಾಧನಶುಶ್ರೂಷೈಯುಂ ಆರ್ತಿಯುಂ ಆದರವುಂ ಅನಸೂಯೈಯುಂ ಉಡೈಯವನೈ ॥ ೩೪ ॥

ಶ್ಲೋಕಃ – ✱ ಸಾಧ್ಯಾಂತರನಿವೃತ್ತಿರ್ಹಿ ಕೈವಲ್ಯೈಶ್ವರ್ಯ ವರ್ಜನಂ ।
ಸ್ವಸ್ವರೂಪವಿರೋಧಿತ್ವಾದ್ಯಸ್ಮಿನ್ನಸ್ತಿ ನಿರಂತರಂ ॥ ॥ ೪೮೬ ॥

ಸ್ವಾಚಾರ್ಯಮಂತರಾ ಕಿಂ ಚ ಪ್ರಾಪ್ಯಾಂತರಮಹಂ ನ ಹಿ ।
ಜಾನಾಮೀತಿಸ್ಥಿತಿರ್ಯಸ್ಮಿನ್ವರ್ತತೇ ಚ ನಿರಂತರಂ ॥ ॥ ೪೮೭ ॥

ತತ್ವಜ್ಞಾನ ಫಲಸ್ಯೈವ ಸಿದ್ಧೇಸ್ಸಾಧನತಾ ಧಿಯಾ ।
ಶುಶ್ರೂಷಾಂ ಸ್ವಗುರೋಃ ಪ್ರೀತ್ಯಾ ಯಃ ಕರೋತಿ ನಿರಂತರಂ ॥ ॥ ೪೮೮ ॥

ಮುಖೋಲ್ಲಾಸಫಲಸ್ಯಾಪಿ ಸ್ವಗುರೋಸ್ತಾಧನತ್ವತಃ ।
ಯಃ ಕರೋತಿ ಚ ಶುಶ್ರೂಷಾಂ ತ್ವಾಚಾರ್ಯಸ್ಯ ನಿರಂತರಂ ॥ ॥ ೪೮೯ ॥

ಅಜ್ಞಾನಜನನೀಂ ಲೀಲಾವಿಭೂತಿಮಧುನಾಪ್ಯಹಂ ।
ತ್ಯಕ್ತ್ವಾ ನಪ್ರಾಪ್ತವಾನ್ವಿಷ್ಣುಮಿತಿ ಯೋ ದುಃಖಿತೋ ಭವೇತ್ ॥ ॥ ೪೯೦ ॥

ಕಿಂಚಾಚಾರ್ಯಶರೀರಸ್ಯಾಪ್ಯನುಭೂತೇರಲಾಭತಃ ।
ತಲ್ಲಾಭಾರ್ಥಂ ಭವೇದಸ್ಮಿನ್ಕ್ಲೇಶಶ್ಚಾರ್ತಿರಿತೀರ್ಯತೇ ॥ ॥ ೪೯೧ ॥

ಗುರುಣಾ ಪ್ರೋಚ್ಯಮಾನೇಷು ಗುಣೇಷು ಕಮಲಾಪತೇಃ ।
ನಿರಂತರಾನುಭೂತ್ಯರ್ಥಂ ಯಸ್ಮಾನ್ಭವತಿ ಚಾದರಃ ॥ ॥ ೪೯೨ ॥

ಕ್ಷುತ್ಪೀಡಿತೋ ಯಥೈವಾನ್ನೇ ತಥೈವಾಚಾರ್ಯಸನ್ನಿಧೌ ।
ತತ್ಕೈಂಕರ್ಯೈಕ ಕರಣೇ ಯಸ್ಮಿನ್ಭವತಿ ಚಾದರಃ ॥ ॥ ೪೯೩ ॥

ವಿಷ್ಣುತದ್ಭಕ್ತವಿಷಯವೈಭವೇ ಗುರುದರ್ಶಿತೇ ।
ಯಸ್ಯನೋದೇತ್ಯಸೂಯಾ ಚ ಸ್ವಾಚಾರ್ಯೋತ್ಕರ್ಷವೈಭವೇ ॥ ॥ ೪೯೪ ॥

ಸರ್ವದೈತಾದೃಶೈರುಚ್ಚಗುಣೈಶ್ಚ ಸಮಲಂಕೃತಂ ।
ಶಿಷ್ಯಲಕ್ಷಣಸಂಯುಕ್ತಂ ಸಚ್ಛಿಷ್ಯಂ ನಿಗದಂತಿ ತಂ ॥ ॥ ೪೯೫ ॥

ತಾತ್ಪರ್ಯ – ಸಚ್ಛಿಷ್ಯನು ಹೇಗಿರಬೇಕೆಂದರೆ ಹೇಳುತ್ತಾರೆ. ಸ್ವರೂಪ ವಿರೋಧಿಯಾದ ಐಶ್ವರ್ಯಕೈವಲ್ಯಗಳೆಂಬ ಪ್ರಾಪ್ಯಾಂತರಗಳನ್ನು ಅಪೇಕ್ಷಿಸಕೂಡದು ಮತ್ತು ತನ್ನ ಆಚಾರ್ಯನನ್ನು ಬಿಟ್ಟು ಪ್ರಾಪ್ಯಾಂತರವನ್ನು ಸೇರಕೂಡದು. ಆಚಾರ್ಯನನ್ನು ತಾನು ಮಾಡುವ ಶುಶ್ರೂಷೆಯಿಂದ ಸಂತೋಷಪಡಿಸಿ ತತ್ವಜ್ಞಾನವನ್ನು ಪಡೆಯಬೇಕಾದ್ದರಿಂದ ಆ ತತ್ವಜ್ಞಾನವೆಂಬ ಫಲದ ಸಿದ್ಧಿಗಾಗಿ ಸಾಧನವಾದ ಶುಶ್ರೂಷೆಯನ್ನು ಮಾಡಬೇಕು. ಅದೂ ಅಲ್ಲದೆ ಆಚಾರ್ಯನ ಮುಖೋಲ್ಲಾಸಕ್ಕಾಗಿ ಶುಶ್ರೂಷೆಯನ್ನೂ ಮಾಡಬೇಕು. ಅಜ್ಞಾನವನ್ನುಂಟುಮಾಡುವ ಈ ಲೀಲಾವಿಭೂತಿಯನ್ನು ಬಿಟ್ಟು ಇನ್ನೂ ಭಗವಂತನನ್ನು ಹೊಂದಲಿಲ್ಲವಲ್ಲಾ ಎಂಬ ಕ್ಲೇಶವುಂಟಾಗಬೇಕು ಮತ್ತೂ ಆಚಾರ್ಯವಿಗ್ರಹಾನುಭವವು ಉಂಟಾಗಲಿಲ್ಲವಲ್ಲಾ ಎಂಬ ಕ್ಲೇಶವು ಉಂಟಾಗಬೇಕು. ಉತ್ತರೋತ್ತರ ಭಗವದನುಭವವು ವೃದ್ಧಿಯಾಗುವಂತೆ ಆಚಾರ್ಯನು ಉಪದೇಶಿಸುವ ಭಗವದ್ಗುಣಾನುಭವದಲ್ಲಿ ಆದರಾತಿಶಯವು ಉಂಟಾಗಬೇಕು. ಮತ್ತು ಹಸಿದಿರುವವನು ಅನ್ನವನ್ನು ಕಂಡರೆ ಯಾವ ರೀತಿ ಆದರವನ್ನು ತೋರಿಸುವನೋ ಅದೇ ರೀತಿ ಆಚಾರ್ಯನ ಕೈಂಕರ್ಯದಲ್ಲಿ ಆದರವನ್ನು ತೋರಿಸಬೇಕು. ಆಚಾರ್ಯನು ಭಗವದ್ಭಾಗವತರ ವೈಭವಗಳನ್ನು ವಿಸ್ತಾರವಾಗಿ ಹೇಳುತ್ತಿದ್ದರೆ ಅದರಲ್ಲಿ ಅಸೂಯೆ ಇಲ್ಲದಿರಬೇಕು. ಮತ್ತು ಆಚಾರ್ಯನ ಉತ್ಕರ್ಷದಲ್ಲಿಯೂ, ಸಬ್ರಹ್ಮಚಾರಿಗಳ ಉತ್ಕರ್ಷದಲ್ಲಿಯೂ ಅಸೂಯೆಪಡಕೂಡದು. ಈ ರೀತಿ ಇರುವವನು ಸಚ್ಛಿಷ್ಯನು.

ಸೂತ್ರಂ - ಮಂತ್ರಮುಂ ದೇವತೈಯುಂ ಫಲಮುಂ ಫಲಾನುಬಂಧಿಹಳುಂ ಫಲಸಾಧನಮುಂ ಐಹಿಕಭೋಗಮುಂ ಎಲ್ಲಾಂ ಆಚಾರ್ಯನೇ ಯೆನ್ನುನಿನ್ಱೈಕ್ಕಕ್ಕಡವನ್ ॥ ೩೨೫ ॥

ಶ್ಲೋಕಃ – ❋ ಅಷ್ಟಾಕ್ಷರಮಹಾಮಂತ್ರಃ ತೇನ ಶ್ಲೋಕ್ತಾ ಚ ದೇವತಾ ।
ತಶ್ಚಾಸಾದಾತ್ತ್ಯಕೈಂಕರ್ಯಂ ಸ್ವಸ್ವರೂಪಸಮುದ್ಭವಃ ॥ ॥ ೪೯೬ ॥

ಸಾಲೋಕ್ಯಾದಿಕಮೇತಾದೃಕ್ಫಲದಾಯಕಸಾಧನಂ ।
ಪುತ್ರದಾರಗೃಹಕ್ಷೇತ್ರಪಶ್ವನ್ನಾದಿಸಮುದ್ಭವಾ ॥ ॥ ೪೯೭ ॥

ನಿಷ್ಪತ್ತ್ಯೂಹಾನುಭೂತಿಶ್ಚ ಸರ್ವಮೇತನ್ನಿರಂತರಂ ।
ಸಚ್ಛಿಷ್ಯೋ ಭಾವಯೇದ್ಭಕ್ತ್ಯಾ ಗುರುರೇವ ಮಮೇತಿ ಚ ॥ ॥ ೪೯೮ ॥

ತಾತ್ಪರ್ಯ – 'ಮಂತಾರಂತಾಯತೇ' ಇತಿ ಅನುಸಂಧಾನಮಾಡುವವನನ್ನು ರಕ್ಷಿಸುವ ಮಂತ್ರವೂ ಆ ಮಂತ್ರದಲ್ಲಿ ಪ್ರತಿಪಾದಿಸುವ ಪರದೇವತೆಯೂ ಆ ದೇವತಾನುಗ್ರಹದಿಂದುಂಟಾದ ಕೈಂಕರ್ಯ ರೂಪವಾದ ಫಲವೂ ತದನುಬಂಧಿಯಾದ ಅವಿದ್ಯಾನಿವೃತ್ತಿಪೂರ್ವಕವಾದ ಸ್ವಸ್ವರೂಪಾವಿರ್ಭಾವವೂ ಸಾಲೋಕ್ಯಾದಿಗಳೂ ಆ ವಿಧವಾದ ಫಲಗಳನ್ನು ಕೊಡುವ ಸಾಧನವೂ, ಪುತ್ರದಾರಗೃಹಕ್ಷೇತ್ರಪಶ್ವನ್ನಾದ್ಯನುಭವ ರೂಪವಾದ ಇಹಲೋಕದ ಭೋಗವೂ ಇವೆಲ್ಲವೂ ನನಗೆ ಆಚಾರ್ಯನೇ ಎಂದು ಶಿಷ್ಯನಾದವನು ಭಾವಿಸಬೇಕು.

ಸೂತ್ರಂ - ಮಾತಾ ಪಿತಾ ಯುವತಯಃ ಎನ್ಗಿರಶ್ಲೋಕತ್ತಿಲೇ ಇವ್ವರ್ಥತ್ತೈ ಪರಮಾಚಾರ್ಯರು ಮರುಳಿಚ್ಚೈಯ್ದಾರ್ ॥ ೩೨೬ ॥

ಶ್ಲೋಕಃ – ❋ ಮಾತಾಪಿತಾಯುವತಯಸ್ತನಯಾ ವಿಭೂತಿಃ
ಸರ್ವಂ ಯದೇವ ನಿಯಮೇನ ಮದನ್ವಯಾನಾಂ ।
ಅದ್ಯಸ್ಯ ನಃ ಕುಲಪತೇರ್ವಕುಳಾಭಿರಾಮಂ
ಶ್ರೀಮತ್ತದಂಘ್ರಿಯುಗಲಂ ಪ್ರಣಮಾಮಿ ಮೂರ್ಧ್ನಾ ॥ ॥ ೪೯೯ ॥

ತಾತ್ಪರ್ಯ – ಪರಮಾಚಾರ್ಯರಾದ ಆಳವಂದಾರ್ರೂ ಕೂಡ ಹಿಂದೆ ಹೇಳಿದ ಅರ್ಥವನ್ನೇ ಹೇಳಿರುವರು.

ಸೂತ್ರಂ - ಇತುಂಕ್ಕಡಿ ಉಪಕಾರಸ್ಮೃತಿ ॥ ೩೨೭ ॥

ಶ್ಲೋಕಃ – ❋ ಏವಂವಿಧಾನುಸಂಧಾನಕಾರಣಂ ಸ್ವಗುರೌಕಿಮು ।
ಇತಿಚೇತ್ತತ್ಕೃತಸ್ಯೋಪಕಾರಸ್ಯ ಸ್ಮರಣಂ ಭವೇತ್ ॥ ॥ ೫೦೦ ॥

ತಾತ್ಪರ್ಯ – ಈ ರೀತಿ ಸಕಲವೂ ಆಚಾರ್ಯನೇ ಎಂದು ಅನುಸಂಧಾನ ಮಾಡಲು ಕಾರಣವೇನೆಂದರೆ ನಿತ್ಯ ಸಂಸಾರಿಗಳಾದ ನಮ್ಮಿಗಳನ್ನು ಉಪದೇಶಗಳಿಂದ ಜ್ಞಾನಿಗಳನ್ನಾಗಿ ಮಾಡಿ ನಿತ್ಯಸೂರಿಗಳ ಅನುಭವಕ್ಕೆ ಅರ್ಹರಾಗುವಂತೆ ಉಪಕರಿಸಿದ ಗುರುವಿನ ಉಪಕಾರಸ್ಮರಣೆಯೇ ಕಾರಣ.

ಸೂತ್ರಂ - ಉಪಕಾರಸ್ಮೃತಿಕ್ಕು ಮುತಲಡಿ ಆಚಾರ್ಯನ್ ಪಕ್ಕಲ್ ಕೃತಜ್ಞತೈ ಮುಡಿಂದನಿಲಂ ಈಶ್ವರನ್ಪಕ್ಕಲ್ ಕೃತಜ್ಞತೈ ॥ ೩೨೮ ॥

ಶ್ಲೋಕಃ – ❋ ಅಜ್ಞಾತಜ್ಞಾಪನೇನೈವ ಗುರೌ ಕುರ್ಯಾತ್ಕೃತಜ್ಞತಾ ।
ಕೃತತಾದೃಗ್ಗುರುಪ್ರಾಪ್ತೇಃ ಕುರ್ಯಾದ್ವಿಷ್ಣೌ ಕೃತಜ್ಞತಾ ॥ ॥ ೫೦೧ ॥

ತಾತ್ಪರ್ಯ – ನಮಗೆ ತಿಳಿಯದೇ ಇರುವ ಭಗವದ್ವಿಷಯಗಳನ್ನು ತಿಳಿಸಿ ಉದ್ಧರಿಸಿದ ಆಚಾರ್ಯನಲ್ಲಿ ಕೃತಜ್ಞತೆಯನ್ನು ತೋರಿಸಬೇಕು. ಈ ರೀತಿ ಅಜ್ಞಾತಜ್ಞಾಪನವನ್ನು ಮಾಡುವ ಆಚಾರ್ಯನನ್ನು ತೋರಿಸಿಕೊಟ್ಟ ಸರ್ವೇಶ್ವರನಲ್ಲಿ ಕೃತಜ್ಞತೆಯನ್ನು ತೋರಿಸಬೇಕು.

ಸೂತ್ರಂ - ಶಿಷ್ಯನುಂ ಆಚಾರ್ಯನುಂ ಅನ್ಯೋನ್ಯಂ ಪ್ರಿಯಹಿತಂಗಳೈ ನಡೈತ್ತಕ್ಕಡವರ್ಹಳ್ ॥ ೫೩೯ ॥

ಶ್ಲೋಕಃ – ❋ ಶಿಷ್ಯಾಚಾತ್ಮೌಪ್ರಿಯಹಿತೇ ಪರಸ್ಪರಮುಭಾವಪಿ ।
ಅವಶ್ಯಮೇವ ಕುರ್ಯಾಸ್ತಾಂ ದ್ವಯೋರಪಿ ನ ಸಂಶಯಃ ॥ ॥ ೫೦೨ ॥

ತಾತ್ಪರ್ಯ – ಶಿಷ್ಯನೂ ಆಚಾರ್ಯನೂ ಇವರಿಬ್ಬರೂ ಒಬ್ಬರಿಗೊಬ್ಬರು ಪರಸ್ಪರ ಪ್ರಿಯವನ್ನೂ ಹಿತವನ್ನೂ ಅತ್ಯವಶ್ಯಕವಾಗಿ ಉಂಟುಮಾಡುವರು.

ಸೂತ್ರಂ - ಶಿಷ್ಯನ್ ತಾನ್ ಪ್ರಿಯತ್ತೈ ನಡತ್ತಕ್ಕಡವನ್ ಈಶ್ವರನೈಕ್ಕೊಂಡು ಹಿತತ್ತೈ ನಡತ್ತಕ್ಕಡವನ್ ಆಚಾರ್ಯನ್ ಮಾರಾಡಿ ನಡತ್ತಕ್ಕಡವನ್ ॥ ೫೪೦ ॥

ಶ್ಲೋಕಃ – ❋ ನಿಜಾಚಾರ್ಯಮುಖೋಲ್ಲಾಸಃ ಪುರುಷಾರ್ಥ ಇತಿ ಸ್ವಯಂ ಸ್ಮರನ್ ।
ಶಿಷ್ಯೋಧನಾದಿ ಯತ್ಕಿಂಚಿತ್ಕರಣೈಃ ಪ್ರಿಯಮಾಚರೇತ್ ॥ ೫೦೩ ॥

ಸ್ವಭಾವತಸ್ತು ಪ್ರಕೃತೇಸ್ತ್ವಾಚಾರ್ಯಹೃದಿ ದುಷ್ಪಧೀಃ ।
ಮಾಭೂದಿತೀಶ್ವರೇ ಶಿಷ್ಯಃ ಪ್ರಾರ್ಥಯೇದ್ಧಿತಮಾಚರನ್ ॥ ೫೦೪ ॥

ಹೇಯೋಪಾದೇಯಯೋರಸ್ಯ ಹಾನೋಪಾದಾನಯೋಃ ಕ್ಷತಿಃ ।
ಮಾಭೂದಿತಿ ಗುರುರ್ವಿಷ್ಣೌ ಪ್ರಾರ್ಥಯೇದ್ಧಿತಕಾಂಕ್ಷಯಾ ॥ ॥ ೫೦೫ ॥

ಪ್ರಾರ್ಥಯನ್ನೀಶ್ವರೇ ನಿತ್ಯಮಾಚಾರ್ಯಃ ಪ್ರಕೃತೇರ್ವಶಾತ್ ।
ಕ್ಲೇಶೋ ಮಾಭೂದಿಹಾಸ್ಯೇತಿ ಪ್ರಿಯಂ ಶಿಷ್ಯಸ್ಯ ಸಾಧಯೇತ್ ॥ ॥ ೫೦೬ ॥

ತಾತ್ಪರ್ಯ – ಶಿಷ್ಯನಾದವನು ತನ್ನ ಸ್ವರೂಪಾನುಗುಣವಾಗಿ ಆಚಾರ್ಯನ ಮುಖೋಲ್ಲಾಸವೇ ಪುರುಷಾರ್ಥವೆಂದು ಯೋಚಿಸಿ ತಾನು ಶುಶ್ರೂಷೆ ಧನಸಮರ್ಪಣೆ ಇವೇ ಮೊದಲಾದ ಕಿಂಚಿತ್ಕಾರದಿಂದ ಯಾವಾಗಲೂ ಆಚಾರ್ಯನಿಗೆ ಪ್ರಿಯವನ್ನು ಮಾಡುವನು ಮತ್ತು ಮಂಗಳಾಶಾಸನಪರನಾಗಿರುವದ್ದರಿಂದ ಈ ಲೀಲಾವಿಭೂತಿಯ ಸ್ವಭಾವದಿಂದ ಆಚಾರ್ಯನ ಮನಸ್ಸಿನಲ್ಲಿ ಕೋಪವೇ ಮೊದಲಾದ್ದು ಉಂಟಾದ ಪಕ್ಷದಲ್ಲಿ ಅದನ್ನು ಹೋಗಲಾಡಿಸಬೇಕೆಂದು ಭಗವಂತನಲ್ಲಿ ಪ್ರಾರ್ಥಿಸಿ ಹಿತವನ್ನುಂಟುಮಾಡುವನು. ಇದೇ ರೀತಿ ಆಚಾರ್ಯನು ಹಿತೈಕ ಪರನಾದ್ದರಿಂದ ಈ ಶಿಷ್ಯನಿಗೆ ಸ್ವರೂಪಹಾನಿಯುಂಟಾಗದಂತೆ ಹೇಯೋಪಾದೇಯಗಳ ಹಾನೋಪಾದಾನಗಳಲ್ಲಿ ಸ್ಖಲಿತ್ಯವುಂಟಾಗದಂತೆ ಯಾವಾಗಲೂ ಒಳ್ಳೇ ಮಾರ್ಗದಲ್ಲಿರುವಂತೆ ಹಿತವನ್ನುಂಟುಮಾಡುವನು ಮತ್ತು ಶಿಷ್ಯನಿಗೆ ಸಂಕೋಚದಿಂದ ಕಾಯಕ್ಲೇಶಾದಿಗಳುಂಟಾಗದಂತೆ ಜೀವಿಸಿರುವವರೆಗೂ ಇರುವಂತೆ ಭಗವಂತನಲ್ಲಿ ಪ್ರಾರ್ಥಿಸಿ ಪ್ರಿಯವನ್ನುಂಟುಮಾಡುವನು.

ಸೂತ್ರಂ - **ಶಿಷ್ಯನ್ ಉಹಪ್ಪಿಲೇಯೂನ್ನಿಪ್ಪೋರುಂ ಆಚಾರ್ಯನ್ ಉಜ್ಜೀವನತ್ತಿಲೇಯೂನ್ನಿಪ್ಪೋರುಂ** ॥ ೩೩೧ ॥

ಶ್ಲೋಕಃ - ❋ ಶೇಷಭೂತತಯಾ ಶಿಷ್ಯಸ್ಸ್ವಾಚಾರ್ಯಸ್ಯ ಪ್ರಿಯೇ ಪತಿಂ ।
ಶಿಷ್ಯೋಜ್ಜೀವನರೂಪಂ ಹಿ ಹಿತಂ ವಿತನುತೇ ಗುರುಃ ॥ ॥ ೫೦೭ ॥

ತಾತ್ಪರ್ಯ - ಹಾಗಾದ ಪಕ್ಷದಲ್ಲಿ ಇಬ್ಬರಿಗೂ ಎರಡೂ ಮುಖ್ಯವೋ ಅಂದರೆ ಶಿಷ್ಯನು ಶೇಷಭೂತನಾದ್ದರಿಂದ ಆಚಾರ್ಯನಿಗೆ ಪ್ರಿಯವನ್ನುಂಟುಮಾಡುವುದನ್ನೇ ಪ್ರಧಾನವನ್ನಾಗಿಟ್ಟುಕೊಂಡಿರುವನು. ಆಚಾರ್ಯನೋ ಅಂದರೆ ಶಿಷ್ಯನ ಉಜ್ಜೀವನ ರೂಪವಾದ ಹಿತವನ್ನೇ ಪ್ರಧಾನವನ್ನಾಗಿಟ್ಟುಕೊಂಡಿರುವನು. ಆದ್ದರಿಂದ ಸಮಪ್ರಾಧಾನ್ಯವಿಲ್ಲ.

ಸೂತ್ರಂ - **ಆಹ್ಯೆಯಾಲ್ ಶಿಷ್ಯನ್ ಆಚಾರ್ಯನುಡೈಯ ಹರ್ಷತ್ತುಕ್ಕು ಇಲಕ್ಕಾಹ್ಯೆಯೊಳಿಯ ರೋಷತ್ತುಕ್ಕಿಲಕ್ಕಾಹ್ಯೆಕ್ಕು ಅವಕಾಶಮಿಲ್ಲೈ** ॥ ೩೩೨ ॥

ಶ್ಲೋಕಃ - ❋ ತಸ್ಮಾಚ್ಛಿಷ್ಯೋ ನಿಜಾಚಾರ್ಯಹರ್ಷಭಾಜನಮಂತರಾ ।
ಅಮರ್ಷಪಾತ್ರಂ ಭವಿತುಂ ನಾಪಕಾಶಃ ಕದಾಚನ ॥ ॥ ೫೦೮ ॥

ತಾತ್ಪರ್ಯ - ಆದ್ದರಿಂದ ಶಿಷ್ಯನು ಯಾವಾಗಲೂ ಪ್ರಿಯವನ್ನೇ ಮಾಡುತ್ತಾನೆಯಾದ್ದರಿಂದ ಆಚಾರ್ಯನಿಗೆ ಯಾವಾಗಲೂ ಶಿಷ್ಯನ ಉಜ್ಜೀವನದಲ್ಲೇ ದೃಷ್ಟಿಯಿರುವುದರಿಂದಲೂ ಶಿಷ್ಯನು ಆಚಾರ್ಯನ ಹರ್ಷಕ್ಕೆ ಪಾತ್ರನಾಗುತ್ತಾನೆಯೇ ವಿನಹಾ ಕೋಪಕ್ಕೆ ಪಾತ್ರನಾಗುವುದಿಲ್ಲ.

ಸೂತ್ರಂ - **ನಿಗ್ರಹತ್ತುಕ್ಕುಪ್ಪಾತ್ರವಾಂಪೋದು ಅದು ಹಿತರೂಪಮಾಹ್ಯೆಯಾಲೇ ಇರುವರ್ಕುಮುಪಾದೇಯಂ** ॥ ೩೩೩ ॥

ಶ್ಲೋಕಃ - ❋ ಅಪರಾಧಾನ್ನಿಜಾಚಾರ್ಯನಿಗ್ರಹೋ ಹಿತಬುದ್ಧಿತಃ ।
ಸತ್ಪಥೈಕಪ್ರವೃತ್ತ್ಯರ್ಥಮುಪಾದೇಯೋ ಧ್ರುವೋರ್ಥವೇತ್ ॥ ॥ ೫೦೯ ॥

ತಾತ್ಪರ್ಯ - ಅಪರಾಧವೆಸಗಿ ಶಿಷ್ಯನು ಆಚಾರ್ಯನ ನಿಗ್ರಹಕ್ಕೆ ಪಾತ್ರನಾದ ಪಕ್ಷದಲ್ಲಿ ಆ ನಿಗ್ರಹವು ಶಿಷ್ಯನ ಸನ್ಮಾರ್ಗಕ್ಕೆ ಕಾರಣವಾಗಿ ಹಿತ ರೂಪವಾದ್ದರಿಂದ ಶಿಷ್ಯನಿಗೆ ಉಪಾದೇಯವು. ಶಿಷ್ಯನನ್ನು ಈ ರೀತಿ ನಿಗ್ರಹಿಸಬೇಕಾಗಿದೆಯಲ್ಲಾ ಎಂದು ನೆನಸಿದ ಕಾರಣ ಆಚಾರ್ಯನಿಗೂ ಉಪಾದೇಯವು.

ಸೂತ್ರಂ - **ಶಿಷ್ಯನುಕ್ಕು ನಿಗ್ರಹಕಾರಣಂ ತ್ಯಾಜ್ಯಂ** ॥ ೩೩೪ ॥

ಶ್ಲೋಕಃ - ❋ ಉಪಾದೇಯೋಪಿ ಶಿಷ್ಯಸ್ಯ ಯದ್ಯಪ್ಯಾಚಾರ್ಯ ನಿಗ್ರಹಃ ।
ತಥಾಪಿ ನಿಗ್ರಹಸ್ಯೈವ ಕಾರಣಂ ತ್ಯಾಜ್ಯಮೆವೇಹಿ ॥ ॥ ೫೧೦ ॥

ತಾತ್ಪರ್ಯ - ಶಿಷ್ಯನಿಗೆ ಗುರು ನಿಗ್ರಹವು ಉಪಾದೇಯವಾದರೂ ಆ ನಿಗ್ರಹದ ಕಾರಣವನ್ನು ಬಿಡಬೇಕು. ಯಾತಕ್ಕಂದರೆ ನೀರಿನಲ್ಲಿ ಬೆಂಕಿಯು ಉದ್ಭವಿಸಿದಂತೆ ಆ ಕಾರಣವು ಆಚಾರ್ಯನ ಶೀತಲವಾದ ಮನಸ್ಸಿನಲ್ಲಿ ಕೋಪವನ್ನುಂಟುಮಾಡುವುದು. ಆದಕಾರಣ ನಿಗ್ರಹದ ಕಾರಣವನ್ನು ಬಿಡಬೇಕು.

ಸೂತ್ರಂ - ನಿಗ್ರಹಂ ತಾನ್ ಭಗವನ್ನಿಗ್ರಹಂ ಪೋಲೇ ಪ್ರಾಪ್ಯಾಂತರ್ಗತಂ ॥ ೩೩೫ ॥

ಶ್ಲೋಕಃ – ❋ ಆಚಾರ್ಯನಿಗ್ರಹಶ್ಶಿಷ್ಯೇ ಹಿತರೂಪೇಣ ಕಲ್ಪಿತಃ ।
ಪ್ರಾಪ್ಯಾಂತಃ ಪತಿತೋ ಭೂಯಾದ್ಭಗವನ್ನಿಗ್ರಹೋ ಯಥಾ ॥ ॥ ೫೧೧ ॥

ತಾತ್ಪರ್ಯ – ತನ್ನ ಆಚಾರ್ಯನು ತನ್ನ ವಿಷಯದಲ್ಲಿ ಹಿತಬುದ್ಧಿಯಿಂದ ಮಾಡುವ ನಿಗ್ರಹವು ಸ್ವವಿರೋಧಿ ನಿವೃತ್ತಿಯನ್ನುಂಟುಮಾಡುವುದರಿಂದ ಭಗವಂತನ ನಿಗ್ರಹದಂತೆ ಪುರುಷಾರ್ಥದಲ್ಲಿ ಅಂತರ್ಭೂತ ವಾಗುವುದು. ಆದ್ದರಿಂದಲೇ ಪ್ರಾಪ್ಯಾಂತರ್ಗತವೆಂದು ಹೇಳುವುದು.

ಸೂತ್ರಂ – ಆಚಾರ್ಯನ್ ಶಿಷ್ಯನುಡೈಯಸ್ವರೂಪತ್ತೈ ಪ್ಪೇಣಕ್ಕಡವನ್
ಶಿಷ್ಯನ್ ಆಚಾರ್ಯನುಡೈಯ ದೇಹತ್ತೈಪ್ಪೇಣಕ್ಕಡವನ್ ॥ ೩೩೬ ॥

ಶ್ಲೋಕಃ – ❋ ಆಚಾರ್ಯೋ ನಿಜಶಿಷ್ಯಸ್ಯ ಸ್ವರೂಪ ಮುಪದೇಶತಃ ।
ಪಶ್ಯತ್ಯುಜ್ಜೀವಯನ್ನಿಷ್ಯಃ ಕೈಂಕರ್ಯೇಣ ಗುರೋಸ್ತನುಂ ॥ ॥ ೫೧೨ ॥

ತಾತ್ಪರ್ಯ – ಉಜ್ಜೀವನವನ್ನುಂಟುಮಾಡುವ ಆಚಾರ್ಯನು ತನ್ನನ್ನು ಆಶ್ರಯಿಸಿದ ಶಿಷ್ಯನ ಸ್ವರೂಪವನ್ನು ಪ್ರಮಾದದಿಂದ ಯಾವ ತಪ್ಪೂ ಉಂಟಾಗದಂತೆ ಉಪದೇಶ ಮಾಡಿ ನೋಡಿಕೊಳ್ಳುವನು. ಶಿಷ್ಯನು ಪ್ರಿಯವನ್ನುಂಟುಮಾಡುವನಾಗಿ ತನ್ನ ಉಜ್ಜೀವನಕ್ಕೆ ಕಾರಣನಾದ ಆಚಾರ್ಯನ ದೇಹವನ್ನು ಶುಶ್ರೂಷಾದಿಗಳನ್ನು ಮಾಡಿ ನೋಡಿಕೊಳ್ಳುವನು.

ಸೂತ್ರಂ - ಇರಂಡುಂ ಇರುವಕ್ಕುಂ ಸ್ವರೂಪಮುಮಾಯ್
ಭಗವತ್ಕೈಂಕರ್ಯಮುಮಾಯಿರುಕ್ಕುಂ ॥ ೩೩೭ ॥

ಶ್ಲೋಕಃ – ❋ ದ್ವಯೋರಪ್ಯೇತದುಭಯಂ ಸ್ವಸ್ವರೂಪಂ ಭವೇನ್ನನು ।
ತಥಾ ಭಗವತೋಪಿಸ್ಯಾತ್ಕೈಂಕರ್ಯಂ ಗುರುಶಿಷ್ಯಯೋಃ ॥ ॥ ೫೧೩ ॥

ತಾತ್ಪರ್ಯ – ಆಚಾರ್ಯನು ಶಿಷ್ಯನ ಸ್ವರೂಪವನ್ನು ನೋಡಿಕೊಳ್ಳುವುದೂ ಶಿಷ್ಯನಾದವನು ಆಚಾರ್ಯನ ದೇಹವನ್ನು ನೋಡಿಕೊಳ್ಳುವುದೂ ಇವೆರಡೂ ತನುತಮಗೆ ಅಸಾಧಾರಣವಾದ್ದರಿಂದ ಇಬ್ಬರಿಗೂ ಸ್ವರೂಪವಾಗಿಯೂ ಭಗವತ್ಕೈಂಕರ್ಯವಾಗಿಯೂ ಆಗುವುದು.

ಸೂತ್ರಂ - ಆಚಾರ್ಯನುಕ್ಕು ಸ್ವದೇಹರಕ್ಷಣಂ ಸ್ವರೂಪಹಾನಿ
ಶಿಷ್ಯನುಕ್ಕು ಆತ್ಮರಕ್ಷಣಂ ಸ್ವರೂಪಹಾನಿ ॥ ೩೩೮ ॥

ಶ್ಲೋಕಃ – ❋ ಸ್ವದೇಹರಕ್ಷಾಚಾರ್ಯಸ್ಯ ಸ್ವಸ್ವರೂಪವಿನಾಶಕೃತ್ ।
ಶಿಷ್ಯಸ್ಯಾಪ್ಯಾತ್ಮರಕ್ಷಾ ಸ್ಯಾತ್ಸ್ವಸ್ವರೂಪವಿನಾಶಕೃತ್ ॥ ॥ ೫೧೪ ॥

ತಾತ್ಪರ್ಯ – ಆಚಾರ್ಯನಿಗೆ ತನ್ನ ದೇಹರಕ್ಷಣವು ತನ್ನ ಸ್ವರೂಪವನ್ನು ನಾಶಮಾಡುವುದು. ಶಿಷ್ಯನಿಗೆ ತನ್ನ ಆತ್ಮರಕ್ಷಣವು ತನ್ನ ಸ್ವರೂಪವನ್ನು ನಾಶಮಾಡುವುದು. ಆದ್ದರಿಂದ ಇವೆರಡೂ ಕೂಡದು.

ಸೂತ್ರಂ - ಆಚಾರ್ಯನ್ ಆತ್ಮರಕ್ಷಣಂ ಪಣ್ಣುವಿಡತ್ತಿಲ್ ಅಹಂಕಾರಂ ವಿರೋಧಿ
ಶಿಷ್ಯನ್ ದೇಹರಕ್ಷಣಂ ಪಣ್ಣುವಿಡತ್ತಿಲ್
ಮಮಕಾರಂ ವಿರೋಧಿ ॥ ೩೩೯ ॥

ಶ್ಲೋಕಃ – ❋ ಶಿಷ್ಯಾತ್ಮರಕ್ಷಾಕ್ರಿಯತೇ ಮಯೇತ್ಯಾಚಾರ್ಯಚಿಂತನಂ ।
ಅಂಹಕಾರೈಕಮೂಲತ್ವಾತ್ತ್ವಾಧಿಕಾರವಿರೋಧಭಾಕ್ ॥ ॥ ೫೧೫ ॥

ಆಚಾರ್ಯದೇಹರಕ್ಷಾ ತು ಮಯಾ ಕ್ರಿಯತ ಇತ್ಯಪಿ ।
ಮಮಕಾರೈಕಮೂಲತ್ವಾಚ್ಛಿಷ್ಯಾಧಿಕೈತಿಹಾನಿಕೃತ್ ॥ ॥ ೫೧೬ ॥

ತಾತ್ಪರ್ಯ – ಹಿತಪರನಾದ ಆಚಾರ್ಯನು ಉಪದೇಶಾದಿಗಳಿಂದ ಶಿಷ್ಯನ ಆತ್ಮರಕ್ಷಣವನ್ನು ನಾನು ಮಾಡುತ್ತೇನೆ ಎಂಬ ಅಹಂಕಾರವು ಆಚಾರ್ಯಪಾರತಂತ್ರ್ಯರೂಪವಾದ ತನ್ನ ಅಧಿಕಾರಕ್ಕೆ ವಿರೋಧಿಯಾಗುವುದು. ಶಿಷ್ಯನು ದ್ರವ್ಯಾದಿಗಳನ್ನು ಕೊಟ್ಟು ಆಚಾರ್ಯನ ದೇಹರಕ್ಷಣವನ್ನು ಮಾಡುವೆನೆಂಬ ಮಮಕಾರವು ಸರ್ವವಿಧದಲ್ಲೂ ಆಚಾರ್ಯನಿಗೆ ಶೇಷಭೂತನಾದ ತನ್ನ ಅಧಿಕಾರಕ್ಕೆ ವಿರೋಧಿಯಾಗುವುದು.

ಸೂತ್ರಂ - ಆಚಾರ್ಯನ್ ತನ್ನುಡೈಯ ದೇಹರಕ್ಷಣಂ ತನ್ನಸ್ತುವೈಕ್ಕೊಂಡು
ಪಣ್ಣಕ್ಕಡವನ್ ಶಿಷ್ಯನ್ ಸ್ವದೇಹರಕ್ಷಣಂ
ಆಚಾರ್ಯನ್ನಸ್ತುವೈಕ್ಕೊಂಡು ಪಣ್ಣಕ್ಕಡವನ್ ॥ ೩೪೦ ॥

ಶ್ಲೋಕಃ – ❋ ಸ್ವಕೀಯಬುದ್ಧ್ಯಾ ನಿಜಶಿಷ್ಯದತ್ತೇ ವಸ್ತುನ್ಯಯಂ ತೇನ ಗುರುಸ್ಸ್ವರಕ್ಷಾಂ ।
ತದೀಯಬುದ್ಧ್ಯಾ ನಿಜ ದೇಹರಕ್ಷಾಂ ಶಿಷ್ಯೋಪಿ ಕುರ್ಯಾದ್ಯದಿದಂ ತದೀಯಂ ॥ ॥ ೫೧೭ ॥

ತಾತ್ಪರ್ಯ – "ಶರೀರಮರ್ಥಂ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್" ಎಂಬಂತೆ ಶಿಷ್ಯನ ಸರ್ವಸ್ವವೂ ಆಚಾರ್ಯನಿಗೆ ಸಮರ್ಪಿತವಾದ್ದರಿಂದ ಸ್ವದೇಹ ರಕ್ಷಣಕ್ಕೆ ಶಿಷ್ಯನಿಂದ ಸಮರ್ಪಿತವಾದ ವಸ್ತುವಾದರೂ ತನ್ನ ವಸ್ತುವೆಂಬುದಾಗಿಯೇ ಉಪಯೋಗಿಸಿಕೊಳ್ಳಬೇಕು. ಶಿಷ್ಯನಿಗೆ ತನ್ನದಾಗಿ ಯಾವ ವಸ್ತುವೂ ಇಲ್ಲದಿರುವುದರಿಂದಲೂ ಸಕಲವೂ ಆಚಾರ್ಯನದಾಗಿರುವುದರಿಂದಲೂ ತನ್ನ ದೇಹರಕ್ಷಣೆಗೆ ಆಚಾರ್ಯನ ವಸ್ತುವೆಂಬುದಾಗಿಯೇ ನೆನೆಸಿ ಉಪಯೋಗಿಸಿಕೊಳ್ಳಬೇಕು.

ಸೂತ್ರಂ - ಆಚಾರ್ಯನ್ ಶಿಷ್ಯನ್ನಸ್ತುವೈಕ್ಕೊಳ್ಳಕ್ಕಡವನಲ್ಲನ್
ಶಿಷ್ಯನ್ ತನ್ನಸ್ತುವೈಕ್ಕೊಡಕ್ಕಕ್ಕಡವನಲ್ಲನ್ ॥ ೩೪೧ ॥

ಶ್ಲೋಕಃ – ❋ ಶಿಷ್ಯೇಣ ದತ್ತಂ ಮಮಕಾರಬುದ್ಧ್ಯಾ
ನಾಂಗೀಕರೋತ್ಯರ್ಥಮಯಂ ಗುರುರ್ಹಿ ।
ಶಿಷ್ಯೋಪ್ಯಹಂಕಾರ ಮಮತ್ವಬುದ್ಧ್ಯಾ
ನೈವಾರ್ಪಯೇದ್ವಸ್ತುಭವೇದ್ವಿಷಂತತ್ ॥ ॥ ೫೧೮ ॥

ತಾತ್ಪರ್ಯ – ಶಿಷ್ಯನು ನನ್ನ ವಸ್ತುವನ್ನು ಆಚಾರ್ಯನ ಶರೀರರಕ್ಷಣೆಗಾಗಿ ಕೊಡುವೆನೆಂಬ ಅಹಂಕಾರ ಮಮಕಾರ ಬುದ್ಧಿಯಿಂದ ತನ್ನ ದ್ರವ್ಯವನ್ನು ಆಚಾರ್ಯನಿಗೆ ಸಮರ್ಪಿಸಿದ ಪಕ್ಷದಲ್ಲಿ ಆಚಾರ್ಯನು ಅಹಂಕಾರ ಮಮಕಾರದೂಷಿತವಾದ ಆ ದ್ರವ್ಯವನ್ನು ಸ್ವೀಕರಿಸುವುದಿಲ್ಲ. ಶಿಷ್ಯನು ನನ್ನ ದ್ರವ್ಯವನ್ನು

ಆಚಾರ್ಯನಿಗೆ ಸಮರ್ಪಿಸುವೆನೆಂದು ಅಹಂಕಾರ ಮಮಕಾರಪೂರ್ವಕವಾಗಿ ಸಮರ್ಪಿಸಿದ ಪಕ್ಷದಲ್ಲಿ ವಿಷವನ್ನು ಕೊಟ್ಟಂತಾಗುವುದು. ಆದಕಾರಣ ಆ ರೀತಿ ಸಮರ್ಪಿಸಕೂಡದು.

ಶ್ಲೋಕಃ – ❋ ಯದ್ಯಾಶಯಾ ತಾದೃಶಮರ್ಥಮಂಗೀ
ಕರೋತಿ ದೀನೋ ಭವಿತಾಗುರುರ್ಹಿ ।
ತದೀಯವಸ್ತ್ವಸ್ವಕವಸ್ತುಬುದ್ಧ್ಯಾ
ಶಿಷ್ಯೋಽರ್ಪಯೇಚ್ಚೇದ್ಭವಿತಾ ಸ ಚೋರಃ ॥ ೫೧೯ ॥

ತಾತ್ಪರ್ಯ – ತನ್ನದೆಂಬ ಬುದ್ಧಿಯಿಂದ ಶಿಷ್ಯನು ಸಮರ್ಪಿಸಿದ ವಸ್ತುವನ್ನು ಆಚಾರ್ಯನು ಆಶೆಯಿಂದ ಸ್ವೀಕರಿಸಿದ ಪಕ್ಷದಲ್ಲಿ ಅವನು ದರಿದ್ರನಾಗುವನು. ಎಲ್ಲ ವಸ್ತುವೂ ಆಚಾರ್ಯನದೇ ಆಗಿರುವಾಗ ನನ್ನದೆಂಬ ಬುದ್ಧಿಯಿಂದ ಶಿಷ್ಯನು ಆ ವಸ್ತುವನ್ನು ಆಚಾರ್ಯನಿಗೆ ಸಮರ್ಪಿಸಿದ ಪಕ್ಷದಲ್ಲಿ ಆ ಶಿಷ್ಯನು ಕಳ್ಳನಾಗುವನು.

ಸೂತ್ರಂ - ಕೊಳ್ ಕೊಡ್ಕೈಯುಂಡಾನಾಲ್ ಸಂಬಂಧಂ ಕುಲ್ಕೈಯುಂ ॥ ೩೪೨ ॥

ಶ್ಲೋಕಃ – ❋ ಮಮಮತ್ವಪೂರ್ವಕಂ ದತ್ತಂ ವಸ್ತು ಶಿಷ್ಯೇಣ ತದ್ಗುರುಃ ।
ಸ್ವೀಕುರ್ಯಾಚ್ಚೇತ್ತದಾ ಹಾನಿಸ್ಸಂಬಂಧಸ್ಯ ದ್ವಯೋರ್ಭವೇತ್ ॥ ೫೨೦ ॥

ತಾತ್ಪರ್ಯ – ಮಮಮಕಾರ ಪೂರ್ವಕವಾಗಿ ಶಿಷ್ಯನು ಸಮರ್ಪಿಸಿದ ವಸ್ತುವನ್ನು ಆಚಾರ್ಯನು ತೆಗೆದುಕೊಂಡ ಪಕ್ಷದಲ್ಲಿ ಶಿಷ್ಯಾಚಾರ್ಯತ್ವಸಂಬಂಧವು ಬಿಟ್ಟುಹೋಗುವುದು.

ಸೂತ್ರಂ - ಇವನ್ ಮಿಡಿಯನಾಹ್ಯೈಯಾಲೇ ಕೊಡಾನ್
ಅವನ್ ಪೂರ್ಣನಾಹ್ಯೈಯಾಲೇಕೊಳ್ಳಾನ್ ॥ ೩೪೩ ॥

ಶ್ಲೋಕಃ – ❋ ತದೀಯತ್ವೇನ ರಿಕ್ತೋಯಂ ದದ್ಯಾನ್ನ್ನಗುರವೇಧನಂ ।
ಹರಿನ್ಯಸ್ತಭರಸ್ತ್ವಗುರುಃ ಪೂರ್ಣೋ ನ ಕಾಂಕ್ಷತೇ ॥ ೫೨೧ ॥

ತಾತ್ಪರ್ಯ – ಸರ್ವಸ್ವವೂ ಆಚಾರ್ಯನದಾಗಿರುವುದರಿಂದ ದರಿದ್ರನಾದ ಶಿಷ್ಯನು ತನ್ನದೆಂಬ ಭಾವನೆಯಿಂದ ಆಚಾರ್ಯನಿಗೆ ಒಂದನ್ನೂ ಸಮರ್ಪಿಸುವುದಿಲ್ಲ. ಈ ಆಚಾರ್ಯನೋ ಅಂದರೆ ಭಗವಂತನು ತನ್ನ ಭಾರವನ್ನು ವಹಿಸಿರುವುದರಿಂದ ಪರಿಪೂರ್ಣನಾಗಿರುವ ಕಾರಣ ಅಂಥ ದ್ರವ್ಯವನ್ನು ಸ್ವೀಕರಿಸುವುದಿಲ್ಲ.

ಸೂತ್ರಂ - ಅವನುಕ್ಕು ಪೂರ್ತಿಯಾಲೇ ಸ್ವರೂಪಂ ಜೀವಿತ್ತತು
ಇವನುಕ್ಕು ಮಿಡಿಯಾಲೇ ಸ್ವರೂಪಂ ಜೀವಿತ್ತತು ॥ ೩೪೪ ॥

ಶ್ಲೋಕಃ – ❋ ಪೂರ್ಣತ್ವಾತ್ತ್ವಸ್ವರೂಪಂ ತು ಗುರೋರ್ಜೀವತಿ ಸರ್ವದಾ ।
ದಾರಿದ್ರ್ಯಾತ್ತ್ವಸ್ವರೂಪಂ ತು ಶಿಷ್ಯಸ್ಯಾಪಿ ಚ ಜೀವತಿ ॥ ೫೨೨ ॥

ತಾತ್ಪರ್ಯ – ಆಚಾರ್ಯನು ಪರಿಪೂರ್ಣನಾದ್ದರಿಂದ ಆಚಾರ್ಯತ್ವವೆಂಬ ತನ್ನ ಸ್ವರೂಪವು ಜೀವಿಸಿರುವುದು. ಶಿಷ್ಯನು ದಾರಿದ್ರ್ಯದಿಂದ ತನ್ನ ಶಿಷ್ಯತ್ವವೆಂಬ ಸ್ವರೂಪವು ಜೀವಿಸಿರುವುದು.

ಸೂತ್ರಂ - ಆನಾಲ್ ಶಿಷ್ಯನ್ ಆಚಾರ್ಯನುಕ್ಕು ಪಣ್ಣುಮುಪಕಾರ ವೊನ್ನುಮಿಲ್ಲೈಯೋ ವೆನ್ನಿಲ್ ॥ ೩೪೫ ॥

ಶ್ಲೋಕಃ – ❋ ಶಿಷ್ಯೇಣ ತರ್ಹಿಸ್ವಾಚಾರ್ಯಕೃತೇ ಹ್ಯುಪಕೃತಿಃ ಕಿಮು ।
ಕರ್ತವ್ಯಾನೈವಕಾಪಿಸ್ಯಾದಿತಿ ಚೇದುಚ್ಯತೇ ಮಯಾ ॥ ॥ ೫೨೩ ॥

ತಾತ್ಪರ್ಯ – ಹಾಗಾದ ಪಕ್ಷದಲ್ಲಿ ಶಿಷ್ಯನು ತನ್ನ ಆಚಾರ್ಯನಿಗೆ ಯಾವ ಉಪಕಾರವನ್ನೂ ಮಾಡಬೇಕಾಗಿಲ್ಲವಷ್ಟೇ ಅಂದರೆ,

ಸೂತ್ರಂ - ಆಚಾರ್ಯನ್ ನಿನ್ನೈವಾಲೇ ಉಂಡು ॥ ೩೪೬ ॥

ಶ್ಲೋಕಃ – ❋ ಸ್ವರೂಪಜ್ಞಸ್ಯ ಶಿಷ್ಯಸ್ಯ ಸಂಕಲ್ಪೇನ ನ ಕಿಂಚನ ।
ಸ್ವಕೃಷೇಃ ಫಲಸಂತುಷ್ಟಗುರು ಸಂಕಲ್ಪತಸ್ಸತಃ ॥ ॥ ೫೨೪ ॥

ತಾತ್ಪರ್ಯ – ಅದಕ್ಕೆ ಉತ್ತರವನ್ನು ಹೇಳುತ್ತಾರೆ. ಸ್ವರೂಪವನ್ನು ಅರಿತಿರುವ ಶಿಷ್ಯನ ಮನಸ್ಸಿನ ಪ್ರಕಾರ ಆಚಾರ್ಯನಿಗೆ ಮಾಡಬೇಕಾದ ಉಪಕಾರ ಒಂದೂ ಇಲ್ಲ, ತಾನು ಮಾಡಿದ ಕೃಷಿಯು ಫಲಿಸಿತು ಎಂದು ಸಂತುಷ್ಟನಾದ ಆಚಾರ್ಯನ ಮನಸ್ಸಿನ ಪ್ರಕಾರ ಉಪಕಾರವುಂಟು.

ಸೂತ್ರಂ - ಅದಾವತು ಜ್ಞಾನವ್ಯವಸಾಯ ಪ್ರೇಮಸಮಾಚಾರಂಗಳ್ ॥ ೩೪೭ ॥

ಶ್ಲೋಕಃ – ❋ ಸ್ವರೂಪಯಾಥಾತ್ಮ್ಯಮತಿರ್ನಿತಾಂತ
ಮುಪಾಯಪೂರ್ಣಾಧ್ಯವಸಾಯ ಏವ ಚ ।
ಪ್ರೇಮಾಪ್ಯುಪೇಯಸ್ತದನುಪ್ರವೃತ್ತ
ಸಮ್ಯಗ್ವಿಜಾನುಷ್ಠಿತಿರೇವ ಮುಕ್ತಂ ॥ ॥ ೫೨೫ ॥

ತಾತ್ಪರ್ಯ – ಸ್ವರೂಪಯಾಥಾತ್ಮ್ಯಜ್ಞಾನವೂ ಅದಕ್ಕೆ ಅನುರೂಪವಾದ ಉಪಾಯಾಧ್ಯವಸಾಯವೂ ಉಪೇಯದಲ್ಲಿ ಪ್ರೇಮವೂ ಇವು ಮೂರಕ್ಕೂ ಅನುರೂಪವಾದ ಒಳ್ಳೇ ಅನುಷ್ಠಾನವೂ ಇರಬೇಕು. ಇವು ನಾಲ್ಕೂ ಇದ್ದ ಪಕ್ಷದಲ್ಲಿ ಆಚಾರ್ಯನಿಗೆ ಉಪಕಾರಮಾಡಿದಂತೆಯೇ.

ಸೂತ್ರಂ - ಆಚಾರ್ಯಪ್ರೀತ್ಯರ್ಥಮಾಹ ಇವನುಕ್ಕು ಶ್ರುವಿರವೇಂಡುವತು ಭಗವದ್ದ್ರವ್ಯತ್ತೈ ಯಪಹರಿಕ್ಕೆಯುಂ ಭಗವದ್ಯೋಜನತ್ತೈ ವಿಲುಕ್ಕುಹೈಯುಂ ಗುರುಮಂತ್ರದೇವತಾಪರಿಭವವುಂ ॥ ೩೪೮ ॥

ಶ್ಲೋಕಃ – ❋ ಆಚಾರ್ಯಸ್ಯಮುದಾವಹಾರ್ಥಮಿಹಯತ್ಪ್ರೋಕ್ತಂ ತದದ್ಯೋಚ್ಯತೇ
ಶ್ರೀಶದ್ರವ್ಯಹೃತಿಸ್ತಥೈವ ಭಗವದ್ಭೋಜ್ಯಸ್ಯಸಂವರ್ಜನಂ ।
ಏವಂ ಶ್ರೀಗುರುಮಂತ್ರದೇವ ವಿಷಯೇಷ್ವೌದಾಸ್ಯಮೇತತ್ಸದಾ
ಸರ್ವಂತ್ಯಾಜ್ಯಮವಾಪ್ತಬುದ್ಧಿವಿಭವೈಶ್ಶಿಷ್ಯೈಃಪ್ರಿಯಾರ್ಥಂ ಗುರೋಃ ॥ ॥ ೫೨೬ ॥

ತಾತ್ಪರ್ಯ – ಆಚಾರ್ಯನಿಗೆ ಸಂತೋಷವಾಗಬೇಕಾದರೆ ಶಿಷ್ಯನು ಮಾಡಬೇಕಾದ ಕೆಲಸವನ್ನು ಹೇಳುತ್ತಾರೆ. ಭಗವದ್ದ್ರವ್ಯವನ್ನು ಅಪಹರಿಸುವುದು, ಭಗವದ್ಭೋಜನವನ್ನು ತಿರಸ್ಕರಿಸುವುದು, ಗುರುಮಂತ್ರ

ದೇವತೆಗಳ ತಿರಸ್ಕಾರವು ಇವುಗಳನ್ನು ಶಿಷ್ಯನಾದವನು ಬಿಡಬೇಕು. ಆಗ ಆಚಾರ್ಯನಿಗೆ ಸಂತೋಷವಾಗುವುದು.

ಸೂತ್ರಂ - **ಭಗವದ್ದ್ರವ್ಯಾಪಹಾರವಾವತು ಸ್ವಾತಂತ್ರ್ಯವುಂ ಅನ್ಯಶೇಷತ್ವವುಂ ಭಗವದ್ಭೋಜನತ್ತೈವಿಲಕ್ಕುಹ್ಯೆಯಾವದು ಅವನುಡೈಯರಕ್ಷಕತ್ವತ್ತೈವಿಲಕ್ಕುಹೈ** ॥ ೩೪೯ ॥

ಶ್ಲೋಕಃ - ✱ ಅತಿಗಹನತಯಾತತ್ಪೂತ್ರ್ಯಗಾರ್ಥಸ್ಯಬೋಧೇ
ಪರಮಕರುಣಯೈತಲ್ಲೋಕಮಾನ್ಯೋಮಹಾತ್ಮಾ ।
ಯದಭಿಹಿತಮಿಹಪ್ರಾಕ್ತ್ವಸ್ಯತಾವದ್ಯಥಾರ್ಥಂ
ವಿವರಣಮಪಿಕುರ್ವನ್ಬೋಧಯತ್ಯಾದರಾನ್ನಃ ॥ ೫೨೭ ॥

ಶ್ರೀಶದ್ರವ್ಯಾಪಹಾರಸ್ತು ಸ್ವಾತಂತ್ರ್ಯಂ ಚಾನ್ಯಶೇಷತಾ ।
ತದ್ಭೋಜನತಿರಸ್ಕಾರಸ್ತದ್ರಕ್ಷಣತಿರಸ್ಕೃತಿಃ ॥ ೫೨೮ ॥

ತಾತ್ಪರ್ಯ - ಭಗದ್ದ್ರವ್ಯಾಪಹಾರವೆಂದರೆ ಕೌಸ್ತುಭರತ್ನದಂತೆ ಭಗವಂತನಿಗೆ ಭೋಗ್ಯವಾದ ಆತ್ಮದ್ರವ್ಯವನ್ನು ಅಪಹರಿಸುವಿಕೆ ಅಂದರೆ ನಾನೇ ಸ್ವತಂತ್ರ, ನಿನಗೆ ಅಧೀನನಲ್ಲ ಎಂದು ಹೇಳುವುದು ಮತ್ತು ಭಗವಂತನಿಗೇ ಶೇಷನಾದ ತನ್ನನ್ನು ದೇವತಾಂತರಗಳಿಗೆ ಶೇಷನನ್ನಾಗಿ ತಿಳಿಯುವುದು. ಆದ್ದರಿಂದಲೇ "ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ" ಎಂದು ಹೇಳಿರುವುದು. ಇಲ್ಲಿ ರಕ್ಷಣವನ್ನು ಭಗವದ್ಭೋಜನವೆಂದು ಹೇಳಿರುವುದಕ್ಕೆ ಕಾರಣ ರಕ್ಷಿಸಲ್ಪಡುವ ಚೇತನರ ರಕ್ಷಣವು ಹಸಿದವನಿಗೆ ಅನ್ನವು ಧಾರಕವಾಗಿರುವುದರಿಂದ ಭಗವದ್ಭೋಜನವೆಂದು ಹೇಳಿರುವುದು. "ಮಣ್ಣುಂಎಣ್ಣುಮೆಲ್ಲಾಮುಡನುಂಡ" ಎಂದು ಹೇಳಿರುವುದರಲ್ಲಿ ರಕ್ಷಣವು ಅವನಿಗೆ ಧಾರಕವಾಗಿರುವುದರಿಂದ ಉಂಡ ಎಂದು ಹೇಳಿರುವುದು.

ಸೂತ್ರಂ - **ಅವನುಡೈಯ ರಕ್ಷಕತ್ವಕ್ರಮುಂ ಪ್ರಪನ್ನಪಿತ್ರಾಣತ್ತಿಲೇ ಶೊನ್ನೋಂ ಗುರುಪರಿಭವಮಾವದು ಕೇಟ್ಪವರ್ಥತ್ತಿನ್ಪಡಿಯನುಷ್ಠಿಯಾತೊಳಿಹ್ಯೆಯುಂ ಅನಧಿಕಾರಿಹಳುಕ್ಕು ಉಪದೇಶಿಕ್ಕ್ಯೆಯುಂ ಮಂತ್ರಪರಿಭವಮಾವದು ಅರ್ಥತ್ತಿಲ್ ವಿಸ್ಮೃತಿಯುಂ ವಿಪರೀತಾರ್ಥಪ್ರತಿಪತ್ತಿಯುಂ ದೇವತಾಪರಿಭವಮಾವದು ಕರಣತ್ರಯತ್ತೈಯುಮಪ್ರಾಪ್ತ ವಿಷಯಂಗಳಿಲೇ ಪ್ರವಣಮಾಕ್ಕುಹ್ಯೆಯುಂ ತದ್ವಿಷಯತ್ತಿಲ್ ಪ್ರವಣಮಾಕ್ಕಾತೊಳಿಹ್ಯೆಯುಂ** ॥ ೩೫೦ ॥

ಶ್ಲೋಕಃ - ✱ ಗುರೋಃ ಪರಿಭವಸ್ತಾವತ್ತಚ್ಛ್ರುತಾರ್ಥಾನುಸಾರತಃ ।
ಅನನುಷ್ಠಾನಮೇವಸ್ಯಾತ್ತ್ಯಾಖಿಲಾಭವಮೀಷಯಾ ॥ ೫೨೯ ॥

ನಾಸ್ತಿಕಾನಾಂತದರ್ಥಸ್ಯಹ್ಯುಪದೇಶೋಪಿ ತಾದೃಶಃ ।
ಮಂತ್ರಸ್ಯ ತು ಪರೀಭಾವಃ ಸ್ವಾಚಾರ್ಯಸ್ಯೋಪದೇಶತಃ ॥ ೫೩೦ ॥

ಜ್ಞಾತ್ವಾ ಮಂತ್ರಾರ್ಥಮಥ ತದ್ವಿಸ್ಮೃತಿರ್ಮನನಂವಿನಾ ।
ತಸ್ಯೈವ ವಿಪರೀತಾರ್ಥ ಕಲ್ಪನಂ ಭ್ರಾಂತಿತೋಪಿ ಸಃ ॥ ೫೩೧ ॥

ಕರಣತ್ರಯಸ್ಯ ನಿಜದೇವತಾಂ ವಿನಾ
ಪ್ರವಣತ್ವಮನ್ಯತರದೇವತಾದಿಷು ।
ನನು ದೇವತಾಪರಿಭವೋ ಭವತ್ಯತೋ
ಭಗವತ್ಪರೈಕರತಮೇವ ತದ್ಭವೇತ್ ॥ ೫೩೨ ॥

ತಾತ್ಪರ್ಯ – ಭಗವಂತನ ರಕ್ಷಕತ್ವಕ್ರಮವನ್ನು ಪ್ರಪನ್ನಪರಿತ್ರಾಣವೆಂಬ ಗ್ರಂಥದಲ್ಲಿ ವಿಸ್ತಾರವಾಗಿ ಹೇಳಿ ತಿಳಿಸಿರುವರು. ಆಚಾರ್ಯನ ತಿರಸ್ಕಾರವು ಯಾವುದೆಂದರೆ ಆಚಾರ್ಯನಿಂದ ಉಪದೇಶಿಸಲ್ಪಟ್ಟ ಅರ್ಥಕ್ಕನುಗುಣವಾಗಿ ನಡೆದುಕೊಳ್ಳದೇ ಇರುವುದು ಮತ್ತು ಖ್ಯಾತಿಲಾಭಕ್ಕೋಸ್ಕರ ನಾಸ್ತಿಕರುಗಳಿಗೆ ಗುರೂಪದಿಷ್ಟವಾದ ಅರ್ಥಗಳನ್ನು ಉಪದೇಶಮಾಡುವುದು. ಮಂತ್ರದ ತಿರಸ್ಕಾರವು ಯಾವುದೆಂದರೆ ಮಂತ್ರಾರ್ಥವನ್ನು ತಿಳಿದನಂತರ ಅದನ್ನು ಮನನ ಮಾಡದೇ ಮರೆಯುವುದು ಮತ್ತು ಭ್ರಾಂತಿಯಿಂದ ಆ ಮಂತ್ರಕ್ಕೆ ವಿಪರೀತಾರ್ಥ ಮಾಡುವುದು. ದೇವತಾಪರಿಭವವು ಯಾವುದೆಂದರೆ ಮನೋವಾಕ್ಕಾಯಗಳನ್ನು ಭಗವದ್ವ್ಯತಿರಕ್ತವಾದ ದೇವತಾಂತರಗಳಲ್ಲಿ ಆಸಕ್ತವಾಗುವಂತೆ ಮಾಡುವುದು ಮತ್ತು ಭಗವಂತನಲ್ಲಿ ಆಸಕ್ತಗಳನ್ನಾಗಿಮಾಡದೇ ಇರುವುದು. ಆದ್ದರಿಂದಲೇ "ಮಂತ್ರನಾಥಂ ಗುರುಂ ಮಂತ್ರಂ ಸಮತ್ವೇನಾನುಭಾವಯೇತ್" ಎಂದು ಹೇಳಿರುವುದು.

ಸೂತ್ರಂ - ಇವನುಕ್ಕು ಶರೀರಾವಸಾನತ್ತಳವುಂ ಆಚಾರ್ಯವಿಷಯತ್ತಿಲ್ "ಎನ್ನೈತ್ತೀಮನಂ ಕೆಡುತ್ತಾಯ್ ಮುರುವಿತ್ತೊಳುಂ ಮನವೇ ತಂದಾಯ್" ಎನ್ನು ಉಪಕಾರಸ್ಮೃತಿ ನಡಕ್ಕವೇಣುಂ ॥ ೩೫೧ ॥

ಶ್ಲೋಕಃ – ❋ ಯಾವಚ್ಛರೀರಪಾತಂ ತು ಗುರೋರುಪಕೃತಿಂ ಸ್ಮರೇತ್ ।
ಶಿಷ್ಯಸ್ತ್ವಜ್ಞಾನವಿಧ್ವಂಸಸದ್ಗುಣೋನ್ಮುಖಿತಾತ್ಮಿಕಾಂ ॥ ೫೩೩ ॥

ತಾತ್ಪರ್ಯ – ಶಿಷ್ಯನಾದವನು ಬದುಕಿರುವವರಿವಿಗೂ ಮಹದುಪಕಾರಮಾಡಿರುವ ಆಚಾರ್ಯನ ವಿಷಯದಲ್ಲಿ ಅಜ್ಞಾನದಿಂದ ಕ್ರೂರವಾದ ಮನಸ್ಸನ್ನು ಹೋಗಲಾಡಿಸಿ ಅನನ್ಯಪ್ರಯೋಜನಕ್ಕಾಗಿ ಅನುಕೂಲ ವೃತ್ತಿಯಲ್ಲಿ ಪ್ರವರ್ತಿಸುವ ಮನಸ್ಸನ್ನು ಉಂಟುಮಾಡಿದನೆಂಬ ಉಪಕಾರಸ್ಮರಣವು ಅನವರತವೂ ಶಿಷ್ಯನಿಗೆ ಅನುವರ್ತಿಸಿರಬೇಕು.

ಸೂತ್ರಂ - ಮನಸ್ಸುಕ್ಕುತ್ತೀಮೈಯಾವತು ಸ್ವಗುಣತ್ತೈಯುಂ ಭಗವದ್ಭಾಗವತದೋಷತ್ತೈಯುಂ ನಿನ್ಮೈಕ್ಕೈ ॥ ೩೫೨ ॥

ಶ್ಲೋಕಃ – ❋ ಮನಸಃಪಾಪಮೇತತ್ತು ಸ್ವಗುಣಾನಾಂ ವಿಚಿಂತನಂ ।
ವಿಷ್ಣ್ವತ್ತದ್ಭಕ್ತವಿಷಯೇದೋಷಚಿಂತನಮೇವಚ ॥ ೫೩೪ ॥

ತಾತ್ಪರ್ಯ – ನನಗೆ ಸಮಾನನಿಲ್ಲವೆಂಬುದೇ ಮೊದಲಾದ ತನ್ನ ಗುಣಗಳನ್ನು ಸ್ಮರಿಸಿಕೊಳ್ಳುವುದು ಮತ್ತು ಭಗವಂತನೇನು ಅವನ ಭಕ್ತರಾದ ಭಾಗವತರುಗಳೇನು ಅವರುಗಳ ದೋಷಗಳನ್ನು ಸ್ಮರಿಸುವುದು ಇವೆರಡೂ ಮನಸ್ಸಿನ ಪಾಪವು.

ಸೂತ್ರಂ - ದೋಷಂನಿನ್ಯೈಯಾದೊಳಿಹಿರದು ಗುಣಂಪೋಲೇ
ಉಂಡಾಯಿರಕ್ಕವನ್ನು ಇಲ್ಲಾಮ್ಯೈಯಾಲೇ ॥ ೩೫೩ ॥

ಶ್ಲೋಕಃ – ❋ ಸರ್ವಥಾ ತೇಷು ದೋಷಾಣಾಮಭಾವಾದೇವ ಸರ್ವದಾ ।
ಅಭಾವಸ್ಮರಣಂ ನೈವ ಕುರ್ಯಾದಿತ್ಯಾಶಯೋಽಹಿ ಸಃ ॥ ॥ ೫೩೫ ॥

ತಾತ್ಪರ್ಯ – ಭಗವಂತನಲ್ಲಿ ಕಲ್ಯಾಣಗುಣಗಳಿರುವಂತೆ ದೋಷಗಳಿದ್ದ ಪಕ್ಷದಲ್ಲಿ ಅವುಗಳನ್ನು ಸ್ಮರಿಸಬಹುದು. ದೋಷಗಳೇ ಇಲ್ಲದಿರುವಾಗ ಅವುಗಳ ಸ್ಮರಣವೂ ಕೂಡದು ಹಾಗೆಯೇ ಭಗವದ್ಭಕ್ತರಾದ ಭಾಗವತರಲ್ಲೂ ದೋಷವಿಲ್ಲದ ಕಾರಣ ಅವುಗಳ ಸ್ಮರಣವೂ ಕೂಡದು.

ಸೂತ್ರಂ - ದೋಷವುಂಡೆನ್ನು ನಿನ್ಯೈಕ್ಕಿಲ್ ಅತು
ಪರದೋಷವನ್ನು ಸ್ವದೋಷಂ ॥ ೩೫೪ ॥

ಶ್ಲೋಕಃ – ❋ ತೇಷು ದೋಷಸ್ಯ ಸದ್ಭಾವಂ ಯದಿ ಕುರ್ಯಾನ್ಮನಸ್ಯಪಿ ।
ಆತ್ಮನೋ ದೋಷ ಏವಸ್ಯಾತ್ಪರದೋಷೋ ನಹಿ ಕ್ವಚಿತ್ ॥ ॥ ೫೩೬ ॥

ತಾತ್ಪರ್ಯ – ಭಗವದ್ಭಾಗವತರ ವಿಷಯದಲ್ಲಿ ನಾವು ದೋಷವನ್ನು ಕಾಣುತ್ತಿರುವೆವು ಎಂದು ಹೇಳುವುದಾದರೆ ನಿಮ್ಮಲ್ಲಿ ದೋಷವಿರುವುದರಿಂದ ಅವರುಗಳಲ್ಲಿ ದೋಷವನ್ನು ಕಾಣುವಿರಿ. ಆದ್ದರಿಂದ ನಿಮ್ಮದೇ ದೋಷವು. ಅವರಲ್ಲಿ ದೋಷವಿಲ್ಲ.

ಸೂತ್ರಂ - ಸ್ವದೋಷವಾನಪಡಿಯೆನ್ನಿನ್ನಿಲ್ ॥ ೩೫೫ ॥

ಶ್ಲೋಕಃ – ❋ ಚಕ್ಷುರ್ದೋಷಾದ್ಯಥಾಶಂಖೇ ಪೀತತ್ವಂ ಚ ದ್ವಿಚಂದ್ರತಾಂ ।
ಜಾನಾತಿ ತದ್ವತ್ಸಾಪಿ ಸ್ವದೋಷಃ ಕಾರಣಂ ಭವೇತ್ ॥ ॥ ೫೩೭ ॥

ತಾತ್ಪರ್ಯ – ತನ್ನದೇ ದೋಷವಾಗುವ ಬಗೆ ಹೇಗೆಂದರೆ ಅದನ್ನು ತಿಳಿಸುವರು. ಪಿತ್ತವ್ಯಾಧಿಯಿಂದ ಹಳದಿಯಾದ ಕಣ್ಣುಳ್ಳವನು ಬಿಳುಪಾದ ಶಂಖದಲ್ಲಿ ಹೇಗೆ ಹಳದಿಬಣ್ಣವನ್ನು ಕಾಣುವನೋ ಮತ್ತು ಕಣ್ಣಿನ ದೋಷದಿಂದ ಒಂದಾದ ಚಂದ್ರನನ್ನು ಎರಡನ್ನಾಗಿ ತಿಳಿಯುವನೋ ಅದೇ ರೀತಿ ತನ್ನ ದೋಷದಿಂದ ಭಗವದ್ಭಾಗವತರಲ್ಲಿ ದೋಷವನ್ನು ಕಾಣುವನು.

ಸೂತ್ರಂ - ಸ್ವದೋಷತ್ತಾಲುಂಬಂಧತ್ತಾಲುಂ ॥ ೩೫೬ ॥

ಶ್ಲೋಕಃ – ❋ ಕಾಚಾದಿದುಷ್ಟದೃಷ್ಟೀನಾಂ ಯಥಾ ಭಾತಿ ದ್ವಿಚಂದ್ರತಾ ।
ಸಂಬಂಧತೋಽಪಿ ದೋಷಸ್ಯಾತ್ಪಿತೃದೋಷೋ ಯಥಾ ಸುತೇ ॥ ॥ ೫೩೮ ॥

ತಾತ್ಪರ್ಯ – ಕಾಚಾದಿದೋಷದುಷ್ಟವಾದ ಕಣ್ಣಿಂದ ಯಾವ ರೀತಿ ಒಂದು ಚಂದ್ರನನ್ನು ಎರಡನ್ನಾಗಿ ತಿಳಿಯುವನೋ ಮತ್ತು ತಂದೆಯ ದೋಷವು ಪುತ್ರಾದಿಗಳಲ್ಲುಂಟಾಗುವಂತ ತನ್ನ ದೋಷದಿಂದಲೇ ಭಗವದ್ಭಾಗವತರಲ್ಲಿ ದೋಷವನ್ನು ಎಣಿಸುವನು.

ಸೂತ್ರಂ - ಸ್ವದೋಷಮಿಲ್ಲೈಯಾಹಿಲ್ ಗುಣಪ್ರತಿಪತ್ತಿನಡಕ್ಕುಂ ॥ ೩೫೭ ॥

ಶ್ಲೋಕಃ – ❋ ಯದಿಸ್ವಯಂತುನಿದೋ೯ಷೀ ತದಾ ತತ್ರಾಪಿ ದೋಷಧೀಃ ।
ನಭವತ್ಯೇವ ತತ್ಸತ್ಯಂ ಗುಣಗ್ರಾಹ್ಯೇವ ತತ್ರ ಸಃ ॥ ॥ ೫೫೯ ॥

ತಾತ್ಪರ್ಯ – ತನ್ನಲ್ಲಿ ದೋಷವಿಲ್ಲದ ಪಕ್ಷದಲ್ಲಿ ಭಗವದ್ಭಾಗವತರಲ್ಲೂ ಗುಣವನ್ನೇ ಗ್ರಹಿಸುವನು.

ಸೂತ್ರಂ - ನಂಡದದಿಲ್ಲೈಯಾಹಿಲ್ ದೋಷಜ್ಞಾನಮೇ ದೋಷವುಂ ॥ ೩೫೮ ॥

ಶ್ಲೋಕಃ – ❋ ಯದಿ ತೇಷು ಗುಣಾನಾಂತು ಪ್ರತಿಪತ್ತಿರ್ನಜಾಯತೇ ।
ದೋಷಜ್ಞಾನಂ ತು ದೋಷಸ್ಯಾತ್ತದವಶ್ಯಂ ತ್ಯಜೇಜ್ಜನಃ ॥ ॥ ೫೫೦ ॥

ತಾತ್ಪರ್ಯ – ಭಗವದ್ಭಾಗತರ ವಿಷಯದಲ್ಲಿ ಗುಣಪ್ರತಿಪತ್ತಿಯುಂಟಾಗದೇ ಇದ್ದ ಪಕ್ಷದಲ್ಲಿ ಯಾವಾಗಲೂ ದೋಷ ಜ್ಞಾನವೇ ಉಂಟಾಗುವುದು. ಆ ದೋಷಜ್ಞಾನವು ಭಗವನ್ನಿಗ್ರಹಕ್ಕೆ ಕಾರಣವಾದ ದೋಷವಾಗುವುದು. ಆದ್ದರಿಂದ ಆ ಜ್ಞಾನವನ್ನು ಅವಶ್ಯಕವಾಗಿ ಬಿಡಬೇಕು.

ಸೂತ್ರಂ - ಇತುತನಕ್ಕು ಅವಸರಮಿಲ್ಲೈ ॥ ೩೫೯ ॥

ಶ್ಲೋಕಃ – ❋ ನಾರಾಯಣೇ ಚ ತದ್ಭಕ್ತವರ್ಗೇಷು ಪ್ರಯತಾತ್ಮಸು ।
ದೋಷಚಿಂತಾವಕಾಶೋಪಿ ನೈವಸ್ಯಾದ್ಧಿ ಕಥಂಚನ ॥ ॥ ೫೫೧ ॥

ತಾತ್ಪರ್ಯ – ಭಗವದ್ಭಾಗವತರ ವಿಷಯದಲ್ಲಿ ದೋಷಚಿಂತನೆಗೇ ಅವಕಾಶವಿಲ್ಲವಷ್ಟೇ.

ಸೂತ್ರಂ - ಸ್ವದೋಷತ್ತುಕ್ಕುಂ ಭಗವದ್ಭಾಗವತಗುಣಂಗಳುಕ್ಕುಮೇ ಕಾಲಂ ಪೋರುಹೈಯಾಲೇ ॥ ೩೬೦ ॥

ಶ್ಲೋಕಃ – ❋ ಸ್ವದೋಷಭಗವದ್ಭಕ್ತಗುಣಾನಾಮಪಿಚಿಂತನೇ ।
ಅಪರ್ಯಾಪ್ತೋಹಿ ಕಾಲೋಯತ್ಕಥಂತದ್ದೋಷಚಿಂತನಂ ॥ ॥ ೫೫೨ ॥

ತಾತ್ಪರ್ಯ – ತನ್ನಲ್ಲಿರುವ ದೋಷಗಳನ್ನು ಚಿಂತಿಸುವುದಕ್ಕೂ ಭಗದ್ಭಾಗವತರುಗಳಲ್ಲಿರುವ ಗುಣಗಳನ್ನು ಯೋಚಿಸುವುದಕ್ಕೂ ಕಾಲವೇ ಸಾಲದಾಗಿರುವಾಗ ಹೇಗೆ ತಾನೇ ಭಗವದ್ಭಾಗವತರುಗಳ ದೋಷಗಳನ್ನು ಚಿಂತಿಸಲು ಅವಕಾಶವಿರುವುದು.

ಸೂತ್ರಂ - ಸಂಸಾರಿಹಳ್ ದೋಷಂ ಸ್ವದೋಷಮೆನ್ನುನಿನೈಕ್ಕಕ್ಕಡವನ್ ಅತುಕ್ಕುಹೇತು ಬಂಧಜ್ಞಾನಂ ॥ ೩೬೧ ॥

ಶ್ಲೋಕಃ – ❋ ಸಂಸಾರಿಣಾಂತು ದೋಷಂ ಚ ಸ್ವದೋಷಂ ಭಾವಯೇದ್ಬುಧಃ ।
ನಾರಾಯಣಸ್ಯ ಸಂಬಂಧಜ್ಞಾನಮೇವ ಹಿ ಕಾರಣಂ ॥ ॥ ೫೫೩ ॥

ತಾತ್ಪರ್ಯ – ಉದಾಸೀನರಾದ ಸಂಸಾರಿಗಳ ದೋಷವನ್ನು ತನ್ನ ದೋಷವೆಂದು ಭಾವಿಸಬೇಕು. ಹಾಗೆ ಭಾವಿಸುವುದಕ್ಕೆ ಕಾರಣವೇನೆಂದರೆ ಸರ್ವಶರೀರಿಯಾದ ನಾರಾಯಣನ ಸಂಬಂಧವೇ ಕಾರಣ.

ಸೂತ್ರಂ - ಇರೈವ್ವೊಳುದುವೆಣ್ಣೊಂ ಎನ್ಗೈಯಾಲೇ ಅತುತಾನ್ತೋನ್ನಾದು ॥ ೩೬೨ ॥

ಶ್ಲೋಕಃ – ❋ ದೇಹಾಭಿಮಾನಿನೋ ಮರ್ತ್ಯಾನ್ನಸ್ಮರಾಮಿ ಕದಾಚನ ।
ಇತ್ಯುಕ್ತಾ ಪರಕಾಲಸ್ಯ ತೇಷಾಂ ದೋಷೇಷು ನೈವದ್ಯಕ್ ॥ ॥ ೫೪೪ ॥

ತಾತ್ಪರ್ಯ – ಭಗವತ್ಕೈಂಕರ್ಯವನ್ನು ಬಿಟ್ಟು ಕೇವಲ ದೇಹರಕ್ಷಣೆಯಲ್ಲೇ ನಿರತರಾದವರನ್ನು ಒಂದು ಕ್ಷಣವೂ ನೆನೆಸುವುದಿಲ್ಲ ಎಂದು ತಿರುಮಂಗೈಯಾಳ್ವಾರ್ ಹೇಳಿರುವುದರಿಂದ ಅಂಥವರ ದೋಷವನ್ನು ಎಣಿಸುವುದಕ್ಕೇ ಅವಕಾಶವಿಲ್ಲ.

ಸೂತ್ರಂ - ತೋನ್ನುವದು ನಿವರ್ತನಾರ್ಥಮಾಹ ॥ ೩೬೩ ॥

ಶ್ಲೋಕಃ – ❋ ಸತಿದೋಷೇಚ ತೇಷಾಂ ತದ್ದರ್ಶನಂ ನಕಥಂ ಭವೇತ್ ।
ಇತಿಚೇತ್ತನ್ನಿವೃತ್ತ್ಯರ್ಥಂ ತದ್ದೃಷ್ಟಿರ್ಗುಣ ಏವ ಹಿ ॥ ॥ ೫೪೫ ॥

ತಾತ್ಪರ್ಯ – ಹಿಂದೆ ಆಳ್ವಾರ್‌ರೆಲ್ಲರೂ ಮನುಷ್ಯರ ದೋಷವನ್ನು ಹೇಳಿರುವರಲ್ಲಾ ಅಂದರೆ ಆ ದೋಷಗಳನ್ನು ಹೋಗಲಾಡಿಸುವುದಕ್ಕಾಗಿ ಹೇಳಿರುವರು.

ಸೂತ್ರಂ - പിരാട്ടി രാക്ഷസിമാരുത്തംപെരുമാളുക്കും തിരുവടിക്കും
അരിവിയാതാവൊരുവരേ തനക്കുപ്പിരർശെയ്തകുത്തംഗളൈ
ഭഗവദ്വൈഗത വിഷയംഗളിലരിവിക്കുകടവനല്ലന് ॥ ೩೬೪ ॥

ಶ್ಲೋಕಃ – ❋ ಸೀತಾಶೋಕವನಸ್ಥಯಾ ತು ವನಿತಾಶಶ್ವತ್ಕೃತಾಂ ದುಸ್ಸಹಾಂ
ಹಿಂಸಾಂ ನೈವ ರಘೂದ್ವಹಾಯ ನ ತಥಾ ವಾತಾತ್ಮಜಾಯಾಪಿ ಚ ।
ನ್ಯೂನೀವಾಚ್ಯೈವ ಯಥಾ ತಥಾ ಪರಕೃತಾನ್ಯೋಷಾನ್ಕೃಶಾಂತಃ ಪುರಾ
ನ್ಯೂನ್ಯಾನ್ನೈವ ಮಹಾನ್ಕದಾಪಿ ಭಗವದ್ಭಕ್ತಾಯತಾನ್ವಾಮಿನೇ ॥ ೫೪೬ ॥

ತಾತ್ಪರ್ಯ – ಸೀತೆಯು ಅಶೋಕವನದಲ್ಲಿರುವಾಗ ಏಕಕರ್ಣಿಯೇ ಮೊದಲಾದ ಏಳುನೂರು ರಾಕ್ಷಸ ಸ್ತ್ರೀಯರು ತನಗೆ ಉಂಟುಮಾಡಿದ ಹಿಂಸಾರೂಪವಾದ ದೋಷವನ್ನು ಶ್ರೀರಾಮನಿಗೂ ಪರಮಭಕ್ತನಾದ ಆಂಜನೇಯನಿಗೂ ಯಾವ ರೀತಿ ತಿಳಿಸಲಿಲ್ಲವೋ ಆದೇ ರೀತಿ ಸಂಸಾರಿಗಳ ದೋಷವನ್ನು ಭಗವದ್ಭಕ್ತರಿಗೂ ಭಗವಂತನಿಗೂ ತಿಳಿಸಕೂಡದು.

ಸೂತ್ರಂ - അരിവിക്ക ഉരിയനഹപ്പട വായ്തിരവാതേ
സർവജ്ഞ വിഷയംഗളുക്കുവ്മുരൈക്കുമെ ന്നാനിന്നദിരേ ॥ ೩೬೫ ॥

ಶ್ಲೋಕಃ – ❋ ಸರ್ವಜ್ಞೋಯಂ ವಿದಿತ ಜನದೋಷೋಪಿ ಭಗವಾನ್
ಭಕ್ತಪ್ರಾಪ್ತ್ಯೈ ಸತತ ಕೃತಯತ್ನಃ ಕರುಣಯಾ ।
ತೇಷಾಂ ದೋಷಾನ್ನಗಣಯತಿ ಚ ಕ್ರೌರ್ಯ ರಚಿತಾನ್
ಕಾಂತಾಯೈ ನ ಪ್ರಕಟಯತಿ ಹಿ ಶ್ರೀಪತಿರಪಿ ॥ ॥ ೫೪೭ ॥

ತಾತ್ಪರ್ಯ – ಸರ್ವಜ್ಞನಾಗಿಯೂ ಸರ್ವೇಶ್ವರನಾಗಿಯೂ ಇರುವ ಭಗವಂತನು ತನ್ನ ಸೌಶೀಲ್ಯ ಸೌಲಭ್ಯಾದಿ ಗುಣಗಳನ್ನು ತೋರಿಸಿ ಈ ಸಂಸಾರ ಚೇತನರುಗಳನ್ನು ತನ್ನ ವಶಮಾಡಿಕೊಳ್ಳಬೇಕೆಂದು ಇಲ್ಲಿ ಅವತರಿಸಿ ತನಗೆ ದಾಸರಾಗಬೇಕೆಂದು ಅಪೇಕ್ಷಿಸಿದರೂ ಈ ಸಂಸಾರಿಗಳು ಅದಕ್ಕೆ ಪ್ರತಿಕೂಲರಾಗಿದ್ದಾಗ್ಯೂ

ಅವರುಗಳ ದೋಷಗಳನ್ನು ಭೋಗ್ಯವಾಗಿ ಸ್ವೀಕರಿಸಿ ಅತ್ಯಂತ ಪ್ರೀತಿಪಾತ್ರಳಾದ ಲಕ್ಷ್ಮಿಗೆ ಕೂಡಾ ರಹಸ್ಯದಲ್ಲಿ ಹೇಳುವುದಿಲ್ಲವಷ್ಟೇ.

ಸೂತ್ರಂ - ಕುತ್ತಂಶೆಯ್ದವರ್ಹಳ್ ಪಕ್ಕಲ್ ಪೊರೈಯುಂ ಕೃಪೈಯುಂ ಶಿರಿವುಂ ಉಹವುಂ ಉಪಕಾರಸ್ಮೃತಿಯುಂ ನಡಕ್ಕವೇಣುಂ ॥ ೩೬೬ ॥

ಶ್ಲೋಕಃ – ❋ ಕೃತಾಗಸಾಂತು ವಿಷಯೇ ನರೈಃ ಕಾರ್ಯಾಕ್ಷಮಾದಯಾ ।
ಹಾಸಶ್ಚ ಭೋಗ್ಯತಾ ಚೈವಮುಪಕಾರಸ್ಮೃತಿಸ್ತಥಾ ॥ ॥ ೫೪೭ ॥

ತಾತ್ಪರ್ಯ – ಅಪರಾಧವೆಸಗಿದವರ ವಿಷಯದಲ್ಲಿ ಅದಕ್ಕೆ ಪ್ರತಿಕ್ರಿಯೆ ಮಾಡದೇ ಅವರ ಅಪರಾಧವನ್ನು ಸಹಿಸಿ ಕೊಂಡಿರುವುದು ಕ್ಷಮಾಗುಣವು. ತಾನು ಸಹಿಸಿಕೊಂಡಿದ್ದರೂ ಭಗವಂತನು ಯಾವ ಶಿಕ್ಷೆ ಕೊಡುವನೋ ಅಯ್ಯೋ ಎಂದು ಇತರರ ದುಃಖವನ್ನು ಸಹಿಸದೇ ಇರುವುದೇ ದಯಾ ಗುಣವು. ಅದೃಷ್ಟ ವಿರೋಧವನ್ನು ಇವರಿಂದ ಮಾಡಲಾಗುವುದಿಲ್ಲ. ದೃಷ್ಟವಿರೋಧವನ್ನು ಮಾಡಬಹುದಷ್ಟೇ ಎಂದು ಹಾಸವು ವಿರೋಧಿಗಳು ಮಾಡುವ ತಿರಸ್ಕಾರವೇ ಮೊದಲಾದ ದೋಷಗಳು ಶರೀರಕ್ಕೆ ಹೊರತು ಆತ್ಮಕ್ಕಲ್ಲ. ಈ ಶರೀರವೋ ತನಗೆ ಶತ್ರುವಾಗಿಯೂ ಅವರು ನಾಶಪಡಿಸುವ ದೃಷ್ಟಪದಾರ್ಥಗಳು ತನಗೆ ಪ್ರತಿಕೂಲವಾಗಿಯೂ ನೆನಸಿ ವಿರೋಧಮಾಡುವವರ ಹತ್ತಿರ ಪ್ರೀತಿ ಮಾಡುವುದೇ ಭೋಗ್ಯತಾ ಗುಣವು. ತಿಳಿಯದೇ ಇರುವ ನಮ್ಮ ದೋಷಗಳನ್ನು ಇವರು ವಿವರಿಸಿ ಹೇಳಿದರಲ್ಲವೇ ಎಂಬ ಕೃತಜ್ಞತೆಯೇ ಉಪಕಾರಸ್ಮರಣವು. ಇಷ್ಟು ಗುಣಗಳೂ ಇವನಿಗಿರಬೇಕು.

ಸೂತ್ರಂ - ಸ್ವದೋಷಾನುಸಂಧಾನಂ ಭಯಹೇತು ಭಗವದ್ಗುಣಾನುಸಂಧಾನಂ ಅಭಯಹೇತು ॥ ೩೬೭ ॥

ಶ್ಲೋಕಃ – ❋ ನಿಜದೋಷಾನುಸಂಧಾನಂ ಸ್ಮೃಣಾಂಸಾದ್ವಸಕಾರಣಂ ।
ಭಗವದ್ಗುಣನಿಧ್ಯಾನಂ ಭವೇದಭಯಕಾರಣಂ ॥ ॥ ೫೪೮ ॥

ತಾತ್ಪರ್ಯ – ಆತ್ಮನಿಗೆ ಇರಬೇಕಾದ ಗುಣಗಳಿಲ್ಲದೇ ಇರುವಿಕೆಯೇನು ? ಅದಕ್ಕೆ ಕಾರಣವಾದ ಅವಿದ್ಯಾದಿಗಳೇನು ? ಇವುಗಳ ಸ್ಮರಣವು ಮನುಷ್ಯನಿಗೆ ಭಯಕ್ಕೆ ಕಾರಣವಾಗುವುವು. ನಮ್ಮ ದೋಷಗಳೆಲ್ಲವನ್ನೂ ಮನ್ನಿಸಿ ತನ್ನ ತಿರುವಡಿಗೆ ಸೇರಿಸಿಕೊಳ್ಳುವನು ಎಂಬ ಭಗವಂತನ ದಯೆಯೇನು ಕ್ಷಮೆಯೇನು ಇವೇ ಮೊದಲಾದ ಗುಣಗಳ ಸ್ಮರಣವು ಅಭಯಕ್ಕೆ ಕಾರಣವಾಗುವುದು.

ಸೂತ್ರಂ - ಭಯಾಭಯಂಗಳಿರಂಡುಂ ಮಾರಾಡಿಲ್ ಅಜ್ಞತೆಯೇ ಸಿದ್ಧಿಕ್ಕುಂ ॥ ೩೬೮ ॥

ಶ್ಲೋಕಃ – ❋ ಸ್ವತಂತ್ರಶ್ರೀಮಾನ್ಮಚ್ಚಿರರಚಿತಕರ್ಮಾನುಗುಣತಃ
ಪುನಸ್ಸಂಸಾರಾಬ್ಧೌ ಜನನಮಪಿದದ್ಯಾತ್ಸಭಗವಾನ್ ।
ಗುಣೈರುತ್ತೀರ್ಣೋಽಹಂ ನಕಿಮಪಿ ಭಯಂ ಮೇಽಸ್ತಿನಿತರಾ
ಮಿತಿವ್ಯಾಪ್ತ್ಯೋತ್ಕರ್ಷೋ ಯದಿ ಖಲು ತದಜ್ಞತ್ವಮತುಲಂ ॥ ॥ ೫೪೯ ॥

ತಾತ್ಪರ್ಯ – ನಾನು ಬಹಳ ಕಾಲದಿಂದ ಮಾಡಿದ ಕರ್ಮಕ್ಕನುಗುಣವಾಗಿ ಸ್ವತಂತ್ರನಾದ ಆ ಭಗವಂತನು ಪುನಃ ಈ ಸಂಸಾರಸಾಗರದಲ್ಲಿ ಜನಿಸುವಂತೆ ಮಾಡುವನೆಂದು ಯೋಚಿಸುವುದೂ ನಾನು ಆತ್ಮಗುಣಗಳಿಂದ

ಪೂರ್ಣನಾಗಿರುವೆನು. ನನಗೆ ಯಾವ ಭಯವೂ ಇಲ್ಲ. ನನಗೆ ಪುನರ್ಜನ್ಮವೇ ಇಲ್ಲ ಎಂದು ಚೇತನನು ಯೋಚಿಸುವುದೂ ಇವೆರಡೂ ಅಜ್ಞಾನದ ಕೆಲಸವಷ್ಟೇ.

ಸೂತ್ರಂ - ಆನಾಲ್ ನಲಿವಾನಿನ್ನವೆಣ್ಡಿಹಿನ್ನಾಯ್ ಆತ್ತಂಕರೈವಾಳ್
ವರಂಪೋಲಂಜುಹಿನ್ನೇನ್ ಎನ್ಗಿರಪಾಶರಂಗಳುಕ್ಕು
ಅಡಿಯೆನ್ನೆನ್ನಿಲ್ ॥ ೩೬೯ ॥

ತರ್ಜ -

ಶ್ಲೋಕಃ - ❋ ಅಂತರ್ಯಾಮಿತಯೇಂದ್ರಿಯೈಕವಶಗಂ ಮಾಂತ್ವತ್ಪದಾಬ್ಜದ್ವಯ
ಪ್ರಾಪ್ತ್ಯರ್ಥಂ ಶರಣಾರ್ಥಿನಂ ಪುನರಯೇ ಸಂಸಾರಪಾಥೋನಿಧೌ ।
ಕಿಂವಾಪಾತಯಸೀತಿ ಹಂತ ಸರಿತಸ್ತೀರೇಸ್ಥವೃಕ್ಷೋಪಮಃ
ಭೀತ್ಯಾಸ್ಮೀತಿ ಚ ಭಕ್ತಪರ್ಯುಪಣತೇಃಕಿಂವಾ ಗತಿಃ ಪ್ರೋಚ್ಯತಾಂ ॥ ೫೬೦ ॥

ತಾತ್ಪರ್ಯ - ಹಾಗಾದಪಕ್ಷದಲ್ಲಿ ಅಂತರ್ಯಾಮಿಯಾಗಿದ್ದೂ 'ಎಲ್ಲೆ ಭಗವಂತನೇ' ಇಂದ್ರಿಯಗಳಿಗೆ ವಶನಾಗಿರುವ ನನ್ನ ಕರ್ಮಗಳನ್ನು ನೋಡಿ ನಿನ್ನನ್ನು ಹೊಂದಬೇಕೆಂಬ ಇಚ್ಛೆಯುಳ್ಳವನಾಗಿದ್ದಾಗ್ಯೂ ನನ್ನನ್ನು ಈ ಸಂಸಾರ ಚಕ್ರದಲ್ಲಿ ಜನಿಸುವಂತೆ ಮಾಡುವೆಯೋ ಮತ್ತು ನದಿಯ ತೀರದಲ್ಲಿ ಬೆಳೆದಿರುವ ಮರದಂತೆ ಯಾವಾಗ ಆಪತ್ತು ಸಂಭವಿಸುವುದೋ ಎಂದು ಹೆದರಿರುವೆನು ಎಂದು ಜ್ಞಾನಿಗಳಲ್ಲಿ ಅಗ್ರೇಸರರಾದ ಆಳ್ವಾರರುಗಳು ಹೇಳಿರುವ ಪಾಶುರಗಳಿಗೆ ಏನು ಉತ್ತರ ಹೇಳುವಿರಿ.

ಸೂತ್ರಂ - ಬಂಧಾನುಸಂಧಾನಂ ॥ ೩೭೦ ॥

ಶ್ಲೋಕಃ - ❋ ನಿರುಪಾಧಿಕರಕ್ಷಕಸ್ಯಯಸ್ಮಾ
ತ್ತದಧೀನೇಜನತಾಶುಭಾಶುಭೇಚ ।
ಅನಪಾಯಸದಾನುಬಂಧಹೇತೋಃ
ತದಧೀನಾಜಗದುಃ ತಥೈವ ಭಕ್ತಾಃ ॥ ೫೬೧ ॥

ತಾತ್ಪರ್ಯ - ಶುಭಾಶುಭಗಳೆರಡೂ ಅವನಧೀನವಾದ್ದರಿಂದ ನಿರುಪಾಧಿಕ ರಕ್ಷಕನಾದ ಭಗವಂತನ ಸಂಬಂಧವು ನಮ್ಮಗಳಿಗೆ ಯಾವಾಗಲೂ ಇರುವ ಕಾರಣ ಭಗವದ್ಭಕ್ತರಾದ ಆಳ್ವಾರ್ರುಗಳು ಆ ರೀತಿ ಹೇಳಿದರು.

ಸೂತ್ರಂ - ಪ್ರಜೈತೆರುವಿಲೇ ಇಡರಿತ್ತಾಯ್ ಮುಂದುಹಿಲೇ ಕುತ್ತುವಾಪೋಲೇ
ನಿರುಪಾಧಿಕಬಂಧುವಾಯ್ ಶಕ್ತನಾಯಿರುಕ್ಕಿರವನ್
ವಿಲಕ್ಕಾದೊಳಿಂದಾಲ್ ಅಪ್ಪಡಿಚ್ಚೊಲ್ಲಲಾವಿರೇ ॥ ೩೭೧ ॥

ಶ್ಲೋಕಃ - ❋ ಕ್ರೀಡಾರ್ಥಂ ಗನು ಬಾಲಕಃ ಪಥಿಗತಃಸ್ಖಾಲಿತ್ಯತಸ್ಸಂಪತನ್
ಮಾತುಃ ಪಾರ್ಶ್ವಮುಪೇತ್ಯರೋದನಪರಸ್ತತ್ಪೃಷ್ಟತಸ್ತೋದನಂ ।
ರೋಷಾದ್ಯದ್ವದಿಹಾತನೋತಿ ಭಗವತ್ಪಾಪೇವ ಮೇವಾರ್ತಿತಃ
ಭಕ್ತಾಶ್ಚೇತನದುಃಖನಾಶವಿಷಯೇ ಶಕ್ತೇಪ್ಯವೋ ಚಂ ಸ್ತಥಾ ॥ ೫೬೨ ॥

ತಾತ್ಪರ್ಯ - ಬೀದಿಯಲ್ಲಿ ಆಡುವುದಕ್ಕಾಗಿ ಹೋದ ಮಗುವು ಎಡವಿಬಿದ್ದು ನೋವಿನಿಂದ ಅಳುತ್ತಾ ತನ್ನ ತಾಯಿಯ ಹತ್ತಿರ ಬಂದು ತನಗೆ ಈ ನೋವು ಉಂಟಾದುದು ಈ ತಾಯಿಯಿಂದಲೇ ಎಂದು ಯೋಚಿಸಿ ಅವಳ ಬೆನ್ನಿನ ಮೇಲೆ ಬಡಿದಂತೆ ನಿರುಪಾಧಿಕರಕ್ಷಕನಾದ ಭಗವಂತನು ಪ್ರಕೃತಿಯೇನು ಕರ್ಮವೇನು

ಇವೆಲ್ಲವೂ ತನಗೆ ಸ್ವಾಧೀನವಾಗಿರುವಾಗ ಈ ಚೇತನರ ದುಃಖವನ್ನು ಹೋಗಲಾಡಿಸಲು ಶಕ್ತನಾಗಿದ್ದರೂ ಚೇತನರನ್ನು ಈ ಸಂಸಾರದಲ್ಲಿ ಹಾಕಿ ಅವುಗಳು ದುಃಖಪಡುವುದನ್ನು ನೋಡುತ್ತಿರುವನಲ್ಲಾ ಎಂದು ಕ್ಲೇಶದಿಂದ ಹೇಳಿದ ಮಾತದು.

ಸೂತ್ರಂ - ಇವನುಡೈಯ ಅನುಮತಿಪೇತ್ತುಕ್ಕುಹೇತುವಲ್ಲಾದಾಪ್ಪೋಲೇ ಅವನುಡೈಯ ಅನುಮತಿಯುಂ ಇಳವುಕ್ಕುಹೇತುವನ್ನು ॥ ೩೭೫ ॥

ಶ್ಲೋಕಃ - ❋ ಅಚ್ಚಿದ್ಯಾವೃತ್ತರೂಪತ್ವಾದ್ರಕ್ಷ್ಯಚೇತನಸಂಮತಿಃ ।
ಭಗವಲ್ಲಾಭಹೇತುಸ್ಸ್ಯಾನ್ನತಥಾ ವಿಷ್ಣುಸಂಮತಿಃ ॥ ೫೬೩ ॥

ಭವಿನಶ್ಯಾಸ್ತತೋನಸ್ಯಾದಚ್ಯುತಾನಾಪ್ತಿಕಾರಣಂ ।
ಕ್ರಮೇಣಾಂಗೀಕರೋತ್ಯೇನಂ ಚೇತನಂ ಭಗವಾನ್ಯತಃ ॥ ೫೬೪ ॥

ತಾತ್ಪರ್ಯಂ - ಜ್ಞಾನವಿಲ್ಲದೇ ಇರುವ ಅಚಿತ್ತಿಗಿಂತಲೂ ಬೇರೆಯಾದ ಜ್ಞಾನದೊಡನೆ ಕೂಡಿರುವ ಚೇತನನು ಭಗವಂತನ ರಕ್ಷಣೆಗೆ ಅಧೀನನಾಗಿ ಸುಮ್ಮನಿದ್ದರೂ ಯಾವ ರೀತಿ ಭಗವಲ್ಲಾಭಕ್ಕೆ ಕಾರಣವಾಗುವುದಿಲ್ಲವೋ ಅದೇ ರೀತಿ ಭಗವಂತನ ಆಜ್ಞಾರೂಪವಾದ ಶಾಸ್ತ್ರವನ್ನನುಸರಿಸಿ ಸಂಸಾರದಲ್ಲಿ ಈ ಚೇತನನನ್ನು ತಳ್ಳಿದ್ದಾಗ್ಯೂ ಕೂಡ ಭಗವಂತನ ಅನುಮತಿಯು ಭಗವಂತನನ್ನು ಹೊಂದದೇ ಇರುವುದಕ್ಕೆ ಕಾರಣವಾಗುವುದಿಲ್ಲ. ಯಾತಕ್ಕೆಂದರೆ ಯಾವಾಗಲಾದರೂ ಭಗವಂತನು ಈ ಚೇತನನನ್ನು ಈ ಸಂಸಾರದಿಂದ ತಪ್ಪಿಸಿ ತನ್ನಲ್ಲಿಗೆ ಕರೆದುಕೊಳ್ಳಬಹುದಾದ್ದರಿಂದ.

ಸೂತ್ರಂ - ಇರಂಡುಮಿರುವಕ್ಕುಂ ಸ್ವರೂಪಂ ॥ ೩೭೬ ॥

ಶ್ಲೋಕಃ - ❋ ಏತತ್ಸಂಮತಿಯುಗ್ಮಂ ಚ ದ್ವಯೋರನುಗುಣಂ ಭವೇತ್ ।
ಜೀವಸ್ಯ ರಕ್ಷ್ಯತಾಸಿದ್ಧಾ ಯಸ್ಮಾದ್ವಿಷ್ಣೋಸ್ಸ್ವತಂತ್ರತಾ ॥ ೫೬೫ ॥

ತಾತ್ಪರ್ಯಂ - ಇವರಿಬ್ಬರ ಅನುಮತಿಯೂ ಅವರವರ ಸ್ವರೂಪಕ್ಕನುಗುಣವಾದದ್ದು. ಅದು ಹೇಗೆಂದರೆ ಪರತಂತ್ರನಾದ ಚೇತನನಿಗೆ ತನ್ನ ರಕ್ಷ್ಯತ್ವಾನುಮತಿಯು ಸ್ವರೂಪವು. ಸ್ವತಂತ್ರನಾದ ಭಗವಂತನಿಗೆ ಪರತಂತ್ರನಾದ ಚೇತನನ ರಕ್ಷಣದಲ್ಲಿ ತನ್ನ ಆಜ್ಞಾರೂಪವಾದ ಶಾಸ್ತ್ರದ ನಿರ್ವಹಣೆಗಾಗಿ ಈ ಚೇತನನನ್ನು ಸಂಸಾರಿಯನ್ನಾಗಿ ಮಾಡುವ ಅನುಮತಿಯು ಸ್ವರೂಪವು.

ಸೂತ್ರಂ - ಇಳವುಕ್ಕಡಿಕರ್ಮಂ ಪೇತ್ತುಕ್ಕಡಿಕೃಪೈ ॥ ೩೭೪ ॥

ಶ್ಲೋಕಃ - ❋ ಚೇತನಸ್ಯ ಭವಪ್ರಾಪ್ತಿಃ ಕರ್ಮಭಿರ್ಭವತಿ ಧ್ರುವಂ ।
ಭಗವತ್ಕೃಪಯಾ ತಸ್ಯ ಸಮುಜ್ಜೀವನಮುಪ್ಯಹೋ ॥ ೫೬೬ ॥

ತಾತ್ಪರ್ಯಂ - ಈ ಚೇತನನು ಅನಾದಿಕಾಲದಿಂದ ಮಾಡಿದ ಕರ್ಮಕ್ಕನುಗುಣವಾಗಿ ಈ ಸಂಸಾರದಲ್ಲಿ ಜನಿಸುವನು. ಭಗವಂತನೋ ಅಂದರೆ ದಯೆಯಿಂದ ಇವನನ್ನು ಉದ್ಧರಿಸುವನು.

ಸೂತ್ರಂ - ಮುತ್ತೈಪ್ಪಡಿಶೊಲ್ಲಿಲ್ ಇಳವುಕ್ಕುರುಪ್ಪಾಂ ॥ ೩೭೫ ॥

ಶ್ಲೋಕಃ – ❋ ಸ್ವಾತಂತ್ರ್ಯಮೀಶ್ವರಸ್ಯೈವಚೇತನೋಜ್ಜೀವನಕ್ಷತಿಃ ।
ಕರೋತೀತಿ ಯದಿ ಬ್ರೂಯಾತ್ತದಾಸ್ಯಾದ್ವಿಷ್ಣುನಿಗ್ರಹಃ ॥ ॥ ೫೬೭ ॥

ತಾತ್ಪರ್ಯ – ಯಾವ ಚೇತನನು ಭಗವಂತನ ಸ್ವಾತಂತ್ರ್ಯವೇ ನಮ್ಮ ಉಜ್ಜೀವನಕ್ಕೂ ಸಂಸಾರಕ್ಕೂ ಕಾರಣವೆಂದು ಹೇಳುವನೋ ಅವನು ಭಗವನ್ನಿಗ್ರಹಕ್ಕೆ ಪಾತ್ರನಾಗುವನು.

ಸೂತ್ರಂ - ಎಡುಕ್ಕನಿನ್ಮೈಕ್ಕಿರವನ್ಮೈತಳ್ಳಿನಾಯ್ ಎನ್ಮೈಎಡಾಮ್ಮೈಕ್ಕುರುಪ್ಪಿರೇ ॥ ೫೭೬ ॥

ಶ್ಲೋಕಃ – ❋ ಪತಿತಂ ಪ್ರಹೌತುಕೃಪಯಾಸಮುದ್ಧೃತೌ
ಕೃತಯತ್ನಮೇಷಭವತೈವಪಾತಿತಃ ।
ಇತಿಚೇದ್ವದೇಚ್ಛಕುಪಿತಸ್ತದುದ್ಧೃತಿಂ
ಪ್ರವಿಹಾಯ ಗಚ್ಛತಿ ಯಥಾ ತಥಾ ಹರಿಃ ॥ ॥ ೫೬೮ ॥

ತಾತ್ಪರ್ಯ – ಬಾವಿಯಲ್ಲಿ ಬಿದ್ದವನನ್ನು ದಯೆಯಿಂದ ಮೇಲೆ ಎತ್ತಲು ಬಂದವನನ್ನು 'ನೀನೇ ನನ್ನನ್ನು ಬಾವಿಗೆ ತಳ್ಳಿದೆ' ಎಂದು ಹೇಳಿದರೆ ಕೋಪದಿಂದ ಬಾವಿಯಲ್ಲಿ ಬಿದ್ದವನನನ್ನು ಎತ್ತದೇ ಹೇಗೆ ಹೊರಟು ಹೋಗುವನೋ, ಅದೇ ರೀತಿ ನಮ್ಮನ್ನು ದಯೆಯಿಂದ ಉದ್ಧರಿಸಬೇಕೆಂದಿರುವ ಭಗವಂತನನ್ನು 'ನೀನೇ ಸ್ವಾತಂತ್ರ್ಯದಿಂದ ನನ್ನನ್ನು ಈ ಸಂಸಾರಕೂಪದಲ್ಲಿ ಬೀಳಿಸಿರುವೆ' ಎಂದು ಹೇಳಿದ ಪಕ್ಷದಲ್ಲಿ ಭಗವಂತನ ನಿಗ್ರಹಕ್ಕೆ ಪಾತ್ರನಾಗುವನು.

ಸೂತ್ರಂ - ಶೀತ್ತಮುಳ ಎನ್ನವನಂತರತ್ತಿಲೇ
ಇವ್ವರ್ಥತ್ತೈತ್ತಾವೇಯರುಳಿಚ್ಚೆಯ್ದಾರಿರೇ ॥ ೫೭೭ ॥

ಶ್ಲೋಕಃ – ❋ ಕರ್ಮಾನುರೂಪತೋಜೀವಾಸ್ಸಂಸರಂತೀಹ ತಾನ್ಹರಿಃ ।
ಕುಪಿತಃಪಾತಯತ್ಯೇವಂ ವಕ್ತುಂ ಕಿಮುಚಿತಂ ಭವೇತ್ ॥ ॥ ೫೬೯ ॥

ತಾತ್ಪರ್ಯ – ಈ ಲೋಕದ ನ್ಯಾಯವನ್ನನುಸರಿಸಿ ಈ ಸಂಸಾರಿ ಚೇತನರನ್ನು ದಯೆಯಿಂದ ಉದ್ಧರಿಸಬೇಕೆಂದಿರುವ ಭಗವಂತನಿಗೂ ಕೋಪವುಂಟೆಂದು ಹೇಳುವುದು ನ್ಯಾಯವೇ ಎಂದರೆ ಅದಕ್ಕೆ ಮುಂದಿನ ಸೂತ್ರದಲ್ಲಿ ಉತ್ತರ ಹೇಳುವರು.

ಸೂತ್ರಂ - ಶೀತ್ತಮುಂಡೆನ್ನರಿಂದಾಲ್ ಶೊಲ್ಲುಂಪಡಿಯೆನ್ನೆನ್ನಿಲ್
ಅರುಳುಂ ಆರ್ತಿಯುಂ ಅನನ್ಯಗತಿತ್ವಮುಂ ಶೊಲ್ಲಪ್ಪಣ್ಣುಂ ॥ ೫೭೮ ॥

ಶ್ಲೋಕಃ – ❋ ವರ್ತತೇ ಭಗವತಃಕ್ರುಧಿತ್ಯಯಂ
ಚಿಂತಯೇದ್ಯದಿ ತದಾ ದಯಾಳುತಾಂ ।
ಆರ್ತಿಮನ್ಯಗತಿಶೂನ್ಯತಾಂವದೇ
ನ್ಮತ್ಯಇತ್ಯಭಿಹಿತಂ ತಥಾ ಹರೌ ॥ ॥ ೫೭೦ ॥

ತಾತ್ಪರ್ಯ – ಭಗವಂತನಿಗೆ ಕೋಪವಿದೆಯೆಂದು ತಿಳಿದ ಪಕ್ಷದಲ್ಲಿ ಕೃಪೆಯನ್ನೂ ಆರ್ತಿಯನ್ನೂ ಬೇರೆ ಗತಿಯಿಲ್ಲದೇ ಇರುವಿಕೆಯನ್ನೂ ಹೇಳುವಂತೆ ಮಾಡುವುದು. ಅದ್ದರಿಂದ ಭಗವಂತನಲ್ಲಿ ಕೋಪದ ಆರೋಪ ಮಾಡಿರುವುದು.

ಸೂತ್ರಂ – **ಶೀರಿನಾಲುಂ ಕಾಲ್ಕೈಕ್ಕಟ್ಟಿಕ್ಕೊಳ್ಳಲಾಂಪಡಿಯಿರುಪ್ಪಾನೊರುವನ್ಗೈ ಪೆತ್ತಾಲ್ ಎಲ್ಲಾಂಶೊಲ್ಲಲಾಮಿರೇ** ॥ ೩೭೯ ॥

ಶ್ಲೋಕಃ – ✱ ಕುಪಿತಸ್ಯ ದಯಾವತೋಸ್ಯ ಪಾದೌ
ಪರಿಗೃಹ್ಯಾನತಮಸ್ತಕೋ ಯಥೇಚ್ಛಂ ।
ಗದಿತುಂತ್ವವಕಾಶ ಏವ ಭೂಯಾ
ದವಲೋಕ್ಯಾಸ್ಯಕೃಪಾಳು ತಾಂ ನಿತಾಂತಂ ॥ ॥ ೫೭೧ ॥

ತಾತ್ಪರ್ಯ – ಭಗವಂತನು ಕೋಪಿಸಿಕೊಂಡಾಗ್ಯೂ ಅವನ ದಯೆಯನ್ನು ನೋಡಿ ಅವನ ಪಾದಗಳನ್ನು ಹಿಡಿದು ತನ್ನ ಇಚ್ಛೆಯಂತೆ ಎಲ್ಲವನ್ನೂ ಹೇಳಬಹುದಷ್ಟೇ.

ಸೂತ್ರಂ - **ಕೃಪೆಯಾಪರ್ಯಾಪಾಲಯತ್ ಅರಿಶಿನತ್ತಾಲ್** ॥ ೩೮೦ ॥

ಶ್ಲೋಕಃ – ✱ ಕಾಕಾಸುರಂ ತ್ರಿಭುವನಭ್ರಮಣಾತಿಖಿನ್ನಂ
ಘೋರಾಪರಾಧಿನಮಪಿ ಪ್ರಗೃಹೀತ ಪಾದಂ ।
ಕಾರುಣ್ಯತೋ ರಘುಪತಿಸ್ತಮರಕ್ಷದಸ್ಮಾತ್
ಮಾತಾ ಯಥಾತ್ಮತನಯಂ ಕುಪಿತಾಪಿಪಾಯಾತ್ ॥ ॥ ೫೭೨ ॥

ತಾತ್ಪರ್ಯ – ಕಾಕಾಸುರನು ಬಹಳ ಘೋರಾಪರಾಧವನ್ನೆಸಗಿ ಕುಪಿತನಾದ ಶ್ರೀರಾಮನಿಂದ ಬಿಡಲ್ಪಟ್ಟ ಬ್ರಹ್ಮಾಸ್ತ್ರದ ತಾಪವನ್ನು ತಡೆಯಲಾರದೆ ಮೂರುಲೋಕವನ್ನು ಸುತ್ತಿ ಎಲ್ಲೂ ರಕ್ಷಣೆಯನ್ನು ಹೊಂದದೆ ಕೊನೆಗೆ ಶ್ರೀರಾಮನ ಪಾದಗಳಲ್ಲಿ ಬೀಳಲು ದಯಾಳುವಾದ ಶ್ರೀರಾಮನು ಅವನ ಅಪರಾಧವನ್ನು ಮನ್ನಿಸಿ ರಕ್ಷಿಸಿದನಲ್ಲವೇ ಮತ್ತು ಮಗುವು ಚೇಷ್ಟೆಯಿಂದ ಬಹಳ ಅಪರಾಧವೆಸಗಿದ್ದಾಗ್ಯೂ ಕುಪಿತಳಾದ ತಾಯಿಯು ತನ್ನ ಸಮೀಪಕ್ಕೆ ಬಂದು ಅಳುತ್ತಲು ಆ ಮಗುವನ್ನು ಯಾವ ರೀತಿ ಮನ್ನಿಸಿ ರಕ್ಷಿಸುವಳೋ ಅದೇ ರೀತಿ ಭಗವಂತನೂ ಕೂಡ ಅಪರಾಧಿಯಾಗಿದ್ದಾಗ್ಯೂ ತನ್ನಲ್ಲಿ ಬಂದು ಪಾದಹಿಡಿದಪಕ್ಷದಲ್ಲಿ ಕೈಬಿಡದೇ ರಕ್ಷಿಸುವನಂ.

ಇಲ್ಲಿಗೆ ಮೂರನೇ ಪ್ರಕರಣವು ಮುಗಿಯಿತು

ಇತಿ ಶ್ರೀ ಬಾಲಧನ್ವಿ ಜಗ್ಗೂವಕುಲಭೂಷಣ
ಕವಿವಿರಚಿತೇ ಸಂಸ್ಕೃತ ಶ್ಲೋಕಾತ್ಮಕೇ
ಶ್ರೀ ವಚನಭೂಷಣೇ
ತೃತೀಯ ಪ್ರಕರಣಂ

– ಶ್ರೀಃ –

ಶುಭಮಸ್ತು

ಶ್ರೀ ವಚನಭೂಷಣಂ

ಅಥ ಚತುರ್ಥ ಪ್ರಕರಣಂ

ಸೂತ್ರಂ - ತ್ರಿವಾದ್ಯಿಭೂತಿಯಿಲೆ ಪರಿಪೂರ್ಣಾನುಭವಂನಡವಾನಿರ್ಕ
ಅತುಂಡದುರುಕ್ಕಾಟ್ಟಾದೇ ದೇಶಾಂತರಗತನಾನ ಪುತ್ರನ್ ಪಕ್ಕಲಿಲೇ
ಪಿತೃಹೃದಯಂಕಿಡಕ್ಕುಮಾಪೋಲೆ ಸಂಸಾರಿಹಳ್ಪಕ್ಕಲಿಲೆತಿರುವುಳ್ಳಂ
ಕುಡಿಪೋಯ್ ಇವರ್ಹಳೈಪ್ಪಿರಿಂದಾಲಾತ್ತ ಮಾಟ್ಟಾದೇ ಇವರ್ಹಳೋಡೆ
ಕಲಂದು ಪರಿಮಾರುಕ್ಕೈಕ್ಕುಕ್ಕರಣ ಕಳೇಬರಂಗಳೈ ಕೊಡುತ್ತು
ಅವತ್ತೈಕ್ಕೊಂಡು ವ್ಯಾಪರಿಕ್ಕೈಕ್ಕೇಡಾನ ಶಕ್ತಿವಿಶೇಷಂಗಳೈಯುಂ
ಕೊಡುತ್ತು ಕಣ್‌ಕಾಣನಿರ್ಕ್ಕಲ್ ಆಗೈಯಿಟ್ಟು ವಿಲಕ್ಕುವರ್ಹಳೆನ್ನು
ಕಣ್ಣುಕ್ಕ್ಕೆತ್ತೋತ್ತಾದಪಡಿ ಉರಂಗುಹಿರಪ್ರಜ್ಞೈಯೈ ತಾಯ್
ಮುದುಹಿಲೇಯಗೈತ್ತುಕ್ಕೊಂಡು ಕಿಡಕ್ಕುಮಾಪೋಲೇ ತಾನರಿಂದ
ಸಂಬಂಧವೇಹೇತುವಾಹವಿಡವಾಟ್ಟಾದೆ ಅಹವಾಯಿಲೇ ಅಗೈತ್ತು
ಕೊಂಡು ಆಳ್ವಿಯಲ್‌ತುಡರ್ಚಿನನ್ನೆನ್ನು ವಿಡಾದೆಸತ್ತೈಯೈನೋಕ್ಕಿ
ಉರ್ಧಕೇಡನಾಯ್ ಇವರ್ಹಳ್ ಅಸತ್ಕರ್ಮಂಗಳಿಲೇ ಪ್ರವರ್ತಿಕ್ಕುಂ
ಪೋತುವೀಳ್ಕವಾಟ್ಟಾದ ಅನುಮತಿದಾನತ್ತೈವಂಡ್ಡಿ ಉದಾನೀನರೈ
ಪ್ಪೊಲಿಯಿರುಂದುವೀಳ್‌ಹೈಕ್ಕಿಡುಪಾರ್ತನನ್ಕೈಯನ್ನು ಪೇರಿಡಲಾವ
ತೊರುತೀವೈಯುಂ ಕಾಣಾತೇನೆತ್ತಿಯೈಕೊಕ್ಕತ್ತಿಪ್ಪಾರ್ತಾಲ್
ಒರುವಳಿಯಾಲುಂ ಪಶೈಕಾಣಾದೊಳಿಂದಾಲ್ ಅಪ್ರಾಪ್ಯಮೆನ್ನು
ಕಣ್ಣನೀರೋಡೆವೀಳುವತು ತನಕ್ಕೇರವಿಡಂಪೆತ್ತವಳವಿಲೇ
ಎನ್ನೂರೈಚ್ಚೊನ್ನಾಯ್ ಎನ್ಪೇರೈಚೊನ್ನಾಯ್ ಎನ್ನಡಿಯಾರೈನೋಕ್ಕಿನಾಯ್
ಅವರವರ್ಹಳ್ ವಿಡಾಯ್‌ತೀರ್ತಾಯ್ ಅವರ್ಹಳುಕ್ಕೊ ತುಂಗನಿಳಲ್ಲೈ
ಕೊಡುತ್ತಾಯ್ ಎನ್ನಾಪ್ಪೋಲೇಶಿರಿವತ್ತೈಯೇರಿಟ್ಟು ಮಡಿ
ಮಾಂಗಾಯಿಟ್ಟು ಪೂನ್ನಾಣಿಯನ್‌ಪ್ಪೊನ್ನೈ ಉರೈಕಲ್ಲಿಲೇ
ಯುರೈತ್ತು ವೆಳುಹಾಲೆಯೆಡುತ್ತು ಕ್ಕಾಲ್‌ಕಳಂ ಜೆನ್ನುತಿರಟ್ಟು

ಮಾಪ್ಪೋಲೆ ಜನ್ಮಪರಂಪರೈಹಳ್ತೋರುಂ ಯಾದೃಚ್ಛಿಕಂ
ಪ್ರಾಸಂಗಿಕಂ ಆನುಷಂಗಿಕಮೆನ್ನಿರ ಸುಕೃತ ವಿಶೇಷಂಗಳಿ ಕಲ್ಪಿತ್ತುಕ್ಕೊಂಡು
ತಾನೇ ಅವತ್ತೈ ಒನ್ನುಪತ್ತಾಕ್ಕಿ ನಡತ್ತಿಕ್ಕೊಂಡು ಪೋರುಂ ॥ ೩೮೧ ॥

ಶ್ಲೋಕಃ – ✱ ಸೇವ್ಯಮಾನೋಪಿ ವೈಕುಂಠೇ ಸೂರಿಭಿಃಪತಿತಾನ್ಪವೇ ।
ಉದ್ದಧೀರ್ಷುಃ ಮುಕುಂದೋಯಂ ಕಾಂಕ್ಷತೇ ತಿಷ್ಠತಿಂತ್ವಿಹ ॥ ॥ ೫೭೩ ॥

ಏಕತ್ರ ಸತ್ಸುಪುತ್ರೇಷು ದೇಶಾಂತರಗತಂ ಸುತಂ ।
ಸ್ಮೃತ್ವಾ ತಸ್ಯಾಪಿತೈಸ್ಸಾಕಂ ಪಿತೇವ ಸ್ಪಿತಿಮಪ್ಯಹೋ ॥ ॥ ೫೭೪ ॥

ಅಬ್ರವೀನ್ಮಮಪುರಂ ತಥಾ ಪುಮಾನ್
ನಾಮಧೇಯಮಪಿ ಮೇ ಜಗಾದಸಃ ।
ಆಮ್ರಸಂಭವಶಲಾಟುಮಂಕಗಂ
ಸಂವಿಧಾಯಮನುಜೇ ನರೋ ಯಥಾ ॥ ॥ ೫೭೫ ॥

ಚೌರ್ಯಮಾಕಲಯತೀಹ ಮೂಢವಃ
ಏವಮಾದ್ಯುಪಧಿತಶ್ಚ ಚೇತನಾನ್ ।
ಕಿಂಕರಾನ್ವಿತನುತೇ ಸಮುದ್ಧರೇತ್
ಇತ್ಯಪಾರಭವಸಾಗರೇ ಸ್ಥಿತಾನ್ ॥ ॥ ೫೭೬ ॥

ಶ್ರಾಂತಭಾಗವತಾನಾಂ ತು ಸ್ನಾತುಂಚ್ಛಾಯಾಂ ಸ್ಥಲಂ ದದೌ ।
ಪಿಪಾಸಾ ಪರಿಹಾರಾಯ ದದೌ ತೀರ್ಥೋದಕಂತ್ವಯಂ ॥ ॥ ೫೭೭ ॥

ಕೃಪಾಳುರ್ಭಗವಾನ್ಬದ್ಧಾನ್ಕಸ್ಮಾದಪಿ ಚ ಕೈತವಾತ್ ।
ಉದ್ಧೃತ್ಯ ಸ್ವೀಯಕೈಂಕರ್ಯೈ ಸಂಯೋಜಯತಿ ಚೇತನಾನ್ ॥ ॥ ೫೭೮ ॥

ತಾತ್ಪರ್ಯ – ತ್ರಿಪಾದ್ವಿಭೂತಿಯೆಂದರೆ ನಿತ್ಯವಿಭೂತಿಪರಮಪದವು. ಈ ತ್ರಿಪಾದ ಶಬ್ದಕ್ಕೆ ಅನೇಕ ಅರ್ಥಗಳುಂಟು. ಅದರೆ ಒಂದು ಅರ್ಥವನ್ನು ಮಾತ್ರ ಹೇಳುತ್ತೇನೆ. ಅದೇನಂದರೆ ಭೂಷಣಾಸ್ತ್ರಾದಿರೂಪದಿಂದ ಜಗದಂತರ್ಗತವಸ್ತ್ವಭಿಮಾನಿಳಾದ ನಿತ್ಯರುಂ ಕೇವಲ ಭಗದನುಭವಪರರಾದ ನಿತ್ಯರುಂ ಮುಕ್ತರುಗಳಾದವರೂ ಈ ಮೂರು ನಿತ್ಯಸೂರಿಗಳಿಂದ ಕೂಡಿರುವುದರಿಂದ ತ್ರಿಪಾದ್ ಎಂದು ಹೇಳಲ್ಪಡುತ್ತೆ. ಈ ರೀತಿಯಾದ ಪರಮಪದದಲ್ಲಿ ನಿತ್ಯಮುಕ್ತರೊಡನೆ ಕೂಡ ಸ್ವರೂಪರೂಪಗುಣವಿಭೂತಿಗಳೆಲ್ಲವನ್ನೂ ಒಂದೇ ಕಾಲದಲ್ಲಿ ಅವಿಚ್ಛಿನ್ನ ಪರಿಪೂರ್ಣಾನುಭವವನ್ನು ಅನುಭವಿಸುತ್ತಿದ್ದಾಗ್ಯೂ ಭಗವಂತನು ತಂದೆಯಾದವನು ಅನೇಕ ಪುತ್ರರೊಡನೆ ಇದ್ದಾಗ್ಯೂ ದೇಶಾಂತರಗತನಾದ ಮಗನನ್ನು ಯೋಚಿಸುತ್ತಾ ಅವನೂ ಇವರೊಡನೆ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಯೋಚಿಸುವಂತೆ ನಿತ್ಯಮುಕ್ತರೊಡನೆ ಕೂಡಿರುವನಾದಾಗ್ಯೂ ಈ ಸಂಸಾರಿಚೇತನರನ್ನು ನೋಡಿ ಇಂತಹ ಭೋಗಗಳನ್ನನುಭವಿಸದೇ ಅನ್ಯಾಯವಾಗಿ ಸಂಸಾರದಲ್ಲಿ ಬಿದ್ದು ಕಷ್ಟಗಳನ್ನನುಭವಿಸುವುದಲ್ಲಾ ಎಂದು ಪರಮಕೃಪೆಯಿಂದ ಯೋಚಿಸಿ ಅಸತ್ಕಲ್ಪರಾದ ಚೇತನರಿಗೆ ಉಜ್ಜೀವಿಸುವುದಕ್ಕಾಗಿ ಕರಣಕಳೇಬರಗಳನ್ನು ಅನುಗ್ರಹಿಸಿದನಷ್ಟೆ. ಈ ರೀತಿ

ಅನುಗ್ರಹ ಪ್ರವೃತ್ತಿನಿವೃತ್ತಿ ಶಕ್ತಿಗಳನ್ನೂ ಅನುಗ್ರಹಿಸಿ ಈ ಚೇತನರನ್ನು ಬಿಟ್ಟಿರಲಾರದೆ ಸರ್ವಸ್ವಾಮಿಯಾದ ಭಗವಂತನು ಈ ಚೇತನರನ್ನು ಶರೀರವನ್ನಾಗಿ ತಾನು ಹೊಂದಿ ಅಂತರಾತ್ಮನಾಗಿಯೂ ಅರ್ಚಾವತಾರದಿಂದಲೂ ಈ ಚೇತನರೊಡನೆ ಸೇರಿ ಇದ್ದು ಸ್ವಾಮಿತ್ವಪ್ರಾಪ್ತಿ ತೋರುವಂತೆ ಎಲ್ಲರಿಗೂ ಗೋಚರನಾಗುವಂತೆ ಪ್ರತ್ಯಕ್ಷನಾದ ಪಕ್ಷದಲ್ಲಿ ತ್ವಂಮೇ ಎಂದರೆ ಈ ಜೀವಾತ್ಮನು ಅಹಂಮೇ ಎಂದು ನಾನೇ ಸ್ವತಂತ್ರನು, ನಾನು ನಿನಗೆ ಅಡಿಯಾಳಲ್ಲ ಎಂದು ಹೇಳುವನೆಂದು ನೆನೆದು ಒಂದು ಕಾಲಕ್ಕೂ ಗೋಚರನಾಗದಿರುವನು ಮಲಗಿರುವ ಮಗುವನ್ನು ವತ್ಸಲೆಯಾದ ತಾಯಿಯು ತಾನು ರಕ್ಷಕಳೆಂಬ ಸಂಬಂಧದಿಂದ ತಾನಾಗಿಯೇ ಆ ಮಗುವನ್ನು ಎತ್ತಿಕೊಂಡು ಕಾಪಾಡುವಳೋ ಅದೇ ರೀತಿ ಭಗವಂತನು ತಾನು ರಕ್ಷಕನೆಂಬ ಸಂಬಂಧದಿಂದ ಅಜ್ಞಾನದಿಂದಿರುವ ಚೇತನರಿಗೆ ಅಂತರ್ಯಾಮಿಯಾಗಿದ್ದಾಗ್ಯೂ ಈ ಚೇತನರ ದುರ್ವಾಸನಾಬಲದಿಂದ ದುಷ್ಪ್ರವೃತ್ತಿಯಲ್ಲಿ ಪ್ರವೃತ್ತಿಸುವ್ವನಾದ್ದರಿಂದ ಸರ್ವಜ್ಞನಾದ ಭಗವಂತನೇ ಎಲ್ಲರಿಗೂ ಮೋಕ್ಷಕೊಡಬಹುದಲ್ಲಾ ಎಂದರೆ ಸರ್ವಮುಕ್ತಿಪ್ರಸಂಗವುಂಟಾಗುವುದು. ಉದಾಸೀನನಾಯ್ ಈ ಚೇತನರಿಗೆ ಯಾವುದಾದರೂ ಒಂದು ನೆಪದಿಂದ ಉಜ್ಜೀವನೋಪಾಯವನ್ನುಂಟುಮಾಡಬೇಕೆಂದು ಯೋಚಿಸಿ ಅನೇಕ ಊರುಗಳ ಹೆಸರನ್ನು ಹೇಳುತ್ತಿರುವಾಗ ಮಧ್ಯದಲ್ಲಿ ಶ್ರೀರಂಗ ಯಾದವಾದ್ರಿಯೆಂಬ ಹೆಸರನ್ನು ತನಗೆ ತಿಳಿಯದೇ ಹೇಳಿದ ಪಕ್ಷದಲ್ಲಿ ಅದೇ ನೆಪದಿಂದ ನನ್ನ ಊರಿನ ಹೆಸರನ್ನು ಹೇಳಿದನೆಂದು ಅವರಿವರ ಹೆಸರುಗಳನ್ನು ಹೇಳುತ್ತಿರುವಾಗ ತಾನಾಗಿಯೇ ಬಾಯಲ್ಲಿ ಬಂದ ರಾಮಕೃಷ್ಣನೆಂಬ ಹೆಸರನ್ನು ಹೇಳಿದ ಮಾತ್ರಕ್ಕೆ ನನ್ನ ಹೆಸರನ್ನು ಹೇಳಿದನೆಂದೂ ಬಾಯೂರಿಕೆಯಿಂದ ಬಂದ ಭಾಗವತರಿಗೆ ಬಾಯೂರಿಕೆ ಪರಿಹಾರವಾಗುವಂತೆ ನೀರನ್ನು ಕೊಟ್ಟನೆಂದೂ ಇದೇ ಮೊದಲಾದ ನೆಪವನ್ನಿಟ್ಟು ಚೇತನರನ್ನು ಅಂಗೀಕರಿಸುವನು.

ಸೂತ್ರಂ - ಲಲಿತಾಚರಿತಾದಿಹಳಿಲೇ ಇವ್ವರ್ಥಂ ಶುರುಕ್ಕವೊಳಿಯಕ್ಕಾಣಲಾಂ ॥ ೩೮೨॥

ಶ್ಲೋಕಃ - ✱ ಪೂರ್ವಸ್ಮಿನ್ವನನೇಹಮಾಖುರಭವಂದೀಪೇಸ್ಥಿತಾಂ ವರ್ತಿಕಾ
ಮಾದಾತುಂ ನಿಹಿತಂ ಮುಖಂ ಬತ ಯದಾ ಮಾರ್ಜಾಲನಾದಂ ತದಾ ।
ಶ್ರುತ್ವಾಭೀತಿವಶಾತ್ಪ್ರಧಾವನಚಲಾದ್ದೀಪ್ತೋಜ್ಜ್ವಲದ್ದೈವತಃ
ಹ್ಯೇತನ್ಮೇ ಸುಕೃತೋದ್ಭವಂ ಫಲಮಿತಿ ಪ್ರೋವಾಚ ರಾಜ್ಞೀ ಸಖೀನ್ ॥ ॥ ೫೭೯ ॥

ತಾತ್ಪರ್ಯ - ಅಜ್ಞಾತಸುಕೃತದಿಂದ ಈಶ್ವರನು ಅಂಗೀಕರಿಸುವನು ಎಂಬ ವಿಷಯದಲ್ಲಿ ದೃಷ್ಟಾಂತ ತೋರಿಸುತ್ತಾರೆ. ಅದೇನೆಂದರೆ ವಿದರ್ಭರಾಜನ ಮಗಳಾಗಿಯೂ ಕಾಶೀರಾಜನ ಮಹಿಷಿಯಾಗಿಯೂ ಇದ ಲಲಿತೆಯು ತನ್ನ ಸವತಿಯರಾದ ಮುನ್ನೂರು ಹೆಂಗಸರಿಗಿಂತಲೂ ತನ್ನ ಪತಿಗೆ ಅತ್ಯಂತ ಪ್ರೀತಿಪಾತ್ರಳಾಗಿ ಬಹಳ ಸುಂದರಿಯಾಗಿ ಇದ್ದಳು. ಮತ್ತು ಅನವರತವೂ ದೇವಸ್ಥಾನದಲ್ಲಿ ದೀಪ ಕೈಂಕರ್ಯವನ್ನು ಮಾಡುತ್ತಾ ಇದ್ದಳು. ಅದನ್ನು ನೋಡಿ ಸವತಿಯರು ನಿನಗೆ ಈ ರೂಪಸಂಪತ್ತೂ ದೀಪಕೈಂಕರ್ಯದಲ್ಲಿ ಆಸೆ ಹುಟ್ಟುವುದಕ್ಕೂ ಕಾರಣವೇನೆಂದು ಕೇಳುತ್ತಲು ಲಲಿತೆಯು ತನ್ನ ಜನ್ಮಾಂತರ ತರವಿಷಯವನ್ನು ಈ ರೀತಿ ಹೇಳುತ್ತಾಳೆ. ತನಗೆ ಜಾತಿಸ್ಮರಣ ಬಂದದ್ದೂ ಈ ರೀತಿ ಉತ್ತಮಜನ್ಮ ಬಂದದ್ದಕ್ಕೂ ಕಾರಣ ತಿಳಿಸುತ್ತಾಳೆ. ಸೌವೀರರಾಜನ ಪುರೋಹಿತನಾದ ಮೈತ್ರೇಯನೆಂಬ ಬ್ರಾಹ್ಮಣನು ದೇವಿಕಾದಡದಲ್ಲಿ ವಿಷ್ಣು ದೇವಸ್ಥಾನವನ್ನು ಕಟ್ಟಿಸಿ ಪ್ರತಿದಿನವೂ ತಪ್ಪದೆ ಹೂವು ಧೂಪದೀಪಗಳಿಂದ ಭಗವಂತನನ್ನು ಆರಾಧಿಸುತ್ತಿದ್ದನು. ಹೀಗಿರಲು ಕಾರ್ತಿಕಮಾಸದಲ್ಲಿ ಭಗವಂತನಿಗೆ ದೀಪವನ್ನು ಹತ್ತಿಸಿಹೋದನು. ಅದು ಕ್ರಮೇಣ ಮುಂಕಾಗುತ್ತಿತ್ತು. ಆ ದೇವಸ್ಥಾನದಲ್ಲಿ ನಾನು ಒಂದು ಹೆಣ್ಣು ಇಲಿಯಾಗಿದ್ದೆ. ನನಗೆ ಆ ದೀಪದ ಬತ್ತಿಯನ್ನು ತೆಗೆದುಕೊಳ್ಳುವ ಆಸೆಯಾಯಿತು. ಆಗ ನಾನು ಆ ಬತ್ತಿಗೆ ಬಾಯಿ ಹಾಕಿದೆನು. ಅಷ್ಟರಲ್ಲಿ ಬೆಕ್ಕಿನಶಬ್ದವಾಯಿತು. ಒಡನೆ ನಾನು ಪ್ರಾಣಭಯದಿಂದ ಓಡಲುಪಕ್ರಮಿಸಿದೆನು. ಆಗ

ಆ ಬತ್ತಿ ಮೇಲಾಗಿ ಪ್ರಕಾಶಮಾವಾಯಿತು. ಅದರ ಫಲವಾಗಿ ನನಗೆ ಈ ಜನ್ಮವೂ ಜನ್ಮಾಂತರ ಸಂಸ್ಕಾರವೂ ಉಂಟಾಯಿತು ಎಂದು ಹೇಳಿದಳು. ಇದೇ ರೀತಿ ಇತಿಹಾಸ ಸಮುಚ್ಚಯ ಮತ್ತು ಗರುಡಪುರಾಣದ ದೃಷ್ಟಾಂತಗಳನ್ನು ಹೇಳಿರುವರು.

ಸೂತ್ರಂ – ಅಜ್ಞರಾನ ಮನುಷ್ಯರ್ಹಳ್ ವಾಳಾತಂದಾನೆನ್ನಿರುಪ್ಪರ್ಹಳ್ ॥ ೩೮೩ ॥

ಶ್ಲೋಕಃ – ❋ ಅಜ್ಞಾನಿನೋ ಮನುಷ್ಯಾಸ್ತು ನಿಹೇತುಕಕೃಪಾಭವಂ ।
ಉಜ್ಜೀವನನಿಮಿತ್ತಂ ತು ಶ್ಲಾಘಂತೇ ನೈವ ತತ್ಕೃತಂ ॥ ॥ ೫೮೦ ॥

ತಾತ್ಪರ್ಯ – ಆವನು ಅಜ್ಞಾತಸುಕೃತವನ್ನು ಮುಂದಿಟ್ಟು ಸ್ವೀಕರಿಸುವ ವಿಷಯವನ್ನು ಪರಮೋಪಕಾರ ಮಾಡಿದನೆಂದು ಕೊಂಡಾಡುವುದನ್ನು ಬಿಟ್ಟು ಅಜ್ಞರಾದ ಮನುಷ್ಯರು ಸಾಧಾರಣವಾಗಿ ಏನೋ ಉಪಕಾರಮಾಡಿದನೆಂದು ನೆನೆಸುವರು.

ಸೂತ್ರಂ - ಜ್ಞಾನವಾಂಗಳಂ ಇನ್ನೆನ್ನೈವೊನೆಂಳಾಕ್ಕಿತ್ತನ್ನೈಯೆನ್ನುಳ್ವೈತ್ತಾನ್
ಎನ್ನನ್ನ್ರಿಶೆಯ್ತೇನಾವೆನ್ನೆಂಜಿಲ್ತಿಹಳ್ವರುವೇ ನಡುವೇವಂದುಯ್ಯ
ಕ್ಕೊಳ್ಕಿನ್ನನಾರ್ತ ಅರಿಮೂತನರಿವಿತ್ತವತ್ತಾನೀಶೆಯ್ತನವಡಿಯೆನರಿಯೇನೇ
ವೊರುಳಿಲ್ಲಾದವೆನ್ನೈ ವೊರುಳಾಕ್ಕಿವಡಿಮೈಕೊಂಡಾಯ್
ಎನ್ನೈಲೇವನಂಕೆಡುತ್ತಾಯ್ ಮರುವಿತೊಳುಂ
ಮನವೇತಂದಾಯ್ಎನ್ನುಈಡುಪಡಾನಿರ್ಪರ್ಹಳ್ ॥ ೩೮೪ ॥

ಶ್ಲೋಕಃ – ❋ ಜ್ಞಾನಿನೋಜ್ಞಾತಸುಕೃತಾನ್ಕಲ್ಪಯಂ ಸ್ತ್ವತ್ಕೃತಾಂಕೃಪಾಃ ।
ಚಿಂತಯಂತೋ ಮಹಾಪ್ರಾಜ್ಞಾಃ ಶ್ಲಾಘಂತೇ ಹೃಷ್ಟಮಾನಸಾಃ ॥ ॥ ೫೮೧ ॥

ಮಮ ಹೃದಯಸರೋಜೇ ಸ್ಥಾಪಯಾಮಾಸಿಥತ್ವಾಂ
ಮಮಹೃದಯಜ ದೋಷಾನ್ನಾಶಯಾಮಾಸಿಥತ್ವಂ ।
ಘಟಿತಕರಣಗಾತ್ರೈಃ ಕಲ್ಪಯನ್ಪೇಪಿಸತ್ವಾಂ
ತವಪರಿಚರಣೇನ ಸ್ವೀಯಜನ್ಮಾಪಿ ಧನ್ಯಂ ॥ ॥ ೫೮೨ ॥

ದೃಷ್ಟಾಸೀತೇತ್ಯನುಲಪನಪರಶ್ಚಾಂಜನೇಯೋ ಯಥಾ ವಾ
ಪ್ರೋವಾಚಾಹಂ ಕಿಮು ಕಥಯು ವಿಭೋ ಕಿಂಚಿದಪ್ಯಾಚರಾಮಿ ।
ಸತ್ಯಪ್ಯೇವಂ ಮಯಾ ವಿರಚಿತವಾನ್ತಾದೃಶಂ ಚಾಂಬುಜಾಕ್ಷ
ಶ್ರೀಮನ್ಮತ್ಕಿಂಚಿದುಪದಿ ವಶತಃ ಕೃಷ್ಣಕಾರುಣ್ಯಮಸ್ಮಿನ್ ॥ ॥ ೫೮೩ ॥

ತಾತ್ಪರ್ಯ – ಈ ಸಂಸಾರದಲ್ಲಿ ಬಿದ್ದು ಒದ್ದಾಡುತ್ತಿರುವ ನನಗೆ ನಿನ್ನ ಧ್ಯಾನವನ್ನುಂಟುಮಾಡಿ ನನ್ನ ಮನಸ್ಸಿನಲ್ಲಿ ನೀನು ಬಂದು ಕುಳಿತೆ. ಅಸತ್ಯಾಯನಾಗಿರುವ ನನಗೆ ಕರಣ ಕಳೇಬರಗಳನ್ನನುಗ್ರಹಿಸಿ ನಿನ್ನ ಕೈಂಕರ್ಯಕ್ಕೆ ಉಪಯೋಗಿಸಿಕೊಂಡೆಯಲ್ಲವೇ ? ಆಂಜನೇಯನಂತೆ ದೃಷ್ಟಾ ಸೀತಾ ಎಂದೂ ಹೇಳಿ ನಿನ್ನ ಮುಖೋಲ್ಲಾಸಪಡಾಡಿದೆನೋ ನನ್ನ ಅಜ್ಞಾನದಿಂದ ವೇದವಿಹಿತವಾದ ಕರ್ಮಗಳನ್ನು ಮಾಡಿಲ್ಲವಷ್ಟೆ. ಆದರೂ ಯಾವುದೋ ಒಂದು ಅಜ್ಞಾತಸುಕೃತವನ್ನು ಕಲ್ಪಿಸಿಕೊಂಡು ನೀನು ಪಾಪಿಯಾದ ನನ್ನನ್ನು ಉಜ್ಜೀವಿಸುವಂತೆ ಮಾಡಿದೆಯಲ್ಲಾ, ನಿನ್ನ ಕಾರುಣ್ಯವನ್ನು ಏನೆಂದು ಹೇಳಲಿ.

ಸೂತ್ರಂ - **ಭಾಷ್ಯಕಾರರ್ಕಾಲತ್ತಿಲೆ ಒರುನಾಳ್ ಪೆರುಮಾಳ್ ಪುರಪ್ಪಟ್ಟರುಳುಂ**
ತನ್ನಯುಂಪಾರ್ತು ಪೆರಿಯತಿರುಮಂಟಪತ್ತುಕ್ಕು
ಕೀಳಾಹವುತಲಿಹಳಿಲ್ಲೋರುಂ ತಿರಳವಿರುಂದವಳವಿಲೇ
ಇವ್ವರ್ಥಂ ಪ್ರಸ್ತುತಮಾಹಿನ್ಬುಱಿರಂದವಾರ್ತೈಹಳ್ಳಿ ಸ್ಮರಿಪ್ಪತು ॥ ೩೮೫ ॥

ಶ್ಲೋಕಃ - ❋ ಕಾಲೇ ರಾಮಾನುಜಸ್ಯ ಶ್ರುತಮನುಜಮನಸ್ತೋಷಣಾರ್ಥಂ ಪ್ರತಸ್ಥೇ
ವೀಥ್ಯಾಂ ಶ್ರೀರಂಗನಾಥಃ ಪರಿಕರಸಹಿತೋಹಂತತಸ್ಮಿಂಸ್ತುಕಾಲೇ ।
ಕೇಚಿದ್ಬಕ್ತಾಸ್ತು ಕನ್ಯಾಪ್ಯಮಿತಧನಿಕಸ್ಯದ್ವಾರಿ ಲಬ್ಧಾವಕಾಶಾಃ
ಸಂಪ್ರತ್ಯಜ್ಞಾತಪುಣ್ಯಾಃ ಭಗವದನುಸೃತಾಃ ಇತ್ಯಪೋಚನ್ಕೃತಾರ್ಥಾಃ ॥ ॥ ೫೮೪ ॥

ನಾಜ್ಞಾತಸುಕೃತಂಚಸ್ಯಾದ್ಭಗವಲ್ಲಾಭ ಕಾರಣಂ ।
ನಿರ್ಹೇತುಕಕೃಪೈವಸ್ಯಾದ್ಭಗವತ್ಸ್ವೀಕೃತೌ ನೃಣಾಂ ॥ ॥ ೫೮೫ ॥

ತಾತ್ಪರ್ಯ - ಭಗವಂತನ ನಿರ್ಹೇತುಕ ಕಟಾಕ್ಷದಿಂದ ಅಂಗೀಕರಿಸುವ ವಿಷಯವಾಗಿ ಒಂದು ಐತಿಹ್ಯವನ್ನು ತಿಳಿಸುತ್ತಾರೆ. ಶ್ರೀ ಭಗವದ್ಭಾಷ್ಯಕಾರರ ಕಾಲದಲ್ಲಿ ಶ್ರೀ ರಂಗನಾಥನು ಬೀದಿಯಲ್ಲಿ ಉತ್ಸವ ಬರುತ್ತಿರಲು ಅದನ್ನು ನೋಡಿ ಜ್ಞಾನಾಧಿಕರು ದೊಡ್ಡ ಮಂಟಪಲ್ಲಿ ಸೇರಿರುವಾಗ ಒಬ್ಬ ಶ್ರೀವೈಷ್ಣವರು ಇದುವರಿವಿಗೂ ಯಾವ ಧನಿಕನ ಮನೆ ಬಾಗಿಲಲ್ಲಿ ಅವನು ಹೊರಗೆ ಹೊರಡುವುದನ್ನು ನಿರೀಕ್ಷಿಸಿದ್ದೆನೋ ಈಗ ಭಗವಂತನ ಉತ್ಸವವನ್ನು ನೋಡುವ ಭಾಗ್ಯವು ಯಾವ ಸುಕೃತದಿಂದ ಉಂಟಾಯಿತೋ ಎಂದು ಹೇಳುತ್ತಲು ಯಾದೃಚ್ಛಿಕಸುಕೃತವೋ ಅಜ್ಞಾತಸುಕೃತವೋ ಕಾರಣವಿರಬೇಕು ಎಂದು ಹೇಳುತ್ತಲು ಆಗ ಕಿಡಾಂಬಿಪ್ಪೆರುಮಾಳ್ ನಮಗೆ ಭಗವದ್ವಿಷಯದಂತೆ ಸುಕೃತ ದೇವರೆಂದು ಒಂದುಂಟೋ ಎಂದು ಹೇಳಿದರು. ಅದಕ್ಕೆ ಪಿಳ್ಳೈತಿರುನರೈಯೂರರೈಯರ್ ಸುಕೃತವೆಂದು ಹೇಳುವುದೂ ನೀ ನೆನೆಸುವ ವಿಷಯವೇ ಎಂದು ಹೇಳಿದರು. ಈ ರೀತಿ ಒಬ್ಬರಿಗೊಬ್ಬರು ಮಾತನಾಡುತ್ತಿದ್ದರು. ಇದರಿಂದ ಅಜ್ಞಾತಸುಕೃತವು ಭಗವಂತನು ಅಂಗೀಕರಿಸುವುದಕ್ಕೆ ಕಾರಣವಲ್ಲ. ಅಜ್ಞಾತಸುಕೃತವನ್ನು ನೆಪಮಾಡಿ ಕೊಂಡು ಭಗವಂತನು ನಿರ್ಹೇತುಕದಯೆಯಿಂದ ಅಂಗೀಕರಿಸುವನು ಎಂದು ಹೇಳಿದಂತಾಯಿತು.

ಸೂತ್ರಂ - **ಆಹ್ಮೈಯಾಲ್ ಅಜ್ಞಾತಮಾನ ನನ್ಮೈಹಳ್ಳಿಯೇ**
ಪತ್ತಾಶಾಹಕ್ಕೊಂಡು ಕಟಾಕ್ಷಿಯಾನಿಕ್ಕುಂ ॥ ೩೮೬ ॥

ಶ್ಲೋಕಃ - ❋ ತಸ್ಮಾದಜ್ಞಾತಸುಕೃತಂ ವ್ಯಾಜೀಕೃತ್ಯ ನರಾನ್ಪ್ರಭುಃ ।
ಅಂಗೀಕರೋತಿ ಕೃಪಯಾ ಶ್ರೀಮನ್ನಾರಾಯಣಃ ಸ್ವಯಂ ॥ ॥ ೫೮೬ ॥

